ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಪ್ರಕಟಣೆ

# ಪಾಠಶಾಲಾ

## ಒಳಗು - ಹೊರಗು

Azim Premji University

ಸಂಚಿಕೆ 26 | ಡಿಸೆಂಬರ್ 2025 | ತ್ರೈಮಾಸಿಕ

## ಆರಂಭಿಕ ಬಾಲ್ಯ ಶಿಕ್ಷಣ ವಿಶೇಷಾಂಕ



# ಪಾಠಶಾಲಾ

## ಒಳಗು - ಹೊರಗು

**ಡಿಸೆಂಬರ್ 2025 | ಸಂಚಿಕೆ 26**

**ಸಂಪಾದಕರ ತಂಡ**

**ಪ್ರತಿಭಾ ಕಟಿಯಾರ್ (ಮುಖ್ಯ ಸಂಪಾದಕರು)**
pratibha.katiyar@azimpremjifoundation.org

**ಶೆಫಾಲಿ ತ್ರಿಪಾಠೀ ಮೆಹ್ತಾ (ಸಹ ಸಂಪಾದಕರು)**
shefali.mehta@apu.edu.in

**ಗೌತಮ್ ಪಾಂಡೆ**
gautam@azimpremjifoundation.org

**ರಾಘವೇಂದ್ರ ಹೇರ್ಳೆ ಜಿ.**
Raghavendra.herle@azimpremjifoundation.org

**ಸುನೀಲ್ ಕುಮಾರ್ ಸಾಹ್**
sunil@azimpremjifoundation.org

**ದಶರಥ್ ಕುಮಾರ್ ಪರೀಕ್**
dashrath.pareek@azimpremjifoundation.org

**ಜಗಮೋಹನ್ ಸಿಂಗ್ ಕಠೈತ್**
jagmohan@azimpremjifoundation.org

**ಗುರುಬಚನ್ ಸಿಂಗ್**
gurbachan.singh@azimpremjifoundation.org

**ಸಿದ್ಧಾರ್ಥ್ ಕುಮಾರ್ ಜೈನ್**
siddharth.jain@azimpremjifoundation.org

**ರಜನಿ ದ್ವಿವೇದಿ**
rajni.dwivedi@azimpremjifoundation.org

**ಕಮಲೇಶ್ ಚಂದ್ರ ಜೋಶಿ**
kamlesh@azimpremjifoundation.org

**ಶೋಭಾ ಲೋಕನಾಥನ್ ಕವೂರಿ**
shobha.kavoori@azimpremjifoundation.org

**Managing Editor**
Sudheesh Venkatesh

**ಪ್ರಕಾಶನ ತಂಡ**
ಮೀರಾ ಪ್ರಭು
ಶಹನಾಜ್ ಬೇಗಂ
ಲೋಕರಾಮ್ ವಿ. ಜಿ.
ಸಂಬಿತ್ ಮಹಾಪಾತ್ರ

**ಸಂಪಾದಕರ ಕಛೇರಿ**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೆ ನಂ. 66, ಬೂರುಗುಂಟೆ ಗ್ರಾಮ
ಚಿಕ್ಕನಹಳ್ಳಿ, ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು - 562125

**ಅನುವಾದ ಸಂಪಾದಕರು**
ಮಧುಕರ ಎಸ್ ಪುಟ್ಟಿ (ಕನ್ನಡ)
ರಾಜೇಶ್ ಉತ್ಸಾಹೀ (ಹಿಂದಿ)
ಶೆಫಾಲಿ ತ್ರಿಪಾಠೀ ಮೆಹ್ತಾ (ಇಂಗ್ಲಿಷ್)

**ಪುಟವಿನ್ಯಾಸ**
ಪುಟವಿನ್ಯಾಸ (ಹಿಂದಿ): ಗಣೇಶ್ ಗ್ರಾಫಿಕ್ಸ್, ಭೋಪಾಲ, ಮಧ್ಯ ಪ್ರದೇಶ
ಪುಟವಿನ್ಯಾಸ (ಕನ್ನಡ ಮತ್ತು ಇಂಗ್ಲಿಷ್): ಎಮ್‌ಎಪಿ ಸಿಸ್ಟಮ್ಸ್, ಬೆಂಗಳೂರು

**ವಿನ್ಯಾಸ**
ವಿನ್ಯಾಸ ತಂಡ, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಚಿತ್ರಗಳು: ಅಜೀಂ ಪ್ರೇಮ್‌ಜಿ ಫೌಂಡೇಷನ್ ಆರ್ಕೈವ್ಸ್, ಲೇಖಕರು
ಮುಖಪುಟ ಚಿತ್ರ: ಪುರುಷೋತ್ತಮ್ ಸಿಂಗ್ ಠಾಕೂರ್

**ಮುದ್ರಣ**
ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

**ಸಂಪರ್ಕ:** pathshala@apu.edu.in (ಸಂಪಾದಕರು) or publications@apu.edu.in (ಪ್ರಕಟಣೆಗಳು)

ಪಾಠಶಾಲಾ ಒಳಗು-ಹೊರಗು, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಿಂದ ಪ್ರಕಟವಾಗುವ, ಪ್ರಾಥಮಿಕ ಶಿಕ್ಷಣವನ್ನು ಕುರಿತಾದ ಒಂದು ತ್ರೈಮಾಸಿಕ ಪತ್ರಿಕೆ. ಈ ಪತ್ರಿಕೆಯು ದೇಶದಾದ್ಯಂತ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮತ್ತು ಹಿರಿಯ ಪ್ರಾಥಮಿಕ ಹಂತಗಳ ಸರ್ಕಾರಿ ಶಾಲಾ ಶಿಕ್ಷಕರಿಗೆ ಅಭ್ಯಾಸ ಆಧಾರಿತ ಲೇಖನಗಳನ್ನು ಒದಗಿಸಲು ಪ್ರಯತ್ನಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ 2020, ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಬುನಾದಿ ಹಂತಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳೊಂದಿಗೆ ಹೊಂದಿಕೊಂಡಿರುವ ಪರಿಣಾಮಕಾರಿ ಬೋಧನಾ ವಿಧಾನಗಳ ಮೇಲೆ ಬೆಳಕು ಚೆಲ್ಲುವ ದೃಷ್ಟಿಕೋನಗಳು, ಅನುಭವಗಳು, ಪರ್ಯಾಲೋಚನೆಗಳು ಮತ್ತು ತರಗತಿ ಪ್ರಕ್ರಿಯೆಗಳನ್ನು ಶಿಕ್ಷಕರು ಹಂಚಿಕೊಳ್ಳಲು ಇರುವ ಒಂದು ವೇದಿಕೆ ಇದು. ಈ ಪತ್ರಿಕೆಯು ಮೊದಲು ಹಿಂದಿಯಲ್ಲಿ ಪ್ರಕಟಗೊಂಡು, ನಂತರ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದಿಸಲ್ಪಡುತ್ತದೆ.

- ಲೇಖನದಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರದ್ದಾಗಿರುತ್ತವೆ. ಅವು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ದೃಷ್ಟಿ ಅಥವಾ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.
- ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಶೈಕ್ಷಣಿಕ ಮತ್ತು ಲಾಭರಹಿತ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಆದರೆ, ಬಳಸುವ ಮುನ್ನ ಕಡ್ಡಾಯವಾಗಿ ಲೇಖಕರ ಮತ್ತು ಪ್ರಕಾಶಕರ ಅನುಮತಿಯನ್ನು ಪಡೆಯಬೇಕು ಮತ್ತು ಬಳಸುವಾಗ ಮೂಲ ಲೇಖನವನ್ನು ಉಲ್ಲೇಖಿಸಬೇಕು.
- ಮಕ್ಕಳ ಗುರುತನ್ನು ಕಾಪಾಡುವ ದೃಷ್ಟಿಯಿಂದ ಅವರ ಹೆಸರುಗಳನ್ನು ಬದಲಾಯಿಸಲಾಗಿದೆ.

# ಸಂಪಾದಕೀಯ

ಆರಂಭಿಕ ಬಾಲ್ಯಾವಸ್ಥೆಯು ಇಡೀ ಜೀವಮಾನದ ಕಲಿಕೆ ಮತ್ತು ಬೆಳವಣಿಗೆಗೆ ಅಡಿಪಾಯವಾಗಿದೆಯಲ್ಲದೆ, ವಯಸ್ಕ ಜೀವನದ ಗುಣಮಟ್ಟವನ್ನು ನಿರ್ಧರಿಸುವ ಅತ್ಯಂತ ಪ್ರಮುಖ ಅಂಶವಾಗಿದೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿಯು (NEP 2020) ಈ ಹಂತದ ಪ್ರಾಮುಖ್ಯತೆಯನ್ನು ಸರಿಯಾಗಿಯೇ ಅರ್ಥೈಸಿಕೊಂಡಿದೆ. ಕಲಿಕಾ ಕೇಂದ್ರಗಳಲ್ಲಿ ವಿವಿಧ ಆಟಗಳು ಮತ್ತು ಚಟುವಟಿಕೆಗಳು ನಡೆದಾಗ, ಮಕ್ಕಳನ್ನು ಗೌರವದಿಂದ ನಡೆಸಿಕೊಂಡಾಗ ಮತ್ತು ಅವರ ಅನಿಸಿಕೆಗಳಿಗೆ ಮಹತ್ವ ನೀಡಿದಾಗ ಮಕ್ಕಳು ಉತ್ತಮವಾಗಿ ಕಲಿಯುತ್ತಾರೆ. ಹಾಗೆಯೇ, ಕಲಿಕೆಯ ಪ್ರಕ್ರಿಯೆಯಲ್ಲಿ ಮಕ್ಕಳನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಾಗ ಮಾತ್ರ ಅತ್ಯುತ್ತಮ ಫಲಿತಾಂಶ ಸಾಧ್ಯ ಎಂಬ ಅಂಶಗಳಿಗೆ ಈ ಶಿಕ್ಷಣ ನೀತಿಯು ಹೆಚ್ಚಿನ ಒತ್ತು ನೀಡಿದೆ.

ಆದ್ದರಿಂದ, ಆರಂಭಿಕ ಬಾಲ್ಯಾವಸ್ಥೆಯ ಹಂತದಲ್ಲಿ ಮಕ್ಕಳಿಗೆ ಸುರಕ್ಷಿತ ಹಾಗೂ ಆಪ್ತವಾದ ವಾತಾವರಣ ದೊರಕುವುದು ಅತ್ಯಗತ್ಯ. ಅಂಗನವಾಡಿಗೆ ಸಂಬಂಧಿಸಿದ ಎಲ್ಲಾ ವ್ಯಕ್ತಿಗಳು – ಅಂದರೆ ಮೇಲ್ವಿಚಾರಕರೇ ಇರಲಿ, ಕಾರ್ಯಕರ್ತರು ಅಥವಾ ಸಹಾಯಕರೇ ಇರಲಿ – ಪ್ರತಿಯೊಬ್ಬರಿಗೂ ಅಂಗನವಾಡಿ ಕಾರ್ಯಕ್ರಮದ ಉದ್ದೇಶಗಳು ಮತ್ತು ಅದರಲ್ಲಿ ತಮ್ಮ ಪಾತ್ರವೇನು ಎಂಬ ಬಗ್ಗೆ ಸರಿಯಾದ ತಿಳಿವಳಿಕೆ ಇರಬೇಕು. ಆಗ ಮಾತ್ರ ಮಕ್ಕಳ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ. ಮಕ್ಕಳೊಂದಿಗೆ ಯಾವ ರೀತಿಯ ಆಟಗಳನ್ನಾಡಬೇಕು, ಸಂವಹನ ಹೇಗಿರಬೇಕು ಮತ್ತು ಯಾವ ಚಟುವಟಿಕೆಗಳನ್ನು ಆಯೋಜಿಸಬೇಕು ಎಂಬ ಬಗ್ಗೆ ಅವರಿಗೆ ಸ್ಪಷ್ಟತೆ ಇರಬೇಕಾಗುತ್ತದೆ. ಅಂಗನವಾಡಿ ಕೇಂದ್ರಗಳ ಜೊತೆಗೆ ಸ್ಥಳೀಯ ಸಮುದಾಯವು ತೊಡಗಿಸಿಕೊಳ್ಳುವುದು ಕಲಿಕಾ ಪ್ರಕ್ರಿಯೆಯ ಪ್ರಮುಖ ಕೊಂಡಿಯಾಗಿದೆ. ಏಕೆಂದರೆ ಕಲಿಕೆ ಮತ್ತು ಅರಿವಿನ ಕೇಂದ್ರವಾದ ಅಂಗನವಾಡಿಯ ವಾತಾವರಣವು ಮಕ್ಕಳಿಗೆ ತಮ್ಮ ಮನೆಯಲ್ಲೂ ದೊರೆಯುವಂತಾಗಬೇಕು. ಹೀಗಾದಾಗ ಮಾತ್ರ ಮಕ್ಕಳು ಮನೆಗೆ ಹೋದ ಮೇಲೂ ಶಾಲಾ ಕಲಿಕೆಯ ಅನುಭವದಿಂದ ವಂಚಿತರಾಗುವುದಿಲ್ಲ. ಇದೇ ಉದ್ದೇಶದಿಂದ ಪಾಠಶಾಲಾ ಪತ್ರಿಕೆಯ ಡಿಸೆಂಬರ್ ತಿಂಗಳ ಈ ಸಂಚಿಕೆಯು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಮೇಲೆ ಗಮನ ಹರಿಸುತ್ತಿದೆ.

ಈ ಸಂಚಿಕೆಯಲ್ಲಿ, ಅಂಗನವಾಡಿ ಕೇಂದ್ರಗಳ ವಾತಾವರಣವು ಆಹ್ಲಾದಕರವಾಗಿರುವುದು ಏಕೆ ಮುಖ್ಯ ಮತ್ತು ಅದು ಮಕ್ಕಳ ಕಲಿಕೆಯ ಮೇಲೆ ಎಂತಹ ಪರಿಣಾಮ ಬೀರುತ್ತದೆ ಎಂಬುದರ ಕುರಿತು ನೀವು ಓದುತ್ತೀರಿ. ಇಲ್ಲಿಗೆ ಬರುವ ವಿಶೇಷ ಅಗತ್ಯವುಳ್ಳ ಮಕ್ಕಳ ಸವಾಲುಗಳನ್ನು ಗುರುತಿಸುವುದು ಹೇಗೆ ಮತ್ತು ಅವರಿಗಾಗಿ ಪ್ರತ್ಯೇಕ ಕ್ರಿಯಾಯೋಜನೆಗಳನ್ನು ಹೇಗೆ ರೂಪಿಸಬೇಕು ಎಂಬ ಬಗ್ಗೆಯೂ ಮಾಹಿತಿಯನ್ನು ನೀಡಲಾಗಿದೆ. ಸಂಚಿಕೆಯಲ್ಲಿನ ಒಂದು ಲೇಖನವು, ಸಂವಹನ ಮತ್ತು ಸಹಾನುಭೂತಿ ಎಂಬ ಗುಣಗಳು ಬೋಧನಾ ಪ್ರಕ್ರಿಯೆಯಲ್ಲಿ ಎಷ್ಟು ಅವಶ್ಯಕ ಎಂಬುದನ್ನು ಮನವರಿಕೆ ಮಾಡಿಕೊಡುತ್ತದೆ. ಮಕ್ಕಳ ಮೇಳದ ಪರಿಕಲ್ಪನೆ ಮತ್ತು ಅನುಭವಗಳ ಕುರಿತಾದ ಲೇಖನವು ನಿಮಗೆ ಖಂಡಿತವಾಗಿಯೂ ಉಪಯುಕ್ತವೆನಿಸಲಿದೆ. ಹಾಗೆಯೇ, ಅಂಗನವಾಡಿ ಕಾರ್ಯಕರ್ತೆಯರಿಗೆ ಬೆಂಬಲ ನೀಡುವ ವ್ಯವಸ್ಥೆಯನ್ನು ಸಶಕ್ತಗೊಳಿಸುವ ಅಗತ್ಯವಿದ್ದು, ಈ ಕುರಿತಾದ ಅನುಭವ ಆಧಾರಿತ ಲೇಖನಗಳೂ ಇವೆ. ಇದರೊಂದಿಗೆ, ಎಂದಿನಂತೆ ನಮ್ಮ 'ಭರವಸೆ ಮೂಡಿಸುವ ಶಿಕ್ಷಕರು' ಅಂಕಣದಲ್ಲಿ ಅಂಗನವಾಡಿ ಕೇಂದ್ರವೊಂದನ್ನು ಧನಾತ್ಮಕವಾಗಿ ಪರಿವರ್ತಿಸಿದ ಶಿಕ್ಷಕರೊಬ್ಬರ ಸ್ಫೂರ್ತಿದಾಯಕ ಕಥೆಯನ್ನು ಓದಬಹುದು. ಇತರ ಅಂಕಣಗಳಲ್ಲಿ ಕೆಲವು ಶಿಕ್ಷಕರ ನೈಜ ಅನುಭವಗಳು, ಪೂರ್ವ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಉಪಯುಕ್ತವಾಗುವ ಪುಸ್ತಕಗಳು ಮತ್ತು ಚಟುವಟಿಕೆಗಳ ಬಗ್ಗೆ ಓದಬಹುದು.

ನಮ್ಮ 25ನೇ ಸಂಚಿಕೆಯ ಬಗ್ಗೆ ನೀವು ನಿರಂತರವಾಗಿ ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿರುವುದು ನಮಗೆ ಬಹಳ ಸಂತೋಷದ ವಿಷಯ. ನೀವು ನಿಮ್ಮ ತರಗತಿಗಳಲ್ಲಿ ಪಾಠಶಾಲಾದ ಈ ಸಂಚಿಕೆಯನ್ನು ಬಹಳ ಪರಿಣಾಮಕಾರಿಯಾಗಿ ಬಳಸುತ್ತಿದ್ದೀರಿ ಎಂಬುದಕ್ಕೆ ಇದು ಸಾಕ್ಷಿ. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ (ECCE) ಮೇಲೆ ಕೇಂದ್ರೀಕರಿಸಿದ ಈ ಸಂಚಿಕೆಯು ನಿಮಗೆ ಅತ್ಯಂತ ಉಪಯುಕ್ತವಾಗಲಿದೆ ಎಂಬ ಭರವಸೆ ನಮಗಿದೆ.

ಎಂದಿನಂತೆ ನಿಮ್ಮ ಓದು ಮುಂದುವರಿಯಲಿ, ನೀವು ಸದಾ ನಮ್ಮ ಜೊತೆಗಿರಲಿ!

ಶುಭ ಹಾರೈಕೆಗಳೊಂದಿಗೆ,

**ಪ್ರತಿಭಾ ಕಟಿಯಾರ್**
ಪ್ರಧಾನ ಸಂಪಾದಕರು

ಅನುವಾದ: ಆಶಾ ಸಿಂಗ್ | ಪರಿಶೀಲನೆ: ಅನುರೂಪಾ ರವೀಂದ್ರ

# ಪರಿವಿಡಿ

## ಸಂಪಾದಕೀಯ


1. ಆರಂಭಿಕ ವರ್ಷಗಳಲ್ಲಿನ ಶಿಕ್ಷಣ | ಒಂದು ಪರಿಕಲ್ಪನಾತ್ಮಕ ಅನ್ವೇಷಣೆ 3
ಕಿನ್ನರಿ ಪಾಂಡ್ಯ

2. ಅಂಗನವಾಡಿ ಕೇಂದ್ರಗಳ ಪರಿಸರವು ಸಂತೋಷದಾಯಕವಾಗಿರಬೇಕು 9
ಸುನಿಲ್ ಕುಮಾರ್ ಸಾಹ್

3. ಆರಂಭಿಕ ಬಾಲ್ಯ ಶಿಕ್ಷಕರು ಆಗಾಗ ಕೇಳುವ ಪ್ರಶ್ನೆಗಳು 13
ಜಿಗಿಶಾ ಶಾಸ್ತ್ರಿ

4. ಆರಂಭಿಕ ಶಿಕ್ಷಣ ಮತ್ತು ನಾಟಕ 17
ಪಾರುಲ್ ಬಾತ್ರಾ ದುಗ್ಗಲ್

5. ಆರಂಭಿಕ ಬಾಲ್ಯದ ಹಂತದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳು 21
ಭುವನೇಶ್ವರಿ ಬಿ

6. ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಕ್ತ ಬೆಂಬಲ ವ್ಯವಸ್ಥೆ 25
ಶ್ರೇಷ್ಠಾ ಮಿಶ್ರ ಮತ್ತು ರಜತ್ ಶರ್ಮ

7. ಮೋಡಿ ಮಾಡಿದ ಆ ಕ್ಷಣ 29
ಕಲ್ಪನಾ ಪವಾರ್

8. ಹಾಜರಾತಿ ಪಟ್ಟಿಯ ಮೂಲಕ ಕಲಿಕೆ 32
ಸ್ವಪ್ನಾಲಿ ಚವ್ಹಾಣ್

9. ಮಕ್ಕಳ ಕಲಿಕೆಯ ಲಯಕ್ಕೆ ತಕ್ಕಂತೆ ಬೋಧನೆ 36
ಭಾವನಾ ನಾಯಕ್

10. ಮಕ್ಕಳ ಮೇಳ | ಒಂದು ಸಮುದಾಯ ಕಾರ್ಯಕ್ರಮವು ದೃಷ್ಟಿಕೋನಗಳನ್ನು ಬದಲಿಸಿದ ಕಥೆ 39
ಜೆ. ವಿಮಲಾ

11. ಮಕ್ಕಳಿಂದ ಕಲಿಯುವುದು 43
ತನ್ನುಮ್ ನಿಶಾ


## ಅಂಕಣಗಳು


1. ಶಿಕ್ಷಕರ ದಿನಚರಿಯಿಂದ 47
ಮುನ್ನಿ ದಹರಿಯಾ, ರೇಖಾ, ಸಂಧ್ಯಾವಾಲಿ ಗುಪ್ತಾ

2. ಭರವಸೆ ಮೂಡಿಸುವ ಶಿಕ್ಷಕರು 51
ನಿವೇದಿತಾ ತಿವಾರಿ

3. ಪುಸ್ತಕಗಳೊಂದಿಗೆ ಸ್ನೇಹ 55
ಗರಿಮಾ ಗುಪ್ತಾ, ಕಮಲೇಶ್ ಚಂದ್ರ ಜೋಶಿ

4. ಚಟುವಟಿಕೆ ಸಮಯ 56
ವಿಪಿನ್ ಚೌಹಾಣ್, ಶೇಖರ್ ಬಿಂಧಾನಿ

5. ಸಂಪಾದಕರಿಗೆ ಪತ್ರ 61

# ಆರಂಭಿಕ ವರ್ಷಗಳಲ್ಲಿನ ಶಿಕ್ಷಣ | ಒಂದು ಪರಿಕಲ್ಪನಾತ್ಮಕ ಅನ್ವೇಷಣೆ

**ಕಿನ್ನರಿ ಪಾಂಡ್ಯ**

**ಈ ಹಂತದ ಅಂತಿಮ ಗುರಿ ‘ವಿಕಸನಗೊಳ್ಳುತ್ತಿರುವ ಮಗು’ವೇ ಹೊರತು ‘ವಿಷಯವಸ್ತು’ ಅಲ್ಲ. ಅಂದರೆ, ಮಗುವಿನ ಬೆಳವಣಿಗೆಯೇ ಇಲ್ಲಿ ಮುಖ್ಯ. ಮುಂದಿನ ಶಾಲಾ ಶಿಕ್ಷಣಕ್ಕೆ ಬೇಕಾದ ಸಿದ್ಧತೆ ಮತ್ತು ಸಾಕ್ಷರತಾ ಕೌಶಲಗಳನ್ನು ರೂಪಿಸುವಾಗ, ಅವು ಮಗುವಿನ ನೈಸರ್ಗಿಕ ವಿಕಸನಕ್ಕೆ ಪೂರಕವಾಗಿರಬೇಕು ಮತ್ತು ಸೂಕ್ತ ಬೆಂಬಲ ನೀಡುವಂತಿರಬೇಕು.**




ಚಿತ್ರ 1: ಆಟದ ವಾತಾವರಣವು ಆರಂಭಿಕ ವರ್ಷಗಳಲ್ಲಿ ಗಮನಾರ್ಹ ಕಲಿಕೆಗೆ ಅನುವು ಮಾಡಿಕೊಡುತ್ತದೆ.

ಮಾನವ ಬೆಳವಣಿಗೆಯ ಕುರಿತಾದ ಸಂಶೋಧನೆಗಳ ಪ್ರಕಾರ, ಮಗುವಿನ ಆರಂಭಿಕ ವರ್ಷಗಳು, ಅದರಲ್ಲೂ ವಿಶೇಷವಾಗಿ ಮೊದಲ ಎಂಟು ವರ್ಷಗಳು ಜೀವನದ ಅತ್ಯಂತ ಪ್ರಭಾವಶಾಲಿ ಕಾಲ. ಈ ವಯಸ್ಸಿನಲ್ಲಿ ಮಗು ಪಡೆಯುವ ಅನುಭವಗಳು—ಅವು ಸಕಾರಾತ್ಮಕವಾಗಿರಲಿ ಅಥವಾ ನಕಾರಾತ್ಮಕವಾಗಿರಲಿ—ಅವರ ಮುಂದಿನ ಜೀವನದ ಮೇಲೆ ನೇರವಾದ ಪರಿಣಾಮ ಬೀರುತ್ತವೆ. ಈ ಹಂತದ ಕಲಿಕೆ ಮತ್ತು ಅನುಭವಗಳು ಮಗುವಿನ ಭವಿಷ್ಯವನ್ನು ಈ ಕೆಳಗಿನ ಆಯಾಮಗಳಲ್ಲಿ ರೂಪಿಸುತ್ತವೆ:

- ಮಗುವಿನ ಒಟ್ಟಾರೆ ಆರೋಗ್ಯ ಮತ್ತು ಶಾರೀರಿಕ ಬೆಳವಣಿಗೆ
- ಮೆದುಳಿನ ಸಾಮರ್ಥ್ಯದ ಗರಿಷ್ಠ ವಿಕಸನ
- ಮನೆಯ ಹೊರಗಿನ ಪ್ರಪಂಚದೊಂದಿಗೆ ಬೆರೆಯಲು ಅಗತ್ಯವಾದ ಸಾಮಾಜಿಕ ಮತ್ತು ಭಾವನಾತ್ಮಕ ಸಿದ್ಧತೆ
- ಓದು-ಬರಹದ ಕಲಿಕೆ ಹಾಗೂ ಜಗತ್ತನ್ನು ಅರ್ಥಮಾಡಿಕೊಳ್ಳಲು ಬೇಕಾದ ಜ್ಞಾನ ಮತ್ತು ಅರಿವು
- ಶಾಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮತ್ತು ಮುಂದೆ ಜೀವನದಲ್ಲಿ ಉಪಯುಕ್ತ ಕೆಲಸಗಳನ್ನು ಮಾಡುವ ಸಾಮರ್ಥ್ಯ

ಜೀವನದ ಆರಂಭಿಕ ವರ್ಷಗಳ ಪ್ರಾಮುಖ್ಯತೆಯನ್ನು ಗಮನಿಸಿದರೆ, 3ರಿಂದ 6 ವರ್ಷದೊಳಗಿನ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ನೀಡಬೇಕು, ಅವರಿಗೆ ಎಂತಹ ಕಲಿಕಾ ಅವಕಾಶಗಳನ್ನು ಕಲ್ಪಿಸಬೇಕು ಮತ್ತು ಅತ್ಯುತ್ತಮ ಬೋಧನಾ ವಿಧಾನ ಯಾವುದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಈ ವಿಷಯದ ಬಗ್ಗೆ ದಶಕಗಳಿಂದಲೂ ಭಿನ್ನ ದೃಷ್ಟಿಕೋನಗಳಿವೆ; ಕೆಲವೊಮ್ಮೆ ಈ ಆಲೋಚನೆಗಳು ಅಸ್ಪಷ್ಟವಾಗಿಯೂ ಇರುತ್ತವೆ. ಉದಾಹರಣೆಗೆ, ಈ ವಯಸ್ಸಿನ ಮಕ್ಕಳಿಗೆ ಮನೆಯಲ್ಲಿ ಮುಕ್ತವಾಗಿ ಆಟವಾಡಲು ಬಿಡಬೇಕೇ? ಅಥವಾ ಅವರಿಗೆ ‘ಮೂರು ಆರ್’ಗಳನ್ನು (3Rs - Reading, Writing and Arithmetic) ಅಂದರೆ ಓದುವುದು, ಬರೆಯುವುದು ಮತ್ತು ಅಂಕಗಣಿತದ ಲೆಕ್ಕಾಚಾರಗಳನ್ನು ಆದಷ್ಟು ಬೇಗ ಕಲಿಸಬೇಕೇ?

**“ಈ ವಯಸ್ಸಿನಲ್ಲಿ ಮಗು ಪಡೆಯುವ ಅನುಭವಗಳು—ಅವು ಸಕಾರಾತ್ಮಕವಾಗಿರಲಿ ಅಥವಾ ನಕಾರಾತ್ಮಕವಾಗಿರಲಿ—ಅವರ ಮುಂದಿನ ಜೀವನದ ಮೇಲೆ ನೇರವಾದ ಪರಿಣಾಮ ಬೀರುತ್ತವೆ.”**

**ಬೆಳೆಯುತ್ತಿರುವ ಮಗು**

*ಮೂರು ವರ್ಷದ ಮಗುವೊಂದು ಸಣ್ಣ ಮತ್ತು ಸರಳ ವಾಕ್ಯಗಳಲ್ಲಿ ಮಾತನಾಡಲು, ತನ್ನ ಅಗತ್ಯಗಳನ್ನು ವ್ಯಕ್ತಪಡಿಸಲು ಹಾಗೂ ಪದ ಅಥವಾ ನುಡಿಗಟ್ಟುಗಳನ್ನು ಪುನರಾವರ್ತಿಸಲು ಕಲಿಯುತ್ತಿರುತ್ತದೆ.*

*ಈ ವಯಸ್ಸಿನಲ್ಲಿ ಮಗು ಹೆಚ್ಚಾಗಿ ತಾನಾಗಿಯೇ ಇರಲು ಅಥವಾ ಆಟವಾಡಲು ಇಷ್ಟಪಡುತ್ತದೆ. ಆದರೆ ಮುಂದಿನ ಮೂರು ವರ್ಷಗಳಲ್ಲಿ, ಮಗು ತನ್ನ ನೆರೆಹೊರೆಯ ಇತರ ಮಕ್ಕಳೊಂದಿಗೆ, ಹಿರಿಯರೊಂದಿಗೆ ಮತ್ತು ಶಾಲೆಯ ಶಿಕ್ಷಕರೊಂದಿಗೆ ಬೆರೆಯಲು ಹಾಗೂ ಸಂವಹನ ನಡೆಸಲು ಕಲಿಯುತ್ತದೆ.*

*ಭಾಷೆಯ ಮೇಲಿನ ಹಿಡಿತ ಹೆಚ್ಚಾದಂತೆ, ಮಗು ತನ್ನ ಪ್ರಶ್ನೆಗಳನ್ನು ಸ್ಪಷ್ಟವಾಗಿ ಕೇಳಲು ಮತ್ತು ಪ್ರತಿಯೊಂದು ವಿಷಯದಲ್ಲೂ "ಏಕೆ?" ಎಂಬ ಉತ್ತರವನ್ನು ಹುಡುಕಲು ಪ್ರಾರಂಭಿಸುತ್ತದೆ. ಉದಾಹರಣೆಗೆ: "ಚಂದ್ರನ ಆಕಾರ ಏಕೆ ಬದಲಾಗುತ್ತದೆ?", "ನಾವು ಬಸ್ಸಿನಲ್ಲಿ ಹೋಗುವಾಗ ಚಂದ್ರನು ನಮ್ಮೊಂದಿಗೇ ಏಕೆ ಬರುತ್ತಾನೆ?", "ಎಲೆಗಳು ಬೇರೆ ಬೇರೆ ಬಣ್ಣಗಳಲ್ಲಿ ಏಕೆ ಇರುತ್ತವೆ?", "ಗಡಿಯಾರ ಓಡುವುದು ಏಕೆ ನಿಲ್ಲುವುದಿಲ್ಲ?", "ಚೆಂಡನ್ನು ಎಸೆದರೆ ಅದು ಕೆಳಗೆ ಏಕೆ ಬೀಳುತ್ತದೆ?" – ಹೀಗೆ ತನ್ನ ಸುತ್ತಲಿನ ಪ್ರಪಂಚದ ಬಗ್ಗೆ, ಮಗು ಅರ್ಥ ಮತ್ತು ವಿವರಣೆಯನ್ನು ಹುಡುಕುತ್ತದೆ.*

*ಇದಲ್ಲದೆ, ಈ ಹಂತದಲ್ಲಿ ಮಗು ತನ್ನ ಕೆಲಸಗಳನ್ನು ತಾನೇ ಮಾಡಲು ಕಲಿಯುತ್ತದೆ. ಉದಾಹರಣೆಗೆ: ತಾನೇ ಬಟ್ಟೆ ಧರಿಸುವುದು, ಹರಡದಂತೆ ಅಚ್ಚುಕಟ್ಟಾಗಿ ಆಹಾರ ಸೇವಿಸುವುದು, ತನ್ನ ವಸ್ತುಗಳನ್ನು ಜಾಗರೂಕತೆಯಿಂದ ಇಟ್ಟುಕೊಳ್ಳುವುದು ಹಾಗೂ ತನ್ನ ಭಾವನೆಗಳನ್ನು ಮತ್ತು ಅಗತ್ಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದರ ಜೊತೆಗೆ ಸರಿಯಾಗಿ ವ್ಯಕ್ತಪಡಿಸುವುದನ್ನು ಕಲಿಯುತ್ತದೆ. ಮಗು ತನ್ನ ಇಷ್ಟ-ಕಷ್ಟಗಳನ್ನು ಸ್ಪಷ್ಟವಾಗಿ ಹೇಳತೊಡಗುತ್ತದೆ. 'ನಾನು ಹೀಗಿದ್ದೇನೆ!' ಎಂದು ತನ್ನ ಬಗ್ಗೆ ತಾನೇ ಹೆಮ್ಮೆಯಿಂದ ಮಾತನಾಡಲು ಆರಂಭಿಸುತ್ತದೆ. ಹೊಸ ಕೆಲಸಗಳನ್ನು ಮಾಡಲು ತಾನಾಗಿಯೇ ಮುಂದೆ ಬರುತ್ತದೆ ಮತ್ತು ತನ್ನ ಸುತ್ತಲಿನ ಪರಿಸರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ.*

*ಈ ಹಿಂದೆ ತನ್ನ ಸುತ್ತಲಿನ ಪ್ರತಿಯೊಂದಕ್ಕೂ ಉತ್ತರಕ್ಕಾಗಿ ಹಿರಿಯರನ್ನು ಅವಲಂಬಿಸುತ್ತಿದ್ದ ಮಗು, 3 ರಿಂದ 6 ವರ್ಷದ ಅವಧಿಯಲ್ಲಿ ಕ್ರಮೇಣ ಸ್ವತಂತ್ರ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತದೆ. ಈ ಹಂತದಲ್ಲಿ ಮಗು ತನ್ನ ಹೆಚ್ಚಿನ ದೈನಂದಿನ ಕೆಲಸಗಳನ್ನು ತಾನೇ ಮಾಡತೊಡಗುತ್ತದೆ. ಅದರ ಶಬ್ದಕೋಶವು ವಿಸ್ತಾರಗೊಂಡು ಸುಮಾರು 5,000 ಪದಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಪಡೆಯುತ್ತದೆ; ಅಲ್ಲದೆ ಯಾವುದೇ ಘಟನೆ ಅಥವಾ ಕಥೆಯನ್ನು ವಿವರವಾಗಿ ವಿವರಿಸಬಲ್ಲದಾಗಿರುತ್ತದೆ. ಹಿಂದೆ ತನ್ನ ಶರ್ಟ್ ಗುಂಡಿ ಹಾಕಿಕೊಳ್ಳಲು ಕಷ್ಟಪಡುತ್ತಿದ್ದ ಮಗು, ಈಗ ದೊಡ್ಡ ಸೂಜಿಯಿಂದ ಹೊಲಿಯುವುದು, ಶೂಲೇಸ್‌ಗಳನ್ನು ಕಟ್ಟುವುದು ಮುಂತಾದ ಹೆಚ್ಚು ಸಂಕೀರ್ಣವಾದ ಮತ್ತು ಸಮನ್ವಯತೆ ಅಗತ್ಯವಿರುವ ಕೆಲಸಗಳನ್ನು ಮಾಡಲು ಸಿದ್ಧವಾಗುತ್ತದೆ. ಹಾಗೆಯೇ, ಹಿಂದೆ ಎತ್ತರದಿಂದ ಜಿಗಿಯಲು ಬೇರೆಯವರ ಸಹಾಯ ಬಯಸುತ್ತಿದ್ದ ಮಗುವು, ಐದನೇ ವಯಸ್ಸಿನ ವೇಳೆಗೆ ಯಾವುದೇ ಸಹಾಯವಿಲ್ಲದೆ ಲೀಲಾಜಾಲವಾಗಿ ಜಿಗಿಯಲು ಅಥವಾ ಮರ ಹತ್ತಲು ಶಕ್ತವಾಗುತ್ತದೆ.*

ದುರದೃಷ್ಟವಶಾತ್, ಈ ದೃಷ್ಟಿಕೋನಗಳಲ್ಲಿ ಯಾವುದೂ 3ರಿಂದ 6 ವರ್ಷ ವಯಸ್ಸಿನ ಮಕ್ಕಳಿಗೆ ಗುಣಮಟ್ಟದ 'ಆರಂಭಿಕ ಬಾಲ್ಯ ಶಿಕ್ಷಣ' ಎಂದರೆ ನಿಖರವಾಗಿ ಏನು ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ. ಹಾಗಾದರೆ, ಈ ಆರಂಭಿಕ ವರ್ಷಗಳಲ್ಲಿ 'ಶಿಕ್ಷಣ' ಎಂಬುದು ಏನನ್ನು ಒಳಗೊಂಡಿರಬೇಕು ಎಂಬುದನ್ನು ನಾವೀಗ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

## ಮೇಲಿನ ಉದಾಹರಣೆಗಳಿಂದ ನಾವು ಏನನ್ನು ತಿಳಿಯಬಹುದು?

ಕೇವಲ ಮೂರು ವರ್ಷಗಳ ಅಲ್ಪ ಅವಧಿಯಲ್ಲಿ ಮಗು ಅತ್ಯಂತ ವೇಗವಾಗಿ ಬೆಳೆಯುತ್ತದೆ. ಈ ಹಂತದಲ್ಲಿ ಕೇವಲ ದೈಹಿಕ ಬೆಳವಣಿಗೆಯಷ್ಟೇ ಅಲ್ಲದೆ, ಅನೇಕ ಗುಣಾತ್ಮಕ ಬದಲಾವಣೆಗಳೂ ಸಂಭವಿಸುತ್ತವೆ. ಅಂದರೆ, ಸಾಮಾಜಿಕ-ಭಾವನಾತ್ಮಕ ವಿಕಸನ, ದೈಹಿಕ ಕ್ಷಮತೆ, ಭಾಷಾ ಪ್ರೌಢಿಮೆ, ಚಲನಾ ಕೌಶಲಗಳು ಹಾಗೂ ಚಿಂತನಾ ಸಾಮರ್ಥ್ಯ ಮತ್ತು ಸೃಜನಶೀಲತೆ - ಇವೆಲ್ಲವೂ ಏಕಕಾಲದಲ್ಲಿ ಬೆಳೆಯುತ್ತವೆ.

ವಿಶೇಷವೆಂದರೆ, ಈ ಎಲ್ಲಾ ಕ್ಷೇತ್ರಗಳು ಪರಸ್ಪರ ಅವಲಂಬಿತವಾಗಿವೆ. ಉದಾಹರಣೆಗೆ: ಯಾವ ಮಗು ತನ್ನ ಭಾವನೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲದೋ, ಸುಖಾಸುಮ್ಮನೆ ಕೋಪಗೊಳ್ಳದೆ ಅಥವಾ ಅತಿಯಾಗಿ ಅಳದೆ ಎಲ್ಲರೊಂದಿಗೆ ಬೆರೆಯುತ್ತದೋ ಅಂತಹ ಮಗುವಿಗೆ ಹೆಚ್ಚಿನ ಕಲಿಕಾ ಅವಕಾಶಗಳು ಸಿಗುತ್ತವೆ. ಇತರ ಮಕ್ಕಳೊಂದಿಗೆ ಆಟವಾಡುವಾಗ ಮತ್ತು ಹಿರಿಯರ ಗಮನ ಸೆಳೆಯುವಾಗ ಆ ಮಗುವಿಗೆ ತನ್ನನ್ನು ತಾನು ವ್ಯಕ್ತಪಡಿಸಲು ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಇದು ಸಹಜವಾಗಿಯೇ ಮಗುವಿನ ಮೌಖಿಕ ಭಾಷಾ ಸಾಮರ್ಥ್ಯವನ್ನು ವೃದ್ಧಿಸುತ್ತದೆ.

ಮಗು ತನ್ನ ಸುತ್ತಲಿನ ವ್ಯಕ್ತಿಗಳು, ವಸ್ತುಗಳು, ಸ್ಥಳಗಳು ಮತ್ತು ಘಟನೆಗಳೊಂದಿಗೆ ನಡೆಸುವ ದ್ವಿಮುಖ ಸಂವಹನ ಹಾಗೂ ಅದಕ್ಕೆ ಸಿಗುವ ಬೆಂಬಲವು ಅದರ ಬೆಳವಣಿಗೆಯ ಗುಣಮಟ್ಟವನ್ನು ನಿರ್ಧರಿಸುತ್ತದೆ. ಇಂತಹ ಪರಸ್ಪರ ಕ್ರಿಯೆಗಳು ಮಗುವಿನಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರಬಹುದು ಅಥವಾ ಕೆಲವೊಮ್ಮೆ ಕುಂಠಿತ ಬೆಳವಣಿಗೆಗೆ ಕಾರಣವಾಗಬಹುದು. ಆದ್ದರಿಂದ, ಶಿಕ್ಷಕರಾದ ನಾವು ಈ ಹಂತದಲ್ಲಿ ಮಕ್ಕಳ ವಿಕಸನಕ್ಕೆ ಪೂರಕವಾದ ಅತ್ಯಂತ ಅರ್ಥಪೂರ್ಣ ಅವಕಾಶಗಳು ಯಾವುವು ಎಂದು ಆಳವಾಗಿ ಯೋಚಿಸಬೇಕಿದೆ.

ಬನ್ನಿ, ಈ ವಯೋಮಾನದ ಮಕ್ಕಳ 'ಶಿಕ್ಷಣ'ದಲ್ಲಿ ನಾವು ಏನನ್ನು ಒಳಗೊಳ್ಳಬೇಕು ಎಂಬುದನ್ನು ಈಗ ವಿವರವಾಗಿ ಅರ್ಥಮಾಡಿಕೊಳ್ಳೋಣ.

## ಆರಂಭಿಕ ಬಾಲ್ಯದ ಶಿಕ್ಷಣದ ಆಶಯಗಳು

3ರಿಂದ 6 ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣದಲ್ಲಿ ಏನನ್ನು ಅಳವಡಿಸಬೇಕು ಎಂಬುದನ್ನು ನಿರ್ಧರಿಸುವಾಗ ಒಂದು ಮುಖ್ಯ ಅಂಶವನ್ನು ನೆನಪಿಡಬೇಕು: ಈ ಹಂತದ ಅಂತಿಮ ಗುರಿ 'ವಿಕಸನಗೊಳ್ಳುತ್ತಿರುವ ಮಗು'ವೇ ಹೊರತು 'ವಿಷಯವಸ್ತು' ಅಲ್ಲ. ಅಂದರೆ, ಮಗುವಿನ ಬೆಳವಣಿಗೆಯೇ ಇಲ್ಲಿ ಮುಖ್ಯ. ಮುಂದಿನ ಶಾಲಾ ಶಿಕ್ಷಣಕ್ಕೆ ಬೇಕಾದ ಸಿದ್ಧತೆ ಮತ್ತು ಸಾಕ್ಷರತಾ ಕೌಶಲಗಳನ್ನು ರೂಪಿಸುವಾಗ, ಅವು ಮಗುವಿನ ನೈಸರ್ಗಿಕ ವಿಕಸನಕ್ಕೆ ಪೂರಕವಾಗಿರಬೇಕು ಮತ್ತು ಸೂಕ್ತ ಬೆಂಬಲ ನೀಡುವಂತಿರಬೇಕು.

ಆರಂಭಿಕ ವರ್ಷಗಳಲ್ಲಿ (3-6 ವರ್ಷಗಳು) ಶಿಕ್ಷಣವು ಪ್ರಮುಖವಾಗಿ ಈ ಮೂರು ಅಂಶಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ:

1. ಮಗು ಉತ್ತಮವಾಗಿ ಬೆಳೆಯಲು ಮತ್ತು ತನ್ನಲ್ಲಿರುವ ಸಂಪೂರ್ಣ ಸಾಮರ್ಥ್ಯವನ್ನು ತಲುಪಲು ಪೂರಕವಾದ ಪರಿಸರವನ್ನು ನಿರ್ಮಿಸುವುದು.
2. ಮಕ್ಕಳಿಗೆ 'ಹೇಗೆ ಕಲಿಯಬೇಕು' ಎಂಬ ಕಲಿಕಾ ಕೌಶಲವನ್ನು ರೂಢಿಸಿಕೊಳ್ಳಲು ಸಹಾಯ ಮಾಡುವುದು.
3. ಮಕ್ಕಳ ಸುತ್ತಲಿನ ಪರಿಸರ ಮತ್ತು ಅವರ ಆಸಕ್ತಿಗಳಿಗೆ ಅನುಗುಣವಾಗಿ ವಿಷಯಗಳನ್ನು ಪರಿಚಯಿಸುವುದು.

ಬಾಲ್ಯದ ಪಠ್ಯಕ್ರಮವು ಸಾಧಿಸಬೇಕಾದ ಈ ಪ್ರಮುಖ ಉದ್ದೇಶಗಳನ್ನು ನಾವೀಗ ವಿವರವಾಗಿ ತಿಳಿಯೋಣ.

## ಆರಂಭಿಕ ಬಾಲ್ಯದ ಪಠ್ಯಕ್ರಮ

ಈ ವಿಭಾಗವು ಆರಂಭಿಕ ಬಾಲ್ಯದ ಪಠ್ಯಕ್ರಮದ ಮೂರು ಪ್ರಮುಖ ಉದ್ದೇಶಗಳನ್ನು ವಿವರಿಸುತ್ತದೆ. ಈ ಉದ್ದೇಶಗಳು ಮಕ್ಕಳ ಕಲಿಕೆಯನ್ನು ಅರ್ಥಪೂರ್ಣವಾಗಿಸಲು ಅಗತ್ಯವಿರುವ ಬೋಧನಾ ಪದ್ಧತಿ ಮತ್ತು ವಿಷಯವನ್ನು ನಿರ್ಧರಿಸಲು ನಮಗೆ ಸಹಾಯ ಮಾಡುತ್ತವೆ.

### ಮಗುವಿನ ಸಮಗ್ರ ಬೆಳವಣಿಗೆ ಮತ್ತು ವಿಕಸನ

ನಾವು ಮೊದಲೇ ಚರ್ಚಿಸಿದಂತೆ, ಮಕ್ಕಳು ಬೆಳವಣಿಗೆಯ ವಿವಿಧ ಹಂತಗಳಲ್ಲಿ ಅತ್ಯಂತ ವೇಗವಾಗಿ ವಿಕಸನಗೊಳ್ಳುತ್ತಾರೆ. ವಿಕಸನದ ವಿವಿಧ ವಲಯಗಳನ್ನು ಕೆಳಗೆ ನೀಡಲಾಗಿದೆ. ಇವುಗಳಲ್ಲಿ ಮಕ್ಕಳಿಗೆ ಯಾವ ರೀತಿಯ ಬೆಂಬಲದ ಅಗತ್ಯವಿದೆ ಎಂಬುದನ್ನು ಶಿಕ್ಷಕರು ಅಥವಾ ಅಂಗನವಾಡಿ ಕಾರ್ಯಕರ್ತರು ನಿರ್ಧರಿಸಬಹುದು.

***ದೊಡ್ಡ ಸ್ನಾಯುಗಳ ಬೆಳವಣಿಗೆ***

ಆಧಾರವೊಂದನ್ನು ಹಿಡಿದುಕೊಂಡು ಅಥವಾ ಇತರರ ಸಹಾಯದಿಂದ ಜಿಗಿಯಬಲ್ಲ ಮಗುವಿಗೆ, ಕ್ರಮೇಣ ಸ್ವತಂತ್ರವಾಗಿ ಜಿಗಿಯುವುದನ್ನು ಕಲಿಯಲು ಹೆಚ್ಚಿನ ಅವಕಾಶಗಳು ಬೇಕಾಗುತ್ತವೆ. ಹಾಗೆಯೇ, ಚೆಂಡನ್ನು ಎಸೆಯಲು, ಹಿಡಿಯಲು ಅಥವಾ ಗುರಿಯತ್ತ ಹೊಡೆಯಲು ಕಲಿಯುವ ಮಗುವಿಗೆ ನಿರಂತರ ಅಭ್ಯಾಸ ಮತ್ತು ಅನುಭವದ ಅಗತ್ಯವಿರುತ್ತದೆ. ಈ ಹಂತದಲ್ಲಿ ಮಗುವಿನ ದೊಡ್ಡ ಸ್ನಾಯುಗಳ ಬೆಳವಣಿಗೆ, ದೇಹದ ಸಮತೋಲನ, ಸ್ನಾಯುಗಳ ಸಮನ್ವಯತೆ, ಶಕ್ತಿ ಮತ್ತು ಶ್ರಮದ ಸಾಧ್ಯತೆಯನ್ನು ವೃದ್ಧಿಸುವುದು ನಮ್ಮ ಮುಖ್ಯ ಗುರಿಯಾಗಿರಬೇಕು.

***ಸಣ್ಣ ಸ್ನಾಯುಗಳ ಬೆಳವಣಿಗೆ***

ಕೈಬೆರಳುಗಳು ಮತ್ತು ಕಾಲ್ಬೆರಳುಗಳಂತಹ ಸಣ್ಣ ಸ್ನಾಯುಗಳ ಬಲವನ್ನು ಹೆಚ್ಚಿಸುವುದು ಹಾಗೂ ಕಣ್ಣುಗಳೊಂದಿಗೆ ಅವುಗಳ ಸಮನ್ವಯತೆಯನ್ನು ಸಾಧಿಸುವುದು ಈ ಹಂತದ ಬೆಳವಣಿಗೆಯ ಪ್ರಮುಖ ಅಂಶವಾಗಿದೆ. ಮಣಿಗಳನ್ನು ದಾರದಲ್ಲಿ ಪೋಣಿಸುವುದು, ಶೂಲೇಸ್‌ಗಳನ್ನು ಕಟ್ಟುವುದು, ಒಂದು ಬಟ್ಟಲಿನಲ್ಲಿ ಬೆರೆಸಿಟ್ಟಿರುವ ವಿವಿಧ ಧಾನ್ಯಗಳು, ಬೀಜಗಳು ಅಥವಾ ಬೆಣಚುಕಲ್ಲುಗಳನ್ನು ಪ್ರತ್ಯೇಕಿಸಿ ವಿಂಗಡಿಸುವುದು ಹಾಗೂ ಸಣ್ಣ ಕಡ್ಡಿಗಳು (ಸ್ಟ್ರಾ), ಎಲೆಗಳು ಮತ್ತು ಕಲ್ಲುಗಳನ್ನು ಬಳಸಿ ನಿರ್ದಿಷ್ಟ ಮಾದರಿಗಳನ್ನು ತಯಾರಿಸುವಂತಹ ಚಟುವಟಿಕೆಗಳು ಈ ಸಣ್ಣ ಸ್ನಾಯುಗಳ ವಿಕಸನಕ್ಕೆ ಬಹಳ ಸಹಕಾರಿ. ಇಂತಹ ಕಾರ್ಯಗಳನ್ನು ನಿರ್ವಹಿಸುವಲ್ಲಿ 'ಕೈ-ಕಣ್ಣಿನ ಸಮನ್ವಯ' (Hand-eye coordination) ನಿರ್ಣಾಯಕವಾಗುತ್ತದೆ. ವಸ್ತುಗಳನ್ನು ಬೇರ್ಪಡಿಸುವ ಮತ್ತು ವಿಂಗಡಿಸುವ ಈ ಅಭ್ಯಾಸಗಳು, ಮಗು ಮುಂದೆ ದೀರ್ಘಕಾಲದವರೆಗೆ ಪೆನ್ಸಿಲ್ ಹಿಡಿದು ಬರೆಯಲು ಅಗತ್ಯವಾದ ಸ್ನಾಯುಬಲವನ್ನು ನೀಡುತ್ತವೆ. ಅಷ್ಟೇ ಅಲ್ಲದೆ, ವಸ್ತುಗಳು ಅಥವಾ ಚಿತ್ರಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ಈ ಸಾಮರ್ಥ್ಯವು, ಮಗು ಭಾಷೆಯ ಲಿಪಿಯೊಂದಿಗೆ ಪರಿಚಿತವಾದಾಗ ಅಕ್ಷರಗಳನ್ನು ಸುಲಭವಾಗಿ ಗುರುತಿಸಲು ಸಹಾಯ ಮಾಡುತ್ತದೆ.

***ಇಂದ್ರಿಯ-ಗ್ರಹಿಕೆಯ ಬೆಳವಣಿಗೆ***

ಈ ವಯಸ್ಸಿನಲ್ಲಿ ದೃಷ್ಟಿ, ಸ್ಪರ್ಶ, ವಾಸನೆ, ಶಬ್ದ ಮತ್ತು ರುಚಿ – ಇವುಗಳ ಗ್ರಹಿಕೆಯು ವಿವಿಧ ಅನುಭವಗಳ ಮೂಲಕ ಚುರುಕಾಗುತ್ತವೆ. ಈ ಬೆಳವಣಿಗೆಗೆ ಪೂರಕವಾದ ಕೆಲವು ಚಟುವಟಿಕೆಗಳೆಂದರೆ:

- ವಿವಿಧ ಬಣ್ಣಗಳನ್ನು ಗುರುತಿಸುವುದು ಅಥವಾ ಬಣ್ಣಗಳನ್ನು ಮಿಶ್ರಣ ಮಾಡುವುದು.
- ಚಿತ್ರಗಳಲ್ಲಿನ ವ್ಯತ್ಯಾಸಗಳನ್ನು ಅಥವಾ ತಪ್ಪುಗಳನ್ನು ಗುರುತಿಸಿ ಪ್ರತ್ಯೇಕಿಸುವುದು.
- ವಸ್ತುಗಳನ್ನು ಅವುಗಳ ಗಾತ್ರ ಮತ್ತು ಆಕಾರಕ್ಕೆ ಅನುಗುಣವಾಗಿ ವಿಂಗಡಿಸುವುದು.
- ವಸ್ತುಗಳ ಟೆಕ್ಸ್ಚರ್ ಅರಿಯುವುದು; ಅಂದರೆ ಬಿಸಿ-ತಣ್ಣಗಿನ, ನಯ-ಒರಟುಗಳನ್ನು ಗುರುತಿಸುವುದು.
- ವಿಭಿನ್ನ ವಾಸನೆಗಳನ್ನು (ಸುಗಂಧ ಅಥವಾ ದುರ್ವಾಸನೆ) ಪತ್ತೆಹಚ್ಚುವುದು.
- ಹೂವುಗಳು ಅಥವಾ ಆಹಾರ ಪದಾರ್ಥಗಳ ವಾಸನೆಯ ಮೂಲಕ ಅವುಗಳ ಮೂಲವನ್ನು ಗುರುತಿಸುವುದು.
- ವಿವಿಧ ಆಹಾರ ಪದಾರ್ಥಗಳ ರುಚಿ ಮತ್ತು ಸುವಾಸನೆಯನ್ನು ಹೆಸರಿಸುವುದು.

ಮಗುವಿನ ಕಲ್ಪನಾತ್ಮಕ ಬೆಳವಣಿಗೆಗೆ ಇಂತಹ ಎಲ್ಲಾ ಸಂವೇದನಾ ಅನುಭವಗಳ ಜೊತೆಗೆ ನಿರಂತರವಾದ ಚಿಂತನಾ (ಅರಿವಿನ) ಪ್ರಕ್ರಿಯೆಯ ಅಗತ್ಯವಿರುತ್ತದೆ. ದೂರ, ಸಮಯ ಮತ್ತು ತೂಕದಂತಹ ಪರಿಕಲ್ಪನೆಗಳನ್ನು ಅಂದಾಜಿಸುವ ಸಾಮರ್ಥ್ಯವೂ ಇಲ್ಲಿ ಬೆಳೆಯುತ್ತದೆ. ಉದಾಹರಣೆಗೆ: ಒಂದು ವಸ್ತು ಎಷ್ಟು ದೂರದಲ್ಲಿದೆ? ಅದು ಭಾರವಾಗಿದೆಯೇ ಅಥವಾ ಹಗುರವಾಗಿದೆಯೇ? ಇತ್ಯಾದಿ. ಹೀಗೆ ಇಂದ್ರಿಯಗಳ ಮೂಲಕ ಪಡೆಯುವ ಅನುಭವಗಳು ಮಗುವಿನ ಅರಿವಿನ ಸಾಮರ್ಥ್ಯ, ಭಾಷೆ ಮತ್ತು ಶಬ್ದಕೋಶದ ಬೆಳವಣಿಗೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿರುತ್ತವೆ.

***ಅರಿವಿನ ಬೆಳವಣಿಗೆ***

ಚಿಂತನೆ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಕೌಶಲಗಳು ಮಗುವಿನ ವಿಕಸನದ ಪ್ರಮುಖ ಆಯಾಮಗಳಾಗಿವೆ. ಇವು ಮಗು ತನ್ನ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಇದರಲ್ಲಿ ಮುಖ್ಯವಾಗಿ ವಸ್ತುಗಳ ನಡುವಿನ ವ್ಯತ್ಯಾಸ ಗುರುತಿಸುವುದು, ವಿಂಗಡಿಸುವುದು, ಕ್ರಮಬದ್ಧವಾಗಿ ಜೋಡಿಸುವುದು ಮತ್ತು ಯಾವುದೇ ಘಟನೆಯ 'ಕಾರಣ ಹಾಗೂ ಪರಿಣಾಮ'ಗಳನ್ನು ಗ್ರಹಿಸುವ ಸಾಮರ್ಥ್ಯಗಳು ಸೇರಿವೆ. ಉದಾಹರಣೆಗೆ: "ವಸ್ತುಗಳನ್ನು ಎಸೆದಾಗ ಅವು ಕೆಳಗೆ ಏಕೆ ಬೀಳುತ್ತವೆ?", "ನೀರಿಗೆ ಶಾಯಿಯ ಒಂದು ಹನಿ ಬಿದ್ದಾಗ ಬಣ್ಣ ಹೇಗೆ ಬದಲಾಗುತ್ತದೆ?" ಅಥವಾ "ಮಳೆ ಏಕೆ ಬರುತ್ತದೆ?" ಎಂಬಂತಹ ಕುತೂಹಲದ ಪ್ರಶ್ನೆಗಳು ಮಕ್ಕಳ ಮನಸ್ಸಿನಲ್ಲಿ ಮೂಡುತ್ತವೆ. ಹಿರಿಯರು ಅಥವಾ ಶಿಕ್ಷಕರು ಮಕ್ಕಳೊಂದಿಗೆ ಈ ಪ್ರಶ್ನೆಗಳ ಬಗ್ಗೆ ಚರ್ಚಿಸುವುದು ಬಹಳ ಮುಖ್ಯ. ಇಲ್ಲಿ ಮಗು ಕೇವಲ 'ಸರಿಯಾದ' ಉತ್ತರಗಳನ್ನು ನೆನಪಿಟ್ಟುಕೊಳ್ಳಬೇಕು ಎಂಬುದು ನಮ್ಮ ಉದ್ದೇಶವಲ್ಲ; ಬದಲಾಗಿ ಅವರು ವ್ಯವಸ್ಥಿತವಾಗಿ ತರ್ಕಿಸಲು ಕಲಿಯಬೇಕು ಎಂಬುದೇ ಮುಖ್ಯ ಗುರಿಯಾಗಿದೆ. ಇಂತಹ ಅನುಭವಗಳು ಮಕ್ಕಳಿಗೆ ಸ್ಥಳ, ಸಮಯ ಮತ್ತು ತೂಕದಂತಹ ಮೂಲಭೂತ ಗಣಿತದ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಇದು ಮುಂದೆ ಅವರು ಎಣಿಕೆ ಮತ್ತು ಅಂಕಗಣಿತದಂತಹ ವಿಷಯಗಳನ್ನು ಕಲಿಯಲು ಗಟ್ಟಿಯಾದ ಬುನಾದಿ ಹಾಕಿಕೊಡುತ್ತದೆ. ಮಕ್ಕಳ ಪ್ರಶ್ನೆಗಳನ್ನು ಪ್ರೋತ್ಸಾಹಿಸುವ ಮತ್ತು ಅವರೊಂದಿಗೆ ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳುವ ಜಾಗೃತ ಶಿಕ್ಷಕರು ಅಥವಾ ಪೋಷಕರು, ಮಕ್ಕಳ ಉನ್ನತ ಚಿಂತನಾ ಕೌಶಲಗಳನ್ನು ವೃದ್ಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

***ಭಾಷೆ ಮತ್ತು ಸಾಕ್ಷರತೆಯ ಅಭಿವೃದ್ಧಿ***

ಮಕ್ಕಳು ದೈನಂದಿನ ಜೀವನದ ವಿವಿಧ ವಿಚಾರಗಳ ಬಗ್ಗೆ ಹಿರಿಯರೊಂದಿಗೆ ಸಂವಹನ ನಡೆಸುವಾಗ ಅವರ ಶಬ್ದಕೋಶವು ವಿಸ್ತಾರಗೊಳ್ಳುತ್ತದೆ ಮತ್ತು ಭಾಷೆ ಬೆಳೆಯುತ್ತದೆ. ತಾವು ಕಂಡ ಘಟನೆಗಳನ್ನು ವಿವರಿಸಲು, ಇತರರು ಹೇಳಿದ್ದನ್ನು ಕೇಳಿ ಅರ್ಥಮಾಡಿಕೊಳ್ಳಲು ಹಾಗೂ ಹಾಡು, ಕಥೆ ಮತ್ತು ಕವಿತೆಗಳನ್ನು ಆನಂದಿಸಲು ಮಕ್ಕಳಿಗೆ ಹೆಚ್ಚಿನ ಅವಕಾಶಗಳು ಸಿಕ್ಕಾಗ ಅವರ ಭಾಷಾ ಸಾಮರ್ಥ್ಯವು ಚುರುಕಾಗುತ್ತದೆ.



ಚಿತ್ರ 2: ಎಲ್ಲಾ ಮಕ್ಕಳು ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವನ್ನು ಪಡೆಯಬೇಕು.

ಸಾಕ್ಷರತೆ ಎಂದರೆ ಕೇವಲ ಅಕ್ಷರಗಳನ್ನು ಬರೆಯುವುದಲ್ಲ, ಅದು ಓದುವ ಮತ್ತು ಬರೆಯುವ ಆಳವಾದ ತಿಳಿವಳಿಕೆ. ಸಾಕ್ಷರತೆಯು ಮೌಖಿಕ ಭಾಷೆಯ ಬೆಳವಣಿಗೆಯನ್ನು (ಕೇಳುವುದು ಮತ್ತು ಮಾತನಾಡುವುದು) ಆಧರಿಸಿದೆ. ಮಕ್ಕಳು ಚೆನ್ನಾಗಿ ಕೇಳಿಸಿಕೊಳ್ಳಲು ಮತ್ತು ಮಾತನಾಡಲು ಕಲಿತಾಗ ಮಾತ್ರ ಓದು-ಬರಹವನ್ನು ಸುಲಭವಾಗಿ ಕಲಿಯಬಲ್ಲರು. ವಾಸ್ತವವಾಗಿ, ಮಕ್ಕಳು ತಮ್ಮ ಸುತ್ತಲಿನ ವಸ್ತುಗಳನ್ನು ಗುರುತಿಸಿ, ಅವುಗಳ ನಡುವಿನ ವ್ಯತ್ಯಾಸವನ್ನು ತಿಳಿದಾಗಲೇ ಅವರ 'ಓದು' ಪ್ರಾರಂಭವಾಗಿರುತ್ತದೆ (ಇದನ್ನು ದೃಶ್ಯ ರೂಪದ ಸೂಚನೆಗಳ ಗ್ರಹಿಕೆ ಎನ್ನಲಾಗುತ್ತದೆ). ಆದರೆ, ಶಬ್ದಗಳಿಗೆ ಅನುಗುಣವಾದ ಲಿಪಿ ಅಥವಾ ಅಕ್ಷರಗಳನ್ನು ಪರಿಚಯಿಸುವುದು ಒಂದು ಔಪಚಾರಿಕ ಹಂತವಾಗಿದ್ದು, ಇದಕ್ಕೆ ವ್ಯವಸ್ಥಿತವಾದ ಯೋಜನೆ ಮತ್ತು ಸೂಕ್ತ ಕಲಿಕಾ ಅವಕಾಶಗಳ ಅಗತ್ಯವಿರುತ್ತದೆ.

***ಸಾಮಾಜಿಕ-ಭಾವನಾತ್ಮಕ ಕಲಿಕೆ***

ಮಕ್ಕಳು ಚಿಕ್ಕ ವಯಸ್ಸಿನಿಂದಲೇ ತಮ್ಮದೇ ಆದ ಭಾವನೆಗಳನ್ನು ಹಾಗೂ ಇತರರ ಭಾವನೆಗಳನ್ನು ಅರ್ಥೈಸಿಕೊಳ್ಳುವ ಅನುಭೂತಿಯನ್ನು ಬೆಳೆಸಿಕೊಳ್ಳಲು ಪ್ರಾರಂಭಿಸುತ್ತಾರೆ. ಆದ್ದರಿಂದ, ಮಕ್ಕಳಿಗೆ ಸಾಮಾಜಿಕವಾಗಿ ಬೆರೆಯಲು ಮತ್ತು ತಮ್ಮ ಭಾವನೆಗಳನ್ನು ಸಮತೋಲನದಲ್ಲಿಟ್ಟುಕೊಳ್ಳಲು ಹಿರಿಯರ ಬೆಂಬಲ ಅತ್ಯಗತ್ಯವಾಗಿರುತ್ತದೆ. 'ನಾನು ಯಾರು?', 'ನನಗೆ ಯಾವುದು ಇಷ್ಟ ಅಥವಾ ಇಷ್ಟವಿಲ್ಲ?' ಎಂಬ ಸ್ವಯಂ ಅರಿವು ಮತ್ತು ಇತರರೊಂದಿಗೆ ಹೇಗೆ ಸಕಾರಾತ್ಮಕವಾಗಿ ಸಂವಹನ ನಡೆಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಅವರಿಗೆ ಮಾರ್ಗದರ್ಶನ ಬೇಕು. ವಿವಿಧ ಭಾವನೆಗಳನ್ನು ಗುರುತಿಸುವುದು, ಅವುಗಳಿಗೆ ಸೂಕ್ತ ಪದಗಳನ್ನು ಬಳಸಿ ವ್ಯಕ್ತಪಡಿಸುವುದು ಹಾಗೂ ಗೆಳೆಯರೊಂದಿಗೆ, ಹಿರಿಯರೊಂದಿಗೆ ಮತ್ತು ಮನೆಯ ಹೊರಗಿನ ಪರಿಸರದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಮಗು ಈ ಹಂತದಲ್ಲಿ ಕಲಿಯುತ್ತದೆ. ಇದಲ್ಲದೆ ತನ್ನ ಭಾವನೆಗಳನ್ನು ಹತೋಟಿಯಲ್ಲಿಡುವುದು, ಇತರರ ಬಗ್ಗೆ ಕಾಳಜಿ ವಹಿಸುವುದು, ಯಾವುದು ಸರಿ ಮತ್ತು ಯಾವುದು ತಪ್ಪು ಎಂಬ ನೈತಿಕ ಅರಿವು ಮೂಡಿಸುವುದು ಹಾಗೂ ತನ್ನ ವರ್ತನೆಯಿಂದ ಇತರರ ಮೇಲೆ ಉಂಟಾಗುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವಂತೆ ಮಾಡುವುದು ಮುಖ್ಯವಾಗಿದೆ.

ಈ ಎಲ್ಲಾ ವಲಯಗಳಿಗೆ ಸಂಬಂಧಿಸಿದ ಬೆಳವಣಿಗೆಗಳು ಮೇಲ್ನೋಟಕ್ಕೆ ಬೇರೆ ಬೇರೆ ಎಂದು ಕಂಡರೂ, ಇವು ಮಗುವಿನ ದೈನಂದಿನ ಜೀವನದಲ್ಲಿ ಜೊತೆಜೊತೆಯಾಗಿಯೇ ಸಾಗುತ್ತವೆ ಮತ್ತು ಒಂದಕ್ಕೊಂದು ನಿಕಟವಾಗಿ ಬೆಸೆದುಕೊಂಡಿರುತ್ತವೆ.

2020ರ ರಾಷ್ಟ್ರೀಯ ಶಿಕ್ಷಣ ನೀತಿ (NEP) ಮತ್ತು 2022ರ ಬುನಾದಿ ಹಂತಕ್ಕೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF-FS), ಆರಂಭಿಕ ಬಾಲ್ಯ ಶಿಕ್ಷಣದ ಕಲಿಕಾ ಹಂತದ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳು ಮತ್ತು ವಿಧಾನಗಳನ್ನು ಒದಗಿಸುತ್ತವೆ. ಬುನಾದಿ ಹಂತವು ಪ್ರಮುಖವಾಗಿ 3ರಿಂದ 6 ವರ್ಷ ವಯಸ್ಸಿನ ಶಾಲಾಪೂರ್ವ ಅಥವಾ ಅಂಗನವಾಡಿ ವಿದ್ಯಾರ್ಥಿಗಳನ್ನು ಹಾಗೂ 7 ರಿಂದ 8 ವರ್ಷ ವಯಸ್ಸಿನ 1 ಮತ್ತು 2ನೇ ತರಗತಿಯ ಆರಂಭಿಕ ಪ್ರಾಥಮಿಕ ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಈ ಹಂತದ ಶಿಕ್ಷಣವು ಮಗುವಿನ ಭವಿಷ್ಯದ ಕಲಿಕೆಗೆ ಭದ್ರವಾದ ಬುನಾದಿ ಹಾಕುವ ಗುರಿಯನ್ನು ಹೊಂದಿದೆ.

**ಕಲಿಯಲು ಕಲಿಯುವುದು**

ಚಿಕ್ಕ ಮಕ್ಕಳಿಗೆ ಶಿಕ್ಷಣ ನೀಡುವುದು ಎಂದರೆ ಅವರು ಈ ಪ್ರಪಂಚದೊಂದಿಗೆ ಸಂಪರ್ಕ ಸಾಧಿಸಲು ಮತ್ತು ಪ್ರಪಂಚವನ್ನು ಸ್ವತಃ ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುವ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣವು ಮಕ್ಕಳಿಗೆ 'ಹೇಗೆ ಕಲಿಯಬೇಕು' ಎಂಬ ಮೂಲಭೂತ ಕೌಶಲವನ್ನು ಬೆಳೆಸಲು ಸಹಾಯ ಮಾಡಬೇಕು. ಇಲ್ಲಿ ಮಕ್ಕಳಿಗೆ ಕೇವಲ ಸರಿಯಾದ ಉತ್ತರಗಳನ್ನು ನೀಡುವುದು ಅಥವಾ ಅವರಿಂದ ನಿಖರವಾದ ಉತ್ತರಗಳನ್ನು ನಿರೀಕ್ಷಿಸುವುದು ನಮ್ಮ ಉದ್ದೇಶವಲ್ಲ. ಬದಲಾಗಿ, ಮಕ್ಕಳು ತಾವಾಗಿಯೇ ಉತ್ತರಗಳನ್ನು ಕಂಡುಹಿಡಿಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಂತೆ ಮಾಡುವುದು ಮತ್ತು ಈ ಅನ್ವೇಷಣೆಗೆ ಪೂರಕವಾದ ಭಾಷಾ ಪ್ರೌಢಿಮೆ ಹಾಗೂ ತಾರ್ಕಿಕ ಚಿಂತನೆಯನ್ನು ವೃದ್ಧಿಸುವುದು ಇದರ ಪ್ರಮುಖ ಗುರಿಯಾಗಿದೆ.

***ಸೂಕ್ಷ್ಮವಾಗಿ ಗಮನಿಸುವುದು***

ತನ್ನ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಮೇಲೆ ಗಮನವನ್ನು ಕೇಂದ್ರೀಕರಿಸುವುದು ಚಿಕ್ಕ ಮಕ್ಕಳ ಪಾಲಿಗೆ ಒಂದು ಅತ್ಯಗತ್ಯ ಕೌಶಲ. ಆದರೆ, ದೀರ್ಘಕಾಲ ಒಂದೇ ವಿಷಯದ ಮೇಲೆ ಗಮನ ಹರಿಸುವುದು ಮಕ್ಕಳಿಗೆ ಆರಂಭದಲ್ಲಿ ಕಷ್ಟವೆನಿಸಬಹುದು; ಇದನ್ನು ಬೆಳೆಸಿಕೊಳ್ಳಲು ನಿರಂತರ ಅಭ್ಯಾಸದ ಅಗತ್ಯವಿದೆ. ಮಕ್ಕಳು ತಮ್ಮ ಸುತ್ತಲಿನ ಸಣ್ಣ ಕೀಟಗಳನ್ನು, ಗಿಡಮರಗಳ ಎಲೆಗಳನ್ನು ಅಥವಾ ಇತರ ಸೂಕ್ಷ್ಮ ವಸ್ತುಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಪ್ರೋತ್ಸಾಹಿಸುವುದು ಒಂದು ಉತ್ತಮ ಶೈಕ್ಷಣಿಕ ವ್ಯಾಯಾಮ. ಅವರು ಕಂಡ ವಿಷಯಗಳ ಬಗ್ಗೆ ಮಾತನಾಡಲು ಅವಕಾಶ ನೀಡುವುದು ಮತ್ತು ಅವರ ಅವಲೋಕನಗಳನ್ನು ಶಿಕ್ಷಕರು ಅಥವಾ ಪೋಷಕರು ಗೌರವಿಸಿ ಒಪ್ಪಿಕೊಳ್ಳುವುದು ಮಗುವಿನ ಕಲಿಕೆಯ ಉತ್ಸಾಹವನ್ನು ಹೆಚ್ಚಿಸುತ್ತದೆ.

***ಅನುಕರಣೆ ಮತ್ತು ಪುನರಾವರ್ತನೆ***

ಮಕ್ಕಳು ಯಾವುದನ್ನಾದರೂ ಸ್ವತಃ ಮಾಡುವ ಮೂಲಕ ಅತ್ಯುತ್ತಮವಾಗಿ ಕಲಿಯುತ್ತಾರೆ. ತಾವು ಕಲಿತ ಹೊಸ ವಿಷಯದಲ್ಲಿ ಆನಂದವನ್ನು ಕಂಡುಕೊಳ್ಳಲು ಮತ್ತು ಅದರಲ್ಲಿ ಪರಿಣತಿ ಸಾಧಿಸಲು ಅವರು ಆ ಕೆಲಸವನ್ನು ಪದೇ ಪದೇ ಪುನರಾವರ್ತಿಸುತ್ತಾರೆ. ಮಾತನಾಡುವ ಶೈಲಿ, ನಡೆಯುವ ರೀತಿ, ಊಟ ಮಾಡುವ ಪದ್ಧತಿ, ಹಾವಭಾವಗಳೊಂದಿಗೆ ಹಾಡುವುದು ಹಾಗೂ ತುದಿಗಾಲಿನಲ್ಲಿ ನಿಂತು ಸಮತೋಲನ ಕಾಯ್ದುಕೊಳ್ಳುವುದು ಮುಂತಾದವುಗಳಲ್ಲಿ ಹಿರಿಯರ ನಡವಳಿಕೆಯನ್ನು ಅನುಕರಿಸುವುದು ಮಗುವಿನ ಸಹಜ ಸ್ವಭಾವ. ಯಾವುದೇ ಹೊಸ ಮತ್ತು ಆಸಕ್ತಿದಾಯಕ ಚಟುವಟಿಕೆಯಲ್ಲಿ ತಮಗೆ ಪೂರ್ಣವಾಗಿ ತೊಡಗಿಸಿಕೊಳ್ಳಲು ಮತ್ತು ಅದರಲ್ಲಿ ಆತ್ಮವಿಶ್ವಾಸ ಪಡೆಯಲು ಮಕ್ಕಳು ಇಂತಹ ನಡವಳಿಕೆಗಳನ್ನು ಪುನರಾವರ್ತಿಸುತ್ತಾರೆ. ದೈನಂದಿನ ಶಾಲಾ ಅಥವಾ ಮನೆಯ ದಿನಚರಿಗೆ ಒಗ್ಗಿಕೊಳ್ಳಲು ಕೂಡ ಪುನರಾವರ್ತನೆ ಮತ್ತು ಅಭ್ಯಾಸ ಬಹಳ ಅಗತ್ಯ. ಕೇವಲ ದೈಹಿಕ ಕ್ರಿಯೆಗಳಷ್ಟೇ ಅಲ್ಲದೆ, ಹಿರಿಯರು ತೋರುವ ಕಾಳಜಿ, ಪ್ರೀತಿ ಮತ್ತು ಸೂಕ್ಷ್ಮತೆಯನ್ನು ಗಮನಿಸಿ ಅನುಕರಿಸುವ ಮೂಲಕ ಮಕ್ಕಳು ಜೀವನದ ಮೌಲ್ಯಗಳನ್ನು ಕಲಿಯುತ್ತಾರೆ. ಆದ್ದರಿಂದ, ಮಕ್ಕಳು ತಮ್ಮನ್ನು ಗಮನಿಸಿ ಕಲಿಯುತ್ತಿದ್ದಾರೆ ಎಂಬ ಅರಿವಿನೊಂದಿಗೆ ಹಿರಿಯರು ಅಥವಾ ಶಿಕ್ಷಕರು ಯಾವಾಗಲೂ ಆದರ್ಶಪ್ರಾಯವಾದ ನಡವಳಿಕೆಯನ್ನು ತೋರುವುದು ಬಹಳ ಮುಖ್ಯ.

***ಪ್ರಯತ್ನಗಳು ಮತ್ತು ತಪ್ಪುಗಳು***

ಮಕ್ಕಳು ಯಾವುದನ್ನಾದರೂ ಸ್ವತಃ ಮಾಡುವ ಮೂಲಕ ಕಲಿಯುತ್ತಾರೆ ಎಂಬುದು ನಮಗೆ ತಿಳಿದಿದೆ. ಆದರೆ ಈ ವಯಸ್ಸಿನಲ್ಲಿ ಅವರ ಸ್ನಾಯುಗಳ ಬಲ ಮತ್ತು ಸಮನ್ವಯತೆಯು ಇನ್ನೂ ವಿಕಸನಗೊಳ್ಳುತ್ತಿರುತ್ತದೆ. ಆದ್ದರಿಂದ, ಮಗು ಯಾವುದಾದರೂ ಕೆಲಸದಲ್ಲಿ ವಿಫಲವಾದರೂ ಸಹ, ಅವರಿಗೆ ಅದನ್ನು ಮತ್ತೆ ಮಾಡಲು, ತಪ್ಪುಗಳನ್ನು ಮಾಡಲು

ಮತ್ತು ಕಷ್ಟಕರವಾದ ಕೆಲಸಗಳನ್ನು ಪದೇ ಪದೇ ಪ್ರಯತ್ನಿಸಲು ಅವಕಾಶ ನೀಡುವುದು ಬಹಳ ಮುಖ್ಯ. ಇಂತಹ ಸವಾಲಿನ ಕೆಲಸಗಳಲ್ಲಿ ತೊಡಗಿಕೊಳ್ಳುವುದು ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತದೆ ಮತ್ತು ಸರಳ ಕೆಲಸಗಳನ್ನು ಹೆಚ್ಚು ಅಚ್ಚುಕಟ್ಟಾಗಿ ಮಾಡಲು ಪ್ರೇರೇಪಿಸುತ್ತದೆ. ಉದಾಹರಣೆಗೆ, ಒಂದು ಲೋಟದಿಂದ ಇನ್ನೊಂದು ಲೋಟಕ್ಕೆ ನೀರು ಸುರಿಯುವಾಗ ನೀರು ಚೆಲ್ಲಬಹುದು ಅಥವಾ ಚಮಚದ ಮೇಲೆ ನಿಂಬೆಹಣ್ಣನ್ನು ಇಟ್ಟು ನಡೆಯುವಾಗ ಅದು ಕೆಳಗೆ ಬೀಳಬಹುದು. ಹಾಗೆಯೇ ಒಬ್ಬರೇ ಏಣಿ ಹತ್ತುವಾಗ ಸಹಾಯದ ಅಗತ್ಯವಿರಬಹುದು. ಇಂತಹ ವೈವಿಧ್ಯಮಯ ಅನುಭವಗಳು ಮತ್ತು ತಪ್ಪು ಮಾಡುವ ಮುಕ್ತ ಅವಕಾಶಗಳು ಮಗುವಿಗೆ ಸ್ವತಂತ್ರವಾಗಿ ಕೆಲಸ ಮಾಡುವುದನ್ನು ಕಲಿಯಲು ಸಹಾಯ ಮಾಡುತ್ತವೆ. ತಪ್ಪು ಮಾಡುವುದು ಕಲಿಕೆಯ ಒಂದು ಭಾಗ ಎಂಬ ಅರಿವು ಮಗುವಿನ ಕಲಿಕಾ ಆಸಕ್ತಿಯನ್ನು ಕುಂದದಂತೆ ಕಾಪಾಡುತ್ತದೆ.

***ಪ್ರಶ್ನೆಗಳನ್ನು ಕೇಳುವುದು ಮತ್ತು ಕುತೂಹಲವನ್ನು ಬೆಳೆಸುವುದು***

ಮಕ್ಕಳಲ್ಲಿ ಸಹಜವಾಗಿಯೇ ಜಗತ್ತನ್ನು ತಿಳಿಯುವ ತೀವ್ರ ಕುತೂಹಲವಿರುತ್ತದೆ. ತಮ್ಮ ಸುತ್ತಮುತ್ತಲಿನ ಪರಿಸರವನ್ನು ಅನ್ವೇಷಿಸುವುದು ಅವರಿಗೆ ಒಂದು ಸಕ್ರಿಯ ಮತ್ತು ನಿರಂತರ ಪ್ರಕ್ರಿಯೆ. ಮಗುವಿನ ಭಾಷೆ ಬೆಳೆದಂತೆಲ್ಲಾ, ಈ ಕುತೂಹಲವು ನೂರಾರು ಪ್ರಶ್ನೆಗಳ ರೂಪ ಪಡೆಯುತ್ತದೆ. ಮಗುವಿನ ಜೀವನದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಶಿಕ್ಷಕರು ಅಥವಾ ಪೋಷಕರು ಅವರನ್ನು ಅರ್ಥಪೂರ್ಣ ಸಂಭಾಷಣೆಗಳಲ್ಲಿ ತೊಡಗಿಸಿಕೊಳ್ಳುವುದು ಬಹಳ ಮುಖ್ಯ. ಮಗು ಒಂದು ಪ್ರಶ್ನೆಯನ್ನು ಕೇಳಿದಾಗ, ಅದಕ್ಕೆ ಕೇವಲ ನೇರ ಉತ್ತರ ನೀಡುವುದಕ್ಕಿಂತ ಹೆಚ್ಚಾಗಿ, ಮಗುವು ಮತ್ತಷ್ಟು ಆಳವಾಗಿ ಯೋಚಿಸಲು ಪ್ರೇರೇಪಿಸುವಂತಹ ಮರುಪ್ರಶ್ನೆಗಳನ್ನು ಕೇಳುವುದು ಉತ್ತಮ. ಹಿರಿಯರು ತಾಳ್ಮೆಯಿಂದ ಮಕ್ಕಳ ಆಲೋಚನೆಗಳನ್ನು ಆಲಿಸಬೇಕು ಮತ್ತು ಅವರಿಗೆ ಸುಲಭವಾಗಿ ಅರ್ಥವಾಗುವಂತಹ ಸರಳ ಶಬ್ದಕೋಶವನ್ನು ಬಳಸಿ ವಿಚಾರಗಳನ್ನು ಹಂಚಿಕೊಳ್ಳಬೇಕು. ಇಂತಹ ಸಂವಾದಾತ್ಮಕ ಕಲಿಕೆಯು ಮಗುವಿನ ಅರಿವಿನ ಮಟ್ಟವನ್ನು ವಿಸ್ತರಿಸಲು ಸಹಾಯ ಮಾಡುತ್ತದೆ.

***ಅನುಭವಗಳನ್ನು ಪ್ರತಿನಿಧಿಸುವುದು ಮತ್ತು ಹಂಚಿಕೊಳ್ಳುವುದು***

ನಾವು ನೋಡಿದ್ದನ್ನು, ಕಲಿತದ್ದನ್ನು ಮತ್ತು ಮಾಡಿದ್ದನ್ನು ವಿವಿಧ ರೂಪಗಳಲ್ಲಿ ವ್ಯಕ್ತಪಡಿಸುವುದು ಅಥವಾ ಹಂಚಿಕೊಳ್ಳುವುದು ಮಾನವರ ವಿಶಿಷ್ಟ ಗುಣವಾಗಿದೆ. ಮಕ್ಕಳಲ್ಲಿ ಈ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಹಲವು ಚಟುವಟಿಕೆಗಳು ನೆರವಾಗಬಲ್ಲವು. ಮನೆ ಮತ್ತು ಶಾಲೆಯಲ್ಲಿ ಮಕ್ಕಳೊಂದಿಗೆ ಅವರ ದೈನಂದಿನ ಅನುಭವಗಳ ಬಗ್ಗೆ ಮಾತನಾಡುವುದು, ಹಾಡುಗಳು ಅಥವಾ ಕಥೆಗಳ ಮೂಲಕ ವಿಷಯಗಳನ್ನು ಹಂಚಿಕೊಳ್ಳುವುದು ಮಗುವಿನ ಅಭಿವ್ಯಕ್ತಿ ಶಕ್ತಿಯನ್ನು ಹೆಚ್ಚಿಸುತ್ತದೆ. ಆರಂಭದಲ್ಲಿ ಮಕ್ಕಳು ಮಾಡುವ ಗೀಚುಬರಹಗಳು ಮತ್ತು ಚಿತ್ರಗಳು ಅವರ ಆಲೋಚನೆಗಳ ದೃಶ್ಯ ರೂಪದ ಪ್ರತಿನಿಧಿಗಳಾಗಿರುತ್ತವೆ. ಇವೇ ಮುಂದೆ ಅಕ್ಷರಗಳು ಮತ್ತು ಬರವಣಿಗೆಯಾಗಿ ವಿಕಸನಗೊಳ್ಳುತ್ತವೆ. ಬರವಣಿಗೆಯಷ್ಟೇ ಅಲ್ಲದೆ, ಜೇಡಿಮಣ್ಣಿನಿಂದ ಆಕೃತಿಗಳನ್ನು ಮಾಡುವುದು, ಕಾಗದದ ಕೆಲಸಗಳು ಮತ್ತು ಲಭ್ಯವಿರುವ ಇತರ ಸಂಪನ್ಮೂಲಗಳನ್ನು ಬಳಸಿ ವಸ್ತುಗಳನ್ನು ತಯಾರಿಸುವುದು ಚಿಕ್ಕ ಮಕ್ಕಳ ಕಲಿಕೆಯಲ್ಲಿ ಅತ್ಯಂತ ಪ್ರಮುಖವಾದ ಶೈಕ್ಷಣಿಕ ಅಭ್ಯಾಸಗಳಾಗಿವೆ. ಇವು ಮಗುವಿನ ಸೃಜನಶೀಲತೆಯನ್ನು ಉತ್ತೇಜಿಸುವುದಲ್ಲದೆ, ತಮ್ಮ ಕಲ್ಪನೆಗಳಿಗೆ ಒಂದು ರೂಪ ನೀಡಲು ಸಹಾಯ ಮಾಡುತ್ತವೆ.

## ಮಕ್ಕಳ ಪರಿಸರ ಮತ್ತು ಆಸಕ್ತಿಗಳನ್ನು ಆಧರಿಸಿದ ವಿಷಯಗಳು

ಮಕ್ಕಳ ಶಿಕ್ಷಣವು ಯಾವಾಗಲೂ ಅವರ ಸುತ್ತಮುತ್ತಲಿನ ಪರಿಸರವನ್ನು ಆಧರಿಸಿರಬೇಕು. ಅವರ ಕುತೂಹಲ ಮತ್ತು ಆಸಕ್ತಿಗಳು ತಮ್ಮ ದೈನಂದಿನ ಜೀವನದಲ್ಲಿ ಕಾಣುವ ವಿಷಯಗಳಲ್ಲಿಯೇ ಬೇರೂರಿರುತ್ತವೆ. ಆರಂಭಿಕ ಬಾಲ್ಯ ಶಿಕ್ಷಣ ಪಠ್ಯಕ್ರಮದ ಮುಖ್ಯ ಗುರಿ ಮಗುವಿನ ಈ ನೈಸರ್ಗಿಕ ಕುತೂಹಲವನ್ನು ಪೂರೈಸುವುದೇ ಆಗಿದೆ. NCF-FS 2022 ಮತ್ತು ಇತರ ರಾಷ್ಟ್ರೀಯ ಪಠ್ಯಕ್ರಮ ಮಾರ್ಗಸೂಚಿಗಳು ಇದನ್ನೇ ಪ್ರಮುಖ ಮಾರ್ಗದರ್ಶಿ ತತ್ತ್ವ ಅನುಸರಿಸುತ್ತವೆ.

ಮಕ್ಕಳ ಸುತ್ತಮುತ್ತಲಿನ ಘಟನೆಗಳು ಮತ್ತು ಪರಿಕಲ್ಪನೆಗಳ ಆಧಾರದ ಮೇಲೆ ಶಿಕ್ಷಣವನ್ನು ನೀಡಿದಾಗ, ಅದು ಅವರ ಅನುಭವಗಳಿಗೆ ಹೊಸ ಅರ್ಥವನ್ನು ನೀಡುತ್ತದೆ. ಇದು ಮಗುವಿನ ಮನೆ ಮತ್ತು ಶಾಲೆಯ ನಡುವೆ ಒಂದು ಅವಿನಾಭಾವ ಸಂಬಂಧವನ್ನು ಕಲ್ಪಿಸುತ್ತದೆ. ಉದಾಹರಣೆಗೆ: 'ನಾನು ಮತ್ತು ನನ್ನ ವ್ಯಕ್ತಿತ್ವ', 'ನಮ್ಮ ಆಹಾರ', 'ನಮ್ಮ ಸುತ್ತಲಿನ ಪ್ರಾಣಿ-ಸಸ್ಯಗಳು', 'ವಾಹನಗಳು' ಮತ್ತು 'ಹವಾಮಾನ'ದಂತಹ ವಿಷಯಗಳು ಪಠ್ಯಕ್ರಮಕ್ಕೆ ಅತ್ಯಂತ ಸೂಕ್ತವಾಗಿವೆ. ಹೀಗೆ ವಿಷಯಾಧಾರಿತವಾಗಿ ಪಠ್ಯಕ್ರಮವನ್ನು ವಿನ್ಯಾಸಗೊಳಿಸುವುದರಿಂದ, ಮಕ್ಕಳು ತಮ್ಮ ನೈಜ ಪರಿಸರದಲ್ಲಿ ಹೇಗೆ ನೈಸರ್ಗಿಕವಾಗಿ ಕಲಿಯುತ್ತಾರೋ ಅದೇ ರೀತಿಯಲ್ಲಿ ಶಾಲಾ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದು ಕಲಿಕೆಯನ್ನು ಕೇವಲ ಪಾಠವಾಗಿಸದೆ, ಜೀವನದ ಒಂದು ಭಾಗವನ್ನಾಗಿ ಮಾಡುತ್ತದೆ.

ಮಕ್ಕಳಿಗೆ ಒಂದೇ ವಿಷಯವನ್ನು ಪದೇ ಪದೇ ವಿವಿಧ ರೂಪಗಳಲ್ಲಿ ಪರಿಚಯಿಸಿದಾಗ, ಅವರು ಆ ಪರಿಕಲ್ಪನೆಯನ್ನು ಆಳವಾಗಿ ಅನ್ವೇಷಿಸಲು ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವಿಷಯಗಳ ಪುನರಾವರ್ತನೆ ಮತ್ತು ಸರಳತೆಯಿಂದ ಸಂಕೀರ್ಣತೆಯತ್ತ ಹಂತಹಂತವಾಗಿ ಸಾಗುವುದು ಬಹಳ ಮುಖ್ಯ. ಉದಾಹರಣೆಗೆ, 3 ವರ್ಷದ ಮಗುವಿನೊಂದಿಗೆ 'ವಾಹನಗಳ' ಬಗ್ಗೆ ನಡೆಸುವ ಚರ್ಚೆಯು 5 ವರ್ಷದ ಮಗುವಿನೊಂದಿಗೆ ನಡೆಸುವ ಚರ್ಚೆಗಿಂತ ವಿಭಿನ್ನವಾಗಿರುತ್ತದೆ. ಕಿರಿಯ ಮಕ್ಕಳಿಗೆ ವಾಹನಗಳ ಶಬ್ದಗಳನ್ನು ಅನುಕರಿಸುವುದು, ತಮ್ಮ ಸುತ್ತಮುತ್ತ ನೋಡುವ ವಾಹನಗಳನ್ನು ಗುರುತಿಸುವುದು ಮತ್ತು ಅವುಗಳ ಹೆಸರುಗಳನ್ನು ಕಲಿಯುವುದು ಆಸಕ್ತಿದಾಯಕವಾಗಿರುತ್ತದೆ. ಆದರೆ 5 ವರ್ಷದ ಮಗುವಿಗೆ ವಾಹನಗಳ ಆಕಾರಗಳು, ಅವುಗಳ ವಿವಿಧ ಸಾರಿಗೆ ವಿಧಾನಗಳು (ರಸ್ತೆ, ನೀರು ಅಥವಾ ವಾಯು ಸಂಚಾರ) ಮತ್ತು ಅವುಗಳ ಉಪಯೋಗಗಳಂತಹ ಸಂಕೀರ್ಣ ಅಂಶಗಳು ಹೆಚ್ಚು ಕುತೂಹಲ ಮೂಡಿಸುತ್ತವೆ. ಇಲ್ಲಿ ವಾಹನಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬ ತಾಂತ್ರಿಕ ವಿವರಗಳನ್ನು ಮಕ್ಕಳು ಕರಗತ ಮಾಡಿಕೊಳ್ಳಬೇಕು ಎಂಬುದು ನಮ್ಮ ಉದ್ದೇಶವಲ್ಲ. ಬದಲಿಗೆ, ತಮ್ಮ ಸುತ್ತಲಿನ ವಸ್ತುಗಳು ಮತ್ತು ಘಟನೆಗಳ ಸೂಕ್ಷ್ಮ ವಿವರಗಳನ್ನು ಗಮನಿಸಲು ಹಾಗೂ ಅವುಗಳ ಬಗ್ಗೆ ಆಳವಾಗಿ ಯೋಚಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದೇ ಈ ಶಿಕ್ಷಣದ ಮುಖ್ಯ ಗುರಿಯಾಗಿದೆ.

## ಆರಂಭಿಕ ಬಾಲ್ಯದ ಶಿಕ್ಷಣದ ಈ ಉದ್ದೇಶಗಳನ್ನು ಸಾಧಿಸುವುದು ಹೇಗೆ?

ಆರಂಭಿಕ ಬಾಲ್ಯದ ಶಿಕ್ಷಣದ ಮೂಲ ಉದ್ದೇಶವೆಂದರೆ ಕಲಿಕೆಯನ್ನು ಮಕ್ಕಳ ಪ್ರಸ್ತುತ ಕಾರ್ಯಗಳು ಮತ್ತು ಚಟುವಟಿಕೆಗಳ ಸಂದರ್ಭದಲ್ಲಿ ಪ್ರಸ್ತುತಪಡಿಸುವುದು. ಈ ವಯೋಮಾನದ ಮಕ್ಕಳು ವಿವಿಧ ಆಟಗಳಲ್ಲಿ ಭಾಗವಹಿಸುತ್ತಾರೆ. ಆಟದ ಮೂಲಕ ಮತ್ತು ಶೈಕ್ಷಣಿಕ ಯೋಜನೆಗೆ ಅನುಗುಣವಾಗಿ ಕಲಿಯುವಾಗ ಆರಂಭಿಕ ಬಾಲ್ಯ ಶಿಕ್ಷಣವನ್ನು ಕುರಿತ ಮೇಲೆ ತಿಳಿಸಲಾದ ಎಲ್ಲಾ ಉದ್ದೇಶಗಳನ್ನು ಸಾಧಿಸಲು ಸಾಧ್ಯವಿದೆ. 2022ರ ರಾಷ್ಟ್ರೀಯ ಪಠ್ಯಕ್ರಮ ಮಾರ್ಗಸೂಚಿಗಳು ಮತ್ತು ಎನ್‌ಸಿಎಫ್-ಎಫ್‌ಎಸ್, ಆಟವನ್ನು ಆಧರಿಸಿದ ಕಲಿಕೆಯನ್ನು ಬುನಾದಿ ಹಂತದ ಬೋಧನಾ ವಿಧಾನಕ್ಕೆ, ವಿಶೇಷವಾಗಿ 3-6 ವರ್ಷ ವಯಸ್ಸಿನ ಮಕ್ಕಳಿಗೆ, ಒಂದು ವಿಶಿಷ್ಟ ವಿಧಾನವಾಗಿ ಶಿಫಾರಸು ಮಾಡುತ್ತದೆ.

ಕೊನೆಯದಾಗಿ, ಪ್ರಾಥಮಿಕ ಬಾಲ್ಯಾವಸ್ಥೆಯ ಶಿಕ್ಷಣದಲ್ಲಿ ತೊಡಗಿರುವವರು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ:

1. ಆರಂಭಿಕ ಬಾಲ್ಯದ ಶಿಕ್ಷಣ ಎನ್ನುವುದು ನಾವು ಸಾಮಾನ್ಯವಾಗಿ ನೋಡುವ 'ಶಾಲೆ' ಮತ್ತು ವಿಷಯಾಧಾರಿತ ಶಿಕ್ಷಣದ ಚೌಕಟ್ಟಿಗೆ ಸೀಮಿತವಾದುದಲ್ಲ.

2. ಅಕ್ಷರ ಜ್ಞಾನ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಬೆಳೆಸುವುದು ಆರಂಭಿಕ ವರ್ಷಗಳ ಕಲಿಕೆಯ ಗುರಿಗಳಲ್ಲಿ ಒಂದಾಗಿದೆಯೇ ಹೊರತು, ಅದುವೇ ಕಲಿಕೆಯ ಏಕೈಕ ಗುರಿಯಲ್ಲ.

3. ಅತಿಯಾದ ಕಟ್ಟುನಿಟ್ಟು, ಬೆದರಿಸುವಿಕೆ ಮತ್ತು ಒತ್ತಡದ ತರಗತಿಯ ವಾತಾವರಣವು ಮಕ್ಕಳ ಒಟ್ಟಾರೆ ಬೆಳವಣಿಗೆ ಹಾಗೂ ಕಲಿಕೆಗೆ ಮಾರಕವಾಗಿದೆ. ಬೋಧನೆ ಮತ್ತು ಕಲಿಕೆಯ ಅಂತಹ ಹಳೆಯ ಕಲ್ಪನೆಗಳಿಂದ ನಾವು ಹೊರಬರುವುದು ಅಗತ್ಯ.

4. ಮಕ್ಕಳ ಕಲಿಕೆಯಲ್ಲಿ ಆಟಕ್ಕೆ ಅಪಾರವಾದ ಶಕ್ತಿಯಿದೆ. ಇಂತಹ ಸಂತೋಷದಾಯಕ ವಾತಾವರಣವು ಮಕ್ಕಳ ಆರಂಭಿಕ ವರ್ಷಗಳ ಕಲಿಕೆಗೆ ಉತ್ತಮವಾಗಿ ಸಹಕರಿಸುತ್ತದೆ. ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ನಾವೆಲ್ಲರೂ ಆಟದ ಈ ಮಹತ್ವವನ್ನು ಗುರುತಿಸಿ, ಎಲ್ಲ ಮಕ್ಕಳನ್ನು ಒಳಗೊಳ್ಳುವಂತಹ ಕಲಿಕಾ ಪರಿಸರವನ್ನು ನಿರ್ಮಿಸಲು ಶ್ರಮಿಸಬೇಕು.

*ಕೃತಜ್ಞತೆ: ಈ ಲೇಖನದ ಬರವಣಿಗೆಗೆ ಕಾರಣವಾದ ಮತ್ತು ಚರ್ಚೆಗಳಲ್ಲಿ ಭಾಗಿಯಾದ ಜಿಗಿಶಾ ಶಾಸ್ತ್ರಿ, ಇರಾ ಜೋಶಿ ಹಾಗೂ ಇಸಿಸಿಇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನನ್ನೆಲ್ಲಾ ವಿದ್ಯಾರ್ಥಿಗಳು ಮತ್ತು ಸಹೋದ್ಯೋಗಿಗಳಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.*



**ಕಿನ್ನರಿ ಪಾಂಡ್ಯ**ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಜಕೇಶನ್‌ನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅವರು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ರೂಪಿಸುವುದು, ಬೋಧನೆ, ಸಂಶೋಧನೆ ಹಾಗೂ ಕ್ಷೇತ್ರ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇದರೊಂದಿಗೆ, ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕೆ (ECCE) ಸಂಬಂಧಿಸಿದ ಮಾರ್ಗಸೂಚಿ ಮತ್ತು ನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲೂ ಅವರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** kinnari@apu.edu.in

ಅನುವಾದ: ಅನುರೂಪಾ ರವೀಂದ್ರ | ಪರಿಶೀಲನೆ: ಕಿರಣ್ ಮಂಜುನಾಥ್

ಪೂರ್ವ-ಪ್ರಾಥಮಿಕ ಶಿಕ್ಷಣ ಮತ್ತು ಅಂಗನವಾಡಿ ಕೇಂದ್ರಗಳು

# ಅಂಗನವಾಡಿ ಕೇಂದ್ರಗಳ ಪರಿಸರವು ಸಂತೋಷದಾಯಕವಾಗಿರಬೇಕು

ಸುನೀಲ್ ಸುನಿಲ್ ಕುಮಾರ್ ಸಾಹ್

**ಒಂದು ಅಂಗನವಾಡಿ ಕೇಂದ್ರವು ಮಕ್ಕಳ ಪಾಲಿಗೆ ನಿಜವಾದ ಕಲಿಕೆಯ ತಾಣವಾಗುವುದು ಅಲ್ಲಿನ ಪರಿಸರವು ಪ್ರೀತಿಪೂರ್ವಕ, ಆಹ್ಲಾದಕರ ಮತ್ತು ಶಿಶು-ಸ್ನೇಹಿಯಾಗಿದ್ದಾಗ ಮಾತ್ರ. ಕಲಿಕೆಯು ಆಟದೊಂದಿಗೆ ಬೆರೆತಿರಬೇಕು ಮತ್ತು ಮಕ್ಕಳು ಸದಾ ಆಟೋಟದ ಚಟುವಟಿಕೆಗಳಲ್ಲಿ ಉತ್ಸಾಹದಿಂದ ತೊಡಗಿಸಿಕೊಳ್ಳುವಂತಿರಬೇಕು. ಇದು ಸಾಧ್ಯವಾಗಬೇಕಾದರೆ, ಮೊದಲು ಅಂಗನವಾಡಿ ಕಾರ್ಯಕರ್ತೆಯರೇ ಬೋಧನೆಯನ್ನು ಮತ್ತು ಚಟುವಟಿಕೆಗಳನ್ನು ಮಾಡಿಸುವುದನ್ನು ಆನಂದಿಸಬೇಕು. ಅಷ್ಟೇ ಅಲ್ಲದೆ, ತಾವು ಮಾಡಿಸುವ ಪ್ರತಿಯೊಂದು ಚಟುವಟಿಕೆಯ ಹಿಂದಿರುವ ಮೂಲ ಉದ್ದೇಶವೇನು ಎಂಬುದನ್ನು ಅವರು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರಬೇಕು.**

ಸ್ವಾತಂತ್ರ್ಯದ ನಂತರದ ದಿನಗಳಿಂದಲೂ ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕಾಂಶದ ಸುಧಾರಣೆಗಾಗಿ ಸರ್ಕಾರಿ ಮತ್ತು ಸರ್ಕಾರೇತರ ಮಟ್ಟದಲ್ಲಿ ಅನೇಕ ಪ್ರಯತ್ನಗಳು ನಡೆದಿವೆ. ಆದರೆ, ಇವೆಲ್ಲವನ್ನೂ ಒಳಗೊಂಡ ಒಂದು ಬೃಹತ್ ಸಂಘಟಿತ ಪ್ರಯತ್ನ ಆರಂಭವಾಗಿದ್ದು 1975ರಲ್ಲಿ 'ಅಂಗನವಾಡಿ' ಕೇಂದ್ರಗಳ ಸ್ಥಾಪನೆಯೊಂದಿಗೆ. ಆರೋಗ್ಯ ಮತ್ತು ಶಿಕ್ಷಣ ಎಂಬುದು ಪ್ರತಿಯೊಬ್ಬರ ಮೂಲಭೂತ ಅವಶ್ಯಕತೆಗಳು. ಇವುಗಳಿಲ್ಲದೆ ಅಭಿವೃದ್ಧಿ ಹೊಂದಿದ ಭಾರತವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಸುಮಾರು 50 ವರ್ಷಗಳ ಹಿಂದೆ ಅಂಗನವಾಡಿ ಕೇಂದ್ರಗಳು ಸ್ಥಾಪನೆಯಾಗುವ ಮೊದಲು, ಜನರಿಗೆ ಆರೋಗ್ಯ ಮತ್ತು ಶಿಕ್ಷಣದ ಸೌಲಭ್ಯಗಳು ಅಷ್ಟಾಗಿ ಸಿಗುತ್ತಿರಲಿಲ್ಲ. ಮೂಲಭೂತ ಆರೋಗ್ಯ ಸೇವೆಗಳು ಮತ್ತು ಶಾಲೆಗಳು ಎಲ್ಲರಿಗೂ ಲಭ್ಯವಿರಲಿಲ್ಲ. ಇದರಿಂದಾಗಿ ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ ಇತ್ತು. ಅಷ್ಟೇ ಅಲ್ಲದೆ, ಪೌಷ್ಟಿಕಾಂಶದ ಕೊರತೆಯಿಂದಾಗಿ ತಾಯಿ-ಮಕ್ಕಳ ಮರಣ ಪ್ರಮಾಣವು ಆತಂಕಕಾರಿಯಾದ ಮಟ್ಟದಲ್ಲಿತ್ತು. ಆದರೆ, ಯಾವಾಗ ಈ ಸೇವೆಗಳು ವಿಸ್ತಾರಗೊಂಡವೋ, ಅಂದಿನಿಂದ ಸಮಾಜದ ಮೇಲೆ ಅವುಗಳ ಸಕಾರಾತ್ಮಕ ಪ್ರಭಾವ ಬೀರಲು ಶುರುವಾಯಿತು. ಈ ಬದಲಾವಣೆಯಲ್ಲಿ ಅಂಗನವಾಡಿ ಕೇಂದ್ರಗಳು ಮತ್ತು ಅಲ್ಲಿನ ಕಾರ್ಯಕರ್ತೆಯರು ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದಾರೆ.

ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಆರೈಕೆ, ಪೌಷ್ಟಿಕತೆಯನ್ನು ಖಚಿತಪಡಿಸುವುದು, ತಾಯಿ ಹಾಗೂ ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಎಲ್ಲರಿಗೂ ಮೂಲಭೂತ ಶಿಕ್ಷಣವನ್ನು ಒದಗಿಸುವುದು—ಇವು ತನ್ನದೇ ಆದ ರೀತಿಯಲ್ಲಿ ಸಾಕಷ್ಟು ಸಂಕೀರ್ಣ



ಚಿತ್ರ 1: ಕಲಿಕೆಯು ಆಟದೊಂದಿಗೆ ಬೆರೆತಿರಬೇಕು ಮತ್ತು ಮಕ್ಕಳು ಸದಾ ಆಟೋಟದ ಚಟುವಟಿಕೆಗಳಲ್ಲಿ ಉತ್ಸಾಹದಿಂದ ತೊಡಗಿಸಿಕೊಳ್ಳಬೇಕು.

ಮತ್ತು ಸವಾಲಿನ ಕೆಲಸಗಳಾಗಿವೆ. ಈ ಇಡೀ ಕಾರ್ಯಕ್ರಮದ ಪ್ರಮುಖ ಅಂಶವೆಂದರೆ ಅದು ನೇರವಾಗಿ ಜನಸಾಮಾನ್ಯರನ್ನು ತಲುಪುತ್ತಿರುವುದು. ಅಂಗನವಾಡಿ ಎಂಬುದು ಜನವಸತಿಯ ಹತ್ತಿರವಿರುವ ಸ್ಥಳವಾಗಿರಬೇಕು ಮತ್ತು ಮನೆಯ ಅಂಗಳದಂತೆ ಎಲ್ಲರೂ ಸುಲಭವಾಗಿ ತಲುಪುವಂತಿರಬೇಕು. ಇಂದು ದೇಶದಲ್ಲಿ ಸುಮಾರು 13 ರಿಂದ 14 ಲಕ್ಷ ಅಂಗನವಾಡಿ ಕೇಂದ್ರಗಳಿವೆ. ಹಳ್ಳಿಯ ಕಟ್ಟಕಡೆಯ ವ್ಯಕ್ತಿಯನ್ನೂ ತಲುಪುವ ದೃಷ್ಟಿಯಿಂದ ನೋಡಿದರೆ, ಇವು ಅತ್ಯಂತ ಪ್ರಮುಖ ಸಂಸ್ಥೆಗಳಾಗಿವೆ.

ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರಲ್ಲಿ ಪೂರ್ವ-ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆಯನ್ನು ಮತ್ತೊಮ್ಮೆ ಒತ್ತಿ ಹೇಳಲಾಗಿದೆ. ಈ ಕಾರಣದಿಂದಾಗಿ ಅಂಗನವಾಡಿ ಕೇಂದ್ರಗಳಲ್ಲಿ ಆರೋಗ್ಯ ಮತ್ತು ಪೌಷ್ಟಿಕತೆಯ ಜೊತೆಗೆ ಶಿಕ್ಷಣವನ್ನೂ ಒಂದು ಪ್ರಮುಖ ಆಯಾಮವಾಗಿ ಪರಿಗಣಿಸಲಾಗಿದೆ. ಮಕ್ಕಳ ಶೇ. 80ರಷ್ಟು ಮಾನಸಿಕ ಬೆಳವಣಿಗೆಯು ಅವರ ಆರಂಭಿಕ ಒಂದು ಸಾವಿರ ದಿನಗಳಲ್ಲಿ ಆಗುತ್ತದೆ ಎಂಬುದು ಅನೇಕ ಸಂಶೋಧನೆಗಳಿಂದ ಸಾಬೀತಾಗಿದೆ. ಆದ್ದರಿಂದ, ಪೂರ್ವ-ಪ್ರಾಥಮಿಕ ಶಿಕ್ಷಣವು ಅಂಗನವಾಡಿ ಕಾರ್ಯದ ಒಂದು ಅವಿಭಾಜ್ಯ ಅಂಗವಾಗುತ್ತದೆ.

ಹಲವು ಬಾರಿ ನಾವು ತಿಳಿದೋ ತಿಳಿಯದೆಯೋ ಅಂಗನವಾಡಿಗಳನ್ನು ನಡೆಸಲು ವಾಸ್ತವಕ್ಕೆ ದೂರವಾದ ಮತ್ತು ಕಾರ್ಯಕರ್ತೆಯರ ತಿಳಿವಳಿಕೆಗೆ ನಿಲುಕದ ಕ್ಲಿಷ್ಟ ವಿಧಾನಗಳನ್ನು ಸೂಚಿಸುತ್ತೇವೆ. ಅಂತಹ ಸಂದರ್ಭಗಳಲ್ಲಿ ಕಲಿಕೆಯ ಸಿದ್ಧಾಂತಗಳು, ಜ್ಞಾನದ ಸ್ವರೂಪ ಮತ್ತು ಮಕ್ಕಳು ಭಾಷೆಯನ್ನು ಕಲಿಯುವ ಬಗೆಯಂತಹ ಸೈದ್ಧಾಂತಿಕ ಮಾತುಗಳೇ ಮೇಲುಗೈ ಪಡೆಯುತ್ತವೆ; ಇದರಿಂದ ಮೋಜಿನಿಂದ ಕಲಿಯುವ ಅಸಲಿ ಉತ್ಸಾಹವೇ ಮಾಯವಾಗುತ್ತದೆ. ಇಂತಹ ವಿಷಯಗಳು ಕಾರ್ಯಕರ್ತೆಯರಿಗೆ ಪೂರಕ ವಾತಾವರಣ ನಿರ್ಮಿಸುವ ಬದಲಾಗಿ, ಅವರಲ್ಲಿ ಭಯ ಮತ್ತು ನಿರಾಶೆ ಮೂಡಿಸುತ್ತವೆ. ಅಲ್ಲದೆ, ಅವರ ಸ್ವಂತ ಕಲಿಕೆಯ ಆಸಕ್ತಿಯೂ ಕುಂದುತ್ತದೆ.

ನಾವೆಲ್ಲರೂ ಸೇರಿ ಪ್ರತಿ ಅಂಗನವಾಡಿ ಕಾರ್ಯಕರ್ತೆಯೂ ತಮ್ಮ ಕೇಂದ್ರದಲ್ಲಿ ಪ್ರತಿದಿನ 2-3 ಗಂಟೆಗಳ ಕಾಲ ಮಕ್ಕಳಿಗೆ ಸಂತಸ ನೀಡುವ ಚಟುವಟಿಕೆಗಳನ್ನು ನಡೆಸಲು ಸಮರ್ಥರಾಗುವಂತೆ ಮಾಡಬೇಕು. ಈ ಮೋಜಿನಲ್ಲೇ ಮಕ್ಕಳು ಹೊಸ ವಿಷಯಗಳನ್ನು ಕಲಿಯುತ್ತಾರೆ. ಈ ವಯಸ್ಸಿನ ಮಕ್ಕಳೊಂದಿಗೆ ನಾವು ಸಣ್ಣ ಕಥೆಗಳು, ಕವಿತೆಗಳು ಮತ್ತು ವಿವಿಧ ಆಟಗಳ ಮೂಲಕ ಎಷ್ಟು ಹೆಚ್ಚು ತೊಡಗಿಸಿಕೊಳ್ಳುತ್ತೇವೆಯೋ, ಅಷ್ಟು ಮಕ್ಕಳ ಒಲವು ಕೇಂದ್ರದತ್ತ ಹೆಚ್ಚಾಗುತ್ತದೆ; ಇದರಿಂದ ಅವರ ಹಾಜರಾತಿಯೂ ನಿರಂತರವಾಗಿರುತ್ತದೆ. ಇದರ ಇನ್ನೊಂದು ದೊಡ್ಡ ಪ್ರಯೋಜನವೆಂದರೆ, ಅಂಗನವಾಡಿ ಕಾರ್ಯಕರ್ತೆಯರಿಗೂ ಇಂತಹ ಚಟುವಟಿಕೆಗಳನ್ನು ಸುಲಭವಾಗಿ ಮತ್ತು ಅಚ್ಚುಕಟ್ಟಾಗಿ ಮಾಡಲು ಸಾಧ್ಯವಾಗುತ್ತದೆ. ಆದರೆ, ಪ್ರಶ್ನೆ ಏನೆಂದರೆ—ಇದು ಪ್ರಾಯೋಗಿಕವಾಗಿ ಸಾಧ್ಯವಾಗುವುದು ಹೇಗೆ?

ನಾವು ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಪ್ರಾರಂಭಿಸಿ ಎರಡು ವರ್ಷಗಳಿಗಿಂತ ಹೆಚ್ಚು ಸಮಯವಾಗಿದೆ. ಈ ಅವಧಿಯ ಅನುಭವದಲ್ಲಿ ನಾವು ಒಂದು ವಿಷಯವನ್ನು ಖಚಿತಪಡಿಸಿಕೊಂಡಿದ್ದೇವೆ: ಈ ವಯಸ್ಸಿನ ಮಕ್ಕಳು ಮತ್ತು ಅಂಗನವಾಡಿ ಶಿಕ್ಷಕಿಯರು—ಇಬ್ಬರಿಗೂ ನಾವು ಯಾವುದೇ ವಿಷಯವನ್ನು ಎಷ್ಟು ಸಹಜವಾಗಿ ಮತ್ತು ಸರಳವಾಗಿ ವಿವರಿಸುತ್ತೇವೆ ಎಂಬುದು ಬಹಳ ಮುಖ್ಯ. ಸಹಜತೆಯೇ ಇದರ ಮೊದಲ ಷರತ್ತು. ಎರಡನೇ ಷರತ್ತು ಎಂದರೆ, ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ದೊರೆಯುವ ವಸ್ತುಗಳನ್ನು ಬಳಸಿಕೊಂಡು ಚಟುವಟಿಕೆಗಳನ್ನು ರೂಪಿಸುವುದು.

ಅನೇಕ ಬಾರಿ ಚಟುವಟಿಕೆಗಳು ಅಮೂರ್ತ ರೂಪದಲ್ಲಿ ವಿನ್ಯಾಸಗೊಂಡಿರುತ್ತವೆ. ಇಂತಹ ಕ್ಲಿಷ್ಟಕರ ವಿಷಯಗಳನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಅಥವಾ ಅವುಗಳನ್ನು ತಮ್ಮ ದೈನಂದಿನ ಚಟುವಟಿಕೆಗಳ ಭಾಗವಾಗಿಸಿಕೊಳ್ಳಲು ಕಷ್ಟವಾಗುತ್ತದೆ.

ಅಂಗನವಾಡಿ ಕೇಂದ್ರವನ್ನು ಸಾಂಪ್ರದಾಯಿಕ ಶಾಲೆಯ ತರಗತಿಯಂತೆ ನಡೆಸಲು ಸಾಧ್ಯವಿಲ್ಲ; ಅಂದರೆ ಮಕ್ಕಳು ಸಾಲಾಗಿ ಕುಳಿತುಕೊಳ್ಳುವುದು ಮತ್ತು ಶಿಕ್ಷಕರು ಪಾಠ ಮಾಡುವುದು ಇಲ್ಲಿ ನಡೆಯಬಾರದು. ಈ ಕೇಂದ್ರದ ಪರಿಕಲ್ಪನೆಯೇ ಸಂಪೂರ್ಣವಾಗಿ ಭಿನ್ನವಾಗಿದೆ. ಇದು ಮಕ್ಕಳಿಗೆ ಆನಂದ ನೀಡುವ ಸ್ಥಳವಾಗಿರಬೇಕು ಮತ್ತು ಅವರಿಗೆ ತಮ್ಮ ಮನಸ್ಸಿಗೆ ಬಂದಂತೆ ಆಡುವ, ಕಲಿಯುವ ಸ್ವಾತಂತ್ರ್ಯವಿರಬೇಕು. ಅಲ್ಲಿನ ವಾತಾವರಣವು ಮಕ್ಕಳಿಗೆ ಎಂದಿಗೂ ಹೊರೆಯಾಗಬಾರದು. ಅಂಗನವಾಡಿ ಕಾರ್ಯಕರ್ತೆಯರು ಎಲ್ಲಾ ಮಕ್ಕಳಿಗೆ ಸಮಾನವಾಗಿ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ನೀಡಬೇಕು. ಹೆಚ್ಚಿನ ಚಟುವಟಿಕೆಗಳನ್ನು ಮಕ್ಕಳು ವೃತ್ತಾಕಾರದಲ್ಲಿ ಕುಳಿತು ನಡೆಸುವ 'ಸರ್ಕಲ್ ಟೈಮ್' ಮಾದರಿಯಲ್ಲಿ ಆಯೋಜಿಸಬೇಕು. ಇದರೊಂದಿಗೆ ಮಕ್ಕಳಿಗೆ ನಿರ್ದೇಶಿತ ಮತ್ತು ಸ್ವತಂತ್ರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು, ವಸ್ತುಗಳನ್ನು ಮುಟ್ಟಿ ಅನುಭವಿಸಲು ಹಾಗೂ ಹೊಸತೇನನ್ನಾದರೂ ತಯಾರಿಸಲು ಮುಕ್ತ ಅವಕಾಶ ನೀಡಬೇಕು. ಕೇಂದ್ರದಲ್ಲಿ ಏಕಕಾಲದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಚಟುವಟಿಕೆಗಳು ನಡೆಯಬಹುದು. ಚಟುವಟಿಕೆ ಮಾಡಿಸುವುದಕ್ಕಿಂತ ಹೆಚ್ಚಾಗಿ, ಕಾರ್ಯಕರ್ತೆಯು ಎಲ್ಲಾ ಮಕ್ಕಳನ್ನು ಅದರಲ್ಲಿ ಎಷ್ಟು ಆಸಕ್ತಿಯಿಂದ ತೊಡಗಿಸಿಕೊಳ್ಳುತ್ತಾರೆ ಮತ್ತು ಅವರಿಗೆ ಎಷ್ಟು ಸ್ವಾತಂತ್ರ್ಯ ನೀಡುತ್ತಾರೆ ಎಂಬುದು ಇಲ್ಲಿ ಬಹಳ ಮುಖ್ಯವಾಗುತ್ತದೆ.

ಒಂದೆರಡು ಉದಾಹರಣೆಗಳ ಮೂಲಕ ಇದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ: ಒಂದು ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯು ಮಕ್ಕಳೊಂದಿಗೆ ಬಣ್ಣಗಳನ್ನು ಗುರುತಿಸುವುದರ ಮೇಲೆ ಕೆಲಸ ಮಾಡಲು ನಿರ್ಧರಿಸಿದರು. ಮಕ್ಕಳಿಗೆ ವಿವಿಧ ಬಣ್ಣಗಳ ಜೊತೆಗೆ ಒಂದೊಂದು ಕಾಗದವನ್ನು ನೀಡಲಾಯಿತು. ಎಲ್ಲರಿಗೂ ಬೇರೆ ಬೇರೆ ಹಣ್ಣುಗಳು ಮತ್ತು ಅವುಗಳಿಗೆ ಸಂಬಂಧಿಸಿದ ಬಣ್ಣಗಳನ್ನು ಪರಿಚಯಿಸಲಾಯಿತು. ಮೊದಲು ಹಣ್ಣಿನ ಚಿತ್ರವನ್ನು ನೋಡಿ ಬಿಡಿಸಿ, ನಂತರ ಅದಕ್ಕೆ ಸೂಕ್ತವಾದ ಬಣ್ಣ ತುಂಬಲು ಸೂಚಿಸಲಾಯಿತು. ಆದರೆ, ಬಹಳಷ್ಟು ಮಕ್ಕಳು ಹಣ್ಣಿನ ಚಿತ್ರ ಬಿಡಿಸುವ ಅಥವಾ ಅದಕ್ಕೆ ಸರಿಯಾಗಿ ಬಣ್ಣ ತುಂಬುವ ಹಂತದಲ್ಲಿ ಇರಲಿಲ್ಲ. ಕೆಲವರು ಹೇಳಿದಂತೆ ಮಾಡಿದರೆ, ಇನ್ನು ಹೆಚ್ಚಿನವರು ಬಣ್ಣಗಳೊಂದಿಗೆ ಆಟವಾಡಲು ಪ್ರಾರಂಭಿಸಿದರು. ಇದನ್ನು ಕಂಡ ಕಾರ್ಯಕರ್ತೆಯರಿಗೆ ಮಕ್ಕಳು ಚಟುವಟಿಕೆಯಲ್ಲಿ ಆಸಕ್ತಿ ತೋರುತ್ತಿಲ್ಲ ಎನಿಸಿತು. ಕೂಡಲೇ ಅವರು ತಾವೇ ಕೆಲವು ಹಣ್ಣಿನ ಚಿತ್ರಗಳನ್ನು ಬಿಡಿಸಿ, ಕೆಲವು ಮಕ್ಕಳನ್ನು ತಮ್ಮೊಂದಿಗೆ ಸೇರಿಸಿಕೊಂಡು ಬಣ್ಣ ತುಂಬಲು ಪ್ರೇರೇಪಿಸಿದರು. ಇದನ್ನು ಮಾಡಲು ಕಷ್ಟವೆನಿಸಿದ ಇನ್ನು ಕೆಲವು ಮಕ್ಕಳಿಗೆ, ತಮಗೆ ಇಷ್ಟ ಬಂದ ಆಕೃತಿಗಳನ್ನು ಬಿಡಿಸಲು ಸಂಪೂರ್ಣ ಸ್ವಾತಂತ್ರ್ಯ ನೀಡಿದರು. ಕೊನೆಗೂ ಎಲ್ಲರೂ ಒಂದಲ್ಲ ಒಂದು ಆಕೃತಿಯನ್ನು ಬಿಡಿಸಿದರು. ಆಗ ಕಾರ್ಯಕರ್ತೆಯು ಎಲ್ಲಾ ಬಣ್ಣಗಳನ್ನು ಸರದಿಯಂತೆ ಬಳಸಲು ಮಕ್ಕಳನ್ನು ಪ್ರೇರೇಪಿಸಿದರು; ಇದರಿಂದ ಆ ಬಣ್ಣಗಳ ಬಗ್ಗೆ ಅವರಿಗೆ ಸಹಜವಾದ ತಿಳಿವಳಿಕೆ ಮೂಡಿತು. ನಂತರ ಅವರು ವಿವಿಧ ಹಣ್ಣುಗಳ

> **“ಸಮುದಾಯದೊಂದಿಗೆ ಹಂಚಿಕೊಳ್ಳುವುದು ಅತ್ಯಗತ್ಯ. ಮಕ್ಕಳು ಮತ್ತು ಮಹಿಳೆಯರನ್ನು ಒಳಗೊಂಡಂತೆ, ಎಲ್ಲರ ಸಹಭಾಗಿತ್ವವಿರುವ 'ಅಂಗನವಾಡಿ ಮೇಳ'ಗಳನ್ನು ಆಯೋಜಿಸಬೇಕು. ಅಲ್ಲಿನ ಸಣ್ಣ ಸಣ್ಣ ಯಶಸ್ಸಿನ ಹೆಜ್ಜೆಗಳನ್ನು ಗುರುತಿಸಿ ಪ್ರಚಾರ ಮಾಡಬೇಕು.”**



ಚಿತ್ರ 2: ತಾವು ಮಾಡಿಸುವ ಪ್ರತಿಯೊಂದು ಚಟುವಟಿಕೆಯ ಹಿಂದಿರುವ ಆಳವಾದ ಉದ್ದೇಶವನ್ನು ಅಂಗನವಾಡಿ ಕಾರ್ಯಕರ್ತೆಯರು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ.

ಮತ್ತು ಅವುಗಳ ಬಣ್ಣಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿದರು. ಇಲ್ಲಿನ ಮುಖ್ಯ ಉದ್ದೇಶ ಎಲ್ಲಾ ಮಕ್ಕಳು ಕರಾರುವಾಕ್ಕಾದ ಹಣ್ಣಿನ ಚಿತ್ರವನ್ನೇ ಬಿಡಿಸಬೇಕು ಎಂದಾಗಿರಲಿಲ್ಲ. ಬದಲಿಗೆ, ಮಕ್ಕಳು ವಿವಿಧ ಬಣ್ಣಗಳನ್ನು ಗುರುತಿಸುವುದು, ಬಣ್ಣಗಳೊಂದಿಗೆ ಆಟವಾಡುವುದು, ಬಣ್ಣ ತುಂಬಲು ಬಳಸುವ ಬ್ರಷ್ ಅನ್ನು ಹಿಡಿಯುವುದನ್ನು ಕಲಿಯುವುದು, ಕಾಗದದ ಮೇಲೆ ಏನನ್ನಾದರೂ ಮೂಡಿಸುವುದು ಮತ್ತು ಮುಖ್ಯವಾಗಿ ಸಂಭ್ರಮದಿಂದ ಇರುವುದಾಗಿತ್ತು. ಈ ಸಂತೋಷವು ಮುಂದೆ ಮಕ್ಕಳಿಗೆ ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡಲು ಪ್ರೇರಣೆ ನೀಡುತ್ತದೆ. ಇದರಿಂದ ಶಿಕ್ಷಕಿ ಮತ್ತು ಮಕ್ಕಳ ನಡುವೆ ಒಂದು ರೀತಿಯ ಭಾವನಾತ್ಮಕ ಸಂಬಂಧ ಬೆಳೆಯುತ್ತದೆ, ಇದು ಮಕ್ಕಳ ಒಟ್ಟಾರೆ ಮಾನಸಿಕ ಬೆಳವಣಿಗೆಗೆ ಪೂರಕವಾಗುತ್ತದೆ. ಇದೇ ರೀತಿಯ ಅನೇಕ ಚಟುವಟಿಕೆಗಳನ್ನು ಮುಂದಿನ ಹಂತಗಳಲ್ಲಿ ವಿಸ್ತರಿಸುತ್ತಾ, ಒಂದು ಕಲಿಕಾ ಸರಣಿಯನ್ನು ರೂಪಿಸಿ ಕೆಲಸ ಮಾಡಬೇಕಾದ ಅಗತ್ಯವಿದೆ.

ಇನ್ನೊಂದು ಕೇಂದ್ರದ ಅನುಭವ ಸಂಪೂರ್ಣ ಭಿನ್ನವಾಗಿದೆ. ಅಲ್ಲಿ ಕೆಲವು ಪ್ರಾಣಿಗಳ ಚಿತ್ರವಿರುವ ಫ್ಲ್ಯಾಶ್ ಕಾರ್ಡ್‌ಗಳನ್ನು ನೀಡಲಾಗಿತ್ತು. ಇವು ಎರಡು-ಆಯಾಮದ ಚಿತ್ರಗಳಾಗಿದ್ದರಿಂದ, ಪ್ರಾಣಿಗಳ ಎಲ್ಲಾ ಅಂಗಗಳನ್ನು ಮಕ್ಕಳಿಗೆ ಸ್ಪಷ್ಟವಾಗಿ ನೋಡಲು ಸಾಧ್ಯವಾಗುತ್ತಿರಲಿಲ್ಲ. ಅಂಗನವಾಡಿ ಕಾರ್ಯಕರ್ತೆಯು ಆ ಚಿತ್ರಗಳನ್ನು ತೋರಿಸುತ್ತಾ ಪ್ರಾಣಿಗಳ ಪರಿಚಯ ಮಾಡಿಕೊಡುತ್ತಿದ್ದರು ಮತ್ತು "ಇದಕ್ಕೆ ಎಷ್ಟು ಕಾಲುಗಳಿವೆ?" ಎಂದು ಕೇಳುತ್ತಿದ್ದರು. ಮಕ್ಕಳು ಚಿತ್ರದಲ್ಲಿ ತಮಗೆ ಕಾಣಿಸಿದ್ದನ್ನೇ ಉತ್ತರವಾಗಿ ನೀಡುತ್ತಿದ್ದರು. ಆಗ ಕಾರ್ಯಕರ್ತೆಯು ಮತ್ತೆ "ಇಲ್ಲ, ಇದಕ್ಕೆ ಸರಿಯಾಗಿ ಎಷ್ಟು ಕಾಲುಗಳಿವೆ ನೋಡಿ?" ಎಂದು ಕೇಳಿದರು. ಚಿತ್ರದ ಮಿತಿಯಿಂದಾಗಿ ಮಕ್ಕಳಿಗೆ ಅದು ಅರ್ಥವಾಗಲಿಲ್ಲ ಮತ್ತು ಅವರ ಮುಖದಲ್ಲಿದ್ದ ಗೊಂದಲದ ಭಾವನೆಯನ್ನು ಸುಲಭವಾಗಿ ಗುರುತಿಸಬಹುದಾಗಿತ್ತು. ಇಲ್ಲಿ ಚಿತ್ರಗಳ ಅಥವಾ ಕಲಿಕಾ ಸಾಮಗ್ರಿಗಳ ಆಯ್ಕೆಯಲ್ಲಿ ಸ್ವಲ್ಪ ಜಾಗರೂಕತೆ ವಹಿಸಿದ್ದರೆ, ಮಕ್ಕಳಿಗೆ ಪ್ರಾಣಿಗಳ ಎಲ್ಲಾ ಅಂಗಗಳನ್ನು ಸುಲಭವಾಗಿ ಪರಿಚಯಿಸಬಹುದಿತ್ತು.

ಮೂರನೇ ಕೇಂದ್ರದ ಅನುಭವದಿಂದ ಇನ್ನಷ್ಟು ಹೊಸ ವಿಷಯಗಳನ್ನು ಅರ್ಥಮಾಡಿಕೊಳ್ಳಬಹುದು. ಇಲ್ಲಿ ಕಾರ್ಯಕರ್ತೆಯು ಅಮೂರ್ತ ಮತ್ತು ಮೂರ್ತ ಎರಡನ್ನೂ ಚಟುವಟಿಕೆಯಲ್ಲಿ ಬಹಳ ಚೆನ್ನಾಗಿ ಬೆರೆಸಿದರು. ಮಕ್ಕಳು ತಮ್ಮ ಪರಿಸರದಲ್ಲಿ ಅನೇಕ ವಸ್ತುಗಳನ್ನು ಪ್ರತಿದಿನ ನೋಡುತ್ತಾರೆ ಮತ್ತು ಗುರುತಿಸುತ್ತಾರೆ. ಉದಾಹರಣೆಗೆ: ಹುಣಸೆ ಬೀಜ, ಕಡಲೆ ಬೀಜ ಮತ್ತು ವಿವಿಧ ಧಾನ್ಯಗಳು—ಇವುಗಳನ್ನು ಅವರು ಆಟವಾಡಲು ಹಾಗೂ ತಿನ್ನಲು ಬಳಸುತ್ತಾರೆ. ಕಾರ್ಯಕರ್ತೆಯು ಈ ಬೀಜಗಳನ್ನು ಬೇರೆ ಬೇರೆ ಬಣ್ಣದ ಬಲೂನ್‌ಗಳಲ್ಲಿ ತುಂಬಿ, ಮಕ್ಕಳಿಗೆ ಅವುಗಳನ್ನು ಕೇವಲ ಮುಟ್ಟುವ ಮೂಲಕ ಗುರುತಿಸಲು ನೀಡಿದರು. ಮೊದಲು ಮಕ್ಕಳಿಗೆ ಇದು ಏನು ಎಂಬುದು ಅರ್ಥವಾಗಲಿಲ್ಲ, ಆದರೆ ಕ್ರಮೇಣ ಕೆಲವರು ಆಟವನ್ನು ಪ್ರಾರಂಭಿಸಿದಾಗ ಎಲ್ಲರೂ ಅದರಲ್ಲಿ ಉತ್ಸಾಹದಿಂದ ತೊಡಗಿಕೊಂಡರು. ಮಕ್ಕಳು ಕೇವಲ ಸ್ಪರ್ಶದ ಮೂಲಕ ವಸ್ತುಗಳನ್ನು ಊಹಿಸಿ ಗುರುತಿಸಿದಾಗ ಅವರಿಗೆ ಬಹಳ ಸಂತೋಷವಾಯಿತು.

ಅಲ್ಲದೆ, ಯಾವ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರು ಕಥೆ ಅಥವಾ ಕವಿತೆಗಳನ್ನು ಹೇಳುವುದರ ಮೇಲೆ ಹೆಚ್ಚು ಗಮನ ಹರಿಸುತ್ತಾರೋ, ಅಲ್ಲಿ ಮಕ್ಕಳು ಹೆಚ್ಚು ಸಂಭ್ರಮದಿಂದ ಇರುವುದನ್ನು ನಾವು ಗಮನಿಸಿದ್ದೇವೆ. ಮಕ್ಕಳು ವೃತ್ತಾಕಾರದಲ್ಲಿ ಕುಳಿತುಕೊಂಡು ಬಹಳ ಸಂತೋಷದಿಂದ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಅನೇಕ ಕೇಂದ್ರಗಳಲ್ಲಿ ಇಂದು ಏನು ಮಾಡೋಣ ಎಂದು ಕೇಳಿದಾಗ, ಮಕ್ಕಳು ಕಥೆ ಹೇಳುವಂತೆ ಪಟ್ಟು ಹಿಡಿಯುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಸಹಜ ಮತ್ತು ಸರಳ ಮಾರ್ಗಗಳ ಮೂಲಕ ಕಲಿಕೆಯನ್ನು ಸುಲಭಗೊಳಿಸಬಹುದು. ಚಟುವಟಿಕೆಗಳು ಕೇವಲ ಕಲಿಕೆಗೆ ಪ್ರೇರೇಪಿಸುವಂತಿರದೆ, ಅವು ಆನಂದದಾಯಕವಾಗಿಯೂ ಇರಬೇಕು. ಕಲಿಕೆಯಲ್ಲಿ ಮೋಜು ಇದ್ದರೆ, ಮಕ್ಕಳು ತಾವಾಗಿಯೇ ವಿಷಯಗಳನ್ನು ಕಲಿಯುತ್ತಾರೆ.

ಛತ್ತೀಸ್‌ಗಢದಲ್ಲಿ ಕೆಲಸ ಮಾಡುವಾಗ ನಾವು ಕೆಲವು ಪ್ರಮುಖ ಅಂಶಗಳಿಗೆ ಆದ್ಯತೆ ನೀಡಲು ಪ್ರಯತ್ನಿಸಿದೆವು. ಪ್ರತಿ ಅಂಗನವಾಡಿ ಕೇಂದ್ರವು ಈ ಕೆಳಗಿನ ಅಂಶಗಳ ಮೇಲೆ ಗಮನ ಹರಿಸಿದರೆ, ಅದು ಒಂದು 'ಉತ್ತಮ ಕಲಿಕಾ ಕೇಂದ್ರ'ವಾಗಿ ಹೊರಹೊಮ್ಮಲು ಸಾಧ್ಯವಿದೆ. ಅದಕ್ಕಾಗಿ ಅತ್ಯಗತ್ಯವಾದವುಗಳೆಂದರೆ:

- ಅಂಗನವಾಡಿ ಕೇಂದ್ರವು ನಿಗದಿತ ಸಮಯಕ್ಕೆ ಸರಿಯಾಗಿ ತೆರೆಯಬೇಕು ಮತ್ತು ಮುಚ್ಚಬೇಕು;

- ಕೇಂದ್ರವು ಮಕ್ಕಳನ್ನು ಸೆಳೆಯುವಂತಹ ಆಕರ್ಷಕ ಕಲಿಕಾ ಪರಿಸರವನ್ನು ಹೊಂದಿರಬೇಕು;
- ಪ್ರತಿ ಕೇಂದ್ರದಲ್ಲಿ ಪ್ರತಿದಿನ ಕನಿಷ್ಠ 1 ರಿಂದ 2 ಗಂಟೆಗಳ ಕಾಲ ಆರಂಭಿಕ ಬಾಲ್ಯ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸಬೇಕು;
- ಅಂಗನವಾಡಿ ಕೇಂದ್ರವು ಎಲ್ಲಾ ಮಕ್ಕಳನ್ನು ಒಳಗೊಳ್ಳುವಂತಹ ಸಹಜ ವಾತಾವರಣ ನೀಡಲು ಸಂಪೂರ್ಣ ಪ್ರಯತ್ನ ಮಾಡಬೇಕು.

ಅಂಗನವಾಡಿ ಕೇಂದ್ರಗಳ ಬಗ್ಗೆ ಜನರ ಒಲವು ಹೆಚ್ಚಾಗಬೇಕಾದರೆ, ಕೇಂದ್ರದಲ್ಲಿ ನಡೆಯುವ ಚಟುವಟಿಕೆಗಳು ಮತ್ತು ಸಾಧನೆಗಳನ್ನು ನಿರಂತರವಾಗಿ ಸಮುದಾಯದೊಂದಿಗೆ ಹಂಚಿಕೊಳ್ಳುವುದು ಅತ್ಯಗತ್ಯ. ಮಕ್ಕಳು ಮತ್ತು ಮಹಿಳೆಯರನ್ನು ಒಳಗೊಂಡಂತೆ, ಎಲ್ಲರ ಸಹಭಾಗಿತ್ವವಿರುವ 'ಅಂಗನವಾಡಿ ಮೇಳ'ಗಳನ್ನು ಆಯೋಜಿಸಬೇಕು. ಅಲ್ಲಿನ ಸಣ್ಣ ಸಣ್ಣ ಯಶಸ್ಸಿನ ಹೆಜ್ಜೆಗಳನ್ನು ಗುರುತಿಸಿ ಪ್ರಚಾರ ಮಾಡಬೇಕು. ಇಂತಹ ಪ್ರಯತ್ನಗಳು ನಮ್ಮ ಕೆಲಸಕ್ಕೆ ಧೈರ್ಯ ತುಂಬುವುದಲ್ಲದೆ, ಹೊಸ ಉತ್ಸಾಹವನ್ನು ನೀಡುತ್ತವೆ. ಸಮುದಾಯವು ಇಂದಿಗೂ ಈ ಕೇಂದ್ರಗಳನ್ನು ಕೇವಲ 'ಒಂದು ಹೊತ್ತಿನ ಊಟ ನೀಡುವ ಕೇಂದ್ರ'ಗಳೆಂದು ಮಾತ್ರ ಗುರುತಿಸುತ್ತಿದೆ. ಅಂಗನವಾಡಿಗಳು ತಮ್ಮ ಈ ಸೀಮಿತ ಚೌಕಟ್ಟಿನಿಂದ ಹೊರಬರಬೇಕಿದೆ. ಇವು ಕೇವಲ ಪೌಷ್ಟಿಕತೆ ಮತ್ತು ಆರೋಗ್ಯಕ್ಕೆ ಸೀಮಿತವಾಗದೆ, ಮಕ್ಕಳಿಗೆ 'ಆನಂದ' ನೀಡುವ ಕಲಿಕಾ ಕೇಂದ್ರಗಳೆಂಬ ಹೊಸ ಗುರುತನ್ನು ಸ್ಥಾಪಿಸಿಕೊಳ್ಳಬೇಕು. ಇಂತಹ ಪುಟ್ಟ ಹೆಜ್ಜೆಗಳ ಮೂಲಕವೇ ನಾವು ಅಂಗನವಾಡಿ ಕೇಂದ್ರಗಳನ್ನು ಮಕ್ಕಳ ಕಲಿಕೆಯ ಉತ್ತಮ ತಾಣಗಳನ್ನಾಗಿ ರೂಪಿಸಲು ಸಾಧ್ಯವಾಗುತ್ತದೆ.



**ಸುನೀಲ್ ಕುಮಾರ್ ಸಾಹ್** ಅವರು ಶಿಕ್ಷಣ ಮತ್ತು ಸಾಮಾಜಿಕ ಅಭಿವೃದ್ಧಿ ಕ್ಷೇತ್ರದಲ್ಲಿ ಸುಮಾರು 30 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಕಳೆದ 15 ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಗುರುತಿಸಿಕೊಂಡಿರುವ ಇವರು, ಪ್ರಸ್ತುತ ಛತ್ತೀಸ್‌ಗಢದ ತಂಡವನ್ನು ಮುನ್ನಡೆಸುತ್ತಿದ್ದಾರೆ.

**ಸಂಪರ್ಕ:** sunil@azimpremjifoundation.org

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಅನುರೂಪಾ ರವೀಂದ್ರ

# ಆರಂಭಿಕ ಬಾಲ್ಯ ಶಿಕ್ಷಕರು ಆಗಾಗ ಕೇಳುವ ಪ್ರಶ್ನೆಗಳು

ಜಿಗಿಶಾ ಶಾಸ್ತ್ರಿ

**ಆಟವೆಂಬುದು, ಮಕ್ಕಳು ತಮ್ಮ ಸುತ್ತಮುತ್ತಲಿನ ಭೌತಿಕ ಮತ್ತು ಸಾಮಾಜಿಕ ಪ್ರಪಂಚದೊಂದಿಗೆ ಸಂವಹನ ನಡೆಸುವ ಒಂದು ಸ್ವಾಭಾವಿಕ ವಿಧಾನವಾಗಿದೆ. ಆಟದ ವಸ್ತುಗಳು ಅಥವಾ ಕಲಿಕಾ ಸಾಮಗ್ರಿಗಳು ಸಹ ಮಕ್ಕಳಿಗೆ ಸ್ವತಂತ್ರವಾಗಿ ಅನ್ವೇಷಿಸಲು, ಪ್ರಯೋಗ ಮಾಡಲು ಹಾಗೂ ಕಲಿಯಲು ಸಹಾಯ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ, ನಾವು ಚಿಕ್ಕ ಮಕ್ಕಳ ತರಗತಿಗಳಲ್ಲಿ ಆಟದ ಜೊತೆಗೆ ಎಚ್ಚರಿಕೆಯಿಂದ ಆಯ್ಕೆಮಾಡಿಕೊಂಡ ವಸ್ತುಗಳನ್ನು ಕೂಡ ಸೇರಿಸಿದರೆ ಅದರಿಂದ ಬಹಳ ಪ್ರಯೋಜನವಾಗುತ್ತದೆ.**

ಕಳೆದ ಹಲವು ವರ್ಷಗಳಿಂದ, ನಾನು ಅನೇಕ ಶಿಕ್ಷಕರನ್ನು ಭೇಟಿ ಮಾಡಿದ್ದೇನೆ ಮತ್ತು ಅವರೊಂದಿಗೆ ಆರಂಭಿಕ ಬಾಲ್ಯ ಶಿಕ್ಷಣ ಕುರಿತಾದ ಹಲವು ವಿಷಯಗಳನ್ನು ಚರ್ಚಿಸಿದ್ದೇನೆ. ತಾವು ಕಲಿಸುವ ಪುಟ್ಟ ಮಕ್ಕಳಿಗಾಗಿ ಹೊಸ ವಿಷಯಗಳನ್ನು ಕಲಿಯಲು ಬಯಸುವ, ಕುತೂಹಲದಿಂದ ಪ್ರಶ್ನೆಗಳನ್ನು ಕೇಳುವ ಮತ್ತು ಮಕ್ಕಳಿಗೆ ಉತ್ತಮವಾದುದನ್ನೇ ನೀಡಬೇಕೆಂದು ಹಂಬಲಿಸುವ ಶಿಕ್ಷಕರೊಂದಿಗೆ ಸಂವಹನ ನಡೆಸಲು ನನಗೆ ತುಂಬಾ ಸಂತೋಷವಾಗುತ್ತದೆ. ಶಿಕ್ಷಕರು ನನ್ನನ್ನು ಹೆಚ್ಚಾಗಿ ಕೇಳುವ ಕೆಲವು ಪ್ರಶ್ನೆಗಳನ್ನು ನಾನಿಲ್ಲಿ ಹಂಚಿಕೊಳ್ಳುತ್ತಿದ್ದೇನೆ. ಈ ಪ್ರಶ್ನೆಗಳು ಅಂಗನವಾಡಿ ಶಿಕ್ಷಕರಿರಲಿ ಅಥವಾ ಎಲ್ಲಾ ಸೌಲಭ್ಯಗಳಿರುವ ದೊಡ್ಡ ಶಾಲೆಗಳ ಶಿಕ್ಷಕರಿರಲಿ, ಮಕ್ಕಳೊಂದಿಗೆ ಕೆಲಸ ಮಾಡುವ ಪ್ರತಿಯೊಬ್ಬ ಶಿಕ್ಷಕರಿಗೂ ಸಾಮಾನ್ಯವಾಗಿ ಎದುರಾಗುತ್ತವೆ.

**ಪ್ರಶ್ನೆ:** ನಾವು ಮಕ್ಕಳನ್ನು ಆಡಲು ಬಿಡಬೇಕೆಂದು ಪ್ರತಿಯೊಬ್ಬರೂ ಒತ್ತಾಯಿಸುತ್ತಾರೆ. ಇಸಿಇ ತಜ್ಞರಿರಲಿ ಅಥವಾ 2020ರ ರಾಷ್ಟ್ರೀಯ ಶಿಕ್ಷಣ ನೀತಿಯಾಗಿರಲಿ, ಇವೆರಡೂ ಆಟಕ್ಕೆ ಹೆಚ್ಚಿನ ಒತ್ತು ನೀಡುತ್ತವೆ. ಆದರೆ ನಾವು ಮಕ್ಕಳ ಕಲಿಕಾ ಫಲಿತಗಳನ್ನು ತಲುಪಬೇಕಾಗಿರುತ್ತದೆ ಮತ್ತು ಸಾಪ್ತಾಹಿಕ ಯೋಜನೆಗಳನ್ನು ಜಾರಿಗೆ ತರಬೇಕಾಗಿರುತ್ತದೆ. ಒಂದು ವೇಳೆ ನಾವು ಮಕ್ಕಳನ್ನು ಕೇವಲ ಆಟವಾಡಲು ಬಿಟ್ಟರೆ, ಅವರಿಗೆ ನಾವು ಯಾವುದನ್ನು 'ಕಲಿಸಲು' ಬಯಸುತ್ತೇವೋ ಆ ಗುರಿಗಳನ್ನು ತಲುಪುವುದು ಯಾವಾಗ?

**ಉತ್ತರ:** ಆಟ ಎನ್ನುವುದು ಮಕ್ಕಳ ಅತ್ಯಂತ ಸ್ವಾಭಾವಿಕ ಚಟುವಟಿಕೆಯಾಗಿದೆ. ತೊಟ್ಟಿಲಿನಲ್ಲಿ ಮಲಗಿರುವ ಮಗುವು ತನ್ನ ಮೇಲೆ ತೂಗುಹಾಕಿರುವ ಆಟಿಕೆಗಳೊಂದಿಗೆ ಆಟವಾಡುತ್ತದೆ. ತರಗತಿಯಲ್ಲಿ ಮಗು ಜಮಖಾನ ಅಥವಾ ಕಂಬಳಿಯ ದಾರಗಳೊಂದಿಗೆ ಆಟವಾಡುತ್ತದೆ, ವಸ್ತುಗಳನ್ನು ಮುಟ್ಟುತ್ತದೆ, ಉರುಳಿಸುತ್ತದೆ, ಎಸೆಯುತ್ತದೆ ಮತ್ತು ಮೂಸಿ ನೋಡುತ್ತದೆ. ಮಕ್ಕಳು ಒಂಟಿಯಾಗಿ ಆಡುತ್ತಾರೆ ಅಥವಾ ತಮ್ಮ ಸ್ನೇಹಿತರು, ಒಡಹುಟ್ಟಿದವರು ಮತ್ತು ತಮಗಿಂತ ಹಿರಿಯರೊಂದಿಗೂ ಆಟವಾಡುತ್ತಾರೆ. ಈ ಆಟದ ಮೂಲಕವೇ ಮಕ್ಕಳ ಸಮಗ್ರ ಬೆಳವಣಿಗೆಯಾಗುತ್ತದೆ. ಆಟವಾಡುವಾಗ ಮಕ್ಕಳು ಯೋಚಿಸುತ್ತಾರೆ, ತಮ್ಮ ದೈಹಿಕ ಕ್ರಿಯೆಗಳನ್ನು ಬಳಸುತ್ತಾರೆ, ಬೇರೆಯವರೊಂದಿಗೆ ವ್ಯವಹರಿಸುತ್ತಾರೆ ಮತ್ತು ಸಂವಹನ ನಡೆಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರ ಬೌದ್ಧಿಕ, ದೈಹಿಕ, ಕ್ರಿಯಾತ್ಮಕ ಮತ್ತು ಸಾಮಾಜಿಕ ಬೆಳವಣಿಗೆಯ ಜೊತೆಗೆ ಭಾಷಾ ವಿಕಸನದ ಹಂತಗಳು ಸಹಜವಾಗಿಯೇ ನಡೆಯುತ್ತವೆ.

ಆಟವಾಡುವಾಗ ಮಕ್ಕಳು ತಾವೇ ಸ್ವತಃ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ, ನಿಯಮಗಳನ್ನು ರೂಪಿಸುತ್ತಾರೆ, ಕಲ್ಪಿಸಿಕೊಳ್ಳುತ್ತಾರೆ ಮತ್ತು ಹೊಸತನ್ನು ತಿಳಿಯುವ ಕುತೂಹಲ ತೋರುತ್ತಾರೆ. ಆದ್ದರಿಂದ, ಕಲಿಕೆಯ ಫಲಿತಾಂಶಗಳು ಮತ್ತು ಪಠ್ಯ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ಎಂತಹ ಚಟುವಟಿಕೆಗಳನ್ನು ರೂಪಿಸಬೇಕೆಂದರೆ, ಅಲ್ಲಿ ಮಕ್ಕಳು ದೈಹಿಕವಾಗಿ ಚಲಿಸಬೇಕು, ಯೋಚಿಸಬೇಕು ಮತ್ತು ಪರಸ್ಪರ ಸಂವಹನ ನಡೆಸುವಂತಿರಬೇಕು. ಹೀಗೆ ಮಾಡುವುದರಿಂದ, ನಾವು ಯೋಜಿಸಿದ ಚಟುವಟಿಕೆಯು ಅವರಿಗೆ ಕೇವಲ ಒಂದು 'ಆಟ'ವಾಗಿ ಕಾಣುತ್ತದೆ, ಆದರೆ

**“ಆಟವಾಡುವಾಗ ಮಕ್ಕಳು ಯೋಚಿಸುತ್ತಾರೆ, ತಮ್ಮ ದೈಹಿಕ ಕ್ರಿಯೆಗಳನ್ನು ಬಳಸುತ್ತಾರೆ, ಬೇರೆಯವರೊಂದಿಗೆ ವ್ಯವಹರಿಸುತ್ತಾರೆ ಮತ್ತು ಸಂವಹನ ನಡೆಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರ ಬೌದ್ಧಿಕ, ದೈಹಿಕ, ಕ್ರಿಯಾತ್ಮಕ ಮತ್ತು ಸಾಮಾಜಿಕ ಬೆಳವಣಿಗೆಯ ಜೊತೆಗೆ ಭಾಷಾ ವಿಕಸನದ ಹಂತಗಳು ಸಹಜವಾಗಿಯೇ ನಡೆಯುತ್ತವೆ.”**

ಅದರ ಮೂಲಕ ಕಲಿಕೆ ನಡೆಯುತ್ತಿರುತ್ತದೆ. ಅಷ್ಟೇ ಅಲ್ಲದೆ, ತರಗತಿಯ ಒಳಗೂ ಹೊರಗೂ ಲಭ್ಯವಿರುವ ಕಲಿಕಾ ವಸ್ತುಗಳೊಂದಿಗೆ ಮುಕ್ತವಾಗಿ ಆಟವಾಡಲು ನಾವು ಅವರಿಗೆ ಸಾಕಷ್ಟು ಸಮಯಾವಕಾಶ ನೀಡಬೇಕಾಗುತ್ತದೆ. ಆಟವಾಡುವಾಗಲೇ ಕಲಿಕೆಯ ಅನೇಕ ಉದ್ದೇಶಗಳು ಈಡೇರುವುದರಿಂದ, ಶಿಕ್ಷಕರಾಗಿ ನಾವು ಸದಾ ಮಕ್ಕಳ ಕಲಿಕೆಯ ಉಸ್ತುವಾರಿಯನ್ನು ವಹಿಸಬೇಕಾದ ಅಗತ್ಯವಿರುವುದಿಲ್ಲ. ಅವರು ಸ್ವತಃ ಆಡುತ್ತಾ ಕಲಿಯುತ್ತಾರೆ. ನಾವು ಕೇವಲ ಅವರ ಸುರಕ್ಷತೆಯ ಕಡೆಗೆ ಗಮನಹರಿಸಿ, ಅವರಿಗೆ ತೊಂದರೆಯಾಗದಂತೆ ನೋಡಿಕೊಂಡರೆ ಸಾಕು.

**ಪ್ರಶ್ನೆ:** ಪ್ಲೇ-ವೇ ಪದ್ಧತಿ ಎಂದರೇನು?

**ಉತ್ತರ:** ಪ್ಲೇ-ವೇ ಎಂಬುದು ಮಕ್ಕಳಿಗಾಗಿ ವಿವಿಧ ಆಟದ ಮಾದರಿಯ ಚಟುವಟಿಕೆಗಳನ್ನು ರೂಪಿಸುವ ಒಂದು ವಿಧಾನವಾಗಿದೆ. ಮಕ್ಕಳು ಈ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಂತೆ ಇದನ್ನು ವಿನ್ಯಾಸಗೊಳಿಸಲಾಗುತ್ತದೆ. ಇಲ್ಲಿ ಮಕ್ಕಳು ತಮ್ಮ ಪಂಚೇಂದ್ರಿಯಗಳನ್ನು ಬಳಸಿಕೊಂಡು ಕಲಿಯುತ್ತಾರೆ ಹಾಗೂ ಪರಸ್ಪರ ಮುಕ್ತವಾಗಿ ಸಂವಹನ ನಡೆಸಲು ಅವಕಾಶವಿರುತ್ತದೆ. ಈ ವಿಧಾನದಲ್ಲಿ ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಉದಾಹರಣೆಗೆ, ಮಕ್ಕಳಿಗೆ ಪ್ರಾಣಿಗಳ ಬಗ್ಗೆ ಕಲಿಸುವಾಗ ಕೇವಲ ಚಾರ್ಟ್‌ಗಳಲ್ಲಿ ಚಿತ್ರಗಳನ್ನು ತೋರಿಸುವುದು ಅಥವಾ ಹೆಸರುಗಳನ್ನು ನೆನಪಿಟ್ಟುಕೊಳ್ಳಲು ಹೇಳುವುದು ಒಂದು ಸಾಮಾನ್ಯ ವಿಧಾನವಾಗಿದೆ. ಆದರೆ ಪ್ಲೇ-ವೇ ಪದ್ಧತಿಯಲ್ಲಿ ಕಲಿಕೆಯು ಇದಕ್ಕಿಂತ ಭಿನ್ನವಾಗಿರುತ್ತದೆ. ಆದರೆ ಪ್ಲೇ-ವೇ ಪದ್ಧತಿಯಲ್ಲಿ, ಶಿಕ್ಷಕರು ಹಾಡುಗಳ ಮೂಲಕ ಪ್ರಾಣಿಗಳನ್ನು ಪರಿಚಯಿಸಬಹುದು. ಹೀಗೆ ಹಾಡುವಾಗ, ಮಕ್ಕಳು ಹಾಡಿನಲ್ಲಿ ಬರುವ ಪ್ರತಿಯೊಂದು ಪ್ರಾಣಿಯಂತೆ ಅಭಿನಯಿಸಬಹುದು ಅಥವಾ ಅದರ ಧ್ವನಿಯನ್ನು ಅನುಕರಿಸಬಹುದು. ಈ ವಿಧಾನದ ಮೂಲಕ ಶಿಕ್ಷಕರು ಮಕ್ಕಳ ಕುತೂಹಲವನ್ನು ತಣಿಸುವಂತಹ ವಿಭಿನ್ನ ಮಾರ್ಗಗಳನ್ನು ಬಳಸುತ್ತಾರೆ. ಇಲ್ಲಿ ಯಾವ ಚಟುವಟಿಕೆಯನ್ನು ಮಾಡಬೇಕೆಂಬ ಆಯ್ಕೆ ಮಕ್ಕಳಿಗಿರುತ್ತದೆ ಮತ್ತು ಆ ಆಯ್ಕೆಯನ್ನು ಅವರೇ ಸ್ವತಃ ಮಾಡುತ್ತಾರೆ. ಉದಾಹರಣೆಗೆ, ವಿವಿಧ ವಸ್ತುಗಳನ್ನು ಬಳಸಿಕೊಂಡು ಕಲಿಯುವುದು, ಚಿತ್ರವಿರುವ ಕಾರ್ಡ್‌ಗಳನ್ನು ಹೊಂದಿಸುವುದು, ಪದಬಂಧಗಳನ್ನು ಜೋಡಿಸುವುದು, ಒಬ್ಬರಿಗೊಬ್ಬರು

ಪ್ರಶ್ನೆ ಕೇಳುತ್ತಾ ಕಲಿಯುವುದು, ಕಥೆ ಹೇಳುವುದು ಮತ್ತು ವಿವಿಧ ಪಾತ್ರಗಳನ್ನು ನಿರ್ವಹಿಸುವುದು (ಪಾತ್ರಾಭಿನಯ) ಮುಂತಾದ ಚಟುವಟಿಕೆಗಳು ಪ್ಲೇ-ವೇ ವಿಧಾನದ ಪ್ರಮುಖ ಭಾಗಗಳಾಗಿವೆ.

**ಪ್ರಶ್ನೆ:** ಕಲಿಕಾ ಮೂಲೆಗಳು ಎಂದರೇನು? ನಮ್ಮ ತರಗತಿಗಳಲ್ಲಿ ಅವುಗಳನ್ನು ಹೇಗೆ ಸ್ಥಾಪಿಸಬಹುದು?

**ಉತ್ತರ:** 3 ರಿಂದ 8 ವರ್ಷದೊಳಗಿನ ಪುಟ್ಟ ಮಕ್ಕಳು ಆಟಿಕೆಗಳು, ಆಟದ ವಸ್ತುಗಳು ಮತ್ತು ವಿವಿಧ ಕಲಿಕಾ ಸಾಮಗ್ರಿಗಳೊಂದಿಗೆ ಆಟವಾಡುತ್ತಾ ಕಲಿಯುತ್ತಾರೆ. ಈ ಸಾಮಗ್ರಿಗಳಲ್ಲಿ ಒಗಟುಗಳು, ವಿವಿಧ ರೀತಿಯ ಬ್ಲಾಕ್‌ಗಳು, ಮುರಿದು ಜೋಡಿಸುವ ಆಟಿಕೆಗಳು (Manipulatives) ಮುಂತಾದವು ಸೇರಿವೆ. ಇವುಗಳ ಜೊತೆಗೆ ಎಣಿಕೆಯ ಕಿಟ್‌ಗಳು, ಹೊಂದಿಸುವ ಕಾರ್ಡ್‌ಗಳು, ಅನುಕ್ರಮವಾಗಿ ಜೋಡಿಸುವ ಕಾರ್ಡ್‌ಗಳು, ವಿವಿಧ ವಿನ್ಯಾಸದ ಬಟ್ಟೆಯ ತುಣುಕುಗಳು, ಧ್ವನಿ ಪೆಟ್ಟಿಗೆಗಳು ಮತ್ತು ಹಾವು-ಏಣಿಯಂತಹ ಸರಳವಾದ ಆಟಗಳೂ ಇರುತ್ತವೆ. ಆ ವಾರದ ಕಲಿಕಾ ಗುರಿಗಳನ್ನು ಗಮನದಲ್ಲಿಟ್ಟುಕೊಂಡು, ಮಕ್ಕಳು ಅನ್ವೇಷಿಸಲು ಯಾವ ವಸ್ತುಗಳನ್ನು ಇಡಬೇಕು ಎಂಬುದನ್ನು ಶಿಕ್ಷಕರು ನಿರ್ಧರಿಸಬಹುದು. ಉದಾಹರಣೆಗೆ, ಒಂದು ವಾರದ ಕಲಿಕೆಯ ಉದ್ದೇಶವು 'ಮೂಲಭೂತ ಆಕಾರಗಳನ್ನು ಗುರುತಿಸುವುದು' ಎಂದಾಗಿದ್ದರೆ, ಚೌಕ, ತ್ರಿಭುಜ ಮತ್ತು ವೃತ್ತದಂತಹ ಆಕಾರಗಳ ಎರಡೆರಡು ಕಾರ್ಡ್‌ಗಳನ್ನು ಒಂದು ಸಣ್ಣ ಪೆಟ್ಟಿಗೆಯಲ್ಲಿ ಇಡಬಹುದು. ಮಕ್ಕಳು ಒಂದೇ ರೀತಿಯ ಆಕಾರದ ಕಾರ್ಡ್‌ಗಳನ್ನು ಹುಡುಕಿ ಒಟ್ಟಿಗೆ ಜೋಡಿಸಲು ಪ್ರಯತ್ನಿಸಬಹುದು. ಈ ಸಮಯದಲ್ಲಿ ಶಿಕ್ಷಕರು ಮಕ್ಕಳನ್ನು ಗಮನಿಸುತ್ತಾ, ಅಗತ್ಯವಿದ್ದಲ್ಲಿ ಅವರಿಗೆ ಪ್ರೋತ್ಸಾಹ ನೀಡಬೇಕು ಹಾಗೂ ಸಣ್ಣ ಸುಳಿವು ಅಥವಾ ಸಲಹೆಗಳನ್ನು ನೀಡುತ್ತಾ ಮಾರ್ಗದರ್ಶನ ಮಾಡಬೇಕು. ಶಿಕ್ಷಕರು ಮಕ್ಕಳ ಜೊತೆಗೂಡಿ ಈ ಆಟವನ್ನು ಆಡಬಹುದು.

ತರಗತಿಯಲ್ಲಿ ಈ ವಸ್ತುಗಳನ್ನು ವ್ಯವಸ್ಥಿತವಾಗಿ ಜೋಡಿಸುವಾಗ, ಮೊದಲು ಅವುಗಳ ಉದ್ದೇಶ ಮತ್ತು ಬಳಕೆಗೆ ತಕ್ಕಂತೆ ವರ್ಗೀಕರಿಸಬೇಕು. ಉದಾಹರಣೆಗೆ, ವಿವಿಧ ರೀತಿಯ ಬ್ಲಾಕ್‌ಗಳನ್ನು ಒಂದು ಕಡೆ ಇಡಬೇಕು. ಅದೇ ರೀತಿ ಪುಸ್ತಕಗಳು, ಫ್ಲ್ಯಾಶ್ ಕಾರ್ಡ್‌ಗಳು ಮತ್ತು ಚಿತ್ರದ ಕಾರ್ಡ್‌ಗಳನ್ನು ಪ್ರತ್ಯೇಕವಾಗಿ ಗುಂಪು ಮಾಡಬೇಕು. ಹೀಗೆ ವಸ್ತುಗಳನ್ನು ವಿಂಗಡಿಸಿದ ನಂತರ, ಅವುಗಳನ್ನು ತರಗತಿಯ ಬೇರೆ ಬೇರೆ ಮೂಲೆಗಳಲ್ಲಿ ಅಥವಾ ನಿಗದಿತ ಸ್ಥಳಗಳಲ್ಲಿ ಅಚ್ಚುಕಟ್ಟಾಗಿ ಇರಿಸಬೇಕು.

ಒಂದು ವೇಳೆ ಕೊಠಡಿ ಚಿಕ್ಕದಾಗಿದ್ದರೆ, ವಸ್ತುಗಳನ್ನು ಪೆಟ್ಟಿಗೆಗಳಲ್ಲಿ ಇಡಬಹುದು. ತರಗತಿ ದೊಡ್ಡದಾಗಿದ್ದರೆ, ಎಲ್ಲಾ ವಸ್ತುಗಳನ್ನು ಬೇರೆ ಬೇರೆ ಮೂಲೆಗಳಲ್ಲಿ ವ್ಯವಸ್ಥಿತವಾಗಿ ಪ್ರದರ್ಶಿಸಬಹುದು. ಅಲ್ಲದೆ ತೆರೆದ ಕಪಾಟುಗಳನ್ನು ಬಳಸಬಹುದು ಅಥವಾ ಬುಟ್ಟಿಗಳಲ್ಲಿ ವಸ್ತುಗಳನ್ನು ಇಡಬಹುದು. ಹೀಗೆ ಮಾಡುವುದರಿಂದ ಮಕ್ಕಳು ಅವುಗಳನ್ನು ನೋಡಲು ಮತ್ತು ತಮಗೆ ಬೇಕಾದಾಗ ತೆಗೆದುಕೊಳ್ಳಲು ಸುಲಭವಾಗುತ್ತದೆ.

ಮಕ್ಕಳು ವಸ್ತುಗಳೊಂದಿಗೆ ಆಟವಾಡಲು ಅನುಕೂಲವಾಗುವಂತೆ ಶಾಲೆಯ ವರಾಂಡಾಗಳನ್ನು ಕೂಡ ಬಳಸಿಕೊಳ್ಳಬಹುದು. ಆಟದ ಸಮಯ ಮುಗಿದ ಬಳಿಕ, ಮಕ್ಕಳ ಸಹಾಯದಿಂದಲೇ ಆ ವಸ್ತುಗಳನ್ನು ಮರಳಿ ನಿಗದಿತ ಸ್ಥಳದಲ್ಲಿ ಜೋಡಿಸಿ ಇಡಬಹುದು.

ತರಗತಿಯಲ್ಲಿ ಸಾಮಾನ್ಯವಾಗಿ ಬ್ಲಾಕ್ ಮೂಲೆ, ಜೋಡಿಸುವ ಆಟಗಳ ಮೂಲೆ, ಭಾಷೆ ಅಥವಾ ಪುಸ್ತಕಗಳ ಮೂಲೆ ಹಾಗೂ ಗೊಂಬೆ ಅಥವಾ ನಾಟಕೀಯ ಆಟಗಳ (ಪಾತ್ರಾಭಿನಯ) ಮೂಲೆಗಳನ್ನು ಸಿದ್ಧಪಡಿಸಬಹುದು. ಇದಲ್ಲದೆ, ಮಕ್ಕಳ ಆಸಕ್ತಿಗೆ ಅನುಗುಣವಾಗಿ ಕಲೆ, ವಿಜ್ಞಾನ ಅಥವಾ ಸಂಗೀತದ ಮೂಲೆಗಳನ್ನು ಕೂಡ ರೂಪಿಸಬಹುದು.

ಬೇರೆ ಬೇರೆ ಮೂಲೆಗಳಲ್ಲಿ ಇರಿಸಲಾದ ವಸ್ತುಗಳನ್ನು ಇಡೀ ವಾರ ಮಕ್ಕಳು ಬಳಸಲು ಸಾಧ್ಯವಾಗುವಂತೆ ಅಲ್ಲಿಯೇ ಇಡಬೇಕು. ಆಗ ಎಲ್ಲಾ ಮಕ್ಕಳು ಆ ವಸ್ತುಗಳನ್ನು ಚೆನ್ನಾಗಿ ಅರಿತುಕೊಳ್ಳಲು ಮತ್ತು ಬಳಸಲು ಸಾಧ್ಯವಾಗುತ್ತದೆ. ಒಂದು ವೇಳೆ ಕೆಲವು ಮಕ್ಕಳು ಒಂದೇ ವಸ್ತುವನ್ನು ಪದೇ ಪದೇ




ಚಿತ್ರ 1: ಕಲಿಕಾ ಮೂಲೆಗಳಲ್ಲಿ ಕಲಿಕಾ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಜೋಡಿಸಿಟ್ಟಾಗ, ಮಕ್ಕಳು ತಾವಾಗಿಯೇ ಅವುಗಳನ್ನು ಬಳಸುತ್ತಾ ಕಲಿಯುತ್ತಾರೆ.



ಚಿತ್ರ 2: ಕಲಿಕಾ ಸಾಮಗ್ರಿಗಳು ಮಕ್ಕಳಿಗೆ ಸುಲಭವಾಗಿ ಕೈಗೆಟುಕುವಂತಿದ್ದರೆ, ಅವುಗಳನ್ನು ಬಳಸಿ ಕಲಿಯಲು ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ.

ಉಪಯೋಗಿಸಲು ಇಷ್ಟಪಟ್ಟರೆ, ಅವರಿಗೂ ಅದಕ್ಕೆ ಸಾಕಷ್ಟು ಅವಕಾಶ ಸಿಗುತ್ತದೆ. ಪ್ರತಿ ವಾರ ನೀವು ಯಾವುದಾದರೂ ಹೊಸ ವಸ್ತುವನ್ನು ಈ ಮೂಲೆಗಳಿಗೆ ಸೇರಿಸಬಹುದು ಮತ್ತು ಬಹಳ ದಿನಗಳಿಂದ ಬಳಕೆಯಲ್ಲಿದ್ದು ಮಕ್ಕಳಿಗೆ ಆಸಕ್ತಿ ಕಡಿಮೆಯಾಗಿದೆ ಎನ್ನಿಸುವ ವಸ್ತುಗಳನ್ನು ಅಲ್ಲಿಂದ ತೆಗೆಯಬಹುದು. ಇಂತಹ ಬದಲಾವಣೆಗಳಿಂದ ಕಲಿಕಾ ಸಾಮಗ್ರಿಗಳಲ್ಲಿ ವೈವಿಧ್ಯತೆ ಇರುತ್ತದೆ ಮತ್ತು ಮಕ್ಕಳಲ್ಲೂ ಕುತೂಹಲ ಹಾಗೂ ಆಸಕ್ತಿ ಉಳಿಯುತ್ತದೆ.

ತರಗತಿಯಲ್ಲಿ ವಸ್ತುಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಇಡುವುದೇ ಕಲಿಕಾ ಮೂಲೆಗಳ ಮುಖ್ಯ ಉದ್ದೇಶ. ಇದರಿಂದ ಮಕ್ಕಳು ಒಬ್ಬಂಟಿಯಾಗಿ, ಸ್ನೇಹಿತರ ಜೊತೆಗೂಡಿ ಅಥವಾ ಗುಂಪುಗಳಲ್ಲಿ ಈ ವಸ್ತುಗಳನ್ನು ಸ್ವತಂತ್ರವಾಗಿ ಬಳಸಲು ಸಾಧ್ಯವಾಗುತ್ತದೆ. ಈ ಸಮಯದಲ್ಲಿ ಶಿಕ್ಷಕರು ಮಕ್ಕಳಿಗೆ ಕೇವಲ ಮಾರ್ಗದರ್ಶಕರಾಗಿ ಇದ್ದರೆ ಸಾಕು.

**ಪ್ರಶ್ನೆ:** ಮಕ್ಕಳು ವಸ್ತುಗಳೊಂದಿಗೆ ಆಟವಾಡುವುದನ್ನು ಮತ್ತು ಅವುಗಳನ್ನು ಹೆಚ್ಚು ಹೆಚ್ಚು ಬಳಸುವುದನ್ನು ನಾನು ಹೇಗೆ ಪ್ರೋತ್ಸಾಹಿಸಬಹುದು? ಒಂದು ವೇಳೆ ಮಕ್ಕಳು ಒಂದೇ ವಸ್ತುವನ್ನು ಪದೇ ಪದೇ ಬಳಸುತ್ತಿದ್ದರೆ ಏನಾಗುತ್ತದೆ? ಅವರು ಒಂದು ಕಲಿಕಾ ಮೂಲೆಯಿಂದ ಇನ್ನೊಂದಕ್ಕೆ ಓಡಾಡುತ್ತಾ, ವಸ್ತುಗಳ ಬಳಕೆಯ ಕಡೆಗೆ ಗಮನಹರಿಸದಿದ್ದರೆ ಏನು ಮಾಡಬೇಕು?

**ಉತ್ತರ:** ನಾವು ಕಲಿಕಾ ಸಾಮಗ್ರಿಗಳನ್ನು ಮಕ್ಕಳಿಗೆ ಸುಲಭವಾಗಿ ಕೈಗೆಟುಕುವಂತೆ ಇರಿಸಿದಾಗ, ಆ ವಸ್ತುಗಳು ತಮಗೆ ಲಭ್ಯವಿವೆ ಎಂಬ ಭಾವನೆ ಮಕ್ಕಳಲ್ಲಿ ಮೂಡುತ್ತದೆ. ಇದು ಅವುಗಳನ್ನು ಬಳಸಲು ಮಕ್ಕಳನ್ನು ಪ್ರೋತ್ಸಾಹಿಸುತ್ತದೆ. ನೆನಪಿಡಿ, ಮಕ್ಕಳಿಗೆ ಸಹಜವಾಗಿಯೇ ಕುತೂಹಲವಿರುತ್ತದೆ; ಅವರಿಗೆ ಆಟಿಕೆಗಳು ಮತ್ತು ವಿವಿಧ ವಸ್ತುಗಳೊಂದಿಗೆ ಆಟವಾಡುವುದು ಎಂದರೆ ಬಹಳ ಇಷ್ಟ. ಅಲ್ಲದೆ ಅವರು ತಮ್ಮ ಪಂಚೇಂದ್ರಿಯಗಳ ಸಹಾಯದಿಂದ ಹೊಸ ಪ್ರಯೋಗಗಳನ್ನು ಮಾಡುವುದನ್ನು ಇಷ್ಟಪಡುತ್ತಾರೆ. ಶಿಕ್ಷಕರಾಗಿ ನಾವು ಹೊಸ ವಸ್ತುಗಳನ್ನು ಆಯ್ಕೆ ಮಾಡಿ, ಅವುಗಳನ್ನು ದೊಡ್ಡ ಗುಂಪಿನಲ್ಲಿ ಅಥವಾ 'ಸರ್ಕಲ್ ಟೈಮ್' ಅವಧಿಯಲ್ಲಿ ಮಕ್ಕಳಿಗೆ ಪರಿಚಯಿಸಬಹುದು. ಉದಾಹರಣೆಗೆ, ಪರಸ್ಪರ ಹೊಂದಿಕೆಯಾಗುವ ವಸ್ತುಗಳಿರುವ 'ಮ್ಯಾಚಿಂಗ್ ಕಿಟ್' ಇದ್ದರೆ, ಮೊದಲು ಮಕ್ಕಳಿಗೆ ಆ ವಸ್ತುಗಳನ್ನು ತೋರಿಸಿ, ನಂತರ ಯಾವ ವಸ್ತುವಿಗೆ ಯಾವುದು ಹೊಂದಿಕೆಯಾಗುತ್ತದೆ ಎಂದು ಊಹಿಸಲು ಹೇಳಬೇಕು. ಬುಟ್ಟಿಯಲ್ಲಿರುವ ಒಂದು ಸಣ್ಣ ಬೀಗವನ್ನು ಎತ್ತಿ ತೋರಿಸಿ, ಅದನ್ನು ತೆರೆಯಲು ಏನು ಬೇಕಾಗುತ್ತದೆ ಎಂದು ಕೇಳಿ. ಆಗ ಮಗುವು 'ಬೀಗದ ಕೈ' ಎಂದು ಹೇಳಿದರೆ, ಆ ಕೀಲಿಯನ್ನು ಹುಡುಕಲು ಮತ್ತು ಆ ಎರಡೂ ವಸ್ತುಗಳನ್ನು ಒಟ್ಟಿಗೆ ಜೋಡಿಸಲು ಹೇಳಿ. ಇದೇ ರೀತಿ, ಬುಟ್ಟಿಯಲ್ಲಿರುವ ಶೂ ಮತ್ತು ಸಾಕ್ಸ್, ಸಣ್ಣ ಲೋಟ ಮತ್ತು ತಟ್ಟೆ ಮುಂತಾದ ವಸ್ತುಗಳನ್ನು ಜೋಡಿ ಮಾಡಲು ಅವರಿಗೆ ತಿಳಿಸಬಹುದು.

ಯಾವುದೇ ಕೆಲಸವನ್ನು ಪದೇ ಪದೇ ಮಾಡುವುದರಿಂದ ಮಕ್ಕಳು ಅದರಲ್ಲಿ ನಿಪುಣರಾಗುತ್ತಾರೆ. ಅದೇ ವೇಳೆ, ಮಕ್ಕಳು ಒಂದು ತಿಂಗಳಿಗಿಂತ ಹೆಚ್ಚು ಕಾಲ ಒಂದೇ ವಸ್ತುವಿನೊಂದಿಗೆ ಆಟವಾಡುತ್ತಿದ್ದಾರೆ ಎಂದು ನಿಮಗೆ ಅನ್ನಿಸಿದರೆ, ಅವರಿಗೆ ಬೇರೆ ವಸ್ತುಗಳನ್ನು ಬಳಸಲು ಪ್ರೇರೇಪಿಸಬೇಕು. ಉದಾಹರಣೆಗೆ, ಚಿತ್ರಗಳನ್ನು ನೋಡಲು ಇಷ್ಟಪಡುವ ಮಗುವಿಗೆ, ಬ್ಲಾಕ್‌ಗಳನ್ನು ಉಪಯೋಗಿಸಿ ಆ ಪುಸ್ತಕದಲ್ಲಿರುವ ಯಾವುದಾದರೂ ಕಟ್ಟಡ ಅಥವಾ ವಾಹನವನ್ನು ನಿರ್ಮಿಸಲು ಪ್ರೋತ್ಸಾಹಿಸಬಹುದು. ಆ

> **ಮಕ್ಕಳಿಗೆ ತಮ್ಮದೇ ಆದ ಅಭಿರುಚಿಗಳಿರುತ್ತವೆ. ಕೆಲವು ಮಕ್ಕಳಿಗೆ ಪುಸ್ತಕಗಳ ಪುಟಗಳನ್ನು ತಿರುಗಿಸುತ್ತಾ ಚಿತ್ರಗಳನ್ನು ನೋಡುವುದು ಇಷ್ಟವಾಗಬಹುದು. ಇನ್ನು ಕೆಲವರಿಗೆ ಬ್ಲಾಕ್‌ಗಳನ್ನು ಬಳಸಿ ವಿವಿಧ ಆಕಾರಗಳನ್ನು ರಚಿಸಲು ಆಸಕ್ತಿ ಇರಬಹುದು. ತಮಗೆ ಇಷ್ಟವಾದ ವಸ್ತುಗಳೊಂದಿಗೆ ಮಕ್ಕಳು ಪದೇ ಪದೇ ಆಟವಾಡಲು ಬಯಸುತ್ತಾರೆ. ಅದು ಒಳ್ಳೆಯದೇ.**

ದಿನ ಮಕ್ಕಳು ಯಾವ ಮೂಲೆಗೆ ಹೋಗಬೇಕೆಂದು ನೀವು ಬಯಸುತ್ತೀರೋ, ಆ ಮೂಲೆಗಳ ಹತ್ತಿರ ಮಕ್ಕಳ ಹೆಸರಿನ ಕಾರ್ಡ್‌ಗಳನ್ನು ಅಥವಾ ಅವರ ಭಾವಚಿತ್ರಗಳನ್ನು ಇರಿಸಬಹುದು. ಈ ರೀತಿ ಒಂದು ವಾರದ ಅವಧಿಯಲ್ಲಿ ಮಕ್ಕಳು ಎಲ್ಲಾ ಮೂಲೆಗಳಿಗೂ ಭೇಟಿ ನೀಡುವ ಅವಕಾಶ ಸಿಗುವುದನ್ನು ಖಚಿತಪಡಿಸಿಕೊಳ್ಳಬೇಕು. ಇದನ್ನು ಸಾಧ್ಯವಾಗಿಸಲು ಇತರ ಆಕರ್ಷಕ ಮಾರ್ಗಗಳ ಬಗ್ಗೆಯೂ ನೀವು ಯೋಚಿಸಬಹುದು. ಉದಾಹರಣೆಗೆ, ಮೂಲೆಗಳ ಹೆಸರಿರುವ ಚೀಟಿಗಳನ್ನು ಎತ್ತಲು ಮಕ್ಕಳಿಗೆ ಹೇಳುವುದು; ಅವರ ಚೀಟಿಯಲ್ಲಿ ಯಾವ ಮೂಲೆಯ ಹೆಸರು ಬರುವುದೋ, ಅವರು ಆ ಮೂಲೆಗೆ ಹೋಗಿ ಆಟವಾಡಬಹುದು.

ತುಂಬಾ ಸಣ್ಣ ಮಕ್ಕಳು ಮತ್ತು ಕೆಲವು ದೊಡ್ಡ ಮಕ್ಕಳು ಕೂಡ, ನಿಗದಿಪಡಿಸಿದ 20 ಅಥವಾ 30 ನಿಮಿಷಗಳ ಕಾಲ ಒಂದೇ ಮೂಲೆಯಲ್ಲಿ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರಿಗೆ ತರಗತಿಯಲ್ಲಿ ಓಡಾಡಲು ಅವಕಾಶ ನೀಡಬೇಕು. ಸಾಮಾನ್ಯವಾಗಿ 3 ವರ್ಷ ವಯಸ್ಸಿನ ಮಕ್ಕಳು ಒಂದೇ ವಸ್ತುವಿನೊಂದಿಗೆ ಪೂರ್ತಿ 20 ಅಥವಾ 30 ನಿಮಿಷಗಳ ಕಾಲ ಆಟವಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಸಣ್ಣ ಮಕ್ಕಳ ಏಕಾಗ್ರತೆಯ ಅವಧಿಯು ಕಡಿಮೆಯಿರುತ್ತದೆ. ಅವರು ಒಂದು ವಸ್ತುವಿನೊಂದಿಗೆ 10 ನಿಮಿಷಗಳ ಕಾಲ ಆಟವಾಡಿ, ನಂತರ ಮತ್ತೊಂದು ವಸ್ತುವನ್ನು ಎತ್ತಿಕೊಳ್ಳಬಹುದು. ಅವರು 3ರಿಂದ 6 ವರ್ಷ ವಯಸ್ಸಿನವರಾಗುತ್ತಾ ಸಾಗಿದಂತೆ, ಒಂದೇ ವಸ್ತುವಿನೊಂದಿಗೆ ಹೆಚ್ಚಿನ ಸಮಯ ಕಳೆಯುವುದನ್ನು ಕಲಿಯುತ್ತಾರೆ.

**ಪ್ರಶ್ನೆ:** ನಾನು ಅನೇಕ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತದೆ. ನನ್ನ ಸಮಯವನ್ನು ನಾನು ಹೇಗೆ ನಿರ್ವಹಿಸಬೇಕು?

**ಉತ್ತರ:** ಆರಂಭಿಕ ಬಾಲ್ಯ ಹಂತದ ಶಿಕ್ಷಕಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಅನೇಕ ಹೆಚ್ಚುವರಿ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತದೆ. ಈ ಎಲ್ಲಾ ಕೆಲಸಗಳನ್ನು ಸಮತೋಲನಗೊಳಿಸುವ ಪ್ರಯತ್ನದಲ್ಲಿ, ಹೆಚ್ಚಾಗಿ ನಿರ್ಲಕ್ಷ್ಯಕ್ಕೆ ಒಳಗಾಗುವ ಚಟುವಟಿಕೆ ಎಂದರೆ ಅದು ಆರಂಭಿಕ ಬಾಲ್ಯ ಶಿಕ್ಷಣ. ಸರಿಯಾದ ಯೋಜನೆ ಇಲ್ಲದಿದ್ದಾಗ, ನಾವು ಮಕ್ಕಳನ್ನು ಯಾವುದೇ ನಿರ್ದಿಷ್ಟ ಉದ್ದೇಶವಿಲ್ಲದೆ ಅವರ ಪಾಡಿಗೆ ಬಿಟ್ಟುಬಿಡುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಬಹಳ ಎಚ್ಚರಿಕೆಯಿಂದ ಕೆಲಸದ ಯೋಜನೆಯನ್ನು ರೂಪಿಸುವ ಅವಶ್ಯಕತೆ ಇರುತ್ತದೆ.

1. ನಿಮ್ಮ ಕೆಲಸಗಳಿಗೆ ಆದ್ಯತೆ ನೀಡಿ. ಯಾವ ಕೆಲಸಗಳನ್ನು ಪ್ರತಿದಿನ, ಪ್ರತಿ ವಾರ ಅಥವಾ ಪ್ರತಿ ತಿಂಗಳು ಮಾಡಬೇಕೆಂದು ಮೊದಲೇ ನಿರ್ಧರಿಸಿ.
2. ನಿಮಗಾಗಿ ಒಂದು ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಿ. ಇದರಿಂದ ಉತ್ತಮ ಯೋಜನೆ ರೂಪಿಸಲು ಸಾಧ್ಯವಾಗುತ್ತದೆ.
3. ದಿನನಿತ್ಯದ ವೇಳಾಪಟ್ಟಿಯಲ್ಲಿ ಮೊದಲು ಆರಂಭಿಕ ಬಾಲ್ಯ ಶಿಕ್ಷಣಕ್ಕೆ ಸಂಬಂಧಿಸಿದ ನಿರ್ದಿಷ್ಟ ಚಟುವಟಿಕೆಗಳಿಗೆ ಸಮಯ ನಿಗದಿಪಡಿಸಿ. ಉದಾಹರಣೆಗೆ, ಬೆಳಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ.
4. ಈಗ ಉಳಿದ ಕೆಲಸಗಳನ್ನು ಯೋಜಿಸಲು ಪ್ರಾರಂಭಿಸಿ. ಪೋಷಕರೊಂದಿಗಿನ ಅನಿರೀಕ್ಷಿತ ಮಾತುಕತೆಗಳನ್ನು ಶಾಲಾ ದಿನದ ಆರಂಭದಲ್ಲಿ ಮತ್ತು ಕೊನೆಯಲ್ಲಿ ನಡೆಸಬಹುದು. ಶಾಲೆ ಮುಗಿದ ನಂತರ ಪೋಷಕರ ಪ್ರಶ್ನೆಗಳಿಗೆ ಉತ್ತರಿಸಲು 15 ನಿಮಿಷಗಳ ಕಾಲಾವಕಾಶ ಮೀಸಲಿಡಬಹುದು. ಪೋಷಕರು ಬಂದು ನಿಮ್ಮೊಂದಿಗೆ ಮಾತನಾಡಲು ಪ್ರತಿ ಶನಿವಾರ 2 ಗಂಟೆಗಳ ಸಮಯವನ್ನು ನಿಗದಿಪಡಿಸಬಹುದು.
5. ಮನೆ ಮತ್ತು ಸಮುದಾಯದ ಭೇಟಿಗಳನ್ನು ಮಧ್ಯಾಹ್ನ ಮಕ್ಕಳು ನಿದ್ರಿಸುತ್ತಿರುವಾಗ, ಶಾಲಾ ಸಮಯದ ನಂತರ ಅಥವಾ ಶನಿವಾರದಂದು ಮಾಡಬಹುದು. (ಅಂಗನವಾಡಿ ಮಕ್ಕಳಿಗೆ ಶನಿವಾರ ರಜೆ ಇರುತ್ತದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಹೇಳುತ್ತಿದ್ದೇನೆ).
6. ಅಂಗನವಾಡಿ ಶಿಕ್ಷಕಿಯರಿಗೆ ಒಂದು ಸಲಹೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 12ರ ನಡುವೆ 15 ನಿಮಿಷಗಳ ವಿರಾಮ ತೆಗೆದುಕೊಳ್ಳಿ. ಈ ಸಮಯದಲ್ಲಿ ಮಕ್ಕಳ ಆರೈಕೆಗೆ ಸಹಾಯಕಿಯರ ನೆರವು ಪಡೆಯಿರಿ. ನಿಮ್ಮ ತುರ್ತು ಕೆಲಸಗಳನ್ನು ಅಂದರೆ, ಯಾವುದಾದರೂ ಪ್ರಮುಖ ಮಾಹಿತಿಯನ್ನು ಕಳಿಸುವುದಿದ್ದರೆ ಆ 15 ನಿಮಿಷಗಳಲ್ಲಿ ಮುಗಿಸಿ. ಇನ್ನುಳಿದ ದಾಖಲಾತಿ ಕೆಲಸಗಳನ್ನು ಮಕ್ಕಳು ಮನೆಗೆ ಹೋದ ನಂತರ ಅಥವಾ ಅವರು ಮಲಗಿರುವ ಸಮಯದಲ್ಲಿ ಮಾಡಬಹುದು.

ಆಟ ಎನ್ನುವುದು ಮಕ್ಕಳು ತಮ್ಮ ಸುತ್ತಮುತ್ತಲಿನ ಭೌತಿಕ ಮತ್ತು ಸಾಮಾಜಿಕ ಪ್ರಪಂಚದೊಂದಿಗೆ ಸಂವಹನ ನಡೆಸುವ ಒಂದು ಸ್ವಾಭಾವಿಕ ವಿಧಾನ. ಅವರ ಜೀವನದಲ್ಲಿ ನಾವು ಜವಾಬ್ದಾರಿಯುತ ಹಿರಿಯರಾಗಿರುವುದರಿಂದ, ಅವರ ಆಟವನ್ನು ನಾವು ಸದಾ ಪ್ರೋತ್ಸಾಹಿಸಬೇಕು. ಮಕ್ಕಳು ಗಂಟೆಗಟ್ಟಲೆ ಆಟದಲ್ಲಿ ಮುಳುಗಿರುವುದನ್ನು ನಾವು ಗಮನಿಸುತ್ತೇವೆ. ಆಟದ ವಸ್ತುಗಳು ಅಥವಾ ಕಲಿಕಾ ಸಾಮಗ್ರಿಗಳು ಮಕ್ಕಳಿಗೆ ಸ್ವತಂತ್ರವಾಗಿ ಅನ್ವೇಷಿಸಲು, ಪ್ರಯೋಗ ಮಾಡಲು ಹಾಗೂ ಕಲಿಯಲು ಸಹಾಯ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹೀಗಾಗಿ, ನಾವು ಚಿಕ್ಕ ಮಕ್ಕಳ ತರಗತಿಗಳಲ್ಲಿ ಆಟದ ಜೊತೆಗೆ ಎಚ್ಚರಿಕೆಯಿಂದ ಆಯ್ಕೆ ಮಾಡಿದ ವಸ್ತುಗಳನ್ನು ಬಳಸಿದರೆ ಅದರಿಂದ ಕಲಿಕೆಯಲ್ಲಿ ಬಹಳ ಪ್ರಯೋಜನವಾಗುತ್ತದೆ.



**ಜಿಗಿಶಾ ಶಾಸ್ತ್ರಿ** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ಇವರು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) ಕ್ಷೇತ್ರದಲ್ಲಿ ನಾಲ್ಕು ದಶಕಗಳಿಗೂ ಹೆಚ್ಚಿನ ಅನುಭವ ಹೊಂದಿರುವ ತಜ್ಞರು. ಸರ್ಕಾರಿ ಮತ್ತು ಖಾಸಗಿ ವಲಯದ ಹಲವಾರು ಇಸಿಸಿಇ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮತ್ತು ಅವುಗಳಿಗೆ ಮಾರ್ಗದರ್ಶನ ನೀಡುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ.

**ಸಂಪರ್ಕ:** Jigisha.shastri@apu.edu.in

ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಕಿರಣ್ ಮಂಜುನಾಥ್

# ಆರಂಭಿಕ ಶಿಕ್ಷಣ ಮತ್ತು ನಾಟಕ

**ಪಾರುಲ್ ಬಾತ್ರಾ ದುಗ್ಗಲ್**

**ಅಂಗನವಾಡಿಗೆ ಬರುವ ಮಕ್ಕಳಲ್ಲಿರುವ ನಾಚಿಕೆ ಮತ್ತು ಹಿಂಜರಿಕೆಯನ್ನು ದೂರ ಮಾಡಲು ನಾಟಕ ಬಹಳ ಸಹಾಯ ಮಾಡುತ್ತದೆ. ಇದು ಮಕ್ಕಳಿಗೆ ಆಟದಂತಹ ಒಂದು ಮೋಜಿನ ವಾತಾವರಣವನ್ನು ಒದಗಿಸಿ, ಅಲ್ಲಿ ಅವರು ಯಾವುದೇ ಭಯವಿಲ್ಲದೆ ಹೊಸ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತದೆ. ಇವೆಲ್ಲದರ ನಡುವೆ ಮಕ್ಕಳ ಕಲಿಕೆಯೂ ನಿರಂತರವಾಗಿ ನಡೆಯುತ್ತಿರುತ್ತದೆ. ಈ ಲೇಖನವು ಅಂಗನವಾಡಿ ಕಾರ್ಯಕರ್ತೆಯೊಬ್ಬರು ನಾಟಕವನ್ನು ಪರಿಣಾಮಕಾರಿಯಾಗಿ ಬಳಸಿ, ತಮ್ಮ ಅಂಗನವಾಡಿಯನ್ನು ಒಂದು ಸಂತೋಷಕರ ಕಲಿಕೆಯ ತಾಣವನ್ನಾಗಿ ಪರಿವರ್ತಿಸಿದ ಕಥೆಯನ್ನು ಹೇಳುತ್ತದೆ.**

ಭೋಪಾಲ್‌ನ ಕೋಲಾರ್ ಪ್ರದೇಶದಲ್ಲಿರುವ ಕಲಿಯಾಸೋತ್ ನದಿಯ ದಡದಲ್ಲಿ ದಾಮಖೇಡಾ ಎಂಬ ಬಸ್ತಿ (ವಸತಿ ಪ್ರದೇಶ) ಇದೆ. ಅಲ್ಲಿ ದಾಮಖೇಡಾ ಪ್ರಾಥಮಿಕ ಶಾಲೆ ಇದ್ದು, ಅದೇ ಶಾಲೆಯ ಆವರಣದಲ್ಲಿ ದಾಮಖೇಡಾ ಅಂಗನವಾಡಿ ಕೇಂದ್ರವೂ ಇದೆ. ಇಲ್ಲಿ ಮೀನಾ ಕನೌಜಿಯಾ ಎಂಬವರು 2006ರಿಂದ ಕೆಲಸ ಮಾಡುತ್ತಿದ್ದಾರೆ. ಅವರು ಪದವಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ತಮ್ಮ ವೃತ್ತಿಜೀವನದ ಆರಂಭದಿಂದಲೂ ಇದೇ ಅಂಗನವಾಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮೀನಾ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನಡೆಸುವ ಎಲ್ಲಾ ಕಾರ್ಯಕ್ರಮಗಳು ಮತ್ತು ಅಭಿಯಾನಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುತ್ತಾರೆ. ಅವರು ಮಕ್ಕಳ ಶಿಕ್ಷಣ, ಪೋಷಣೆ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಪೋಷಕರಲ್ಲಿ ಸದಾ ಜಾಗೃತಿಯನ್ನು ಮೂಡಿಸುತ್ತಿರುತ್ತಾರೆ. ಅಂಗನವಾಡಿಗೆ ಬರುವ ತಾಯಂದಿರೊಂದಿಗೆ, ಮನೆಯಲ್ಲಿ ಮಕ್ಕಳಿಗೆ ಏನೆಲ್ಲಾ ಕಲಿಸಬಹುದು ಎಂಬುದರ ಬಗ್ಗೆ ಅವರು ಆಗಾಗ ಚರ್ಚಿಸುತ್ತಾರೆ. ತಾವು ಅಂಗನವಾಡಿಯಲ್ಲಿ ಕಲಿಸುವ ಕಥೆ ಮತ್ತು ಹಾಡುಗಳನ್ನು ಮನೆಯಲ್ಲಿ ಮಕ್ಕಳೊಂದಿಗೆ ಪುನರಾವರ್ತಿಸುವಂತೆ ಅವರು ತಾಯಂದಿರಿಗೆ ತಿಳಿಸುತ್ತಾರೆ. ದೀರ್ಘಕಾಲ ಬಾಳಿಕೆ ಬರುವಂತಹ ಕಲಿಕಾ ಸಾಮಗ್ರಿಗಳನ್ನು (TLM) ತಯಾರಿಸುವ ನಿಟ್ಟಿನಲ್ಲೂ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ. ಅಂಗನವಾಡಿಗೆ ಬರುವ ಧಾನ್ಯಗಳ ಚೀಲಗಳಿಂದಲೇ ಪುಸ್ತಕಗಳನ್ನು ಇಡಲು ಪಾಕೆಟ್ ಬೋರ್ಡ್‌ಗಳು ಮತ್ತು ಕೈಗೊಂಬೆಗಳನ್ನು ಅವರು ತಯಾರಿಸಿದ್ದಾರೆ. ಅವರು ನಿಯತವಾಗಿ ಮಕ್ಕಳ ಮೇಳಗಳು ಮತ್ತು ಬಾಲ ಪಂಚಾಯಿತಿಗಳನ್ನು ಆಯೋಜಿಸುತ್ತಿರುತ್ತಾರೆ. ಅಲ್ಲದೆ ತಮ್ಮ ಇಲಾಖೆಯ ಸೆಕ್ಟರ್ ಸಭೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಶಾಲಾ-ಪೂರ್ವ ಶಿಕ್ಷಣದ ತಮ್ಮ ಅನುಭವಗಳನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳುತ್ತಾರೆ. ಮೀನಾ ಅವರು ಅಂಗನವಾಡಿಗೆ ಬರುವ 3ರಿಂದ 6 ವರ್ಷದ 30 ಮಕ್ಕಳೊಂದಿಗೆ ಶಾಲಾ-ಪೂರ್ವ ಶಿಕ್ಷಣದ ಪಠ್ಯಕ್ರಮವನ್ನು ಆಧರಿಸಿದ ಹತ್ತಕ್ಕೂ ಹೆಚ್ಚು ನಾಟಕಗಳನ್ನು ಸಿದ್ಧಪಡಿಸಿದ್ದಾರೆ. ಇಂದು ಅವರ ಅಂಗನವಾಡಿಯ ಪ್ರತಿಯೊಂದು ಮಗುವು ಕೂಡ ನಾಟಕದಲ್ಲಿ ಉತ್ಸಾಹದಿಂದ ತೊಡಗಿಸಿಕೊಳ್ಳುತ್ತದೆ.




ಚಿತ್ರ 1: ಸಂವಹನ ಮತ್ತು ಸಂತೋಷವನ್ನೇ ಕಲಿಕೆಯ ಮಾಧ್ಯಮವನ್ನಾಗಿ ಮಾಡಿಕೊಳ್ಳುವುದು ಬಹಳ ಮುಖ್ಯ.



ಚಿತ್ರ 2: ಬೀಜ ಬಿತ್ತುವ ಚಟುವಟಿಕೆ ಮತ್ತು ನಾಟಕದಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿರುವ ಮಕ್ಕಳು.

## ಅಂಗನವಾಡಿಯಲ್ಲಿ ಅವರ ಸಾಧನೆ

ಆರಂಭದಲ್ಲಿ, ಮಕ್ಕಳು ಸ್ನಾನ ಮಾಡದೆಯೇ ಅಂಗನವಾಡಿಗೆ ಬರುತ್ತಿದ್ದರು. ಹೀಗಾಗಿ ಮೀನಾ ಅವರು ಮೊದಲು ಮಕ್ಕಳ ಸ್ವಚ್ಛತೆಯ ಬಗ್ಗೆ ಗಮನಹರಿಸಿದರು. ಸ್ನಾನ ಮಾಡಿ, ಶುಚಿಯಾಗಿ ಬರುವಂತೆ ಮಕ್ಕಳಿಗೆ ಹೇಳಿಕೊಡಲಾಯಿತು. "ಅಂಗನವಾಡಿಯಲ್ಲಿ ಅಂಥದ್ದೇನು ನಡೆಯುತ್ತದೆ? ಅಷ್ಟು ಚಿಕ್ಕ ಮಕ್ಕಳಿಗೆ ನೀವು ಏನನ್ನು ಕಲಿಸುತ್ತೀರಿ?" ಎಂದು ಬಸ್ತಿಯ ಜನರು ಶಿಕ್ಷಕಿಯನ್ನು ಪ್ರಶ್ನಿಸುತ್ತಿದ್ದರು. ಆಗ ಅವರು ಪೋಷಕರೊಂದಿಗೆ ಸಮಾಲೋಚನೆ ನಡೆಸಲು ಆರಂಭಿಸಿ, ಮಕ್ಕಳನ್ನು ಪ್ರತಿದಿನ ಅಂಗನವಾಡಿಗೆ ಕಳುಹಿಸುವಂತೆ ಅವರ ಮನವೊಲಿಸಿದರು. ಅಷ್ಟೇ ಅಲ್ಲದೆ, ಪೋಷಕರನ್ನೂ ಅಂಗನವಾಡಿಗೆ ಬರಲು ಆಹ್ವಾನಿಸಿದರು. ಪೋಷಕರು ಅಂಗನವಾಡಿಗೆ ಆಗಮಿಸಿ, ಅಲ್ಲಿ ನಡೆಯುತ್ತಿದ್ದ ಉತ್ತಮ ಚಟುವಟಿಕೆಗಳನ್ನು ಸ್ವತಃ ಕಣ್ಣಾರೆ ಕಂಡರು.

ಒಮ್ಮೆ ಅವರು 'ಬಾಲ ಚೌಪಾಲ್' ಅನ್ನು ಆಯೋಜಿಸಿದ್ದರು. ಅದರಲ್ಲಿ ಮಕ್ಕಳು ಪೋಷಕರ ಮುಂದೆ ನಾಟಕವನ್ನು ಪ್ರದರ್ಶಿಸಿದರು. ಅದನ್ನು ಕಂಡ ಪೋಷಕರ ಅಭಿಪ್ರಾಯವೇ ಬದಲಾಯಿತು. ತಮ್ಮ ಮಕ್ಕಳು ವೇದಿಕೆಯ ಮೇಲೆ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸುವುದನ್ನು ಕಂಡು ಪೋಷಕರೆಲ್ಲರಿಗೂ ಅಚ್ಚರಿಯಾಗಿತ್ತು.

ಆರಂಭಿಕ ತರಬೇತಿಯ ನಂತರ, ಇವರು ಶಾಲಾ-ಪೂರ್ವ ಶಿಕ್ಷಣದ ಚಟುವಟಿಕೆಗಳ ಮೇಲೆ ಹೆಚ್ಚಿನ ಗಮನಹರಿಸಿದರು. ಮಕ್ಕಳು ಶೀಘ್ರದಲ್ಲೇ ಹಾಡು ಮತ್ತು ಕಥೆಗಳನ್ನು ಕಲಿತರು; ಅವುಗಳನ್ನು ಬಹಳ ಖುಷಿಯಿಂದ ಹಾಡಲು ಹಾಗೂ ಪುನರಾವರ್ತಿಸಲು ತೊಡಗಿದರು. ಕ್ರಮೇಣ ಅವರು ಹಾಡುಗಳ ಪೋಸ್ಟರ್‌ಗಳಲ್ಲಿ ಅಕ್ಷರಗಳನ್ನು ಗುರುತಿಸಲು ಆರಂಭಿಸಿದರು ಮತ್ತು ಕಬಡ್ಡಿ ಸೇರಿದಂತೆ ಇತರ ಆಟಗಳ ನಿಯಮಗಳನ್ನು ತಿಳಿದುಕೊಳ್ಳಲಾರಂಭಿಸಿದರು. ಬಳಿಕ, ತಮಗೂ ಮತ್ತು ಮಕ್ಕಳಿಗೂ ಸವಾಲೆನಿಸುವಂತಹ ಮುಂದಿನ ಹಂತದ ಕೆಲಸ ಯಾವುದು ಎಂಬ ಪ್ರಶ್ನೆ ಶಿಕ್ಷಕಿಯನ್ನು ಕಾಡಲಾರಂಭಿಸಿತು. ಆ ಕ್ಷಣದಲ್ಲೇ ಅವರು ನಾಟಕಗಳನ್ನು ಸಿದ್ಧಪಡಿಸಲು ನಿರ್ಧರಿಸಿದರು. ಇದರೊಂದಿಗೆ, ನಾಟಕವಾಗಿ ರೂಪಿಸಬಹುದಾದ ಕಥೆಗಳ ಬಗ್ಗೆ ಅವರಲ್ಲಿ ಕುತೂಹಲ ಮತ್ತು ಆಸಕ್ತಿ ಬೆಳೆಯತೊಡಗಿತು.

## ನಾಟಕದ ತಯಾರಿ

ಮಕ್ಕಳೊಂದಿಗೆ ನಾಟಕಗಳನ್ನು ಆಡಲು ಪ್ರಾರಂಭಿಸಿದ ಕುರಿತು ಪ್ರಶ್ನಿಸಿದಾಗ ಮೀನಾ ಅವರು ಹೀಗೆ ವಿವರಿಸುತ್ತಾರೆ: 'ಮೊದಲು ನಾನು ಮಕ್ಕಳೊಂದಿಗೆ ಹಾಡು-ಕಥೆಗಳನ್ನು ಕೇಳುವ ಮತ್ತು ಹೇಳುವ ಚಟುವಟಿಕೆಗಳನ್ನು ಮಾತ್ರ ಮಾಡುತ್ತಿದ್ದೆ. ನಂತರ ಮಕ್ಕಳು ಅವನ್ನೆಲ್ಲಾ ತುಂಬಾ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಿರುವುದು ನನ್ನ ಅರಿವಿಗೆ ಬಂತು. ಅದೇ ಸಂದರ್ಭದಲ್ಲಿ ನಾಟಕಗಳ ಮೇಲೆ ಕೆಲಸ ಮಾಡುವ ನಿರ್ಧಾರವನ್ನು ತೆಗೆದುಕೊಂಡೆ.

ಈ ನಡುವೆ, 'ನಾಲ್ಕು ವರ್ಷದ ಮಕ್ಕಳು ನಾಟಕ ಆಡಲು ಸಾಧ್ಯವೇ?' ಎಂಬ ಸಂಶಯ ನನ್ನಲ್ಲೂ ಇತ್ತು. ಆದರೆ, 'ಮೊದಲು ಪ್ರಯತ್ನಿಸಿ ನೋಡೋಣ, ಆಮೇಲೆ ನಿರ್ಧರಿಸೋಣ' ಎಂದು ನನಗೆ ನಾನೇ ಹೇಳಿಕೊಂಡೆ. ಹಾಗಾಗಿ ಮಕ್ಕಳಿಗೆ ನಾಟಕ ಕಲಿಸುವ ಮೊದಲು ಕೆಲವು ಸಿದ್ಧತೆಗಳನ್ನು ಮಾಡಿಕೊಂಡೆ. ಶಾಲಾ-ಪೂರ್ವ ಶಿಕ್ಷಣದ ಬೋಧನಾ ಮಾರ್ಗದರ್ಶಿಯಿಂದ ನಾಟಕವಾಗಿ ರೂಪಿಸಬಹುದಾದ ಕೆಲವು ಕಥೆಗಳನ್ನು ಆರಿಸಿಕೊಂಡೆ. ಉದಾಹರಣೆಗೆ,

- ಚಿಡಾ-ಚಿಡಿಯಾ (ಗಂಡು ಗುಬ್ಬಚ್ಚಿ - ಹೆಣ್ಣು ಗುಬ್ಬಚ್ಚಿ) ['ನನ್ನ ಕುಟುಂಬ' ಥೀಮ್]
- ಅವನಿ ಔರ್ ಮಟರ್ ಕಾ ದಾನಾ (ಅವನಿ ಮತ್ತು ಬಟಾಣಿ ಕಾಳು) ['ತರಕಾರಿಗಳು' ಥೀಮ್]
- ಆಲೂ ಮಾಲೂ ಕಾಲೂ ['ತರಕಾರಿಗಳು' ಥೀಮ್]
- ನೀಲಾ ಫಲ್ (ನೀಲಿ ಹಣ್ಣು) ['ಹಣ್ಣುಗಳು' ಥೀಮ್]
- ಆಸ್‌ಮಾನ್ ಗಿರಾ (ಆಕಾಶ ಬಿತ್ತು) ['ಋತುಗಳು ಮತ್ತು ಕಾಲಗಳು' ಥೀಮ್]

'ಮೊದಲು ಮಕ್ಕಳಿಗೆ ಕಥೆಗಳನ್ನು ಪದೇ ಪದೇ ಹೇಳುವುದೇ ನಾಟಕದ ಆರಂಭಿಕ ಸಿದ್ಧತೆಯಾಗಿತ್ತು. ಕಥೆ ಅವರಿಗೆ ನೆನಪಿನಲ್ಲಿ ಉಳಿಯಲಿ ಎಂಬ ಉದ್ದೇಶದಿಂದ ಎಲ್ಲಾ ಮಕ್ಕಳಿಂದಲೂ ಅದನ್ನು ಹೇಳಿಸಿದೆ. ಬಳಿಕ ಕಥೆ ಮತ್ತು ಅದರ ಪಾತ್ರಗಳ ಬಗ್ಗೆ ಚರ್ಚಿಸಿದೆವು. ಉದಾಹರಣೆಗೆ, ಚಿಡಾ-ಚಿಡಿಯಾ ಕಥೆಯಲ್ಲಿ 'ಗುಬ್ಬಚ್ಚಿ ಹೇಗೆ ಕೂಗುತ್ತದೆ?', 'ಗುಬ್ಬಚ್ಚಿಯನ್ನು ಎಲ್ಲೆಲ್ಲಿ ನೋಡಿದ್ದೀರಿ?', 'ಗುಬ್ಬಚ್ಚಿ ಬೆಳಿಗ್ಗೆ ಬೇಗ ಏಕೆ ಬರುತ್ತದೆ?' ಮುಂತಾದ ವಿಷಯಗಳ ಬಗ್ಗೆ ಮಕ್ಕಳು ಬಹಳಷ್ಟು ಮಾಹಿತಿ ಹಂಚಿಕೊಂಡರು. ಆಗ ನಾನು ಮಕ್ಕಳಿಗೆ ಬೆಳಿಗ್ಗೆ ಬೇಗ ಎದ್ದು ಗುಬ್ಬಚ್ಚಿಗಳನ್ನು ಗಮನಿಸಲು ಹೇಳಿದೆ. ಇದರಿಂದ ಅವರು ಬೆಳಿಗ್ಗೆ ಬೇಗನೆ ಅಂಗನವಾಡಿಗೆ ಬರಲಾರಂಭಿಸಿದರು. ಕಥೆಯಲ್ಲಿ 'ಖಿಚಡಿ'ಯ ಉಲ್ಲೇಖವಿದ್ದ ಕಾರಣ, 'ಖಿಚಡಿಯನ್ನು ಹೇಗೆ ಮಾಡುತ್ತಾರೆ?', 'ಗುಬ್ಬಚ್ಚಿ ಖಿಚಡಿ ಮಾಡಲು ಯಾವ ಯಾವ ಧಾನ್ಯಗಳನ್ನು ತಂದಿತು?', 'ನೀವು ಕುರಿ ಕಾಯುವವನನ್ನು ಎಲ್ಲಾದರೂ ನೋಡಿದ್ದೀರಾ?' ಎಂಬ ಪ್ರಶ್ನೆಗಳ ಬಗ್ಗೆ ಸಂವಾದ ನಡೆಸಿದೆವು. ಈ ಸಂವಾದದಿಂದ ಮಕ್ಕಳಿಗೆ

ಕಥೆ ಮತ್ತು ಅದರ ಹಂತಗಳು ಚೆನ್ನಾಗಿ ಅರ್ಥವಾದವು. ಅಂದರೆ, ಯಾವ ಪಾತ್ರದ ಜವಾಬ್ದಾರಿ ಏನು ಮತ್ತು ಯಾವ ಘಟನೆಯ ನಂತರ ಏನು ನಡೆಯುತ್ತದೆ ಎಂಬುದು ಅವರಿಗೆ ಸ್ಪಷ್ಟವಾಯಿತು.

'ನಾನು ಪಾತ್ರಗಳನ್ನು ಮಕ್ಕಳಲ್ಲಿ ಹಂಚಿದಾಗ ಅವರಲ್ಲಿ ಜಗಳವಾಗಿತ್ತು. ಆದ್ದರಿಂದ, ತಮ್ಮ ಪಾತ್ರಗಳನ್ನು ತಾವೇ ನಿರ್ಧರಿಸಲು ಅವರಿಗೆ ಸ್ವಾತಂತ್ರ್ಯ ನೀಡಿದೆ. ಆದರೆ ತಾವೇ ಆರಿಸಿಕೊಂಡಾಗ, ಯಾವ ಪಾತ್ರವನ್ನು ನಿರ್ವಹಿಸಬೇಕೆಂದು ಬಯಸುತ್ತಾರೋ ಅದನ್ನು ಬಹಳ ಆಸಕ್ತಿಯಿಂದ ಮಾಡುತ್ತಿದ್ದರು. ಎಲ್ಲರಿಗೂ ಅವಕಾಶ ಸಿಗಲಿ ಎಂಬ ಉದ್ದೇಶದಿಂದ ನಾನು ಮಕ್ಕಳ ತಂಡಗಳನ್ನು ಮಾಡುತ್ತಿದ್ದೆ ಮತ್ತು ಎಲ್ಲಾ ತಂಡಗಳಿಗೂ ಒಂದೇ ನಾಟಕದ ಸಿದ್ಧತೆ ಮಾಡಿಸುತ್ತಿದ್ದೆ. ಇದರಿಂದ ಕೆಲವು ಮಕ್ಕಳು ಅನಿವಾರ್ಯವಾಗಿ ಗೈರಾದರೂ, ನಾಟಕದ ಪ್ರದರ್ಶನಕ್ಕೆ ಯಾವುದೇ ತೊಂದರೆಯಾಗುತ್ತಿರಲಿಲ್ಲ. ಮಕ್ಕಳಂತೂ ನಾಟಕದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದರು. ಈ ರೀತಿಯಾಗಿ ತರಗತಿಯಲ್ಲಿ ಒಂದೇ ಕಥೆಯ ಮೇಲೆ ನಾಲ್ಕೈದು ತಂಡಗಳಿಂದ ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸಲಾಗುತ್ತಿತ್ತು.

## ನಾಟಕದ ಸೂಕ್ಷ್ಮ ಸಂಗತಿಗಳು

***ರಂಗ ವೇದಿಕೆ ಮತ್ತು ಸಿದ್ಧತೆ***

ಶಿಕ್ಷಕರು ತರಗತಿಯ ಒಂದು ಮೂಲೆಯಲ್ಲಿ ಹಳೆಯ ಸೀರೆಯಿಂದ ತಯಾರಿಸಿದ ಪರದೆಯನ್ನು ಹಾಕಿದ್ದಾರೆ. 'ನಾಟಕ ಪ್ರಾರಂಭಿಸುವ ಮೊದಲು ಮಕ್ಕಳು ಪರದೆಯನ್ನು ಎಳೆಯುತ್ತಾರೆ ಮತ್ತು ಪರದೆಯ ಹಿಂದಿನಿಂದ ಒಬ್ಬೊಬ್ಬರಾಗಿ ಬರುತ್ತಾರೆ. ಚಿಡಾ-ಚಿಡಿಯಾ ಕಥೆಯ ನಾಟಕಕ್ಕಾಗಿ ಅವರಿಗೆ ಗುಬ್ಬಚ್ಚಿಯ ರೆಕ್ಕೆಗಳು ಮತ್ತು ಕೊಕ್ಕನ್ನು ಮಾಡಿಕೊಡುತ್ತೇನೆ. ಅವುಗಳನ್ನು ಧರಿಸಿಕೊಂಡು ಮಕ್ಕಳು ಗುಬ್ಬಚ್ಚಿಯಂತೆ ಜಿಗಿಯುತ್ತಾ ಸಂಭಾಷಣೆಗಳನ್ನು ಹೇಳುತ್ತಾರೆ. ಇದೇ ರೀತಿ, ಇತರ ನಾಟಕಗಳಲ್ಲಿಯೂ ಸಹ ಪಾತ್ರಗಳಿಗೆ ಅಗತ್ಯವಿದ್ದಾಗ ಮಕ್ಕಳ ಸಹಾಯದಿಂದಲೇ ಮುಖವಾಡಗಳನ್ನು ಮಾಡಿಕೊಡುತ್ತೇನೆ' ಎಂದು ಅವರು ಹೇಳುತ್ತಾರೆ.

***ನಿರೂಪಣೆ ಮತ್ತು ಸ್ವತಂತ್ರ ಸಂಭಾಷಣೆಯೊಂದಿಗೆ ನಾಟಕ ಪ್ರಸ್ತುತಿ***

ಇಷ್ಟು ಚಿಕ್ಕ ಮಕ್ಕಳು ನಾಟಕದ ಸಂಭಾಷಣೆಗಳನ್ನು ಹೇಗೆ ಸಿದ್ಧಪಡಿಸುತ್ತಾರೆ ಎಂಬ ಕುತೂಹಲಕಾರಿ ಪ್ರಶ್ನೆ ಎದುರಾಯಿತು. ಅದಕ್ಕೆ ಉತ್ತರಿಸಿದ ಶಿಕ್ಷಕಿಯು, 'ಮಕ್ಕಳಿಗೆ ಎರಡೂ ವಿಧಗಳಲ್ಲಿ ನಾಟಕ ಆಡುವುದು ಇಷ್ಟವಾಗುತ್ತದೆ. ಬೇರೆ ಬೇರೆ ಕಥೆಗಳಿಗೆ ಅನುಗುಣವಾಗಿ ಅವರ ಆಯ್ಕೆಗಳೂ ಬದಲಾಗುತ್ತವೆ. ಉದಾಹರಣೆಗೆ, ಆಸ್ಮಾನ್ ಗಿರಾ ಕಥೆಯಲ್ಲಿ ಆರಂಭಿಕ ಪಾತ್ರಗಳ ಪರಿಚಯದ ನಂತರ ಅವರು ನಿರೂಪಣೆಯ ನೆರವು ಬಯಸುವುದಿಲ್ಲ. ಅವರು, 'ಮೇಡಂ, ನೀವು ಸ್ವಲ್ಪ ತಡೀರಿ! 'ಮಹಾರಾಜರೇ, ಆಕಾಶ ಬಿತ್ತು, ಆಕಾಶ ಬಿತ್ತು' ಎಂದು ನಾವೇ ಸಿಂಹಕ್ಕೆ ಹೇಳುತ್ತೇವೆ' ಎನ್ನುತ್ತಾರೆ. ಮಕ್ಕಳು ತಮ್ಮ ಧ್ವನಿಯಲ್ಲಿ ಪಾತ್ರಕ್ಕೆ ತಕ್ಕಂತೆ ಏರಿಳಿತಗಳನ್ನು ಮಾಡಿಕೊಳ್ಳುತ್ತಾರೆ. ಉದಾಹರಣೆಗೆ, ಸಿಂಹದ ಪಾತ್ರಕ್ಕೆ ಗರ್ಜಿಸಿ ಮಾತನಾಡುವುದು, ಮೊಲದ ಪಾತ್ರಕ್ಕೆ ಮೆತ್ತಗೆ ಮಾತನಾಡುವುದು ಇತ್ಯಾದಿ. ಅದೇ ರೀತಿ, ನೀಲಾ ಫಲ್ ಕಥೆಯು ಚಿಕ್ಕದಾಗಿರುವುದರಿಂದ, ಅದರಲ್ಲಿ ಅವರಿಗೆ ಸ್ವತಃ ಸಂಭಾಷಣೆಗಳನ್ನು ಹೇಳುತ್ತಾ ನಟಿಸುವುದು ಇಷ್ಟ. ಆದರೆ ಚಿಡಾ-ಚಿಡಿಯಾ ಕಥೆ ದೊಡ್ಡದಾಗಿರುವುದರಿಂದ ಮತ್ತು ಪಾತ್ರಗಳು ಹೆಚ್ಚಿರುವುದರಿಂದ, ಅಲ್ಲಿ ಅವರು ನಿರೂಪಣೆಯೊಂದಿಗೆ ನಟಿಸಲು ಇಷ್ಟಪಡುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರು ನಟನೆ ಮತ್ತು ಸಂಭಾಷಣೆಗಳಲ್ಲಿ ತಮ್ಮದೇ ಆದ ಹೊಸ ಅಂಶಗಳನ್ನು ಸೇರಿಸುತ್ತಾರೆ ಅಥವಾ ಬದಲಿಸುತ್ತಾರೆ. ಇದರಲ್ಲಿ ಅವರಿಗೆ ಬಹಳ ಸಂತೋಷ ಸಿಗುತ್ತದೆ' ಎಂದು ವಿವರಿಸಿದರು.

'ನಾಟಕ ಆಡುವುದರಿಂದ ಮಕ್ಕಳ ಹಿಂಜರಿಕೆ ಕಡಿಮೆಯಾಗುತ್ತಿರುವುದು ಮತ್ತು ಅವರಲ್ಲಿ ಆತ್ಮವಿಶ್ವಾಸ ಹೆಚ್ಚುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಈಗ ಹೊರಗಿನವರು ಯಾರೇ ಬಂದರೂ ಮಕ್ಕಳು ಯಾವುದೇ ಭಯವಿಲ್ಲದೆ ನಾಟಕ ಪ್ರದರ್ಶಿಸುತ್ತಾರೆ. ಅವರ ಪೋಷಕರು ಕೂಡ ಮಕ್ಕಳ ನಟನೆಯನ್ನು ಕಂಡು ತುಂಬಾ ಸಂತೋಷಪಡುತ್ತಾರೆ. ನಮ್ಮ ಕೇಂದ್ರದಲ್ಲಿ ಮಕ್ಕಳ ದಾಖಲಾತಿಯೂ ಹೆಚ್ಚಾಗಿದೆ ಮತ್ತು ಈಗ ಅತಿ ಹೆಚ್ಚು ಮಕ್ಕಳು ಅಂಗನವಾಡಿಗೆ ಬರಲಾರಂಭಿಸಿದ್ದಾರೆ' ಎನ್ನುತ್ತಾರೆ ಶಿಕ್ಷಕರು.

> **“ನೀವು ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವರು ಎಷ್ಟು ಕಲ್ಪನಾಶೀಲರು ಎಂಬುದು ನಿಮಗೆ ತಿಳಿಯುತ್ತದೆ. ಅವರಿಗೆ ತಮ್ಮ ನಿತ್ಯದ ಜೀವನದಲ್ಲೂ ಸುಳ್ಳು ಹೇಳುವುದು, ನೆಪ ಹೇಳುವುದು ಮತ್ತು ನಟನೆ ಮಾಡುವುದು ತಿಳಿದಿರುತ್ತದೆ. ಅವರು ಬೇರೆ ಬೇರೆ ಸಂದರ್ಭಗಳಲ್ಲಿ ವಿಭಿನ್ನವಾಗಿ ವರ್ತಿಸುತ್ತಾರೆ; ಏಕೆಂದರೆ ಇದೆಲ್ಲವೂ ನಮ್ಮ ಮೆದುಳಿನ ವಿಕಾಸ ಪ್ರಕ್ರಿಯೆಯ ಒಂದು ಸಹಜ ಭಾಗವಾಗಿದೆ.”**

## ಶಾಲಾ-ಪೂರ್ವ ಶಿಕ್ಷಣ ಮತ್ತು ನಾಟಕ

ಅಲ್ಲದೆ ಶಿಕ್ಷಕರು ಇನ್ನೂ ಅನೇಕ ವಿಷಯಗಳನ್ನು ಹಂಚಿಕೊಂಡರು. ನಾಟಕದ ಕುರಿತು ಕೆಲಸ ಮಾಡುವಾಗ ಶಿಕ್ಷಕರಲ್ಲಿ ಸಾಮಾನ್ಯವಾಗಿ ಕೆಲವು ಭಯಗಳಿರುತ್ತವೆ; ತರಗತಿಯಲ್ಲಿ ಗದ್ದಲವಾಗಬಹುದು, ಮಕ್ಕಳು ಇಲ್ಲಿಂದ ಅಲ್ಲಿಗೆ ಓಡಾಡಬಹುದು ಅಥವಾ ಇಷ್ಟು ಚಿಕ್ಕ ಮಕ್ಕಳಿಗೆ ಸೂಚನೆಗಳು ಅರ್ಥವಾಗದೇ ಇರಬಹುದು ಎಂಬ ಆತಂಕವಿರುತ್ತದೆ. ಆದರೆ ಅದನ್ನೆಲ್ಲಾ ಮೀರಿ ಅದರಲ್ಲಿ ತೊಡಗಿಸಿಕೊಳ್ಳುವ ಶಿಕ್ಷಕರಿಗೆ, ನಾಟಕದ ಮೇಲೆ ಕೆಲಸ ಮಾಡುವುದು ಒಂದು ಬಹು ಆಯಾಮದ ಅನುಭವ ಎಂಬುದು ಮನವರಿಕೆಯಾಗುತ್ತದೆ. ಸಾಮಾನ್ಯವಾಗಿ ನಾಟಕದಿಂದ ಭಾಷೆಯ ಬೆಳವಣಿಗೆಯಾಗುತ್ತದೆ ಎಂದು ನಂಬಲಾಗುತ್ತದೆ. ಆದರೆ ವಾಸ್ತವದಲ್ಲಿ, ಅದರಿಂದ ಕೇವಲ ಭಾಷೆ ಮಾತ್ರವಲ್ಲದೆ, ಮಗುವಿನ ಬೌದ್ಧಿಕ, ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯೂ ಆಗುತ್ತದೆ.

ನಾಟಕ ಆಡುವ ಸಮಯದಲ್ಲಿ ಮಕ್ಕಳ ಎಲ್ಲಾ ಸಾಮರ್ಥ್ಯಗಳೂ (ಉದಾಹರಣೆಗೆ: ಮುಖದ ಹಾವಭಾವಗಳು, ಧ್ವನಿಯ ಏರಿಳಿತ, ದೈಹಿಕ ಚಲನೆ ಮತ್ತು ಸಂವೇದನೆಗಳನ್ನು ಅನುಭವಿಸುವುದು, ದೊಡ್ಡ ಜನಸಮೂಹದ ಮುಂದೆ ವಿಷಯವನ್ನು ಮಂಡಿಸುವುದು, ಕಲ್ಪನಾ ಶಕ್ತಿ, ಸಮಯಪ್ರಜ್ಞೆ ಹಾಗೂ ಕಾರಣ ಮತ್ತು ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಇತ್ಯಾದಿ) ಉತ್ತಮವಾಗಿ ಬಳಕೆಯಾಗುತ್ತವೆ. ಆದ್ದರಿಂದ ನಾಟಕವನ್ನು ಬೋಧನಾ ಪ್ರಕ್ರಿಯೆಯಲ್ಲಿ ಸೇರ್ಪಡೆಗೊಳಿಸುವುದರಿಂದ ದೂರಗಾಮಿ ಫಲಿತಾಂಶಗಳು ಲಭ್ಯವಾಗುತ್ತವೆ. ನಾಟಕದ ಮೂಲಕ ಮಗು ಇಂದು ಗುಂಪಿನಲ್ಲಿ ಏನನ್ನು ಮಾಡುತ್ತಿದೆಯೋ, ಅದನ್ನು ನಾಳೆ ತಾನೊಬ್ಬನೇ ಮಾಡಲು ಸಾಧ್ಯವಾಗುತ್ತದೆ. ತರಗತಿಗಳಲ್ಲಿ ನಾಟಕ ಪ್ರದರ್ಶಿಸಿದ ನಂತರ, ತಾವು ಏನನ್ನು ಉತ್ತಮವಾಗಿ ಮಾಡಿದ್ದೇವೆ ಮತ್ತು ಇನ್ನು ಏನನ್ನು ಸುಧಾರಿಸಿಕೊಳ್ಳಬಹುದು ಎಂದು ಮಕ್ಕಳು ಸ್ವತಃ ಯೋಚಿಸಲು ಶಕ್ತರಾಗುತ್ತಾರೆ.

ಮೀನಾ ಅವರು ಹೇಳುತ್ತಾರೆ, 'ನೀವು ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವರು ಎಷ್ಟು ಕಲ್ಪನಾಶೀಲರು ಎಂಬುದು ನಿಮಗೆ ತಿಳಿಯುತ್ತದೆ. ಅವರಿಗೆ ತಮ್ಮ ನಿತ್ಯದ ಜೀವನದಲ್ಲೂ ಸುಳ್ಳು ಹೇಳುವುದು, ನೆಪ ಹೇಳುವುದು ಮತ್ತು ನಟನೆ ಮಾಡುವುದು ತಿಳಿದಿರುತ್ತದೆ. ಅವರು ಬೇರೆ ಬೇರೆ ಸಂದರ್ಭಗಳಲ್ಲಿ ವಿಭಿನ್ನವಾಗಿ ವರ್ತಿಸುತ್ತಾರೆ; ಏಕೆಂದರೆ ಇದೆಲ್ಲವೂ ನಮ್ಮ ಮೆದುಳಿನ ವಿಕಾಸ ಪ್ರಕ್ರಿಯೆಯ ಒಂದು ಸಹಜ ಭಾಗವಾಗಿದೆ. ಶಾಲೆಗೆ ಹೋಗುವ ಮುನ್ನವೇ ಮಕ್ಕಳು ಏಕಾಂಗಿಯಾಗಿ 'ರೋಲ್-ಪ್ಲೇ' (ಪಾತ್ರ ನಿರ್ವಹಣೆ) ಮಾಡುವುದು ಅಥವಾ ಗೆಳೆಯರೊಂದಿಗೆ ವಿವಿಧ ಪಾತ್ರಗಳನ್ನು ನಿರ್ವಹಿಸುವುದು ಕಂಡುಬರುತ್ತದೆ. ಇದರಲ್ಲಿ ಅವರು ಒಮ್ಮೆ ಪೋಷಕರನ್ನು ಅನುಕರಿಸಿದರೆ,

> **ನಾಟಕದ ಮೂಲಕ ಮಗು ಇಂದು ಗುಂಪಿನಲ್ಲಿ ಏನನ್ನು ಮಾಡುತ್ತಿದೆಯೋ, ಅದನ್ನು ನಾಳೆ ತಾನೊಬ್ಬನೇ ಮಾಡಲು ಸಾಧ್ಯವಾಗುತ್ತದೆ.**

ಇನ್ನೊಮ್ಮೆ ಕುಟುಂಬದ ಇತರ ಸದಸ್ಯರನ್ನು ಅನುಕರಿಸುತ್ತಿರುತ್ತಾರೆ. ಮಕ್ಕಳಲ್ಲಿರುವ ಈ ಸಹಜ ಸಾಮರ್ಥ್ಯವನ್ನು ನಾಟಕದ ಮೂಲಕ ಇನ್ನಷ್ಟು ಮೆರುಗುಗೊಳಿಸಲು ನಾನು ಪ್ರಯತ್ನಿಸಿದ್ದೇನೆ.'

## ಕಾರ್ಯನೀತಿ ದಾಸ್ತಾವೇಜುಗಳಲ್ಲಿ ಕಲಾ ಶಿಕ್ಷಣ

ರಾಷ್ಟ್ರೀಯ ಶಿಕ್ಷಣ ನೀತಿಯು (NEP 2020) ಶಾಲಾ-ಪೂರ್ವ ಶಿಕ್ಷಣದಲ್ಲಿ ಚಿತ್ರಕಲೆ, ಪೇಂಟಿಂಗ್, ಇತರ ದೃಶ್ಯ ಕಲೆಗಳು, ಕರಕುಶಲ ಕಲೆ, ನಾಟಕ, ಗೊಂಬೆಯಾಟ, ಸಂಗೀತ, ನೃತ್ಯ ಮತ್ತು ದೈಹಿಕ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದನ್ನು ಬಲವಾಗಿ ಪ್ರತಿಪಾದಿಸುತ್ತದೆ.

ಕಲೆ ಮತ್ತು ಕರಕುಶಲತೆಯು ಮಕ್ಕಳಿಗೆ ತಮ್ಮ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಮತ್ತೊಂದು ಮಾಧ್ಯಮವನ್ನು ಒದಗಿಸುತ್ತದೆ ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಶಿಕ್ಷಣ ನೀತಿ 2022 ಹೇಳುತ್ತದೆ. ಶಾಲಾ-ಪೂರ್ವ ಶಿಕ್ಷಣದಲ್ಲಿ ಕಲೆಗೆ ಸಂಬಂಧಿಸಿದ ಕಲಿಕಾ ಫಲಿತಗಳು ಸ್ಥೂಲವಾಗಿ ಈ ಕೆಳಗಿನಂತಿವೆ:


- ಮಕ್ಕಳು ವಿವಿಧ ಕಲಾ ಸಾಮಗ್ರಿಗಳನ್ನು ಹಿಡಿದುಕೊಳ್ಳುವುದನ್ನು ಮತ್ತು ಅವುಗಳನ್ನು ಬಳಸುವುದನ್ನು ಕಲಿಯುವುದು;
- ಶರೀರದ ಮೂಲಕ ಲಯ ಮತ್ತು ತಾಳವನ್ನು ಅನ್ವೇಷಿಸುವುದು;
- ಆಲೋಚನೆಗಳನ್ನು ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಸಂಗೀತ ಮತ್ತು ನಾಟಕವನ್ನು ಬಳಸುವುದು;
- ಕಲೆಯ ಮೂಲಕ ವಿವಿಧ ಅಭಿವ್ಯಕ್ತಿಗಳು, ಆಲೋಚನೆಗಳು ಮತ್ತು ಭಾವನೆಗಳನ್ನು ಗುರುತಿಸುವುದು; ಇತ್ಯಾದಿ.

ಮಗುವಿನ ಐದೂ ಇಂದ್ರಿಯಗಳನ್ನು ವಿಕಸನಗೊಳಿಸುವುದು ಶಾಲಾ-ಪೂರ್ವ ಶಿಕ್ಷಣದಲ್ಲಿ ಕಲಾ ಶಿಕ್ಷಣದ ಪ್ರಮುಖ ಉದ್ದೇಶವಾಗಿದೆ. ಹೀಗಾಗಿ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗುವಂತೆ ಮಾಡಲು, ಪಠ್ಯಕ್ರಮವು ಕಲೆಗೆ ಸಂಬಂಧಿಸಿದ ವಿವಿಧ ಅನುಭವಗಳನ್ನು ಒದಗಿಸುವ ಸಾಕಷ್ಟು ಅವಕಾಶಗಳನ್ನು ಹೊಂದಿರಬೇಕು. ಮಕ್ಕಳಿಗೆ ನಾಟಕ, ಗಾಯನ-ಸಂಗೀತ, ನೃತ್ಯ ಮತ್ತು ಚಿತ್ರಕಲೆಯಂತಹ ವಿವಿಧ ಮಾಧ್ಯಮಗಳೊಂದಿಗೆ ಒಡನಾಟ ಬೆಳೆಸಿಕೊಳ್ಳಲು ಅವಕಾಶ ನೀಡಿದಾಗ ಮಾತ್ರ ಇಂತಹ ಅಭಿವೃದ್ಧಿಯು ಸಾಧ್ಯವಾಗುತ್ತದೆ. ಈ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಶಾಲಾ-ಪೂರ್ವ ಶಿಕ್ಷಣದ ಹಂತವು ಅತ್ಯಂತ ಸೂಕ್ತ ಹಾಗೂ ಉಪಯುಕ್ತವಾಗಿದೆ.

## ಅಂತಿಮನುಡಿ

ಕಲೆಯಲ್ಲಿ ಕೇವಲ ಅಂತಿಮ ಪ್ರದರ್ಶನವಷ್ಟೇ ಮುಖ್ಯವಲ್ಲ; ಬದಲಿಗೆ ಅಂತಿಮ ಪ್ರದರ್ಶನಕ್ಕೆ ತಯಾರಾಗುವ ಇಡೀ ಪ್ರಕ್ರಿಯೆಯು ಬಹಳ ಮಹತ್ವದ್ದಾಗಿರುತ್ತದೆ. ಈ ಕಲಿಕೆಯ ಅವಧಿಯಲ್ಲಿ ಮಕ್ಕಳು ಹೊಸದಾಗಿ ಏನು ಕಲಿತರು ಮತ್ತು ಏನನ್ನು ಸಾಧಿಸಿದರು ಎಂಬುದು ಗಮನಿಸಬೇಕಾದ ವಿಷಯ. ಇಲ್ಲಿ ಮಕ್ಕಳಿಗೆ ಏನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂಬುದನ್ನು ತಾವೇ ನಿರ್ಧರಿಸಲು ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು. ಮಕ್ಕಳು ಕಥೆಗಳನ್ನು ಆಸಕ್ತಿಯಿಂದ ಕೇಳಿಸಿಕೊಂಡರು ಮತ್ತು ಅರ್ಥಮಾಡಿಕೊಂಡರು. ನಾಟಕದಲ್ಲಿ ತಮಗೆ ಯಾವಾಗ ನಿರೂಪಣೆಯ ಅಗತ್ಯವಿದೆ ಮತ್ತು ಯಾವಾಗ ತಾವೇ ಸಂಭಾಷಣೆಗಳನ್ನು ಹೇಳಬಹುದು ಎಂಬುದನ್ನು ಕೂಡ ಅವರೇ ನಿರ್ಧರಿಸಿದರು. ಶಿಕ್ಷಕರಿಗೆ ಮಕ್ಕಳ ಮೇಲಿದ್ದ ಅಚಲ ನಂಬಿಕೆ ಮತ್ತು ಪ್ರೇರಣೆಯಿಂದಾಗಿಯೇ ಇದೆಲ್ಲವೂ ಸಾಧ್ಯವಾದದ್ದು. ಅವರ ಈ ನಂಬಿಕೆಯ ಫಲವಾಗಿಯೇ, ಈ ಅಂಗನವಾಡಿಯಲ್ಲಿ 4-5 ವರ್ಷದ ಮಕ್ಕಳು, ಸಾಮಾನ್ಯವಾಗಿ ದೊಡ್ಡ ಮಕ್ಕಳು ಮತ್ತು ಅವರ ಶಿಕ್ಷಕರಿಗೂ ಕಷ್ಟವೆನಿಸುವ ಕೆಲಸವನ್ನು ಅತ್ಯಂತ ಸುಲಲಿತವಾಗಿಯೂ ಯಶಸ್ವಿಯಾಗಿಯೂ ಮಾಡಿ ತೋರಿಸುತ್ತಿದ್ದಾರೆ.

---



**ಪಾರುಲ್ ಬಾತ್ರಾ** ದುಗ್ಗಲ್ ಅವರು 2013 ರಿಂದ ಭೋಪಾಲ್‌ನಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್, ಭೋಪಾಲ್‌ನಲ್ಲಿ ಕೆಲಸಮಾಡುತ್ತಿದ್ದಾರೆ. ಇವರು ಮಕ್ಕಳ ಆರಂಭಿಕ ಓದು ಮತ್ತು ಬರವಣಿಗೆಯ ಪ್ರಕ್ರಿಯೆಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದು, ಪ್ರಸ್ತುತ ಪೂರ್ವ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಕಳೆದ ಹಲವು ವರ್ಷಗಳಲ್ಲಿ ಮಕ್ಕಳಿಗಾಗಿ ಹಲವಾರು ಪುಸ್ತಕಗಳನ್ನು ಸಹ ಬರೆದು ಪ್ರಕಟಿಸಿದ್ದಾರೆ.

ಸಂಪರ್ಕ: ಇವರನ್ನು parul.duggal@azimpremjifoundation.org

ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಅನುರೂಪಾ ರವೀಂದ್ರ

# ಆರಂಭಿಕ ಬಾಲ್ಯದ ಹಂತದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳು

ಭುವನೇಶ್ವರಿ ಬಿ

**ಎಲ್ಲಾ ಮಕ್ಕಳೂ ಸಾಮಾನ್ಯವಾಗಿ ಒಂದೇ ಹಾದಿಯಲ್ಲಿ ಬೆಳೆಯುತ್ತಾರೆ, ಆದರೆ ಎಲ್ಲರ ಬೆಳವಣಿಗೆಯ ವೇಗ ಒಂದೇ ರೀತಿ ಇರುವುದಿಲ್ಲ. ಮಗುವಿನ ವಯಸ್ಸಿಗೆ ತಕ್ಕ ಬೆಳವಣಿಗೆಯ ಹಂತಗಳನ್ನು ತಿಳಿದುಕೊಳ್ಳುವುದು ಶಿಕ್ಷಕರಿಗೆ ಬಹಳ ಮುಖ್ಯ. ಇದರಿಂದ ಮಗುವಿನ ಬೆಳವಣಿಗೆಯಲ್ಲಿ ಏನಾದರೂ ತೊಂದರೆ ಅಥವಾ ಕಾಳಜಿ ವಹಿಸಬೇಕಾದ ಅಂಶಗಳಿವೆಯೇ ಎಂಬುದನ್ನು ಗುರುತಿಸಲು ಸಹಾಯವಾಗುತ್ತದೆ. ಆದರೆ ನೆನಪಿರಲಿ, ಈ ಹಂತಗಳು ಕೇವಲ ಒಂದು ಅಂದಾಜಷ್ಟೇ ಹೊರತು, ಅವು ಮಕ್ಕಳ ಪಾಲಿನ 'ಡೆಡ್‌ಲೈನ್' ಅಥವಾ ಕಡ್ಡಾಯ ಗಡುವುಗಳಲ್ಲ.**



ಚಿತ್ರ 1: ವಿವಿಧ ಸಾಮರ್ಥ್ಯವುಳ್ಳ ಮಕ್ಕಳ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದಕ್ಕೆ ತಕ್ಕಂತೆ ಕಲಿಕಾ ಚಟುವಟಿಕೆಗಳನ್ನು ವಿನ್ಯಾಸಗೊಳಿಸುವುದು ಬಹಳ ಮುಖ್ಯ.

ಅಮೋಘನಿಗೆ ನಾಲ್ಕು ವರ್ಷ ವಯಸ್ಸು. ಅವನು ಕಳೆದ ಎರಡು ವಾರಗಳಿಂದ ಅಂಗನವಾಡಿಗೆ ಬರುತ್ತಿದ್ದಾನೆ. ಆರಂಭದಲ್ಲಿ ಅವನು ಯಾರೊಂದಿಗೂ ಆಟವಾಡಲು ಇಷ್ಟಪಡುತ್ತಿರಲಿಲ್ಲ, ಇದನ್ನು ಕಂಡು ಶಿಕ್ಷಕರು ಸ್ವಲ್ಪ ಚಿಂತಿತರಾಗಿದ್ದರು. ಆದರೆ ಒಂದು ದಿನ ಆಟದ ಸಮಯದಲ್ಲಿ, ಅಮೋಘನು ಒಂದು ಸಣ್ಣ ಗುಂಪಿನೊಂದಿಗೆ ಬೆರೆತು ಆಟವಾಡಲು ಪ್ರಾರಂಭಿಸಿದ್ದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಅಂದಿನಿಂದ ಅವನು ಎಂದೂ ಹಿಂದೆ ತಿರುಗಿ ನೋಡಲಿಲ್ಲ; ಅವನು ಅತ್ಯಂತ ಹರ್ಷಚಿತ್ತದ, ತುಂಟ ಹಾಗೂ ಉತ್ಸಾಹಭರಿತ ಮಗುವಾಗಿ ಬದಲಾದನು.

ಅದೇ ಶಿಕ್ಷಕರು ಕಳೆದ ನಾಲ್ಕು ತಿಂಗಳಿನಿಂದ ಅನಿಶಾ ಎಂಬ ಮಗುವಿನೊಂದಿಗೂ ಕೆಲಸ ಮಾಡುತ್ತಿದ್ದಾರೆ. ಅನಿಶಾ ತನ್ನ ಸಹಪಾಠಿಗಳೊಂದಿಗೆ ಆಟವಾಡುವುದನ್ನು ಯಾವಾಗಲೂ ತಪ್ಪಿಸುತ್ತಾಳೆ; ಯಾರಾದರೂ ಅವಳ ಜೊತೆ ಆಟವಾಡಲು ಬಂದರೆ ಅವಳಿಗೆ ಕಿರಿಕಿರಿಯಾಗುತ್ತದೆ. ಅವಳು ಕಲ್ಪನಾಧಾರಿತ ಆಟಗಳಲ್ಲಿ, ಅಂದರೆ ವೈದ್ಯರ ಕಿಟ್ ಬಳಸಿ ಡಾಕ್ಟರ್-ರೋಗಿಯಂತೆ ನಟಿಸುವ ಆಟಗಳಲ್ಲಿ ಎಂದಿಗೂ ಭಾಗವಹಿಸುತ್ತಿರಲಿಲ್ಲ. ಬೇರೆಯವರೊಂದಿಗೆ ಮಾತನಾಡುವಾಗ ಅವಳು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರಲಿಲ್ಲ, ಅಂದರೆ ಕಣ್ತಪ್ಪಿಸಿ ಮಾತನಾಡುತ್ತಿದ್ದಳು. ಸಣ್ಣಪುಟ್ಟ ಶಬ್ದಗಳಿಗೂ ಬೆಚ್ಚಿಬೀಳುತ್ತಿದ್ದಳು ಮತ್ತು ಅಳಲು ಪ್ರಾರಂಭಿಸುತ್ತಿದ್ದಳು. ಅಮೋಘನಂತೆ ಈಕೆ ಕೂಡ ಕ್ರಮೇಣ ಎಲ್ಲರೊಂದಿಗೆ ಬೆರೆಯಬಲ್ಲಳೇ ಅಥವಾ ತಾನು ತಜ್ಞರ ಸಹಾಯವನ್ನು ಪಡೆಯಬೇಕೇ ಎಂದು ಶಿಕ್ಷಕರು ಗಂಭೀರವಾಗಿ ಯೋಚಿಸತೊಡಗಿದರು.

ಮಕ್ಕಳ ಇಂತಹ ಕೆಲವು ಪರಿಸ್ಥಿತಿಗಳು ಶಿಕ್ಷಕರ ಮನಸ್ಸಿನಲ್ಲಿ ಅನಿಶ್ಚಿತತೆಯನ್ನು ಉಂಟುಮಾಡುತ್ತವೆ. ಮಗುವಿನ ಆರಂಭಿಕ ವರ್ಷಗಳಲ್ಲಿ ಅವರ ಕಲಿಕೆಗೆ ಸಹಾಯ ಮಾಡುವ ಶಿಕ್ಷಕಿಯರು ಅಥವಾ ಪಾಲಕರು, ಆ ಮಕ್ಕಳ ವಿಕಾಸದ ಪಯಣದ ಕುರಿತು ಮೊದಲು ಸ್ಪಂದಿಸುವವರಾಗಿರುತ್ತಾರೆ. ಇವರೇ ಕೆಲವು ಮಕ್ಕಳಲ್ಲಿ ಕಂಡುಬರುವ ಆ ಸೂಕ್ಷ್ಮ ವರ್ತನೆಗಳನ್ನು ಗುರುತಿಸುವಲ್ಲಿ ಮೊದಲಿಗರಾಗಿರುತ್ತಾರೆ; ಆದರೆ ಈ ವರ್ತನೆಗಳು ಯಾವಾಗಲೂ ತಕ್ಷಣಕ್ಕೆ ಕಣ್ಣಿಗೆ ಬೀಳುವುದಿಲ್ಲ. ಈ ವರ್ತನೆಗಳು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳಬಹುದು: ಮಾತು ಕಲಿಯುವ ಪ್ರಕ್ರಿಯೆಯಲ್ಲಿ ಸ್ವಲ್ಪ ವಿಳಂಬವಾಗುವುದು, ಕೆಲವು ಸೂಕ್ಷ್ಮ ಚಲನಾ ಕೌಶಲಗಳನ್ನು ಬೇಡುವ ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ತೊಂದರೆ ಎದುರಿಸುವುದು, ಶಬ್ದ ಅಥವಾ ಪ್ರಕಾಶಮಾನವಾದ ಬೆಳಕಿನಂತಹ ಪ್ರಚೋದನೆಗಳಿಗೆ ವಿಭಿನ್ನ ಅಥವಾ ತೀವ್ರವಾದ ಪ್ರತಿಕ್ರಿಯೆಗಳನ್ನು ನೀಡುವುದು, ಅಥವಾ ಸಹಪಾಠಿಗಳೊಂದಿಗೆ

ಮಾತನಾಡಲು ಮತ್ತು ಅವರ ಜೊತೆಗೂಡಿ ಆಟವಾಡಲು ಕಷ್ಟಪಡುವುದು ಇತ್ಯಾದಿ.

ಕೆಲವೊಮ್ಮೆ ಪೋಷಕರಿಗೂ ಸಹ ಇಂತಹ ವರ್ತನೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಅವರು ಅರ್ಥಮಾಡಿಕೊಂಡರೂ ಸಹ, ಈ ವಿಷಯಗಳ ಕುರಿತು ಶಾಲೆಯಲ್ಲಿ ಗಮನ ಹರಿಸಬಹುದು ಎಂದು ಆಶಿಸುತ್ತಾರೆ. ಪೋಷಕರ ಈ ನಿರೀಕ್ಷೆಗಳು ಸ್ವಾಭಾವಿಕವಾಗಿದ್ದರೂ, ಇಂತಹ ವರ್ತನೆಗಳನ್ನು ಸರಿಯಾದ ಸಮಯದಲ್ಲಿ ಗಮನಿಸದಿದ್ದರೆ ಅಥವಾ ವರದಿ ಮಾಡದಿದ್ದರೆ, ಅವು ಮಕ್ಕಳ ದೀರ್ಘಕಾಲೀನ ಬೆಳವಣಿಗೆಯ ಮೇಲೆ ಗಮನಾರ್ಹ ಪರಿಣಾಮ ಬೀರಬಹುದು.

ಬೆಳವಣಿಗೆಯ ಹಂತಗಳಲ್ಲಿನ ಇಂತಹ ನಿರಂತರ ವಿಳಂಬಗಳು ಮುಂದೆ ಬೆಳವಣಿಗೆಯ ನ್ಯೂನತೆಗಳಾಗಿ (Developmental Disorders) ಬದಲಾಗಬಹುದು. ಆರಂಭಿಕ ವರ್ಷಗಳಲ್ಲಿ ಮಕ್ಕಳಲ್ಲಿ ಕಂಡುಬರುವ ಸಾಮಾನ್ಯ ವೈಕಲ್ಯಗಳಲ್ಲಿ ಸಂವಹನ, ಮಾತು ಮತ್ತು ಭಾಷಾ ನ್ಯೂನತೆಗಳು, ಬೌದ್ಧಿಕತೆಯ ಕೊರತೆ, ಶ್ರವಣ ದೋಷ, ದೃಷ್ಟಿ ದೋಷಗಳು, ದೈಹಿಕ ವಿಕಲತೆ, ಆಟಿಸಂ ಮುಂತಾದವು ಸೇರಿವೆ. ಕೆಲವು ಅಸಮರ್ಥತೆಗಳನ್ನು ಸುಲಭವಾಗಿ ಗುರುತಿಸಬಹುದು, ಆದರೆ ಉಳಿದವುಗಳನ್ನು ಗುರುತಿಸಿ ಅರ್ಥಮಾಡಿಕೊಳ್ಳುವುದು ಅಷ್ಟೊಂದು ಸುಲಭವಲ್ಲ.

***ವಿಳಂಬ ಮತ್ತು ಕಲಿಕೆಯ ತೊಂದರೆಗಳನ್ನು ಗುರುತಿಸುವಲ್ಲಿ ಶಿಕ್ಷಕಿಯರಿಗೆ ಉತ್ತಮ ಅವಕಾಶಗಳಿರುತ್ತವೆ. ಹೇಗೆ?***

ಶಿಕ್ಷಕಿಯರು ಮಕ್ಕಳನ್ನು ನೋಡಿಕೊಳ್ಳುತ್ತಾ, ಅವರೊಂದಿಗೆ ಪ್ರತಿ ದಿನ ಹಲವಾರು ಗಂಟೆಗಳನ್ನು ಕಳೆಯುತ್ತಾರೆ. ಅವರು ತರಗತಿಯಲ್ಲಿ ಮಾತ್ರವಲ್ಲದೆ, ಆಟದ ಮತ್ತು ಊಟದ ಸಮಯದಲ್ಲೂ ಮಕ್ಕಳನ್ನು ಗಮನಿಸಲು ಸಾಧ್ಯವಾಗುತ್ತದೆ. ಇದು ಬೇರೆಯವರ ಗಮನಕ್ಕೆ ಬಾರದೇ ಹೋಗಬಹುದಾದ ಮಕ್ಕಳ ಭಿನ್ನ ಸಾಮರ್ಥ್ಯದ ನಡವಳಿಕೆಗಳನ್ನು ಗುರುತಿಸುವ ವಿಶಿಷ್ಟ ಅವಕಾಶವನ್ನು ಶಿಕ್ಷಕಿಯರಿಗೆ ನೀಡುತ್ತದೆ.

***ಶಿಕ್ಷಕಿಯರು ಅಥವಾ ಅಂಗನವಾಡಿ ಕಾರ್ಯಕರ್ತೆಯರು ತಿಳಿದಿರಬೇಕಾದ ವಿಷಯಗಳು:***

1. ಬೆಳವಣಿಗೆಯ ಹಂತಗಳನ್ನು ತಿಳಿದುಕೊಳ್ಳುವುದು: ಒಂದು ನಿರ್ದಿಷ್ಟ ವಯಸ್ಸಿನ ಮಗುವಿನಿಂದ ಸಾಮಾನ್ಯವಾಗಿ ಏನನ್ನು ನಿರೀಕ್ಷಿಸಬಹುದು ಎಂಬುದರ ಬಗ್ಗೆ ಶಿಕ್ಷಕಿಯರು ಅಥವಾ ಅಂಗನವಾಡಿ ಕಾರ್ಯಕರ್ತೆಯರು ತಿಳಿದಿರಬೇಕು. ಉದಾಹರಣೆಗೆ, ಮೂರು ವರ್ಷದ ಮಗುವಿಗೆ ವಾಕ್ಯಗಳನ್ನು ಬಳಸಿ ಮಾತನಾಡಲು ಸಾಧ್ಯವಾಗಬೇಕು. ಆದರೆ ಒಂದು ಮಗು ನಾಲ್ಕು ವರ್ಷವಾದರೂ ಸಣ್ಣಪುಟ್ಟ ವಾಕ್ಯಗಳನ್ನು ಬಳಸಲು ಕಷ್ಟಪಡುತ್ತಿದ್ದರೆ ಅಥವಾ ಅದರ ಶಬ್ದಭಂಡಾರವು ತುಂಬಾ ಸೀಮಿತವಾಗಿದ್ದರೆ, ಅಂತಹ ಮಗುವನ್ನು ಮುಂದಿನ ಹಂತದ ಮೌಲ್ಯಮಾಪನಕ್ಕೆ ಶಿಫಾರಸು ಮಾಡಬೇಕಾಗುತ್ತದೆ.

2. ವಸ್ತುನಿಷ್ಠವಾಗಿ ಗಮನಿಸುವುದು: ಶಿಕ್ಷಕಿಯರು ಮಕ್ಕಳ ಬಗ್ಗೆ ಯಾವುದೇ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು ಮತ್ತು ನಿರಂತರವಾಗಿ ಅವರನ್ನು ಗಮನಿಸುತ್ತಿರಬೇಕು. ಉದಾಹರಣೆಗೆ, ಮಗುವಿನ ಕಲಿಕೆಯ ಬಗ್ಗೆ ಅಭಿಪ್ರಾಯ ಹೇಳುವಾಗ "ಅವನು ಗಣಿತದಲ್ಲಿ ತುಂಬಾ ಹಿಂದಿದ್ದಾನೆ" ಎಂದು ಸಾರಾಸಗಟಾಗಿ ಬರೆಯುವ ಬದಲು, ಶಿಕ್ಷಕರು ಈ ರೀತಿ ಬರೆಯಬಹುದು: "ಹೆಚ್ಚುವರಿ ಸಮಯವನ್ನು ನೀಡಿದಾಗಲೂ ಅವನು ಮೂರು ಗಣಿತದ ಪ್ರಶ್ನೆಗಳನ್ನು ಪರಿಹರಿಸಲಿಲ್ಲ ಮತ್ತು ಉಳಿದ ಎರಡು ಪ್ರಶ್ನೆಗಳಲ್ಲಿ ಸಂಕಲನ (+) ಹಾಗೂ ವ್ಯವಕಲನ (–) ಚಿಹ್ನೆಗಳನ್ನು ಪರಸ್ಪರ ಅದಲುಬದಲು ಮಾಡಿಕೊಂಡನು". ಇಂತಹ ನಿಖರವಾದ ಮಾಹಿತಿ ಮಗುವಿನ ನಿಜವಾದ ಸವಾಲನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

3. ಸಾಧ್ಯವಾದಾಗ ಅಥವಾ ಅಗತ್ಯವಿದ್ದಾಗ ಸ್ಕ್ರೀನಿಂಗ್ ಪರಿಕರಗಳನ್ನು ಬಳಸುವುದು: ಶಿಕ್ಷಕಿಯರು ವೈದ್ಯಕೀಯ ತಪಾಸಣೆ ಅಥವಾ ರೋಗನಿರ್ಣಯ ಮಾಡಲು ಸಾಧ್ಯವಿಲ್ಲ. ಆದರೆ, ಮಗುವು ತನ್ನ ವಯಸ್ಸಿಗೆ ಅನುಗುಣವಾದ ನಿರೀಕ್ಷೆಗಳನ್ನು ಪೂರೈಸುತ್ತಿದೆಯೇ ಎಂಬುದನ್ನು ಅರ್ಥಮಾಡಿಕೊಳ್ಳಲು ಸರಳವಾದ ಸ್ಕ್ರೀನಿಂಗ್ ಪರಿಕರಗಳು ಅಥವಾ ಚೆಕ್-ಲಿಸ್ಟ್‌ಗಳನ್ನು ಬಳಸಬಹುದು. ತದನಂತರ ಹೆಚ್ಚಿನ ತಪಾಸಣೆಗಾಗಿ ತಜ್ಞರ ಮೌಲ್ಯಮಾಪನಕ್ಕೆ ಶಿಫಾರಸು ಮಾಡಬಹುದು.



ಚಿತ್ರ 2: ಗುಂಪಿನಲ್ಲಿ ಶಾಂತವಾಗಿರುವ ಮಗು, ಶಿಕ್ಷಕರೊಂದಿಗೆ ಒಬ್ಬಂಟಿಯಾಗಿರುವಾಗ ಹೆಚ್ಚು ಮಾತನಾಡಬಹುದು.

4. ಅವಲೋಕನಗಳನ್ನು ಉದಾಹರಣೆಗಳ ಸಮೇತ ದಾಖಲಿಸುವುದು: ಶಿಕ್ಷಕಿಯರು ಮಕ್ಕಳ ನಡವಳಿಕೆಯಲ್ಲಿ ಕಂಡುಬರುವ ಪುನರಾವರ್ತನೆಗಳನ್ನು ಮತ್ತು ಅವು ಸಂಭವಿಸುವ ಸಂದರ್ಭಗಳನ್ನು ಗಮನಿಸಬೇಕು. ಇವುಗಳ ಮೂಲಕ ಮಗುವಿನ ವರ್ತನೆಯಲ್ಲಿ ಒಂದು ನಿರ್ದಿಷ್ಟ ಮಾದರಿಯನ್ನು (Pattern) ಪತ್ತೆಹಚ್ಚಲು ಪ್ರಯತ್ನಿಸಬೇಕು. ಮಗುವಿನ ಸ್ಥಿತಿಯನ್ನು ವಿವರಿಸಲು ಅವರು ಬಿಡಿಸಿದ ಚಿತ್ರಗಳು, ಪೂರ್ಣಗೊಳಿಸಿದ ವರ್ಕ್‌ಶೀಟ್‌ಗಳು ಮತ್ತು ಬರವಣಿಗೆಯ ಮಾದರಿಗಳನ್ನು ಬಳಸಬಹುದು. ಪೋಷಕರು ಅಥವಾ ತಜ್ಞರೊಂದಿಗೆ ಚರ್ಚಿಸುವಾಗ ಈ ದಾಖಲೆಗಳನ್ನು ಪುರಾವೆಯಾಗಿ ಬಳಸಲು ಸಾಧ್ಯವಾಗುತ್ತದೆ.


***ಶಿಕ್ಷಕರು ಏನನ್ನು ನೆನಪಿಟ್ಟುಕೊಳ್ಳಬೇಕು?***

ಎಲ್ಲಾ ಮಕ್ಕಳು ನಿರಂತರವಾದ ಒಂದು ಕ್ರಮದಲ್ಲಿ ಬೆಳೆಯುತ್ತಾರೆ, ಆದರೆ ಎಲ್ಲರ ಬೆಳವಣಿಗೆಯ ವೇಗ ಒಂದೇ ರೀತಿ ಇರುವುದಿಲ್ಲ. ಮಕ್ಕಳ ಬೆಳವಣಿಗೆಯ ಮುಖ್ಯ ಹಂತಗಳನ್ನು ತಿಳಿದುಕೊಳ್ಳುವುದರಿಂದ, ಸಂಭವನೀಯ ಸವಾಲುಗಳ ಸೂಚನೆ ನೀಡುವ ಲಕ್ಷಣಗಳನ್ನು ಗುರುತಿಸಲು ಶಿಕ್ಷಕರಿಗೆ ಸುಲಭವಾಗುತ್ತದೆ. ಆದಾಗ್ಯೂ, ಈ ಪ್ರಮುಖ ಹಂತಗಳನ್ನು ಕಟ್ಟುನಿಟ್ಟಾದ 'ಗಡುವು' ಎಂದು ಪರಿಗಣಿಸಬಾರದು. ಉದಾಹರಣೆಗೆ, 18 ತಿಂಗಳ ಒಂದು ಮಗು 10-15 ಪದಗಳನ್ನು ಮಾತನಾಡಬಹುದು, ಅದೇ ವಯಸ್ಸಿನ ಇನ್ನೊಂದು ಮಗು ಪದಗಳನ್ನು ಸಂಯೋಜಿಸಿ ವಾಕ್ಯಗಳನ್ನೇ ಆಡಲು ಪ್ರಾರಂಭಿಸಬಹುದು. ಈ ಎರಡೂ ಸಂದರ್ಭಗಳು ನಿರೀಕ್ಷಿತ ಬೆಳವಣಿಗೆಯ ವ್ಯಾಪ್ತಿಯಲ್ಲಿಯೇ ಇರುತ್ತವೆ. ಅಲ್ಲದೆ, ಮಗುವಿನ ವಿಭಿನ್ನ ನಡವಳಿಕೆಯ ಅರ್ಥ ಯಾವಾಗಲೂ 'ವಿಳಂಬ' ಎಂದೇ ಆಗಿರಬೇಕಿಲ್ಲ. ಶಾಲೆಯ ಗುಂಪಿನಲ್ಲಿ ಶಾಂತವಾಗಿರುವ ಮಗುವು, ಮನೆಯಲ್ಲಿ ಅಥವಾ ಶಿಕ್ಷಕರೊಂದಿಗೆ ಏಕಾಂಗಿಯಾಗಿದ್ದಾಗ ತನ್ನ ಮಾತೃಭಾಷೆಯಲ್ಲಿ ಬಹಳ ವಾಚಾಳಿಯಾಗಿರಬಹುದು.

***ಶಿಕ್ಷಕಿಯರು ಮಗುವಿನ ಮೌಲ್ಯಮಾಪನವನ್ನು ಯಾವಾಗ ಮಾಡಿಸಬೇಕು?***

ಮಗುವಿನಲ್ಲಿ ಈ ಕೆಳಗಿನ ವರ್ತನೆಗಳು ಅಥವಾ ಲಕ್ಷಣಗಳು ಕಂಡುಬಂದಾಗ ಮೌಲ್ಯಮಾಪನದ ಬಗ್ಗೆ ಯೋಚಿಸಬೇಕು:

- ಮಗುವಿಗೆ ಎರಡು ವರ್ಷ ವಯಸ್ಸಾಗುವ ಹೊತ್ತಿಗೆ ಅದರ ಶಬ್ದಭಂಡಾರದಲ್ಲಿ ಕನಿಷ್ಠ 50 ಅರ್ಥಪೂರ್ಣ ಪದಗಳಿಲ್ಲದಿರುವುದು.




ಚಿತ್ರ 3: ಪ್ರತಿ ಮಗುವಿನ ನಡವಳಿಕೆಯ ಮಾದರಿಯನ್ನು (Behavioural pattern) ಗಮನಿಸಲು ಮತ್ತು ದಾಖಲಿಸಲು ಒಂದು ಉಪಯುಕ್ತ ವಿಧಾನ.

- ಮೂರು ವರ್ಷ ವಯಸ್ಸಿನ ಹೊತ್ತಿಗೆ, ಮಗುವಿಗೆ ಸಣ್ಣ ವಾಕ್ಯಗಳಲ್ಲಿ ಮಾತನಾಡಲು ಸಾಧ್ಯವಾಗದಿರುವುದು.
- ಎರಡು ವರ್ಷ ವಯಸ್ಸಾದರೂ ಮಗುವಿಗೆ ಸ್ವತಂತ್ರವಾಗಿ ನಡೆಯಲು ಸಾಧ್ಯವಾಗದಿರುವುದು.
- ಮಗು ಯಾರೊಂದಿಗೂ ಕಣ್ಣಿನ ಸಂಪರ್ಕ ಸಾಧಿಸಲು ಹಿಂಜರಿಯುವುದು ಮತ್ತು ಊಹಿಸುವ ಅಥವಾ ಕಲ್ಪನಾಧಾರಿತ ಆಟಗಳಲ್ಲಿ ತೊಡಗಿಸಿಕೊಳ್ಳದಿರುವುದು.
- ದೈನಂದಿನ ಸಾಮಾನ್ಯ ಶಬ್ದಗಳಿಗೆ ಮಿತಿಮೀರಿ ಪ್ರತಿಕ್ರಿಯಿಸುವುದು (ಉದಾಹರಣೆಗೆ: ಕಿವಿ ಮುಚ್ಚಿಕೊಳ್ಳುವುದು) ಅಥವಾ ಕೆಲವು ನಿರ್ದಿಷ್ಟ ವಸ್ತುಗಳನ್ನು/ರಚನೆಗಳನ್ನು ಸ್ಪರ್ಶಿಸಲು ನಿರಾಕರಿಸುವುದು.
- ಅತಿಯಾದ ಕೋಪದಿಂದ ರೊಚ್ಚಿಗೇಳುವುದು ಅಥವಾ ಸದಾ ಎಲ್ಲರಿಂದಲೂ ಬಹಳ ದೂರ, ಒಂಟಿಯಾಗಿ ಉಳಿಯುವುದು.

ಮಗುವನ್ನು ಗಮನಿಸುವಾಗ ಶಿಕ್ಷಕರು ಬಹಳ ಜಾಗರೂಕರಾಗಿರಬೇಕು. ನಾವು ಮಗುವಿನ ಚಟುವಟಿಕೆಗಳಲ್ಲಿ ಯಾವುದೇ ಹಸ್ತಕ್ಷೇಪ ಮಾಡದೆ, ಮಗು ತಾನಾಗಿಯೇ ಸ್ವಾಭಾವಿಕವಾಗಿ ಹೇಗೆ ವರ್ತಿಸುತ್ತದೆ ಎಂಬುದನ್ನು ಸೂಕ್ಷ್ಮವಾಗಿ ನೋಡಬೇಕು. ಯಾವುದೇ ಪೂರ್ವಗ್ರಹವಿಲ್ಲದೆ ಅವಲೋಕನಗಳನ್ನು ದಾಖಲಿಸುವುದು ಬಹಳ ಮುಖ್ಯ. ಮಕ್ಕಳ ನಡವಳಿಕೆಯನ್ನು ಕೇವಲ ಒಂದು ಕ್ಷಣಕ್ಕೆ ಸೀಮಿತಗೊಳಿಸದೆ ತರಗತಿ, ಆಟದ ಮೈದಾನ ಹಾಗೂ ಊಟದ ಸಮಯದಂತಹ ಎಲ್ಲಾ ಪರಿಸರಗಳಲ್ಲಿ ಗಮನಿಸಬೇಕು. ಈ ಎಲ್ಲಾ ಸಂದರ್ಭಗಳಲ್ಲಿಯೂ ಅವರ ವರ್ತನೆಯಲ್ಲಿ ಒಂದು ನಿರ್ದಿಷ್ಟ ಮಾದರಿ ಇದೆಯೇ ಎಂದು ಕಂಡುಹಿಡಿಯಲು ಪ್ರಯತ್ನಿಸಬೇಕು. ಇಂತಹ ನಡವಳಿಕೆಯು ಅವರ ದೈನಂದಿನ ಕಾರ್ಯಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತಿದೆಯೇ ಮತ್ತು ಅವರ ಕೌಶಲಗಳ ಕೊರತೆಯು ಕಲಿಕೆಗೆ ಅಡ್ಡಿಯಾಗುತ್ತಿದೆಯೇ ಎಂಬುದನ್ನು ಅರಿತುಕೊಳ್ಳುವುದು ಅಗತ್ಯವಾಗಿದೆ.

***ವಾಸ್ತವವನ್ನು ಸ್ವೀಕರಿಸಲು ಸಿದ್ಧರಿಲ್ಲದ ಪೋಷಕರೊಂದಿಗೆ ಮಾತನಾಡುವುದು ಹೇಗೆ?***

ಮೊದಲನೆಯದಾಗಿ, ಪೋಷಕರ ಮುಂದೆ ನಾವು ನೇರವಾಗಿ ನಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಹೇರಬಾರದು. ಬದಲಿಗೆ, ಮಗುವಿನ ಬಗ್ಗೆ ನಮ್ಮ ಗಮನಕ್ಕೆ ಬಂದಿರುವ ನಿರ್ದಿಷ್ಟ ಅವಲೋಕನಗಳನ್ನು ಮಾತ್ರ ಅವರೊಂದಿಗೆ ಹಂಚಿಕೊಳ್ಳಬೇಕು. ಮಾತನಾಡುವಾಗ ನಾವು ಪೋಷಕರ ಬಗ್ಗೆ ಸಹಾನುಭೂತಿ ಹೊಂದಿರಬೇಕು. ಮಗುವಿನ ಮೇಲೆ ಯಾವುದೇ ಹಣೆಪಟ್ಟಿ ಹಚ್ಚುವ ಬದಲು, ಮಗುವಿಗೆ ಹೇಗೆ ಸಹಾಯ ಮಾಡಬಹುದು ಎಂಬುದರ ಕಡೆಗೆ ಅವರ ಗಮನಹರಿಸಬೇಕು. ಉದಾಹರಣೆಗೆ, “ನಿಮ್ಮ ಮಗುವಿಗೆ ಆಟಿಸಂ ಇರಬಹುದು ಎಂದು ನನಗೆ ಅನಿಸುತ್ತದೆ, ಆದ್ದರಿಂದ ನೀವು ಮೌಲ್ಯಮಾಪನ ಮಾಡಿಸುತ್ತೀರಾ?” ಎಂದು ನಾವು ಎಂದಿಗೂ ಹೇಳಬಾರದು. ಬದಲಾಗಿ, “ನಿಮ್ಮ ಮಗು ಯಾವಾಗಲೂ ಒಂಟಿಯಾಗಿ ಆಡಲು ಬಯಸುವುದನ್ನು ನಾನು ಗಮನಿಸಿದ್ದೇನೆ. ನಾನು ಮಾತನಾಡಿಸುವಾಗ ಮಗು ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುವುದನ್ನು ತಪ್ಪಿಸುತ್ತದೆ. ಹೊರಗಿನ ಶಬ್ದ ಕೇಳಿದಾಗ ಮಗು ತುಂಬಾ ಕಿರಿಕಿರಿ ಮಾಡಿಕೊಳ್ಳುವುದನ್ನೂ ನಾನು ನೋಡಿದ್ದೇನೆ. ಒಮ್ಮೆ ಮಕ್ಕಳ ತಜ್ಞರನ್ನು ಭೇಟಿಯಾಗಿ ಅವರ ಸಲಹೆ ಪಡೆದರೆ ಒಳ್ಳೆಯದು; ಇದರಿಂದ ಮಗುವಿಗೆ ನಾವು ಹೇಗೆ ಉತ್ತಮವಾಗಿ ಸಹಾಯ ಮಾಡಬಹುದು ಎಂದು ತಿಳಿಯುತ್ತದೆ” ಎಂಬ ರೀತಿಯಲ್ಲಿ ಹೇಳಬೇಕು. ಹಾಗೆಯೇ, ಮಗುವು




ಚಿತ್ರ 4: ದಿನನಿತ್ಯದ ವೇಳಾಪಟ್ಟಿಯನ್ನು ಚಿತ್ರಗಳ ಮೂಲಕ (Visual schedule) ತೋರಿಸುವುದು ಕೆಲವು ಮಕ್ಕಳಿಗೆ ಶಾಲೆಯ ದಿನಚರಿಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಮುಂದಿನ ದಿನಗಳಲ್ಲಿ ಎದುರಿಸಬಹುದಾದ ಸಮಸ್ಯೆಗಳನ್ನು ಕಡಿಮೆ ಮಾಡಲು, ನಾವು ಆದಷ್ಟು ಬೇಗ ಸಹಾಯ ಹಸ್ತ ಚಾಚುವುದು ಅಗತ್ಯ ಎಂದು ಅವರಿಗೆ ಮನವರಿಕೆ ಮಾಡಿಕೊಡಬೇಕು.

***ಶಿಕ್ಷಕಿಯರು ಮಕ್ಕಳನ್ನು ಯಾರ ಬಳಿ ಕಳುಹಿಸಬೇಕು?***

ಮಗುವಿನ ಬೆಳವಣಿಗೆಯಲ್ಲಿ ಯಾವುದೇ ವಿಳಂಬ ಅಥವಾ ಸಾಮರ್ಥ್ಯದ ಕೊರತೆ ಇರುವ ಅನುಮಾನ ಬಂದಾಗ, ಮೊದಲು ಮಗುವಿನ ಕುಟುಂಬದವರೊಂದಿಗೆ ಸಮಾಲೋಚನೆ ನಡೆಸಬೇಕು. ನಂತರ ಹೆಚ್ಚಿನ ತಪಾಸಣೆಗಾಗಿ ಮಗುವನ್ನು ಬಾಲ್ಯದ ಬೆಳವಣಿಗೆಯ ಸಮಸ್ಯೆಗಳ ಕುರಿತ ಮಕ್ಕಳ ತಜ್ಞರು (Developmental Paediatrician), ಮಕ್ಕಳ ಅಥವಾ ಕ್ಲಿನಿಕಲ್ ಮನಶಾಸ್ತ್ರಜ್ಞರು (Child/Clinical Psychologist), ಶ್ರವಣಶಾಸ್ತ್ರಜ್ಞರು (Audiologist), ಮಾತು ಮತ್ತು ಭಾಷಾ ಚಿಕಿತ್ಸಕರು (Speech-Language Therapist), ವೃತ್ತಿಪರ ಚಿಕಿತ್ಸಕರು (Occupational Therapist) ಅಥವಾ ಪುನರ್ವಸತಿ ಮನಶಾಸ್ತ್ರಜ್ಞರ (Rehabilitation Psychologist) ಬಳಿಗೆ ಕರೆದೊಯ್ಯಲು ಪೋಷಕರಿಗೆ ಶಿಫಾರಸು ಮಾಡಬೇಕು.

***ಶಿಕ್ಷಕಿಯರು ಆರಂಭಿಕ ಕಲಿಕೆಯ ಸ್ಥಳಗಳನ್ನು ಎಲ್ಲರನ್ನೂ ಒಳಗೊಳ್ಳುವಂತೆ ಮಾಡುವ ಜಾಗಗಳಾಗಿ ಹೇಗೆ ಪರಿವರ್ತಿಸಬಹುದು?***

ಮಗುವಿಗೆ ಹೆಚ್ಚುವರಿ ಸಹಾಯದ ಅಗತ್ಯವಿದೆ ಎಂದು ಶಿಕ್ಷಕಿಯರ ಅಥವಾ ಅಂಗನವಾಡಿ ಕಾರ್ಯಕರ್ತೆಯರ ಗಮನಕ್ಕೆ ಬಂದ ತಕ್ಷಣ, ಅವರು ಆ ಮಗುವಿನೊಂದಿಗೆ ಕೆಲಸ ಮಾಡಲು ತಕ್ಷಣವೇ ಮುಂದಾಗಬೇಕು. ತಜ್ಞರಿಂದ ನಿರ್ದಿಷ್ಟ ಸಲಹೆಗಳು ಸಿಗುವವರೆಗೆ ಕಾಯುವ ಬದಲು, ದೈನಂದಿನ ಕಾರ್ಯಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಈ ಬದಲಾವಣೆಗಳು ಮಗುವಿಗೆ ತುಂಬಾ ಪ್ರಯೋಜನಕಾರಿಯಾಗುತ್ತವೆ. ಉದಾಹರಣೆಗೆ, ಮಗುವಿಗೆ ಒಂದು ವಿಷಯದ ಮೇಲೆ ಏಕಾಗ್ರತೆ ಸಾಧಿಸಲು ಸಾಧ್ಯವಾಗದಿದ್ದರೆ, ತರಗತಿಯಲ್ಲಿ ಒಂದು ‘ಪ್ರಶಾಂತ ಮೂಲೆ’ಯನ್ನು (Quiet Corner) ನಿರ್ಮಿಸುವ ಬಗ್ಗೆ ಯೋಚಿಸಬಹುದು. ಮಗುವು ಆ ಗೊತ್ತುಪಡಿಸಿದ ಸ್ಥಳದಲ್ಲಿ ಪ್ರಶಾಂತವಾಗಿ ಕುಳಿತುಕೊಳ್ಳಬಹುದು ಮತ್ತು ತನ್ನ ಕೆಲಸವನ್ನು ಪೂರ್ಣಗೊಳಿಸಬಹುದು. ಅಂತಹ ಮೂಲೆಗಳು ಮಗು ಶಾಂತವಾಗಿರಲು ಮತ್ತು ತನ್ನ ಕೆಲಸದ ಮೇಲೆ ಹೆಚ್ಚಿನ ಗಮನ ಹರಿಸಲು ಸಹಾಯ ಮಾಡುತ್ತವೆ. ಒಂದು ವೇಳೆ ಮಗುವಿಗೆ ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ಹೋಗಲು ಕಷ್ಟವಾಗುತ್ತಿದ್ದರೆ ಮತ್ತು ಅದು ತನ್ನ ದಿನಚರಿಯ ಮೇಲೆಯೇ ಹೆಚ್ಚು ಅವಲಂಬಿತವಾಗಿದ್ದರೆ, ಚಿತ್ರಸಹಿತ ವೇಳಾಪಟ್ಟಿಯನ್ನು ಬಳಸುವುದು ಒಳ್ಳೆಯದು. ಇದು ಮಗುವಿಗೆ ದಿನದ ಚಟುವಟಿಕೆಗಳ ಕ್ರಮವನ್ನು ಅರ್ಥಮಾಡಿಕೊಳ್ಳಲು ಮತ್ತು ಮುಂದೆ ಏನು ಮಾಡಬೇಕು ಎಂಬುದನ್ನು ಮುಂಚಿತವಾಗಿ ತಿಳಿಯಲು ಸಹಾಯ ಮಾಡುತ್ತದೆ.

ಮಕ್ಕಳಿಗೆ ಯಾವುದೇ ವಿಷಯವನ್ನು ಚಿಕ್ಕದಾಗಿ ಮತ್ತು ಸ್ಪಷ್ಟವಾಗಿ ಹಂತ-ಹಂತವಾಗಿ ತಿಳಿಸಬೇಕು. ನಂತರ ಅವರು ಪ್ರತಿಕ್ರಿಯಿಸಲು ಹೆಚ್ಚಿನ ಕಾಲಾವಕಾಶ ನೀಡುವುದರಿಂದ, ತಾವೂ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೇವೆ ಮತ್ತು ತರಗತಿಯು ತನ್ನನ್ನು ಸ್ವೀಕರಿಸಿದೆ ಎಂಬ ಭಾವನೆ ಅವರಲ್ಲಿ ಮೂಡುತ್ತದೆ. ಹೀಗಾಗಿ ತರಗತಿಯಲ್ಲಿ ಎಲ್ಲರಂತೆ ತಾವೂ ಒಬ್ಬರು ಎಂಬ ನಂಬಿಕೆ ಅವರಿಗೆ ಬರುತ್ತದೆ. ಯಾರಿಗೆ ಗೆಳೆತನ ಬೆಳೆಸಲು ಕಷ್ಟವಾಗುತ್ತದೋ ಅಂತಹ ಮಕ್ಕಳೊಂದಿಗೆ ಬೆರೆಯಲು ಇತರ ಮಕ್ಕಳನ್ನು ಶಿಕ್ಷಕರು ಹುರಿದುಂಬಿಸಬೇಕು. ಅಂತಹ ಮಕ್ಕಳ ಸಾಮರ್ಥ್ಯದ ಮಟ್ಟ ಯಾವುದು ಮತ್ತು ಅವರು ಯಾವುದರಲ್ಲಿ ಆಸಕ್ತಿ ಹೊಂದಿದ್ದಾರೆ ಎಂಬುದನ್ನು ಗಮನಿಸಿ ಅಲ್ಲಿಂದಲೇ ಕಲಿಕೆಯನ್ನು ಪ್ರಾರಂಭಿಸಬೇಕು. ಉದಾಹರಣೆಗೆ, ಐದು ವರ್ಷದ ಮಗುವಿಗೆ ಸಣ್ಣ ವಸ್ತುಗಳನ್ನು ಕೈಯಲ್ಲಿ ಹಿಡಿದುಕೊಳ್ಳಲು ಸಾಧ್ಯವಾಗದಿದ್ದರೂ ಪೇಂಟಿಂಗ್ ಮಾಡಲು ಇಷ್ಟಪಡುತ್ತಿದ್ದರೆ, ಶಿಕ್ಷಕರು ಅವರಿಗೆ ದೊಡ್ಡ ಪೇಂಟ್ ಬ್ರಷ್ ಮತ್ತು ದೊಡ್ಡ ಕಾಗದ ಅಥವಾ ಚಾರ್ಟ್ ಅನ್ನು ನೀಡಬಹುದು. ನಂತರ ನಿಧಾನವಾಗಿ ಸಣ್ಣ ವಸ್ತುಗಳನ್ನು ಬಳಸುವ ಹಂತಕ್ಕೆ ಕರೆದೊಯ್ಯುವ ಮೂಲಕ, ಮಗುವಿನ ಆತ್ಮಗೌರವಕ್ಕೆ ಧಕ್ಕೆಯಾಗದಂತೆ ಹೊಸ ವಿಷಯಗಳನ್ನು ಕಲಿಯಲು ಸಹಾಯ ಮಾಡಬಹುದು.

ಕೊನೆಯದಾಗಿ ಹೇಳುವುದಾದರೆ, ಶಿಕ್ಷಕರು ಮಕ್ಕಳನ್ನು ಗಮನಿಸುವ ರೀತಿ, ಸಂವೇದನಾಶೀಲತೆಯಿಂದ ಬೋಧಿಸುವ ಕ್ರಮ ಮತ್ತು ಪೋಷಕರೊಂದಿಗೆ ಅವರು ಇಟ್ಟುಕೊಳ್ಳುವ ಪ್ರೀತಿಯ ಸಂಬಂಧ ಇವೆಲ್ಲವೂ ಮಕ್ಕಳ ಒಟ್ಟಾರೆ ಬೆಳವಣಿಗೆಗೆ ಪೂರಕವಾಗಿರುತ್ತವೆ. ಅದರಲ್ಲೂ ವಿಶೇಷವಾಗಿ ಭಿನ್ನ ಸಾಮರ್ಥ್ಯದ ಮಕ್ಕಳ ಬೆಳವಣಿಗೆಯಲ್ಲಿ ಇವು ಬಹಳ ಸಹಕಾರಿಯಾಗುತ್ತವೆ. ಪೋಷಕರು ವಾಸ್ತವವನ್ನು ಒಪ್ಪಿಕೊಳ್ಳಲು ನಿರಾಕರಿಸಿದ ಹೊರತಾಗಿಯೂ, ಶಿಕ್ಷಕರು ಒಂದು ವೇಳೆ ತಕ್ಷಣವೇ ಸೂಕ್ತ ಕ್ರಮ ಕೈಗೊಂಡರೆ ಅಂತಹ ಅನೇಕ ಮಕ್ಕಳು ಜೀವನದಲ್ಲಿ ಮುಂದೆ ಸಾಗಲು ಸಾಧ್ಯವಾಗುತ್ತದೆ; ಇಲ್ಲದಿದ್ದರೆ ಅವರು ಕಲಿಕೆಯಲ್ಲಿ ಹಿಂದೆ ಬೀಳಬಹುದು. ಕುಟುಂಬದವರನ್ನು ಹೊರತುಪಡಿಸಿದರೆ ಮಕ್ಕಳನ್ನು ಅತ್ಯಂತ ಹತ್ತಿರದಿಂದ ಮತ್ತು ಸೂಕ್ಷ್ಮವಾಗಿ ಗಮನಿಸುವವರು ಶಿಕ್ಷಕಿಯರು ಮಾತ್ರ ಎಂಬುದನ್ನು ನಾವು ಅರಿಯಬೇಕು. ಮಗುವಿನ ನಡವಳಿಕೆ ಅಥವಾ ವರ್ತನೆಗಳಲ್ಲಿ ಚಿಂತೆಗೆ ಕಾರಣವಾಗಬಲ್ಲ ಯಾವುದೇ ಅಂಶಗಳಿದ್ದರೂ ಅದು ಶಿಕ್ಷಕಿಯರಿಗೆ ಬಹಳ ಬೇಗ ತಿಳಿಯುತ್ತದೆ. ಶಿಕ್ಷಕಿಯರು ಮಗುವಿನ ಬಗ್ಗೆ ಸಹಾನುಭೂತಿಯಿಂದ ಕೆಲಸ ಮಾಡಿದರೆ, ಆ ಮಕ್ಕಳಿಗೆ ಉತ್ತಮ ಭವಿಷ್ಯದ ಬಾಗಿಲು ತೆರೆಯುತ್ತದೆ.



**ಭುವನೇಶ್ವರಿ ಬಿ.** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಜುಕೇಶನ್‌ನಲ್ಲಿ ಅಧ್ಯಾಪಕರಾಗಿದ್ದಾರೆ. ಇವರು ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಕಲಿಕಾ ನ್ಯೂನತೆ ಇರುವ ಮಕ್ಕಳಿಗೆ ಬೋಧನೆಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಭಾಷೆ, ಸಾಕ್ಷರತೆ ಮತ್ತು ‘ಆಟಿಸಂ’ ಸೇರಿದಂತೆ ವಿವಿಧ ವಿಷಯಗಳ ಕುರಿತು ಇವರು ಆಳವಾದ ಸಂಶೋಧನೆ ನಡೆಸುತ್ತಿದ್ದಾರೆ. ಬೋಧನೆಯ ಜೊತೆಗೆ, ವಿಶ್ವವಿದ್ಯಾಲಯದಲ್ಲಿ ‘ವಿಕಲಚೇತನರ ಒಳಗೊಳ್ಳುವಿಕೆ’ (Disability Inclusion) ಉಪಕ್ರಮಗಳ ನೇತೃತ್ವವನ್ನು ಇವರು ವಹಿಸಿದ್ದಾರೆ.

**ಸಂಪರ್ಕ:** bhuvaneswari.b@apu.edu.in

ಅನುವಾದ: ಆಶಾ ಸಿಂಗ್ | ಪರಿಶೀಲನೆ: ರಾಕೇಶ್ ಪೂಂಜ

# ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಕ್ತ ಬೆಂಬಲ ವ್ಯವಸ್ಥೆ | ಮೇಲ್ವಿಚಾರಣೆಗೆ ಒಂದು ಆಚರಣೆ-ಆಧಾರಿತ ವಿಧಾನ

**ಶ್ರೇಷ್ಠಾ ಮಿಶ್ರ ಮತ್ತು ರಜತ್ ಶರ್ಮ**

**ಅಂಗನವಾಡಿ ಕೇಂದ್ರಗಳಲ್ಲಿ ಮೇಲ್ವಿಚಾರಕರ ಪಾತ್ರ ಬಹಳ ದೊಡ್ಡದು. ಸಾಮಾನ್ಯವಾಗಿ, ಒಬ್ಬರು ಮೇಲ್ವಿಚಾರಕರು 8 ರಿಂದ 12 ಹಳ್ಳಿಗಳಲ್ಲಿ ಹರಡಿರುವ ಸುಮಾರು 20-25 ಅಂಗನವಾಡಿ ಕೇಂದ್ರಗಳ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮಕ್ಕಳೊಂದಿಗೆ ಶಿಕ್ಷಕರು ಅಥವಾ ಕಾರ್ಯಕರ್ತೆಯರು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಅವರಿಗೆ ನಿರಂತರ ಬೆಂಬಲ ಮತ್ತು ಮಾರ್ಗದರ್ಶನ ನೀಡುವುದು ಇವರ ಮುಖ್ಯ ಕೆಲಸ. ಛತ್ತೀಸ್‌ಗಢ ರಾಜ್ಯದ ಅಂಗನವಾಡಿಗಳು ಕೆಲಸ ಮಾಡುವ ರೀತಿಯಲ್ಲಿ ದೊಡ್ಡ ಬದಲಾವಣೆಯನ್ನು ತಂದಿರುವ ಕೆಲವು ಉತ್ತಮ ಪದ್ಧತಿಗಳ ಬಗ್ಗೆ ಲೇಖಕರು ಈ ಲೇಖನದಲ್ಲಿ ವಿವರಿಸಿದ್ದಾರೆ.**



ಚಿತ್ರ 1: ಮೇಲ್ವಿಚಾರಕರು ಅಂಗನವಾಡಿ ಕಾರ್ಯಕರ್ತೆಯರಿಗೆ ನಿರಂತರವಾಗಿ ಬೆಂಬಲ ಮತ್ತು ಮಾರ್ಗದರ್ಶನ ನೀಡುತ್ತಾರೆ.

ಒಬ್ಬ ಮೇಲ್ವಿಚಾರಕರು ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ್ದರು. ಅಲ್ಲಿನ ಅಂಗನವಾಡಿ ಶಿಕ್ಷಕರು ಮಕ್ಕಳನ್ನು ನಿರ್ವಹಿಸುವಲ್ಲಿ ಕಷ್ಟಪಡುತ್ತಿರುವುದನ್ನು ಅವರು ಗಮನಿಸಿದರು. ಆ ಕೇಂದ್ರದಲ್ಲಿ ಮಕ್ಕಳ ಆಟಕ್ಕೆ ಬಹಳ ಕಡಿಮೆ ಆಟಿಕೆಗಳಿದ್ದವು ಮತ್ತು ಅವುಗಳಲ್ಲಿ ಹೆಚ್ಚಿನವು ಮುರಿದುಹೋಗಿದ್ದವು. ಆಟಿಕೆಗಳಿಲ್ಲದೆ ಮಕ್ಕಳಿಗೆ ಬೇಸರವಾಗುತ್ತಿತ್ತು, ಆದರೆ ಎಲ್ಲ ಮಕ್ಕಳನ್ನೂ ಒಂದೇ ಸಮಯದಲ್ಲಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಶಿಕ್ಷಕಿಗೆ ಸವಾಲಾಗಿತ್ತು. ಇದನ್ನು ಗಮನಿಸಿದ ಮೇಲ್ವಿಚಾರಕರು, ಶಿಕ್ಷಕರಿಗೆ ರನ್ನಿಂಗ್ ಬ್ಲಾಕ್‌ಬೋರ್ಡ್ ಬಳಸಲು ಸೂಚಿಸಿದರು. ಉದಾಹರಣೆಯಾಗಿ, ಅವರೇ ಒಂದು ಚಟುವಟಿಕೆಯನ್ನು ಪ್ರದರ್ಶಿಸಿ ತೋರಿಸಿದರು: ಅವರು ಬಳಪವನ್ನು ತೆಗೆದುಕೊಂಡು, ಅದನ್ನು ಸಣ್ಣ ತುಂಡುಗಳಾಗಿ ಮುರಿದು ಪ್ರತಿ ಮಗುವಿಗೆ ಒಂದೊಂದು ತುಂಡನ್ನು ನೀಡಿದರು. ನಂತರ ಅವರು ಗೋಡೆಯ ಕೆಳಭಾಗದಲ್ಲಿರುವ ಕಪ್ಪುಹಲಗೆಯ ಮೇಲೆ ಪ್ರತಿ ಮಗುವಿಗೆ ಒಂದು ಸ್ಥಳವನ್ನು ಗುರುತಿಸಿ ನೀಡಿದರು. ಮಕ್ಕಳಿಗೆ ತಮ್ಮ ಸ್ಥಾನವನ್ನು ತೋರಿಸಿ, ಅವರು ನೋಡಿದ ಅಥವಾ ಕೇಳಿದ ವಿಷಯದ ಬಗ್ಗೆ ಚಿತ್ರ ಬಿಡಿಸಲು ಅಥವಾ ಬರೆಯಲು ಪ್ರೋತ್ಸಾಹಿಸಿದರು. ಆಗ ಕೆಲವು ಮಕ್ಕಳು ನಿಂತು, ಇನ್ನು ಕೆಲವು ಮಕ್ಕಳು ತಮಗೆ ಗೊತ್ತುಪಡಿಸಿದ ಸ್ಥಳದ ಮುಂದೆ ನೆಲದ ಮೇಲೆ ಕುಳಿತು ಚಿತ್ರಿಸಲು, ಬರೆಯಲು ಅಥವಾ ಗೆರೆಗಳನ್ನು ಎಳೆಯಲು ಉತ್ಸಾಹದಿಂದ ಪ್ರಾರಂಭಿಸಿದರು.

ಈ ಚಟುವಟಿಕೆಯ ಮೂಲಕ ಎಲ್ಲಾ ಮಕ್ಕಳು ಸಕ್ರಿಯವಾಗಿ ತೊಡಗಿಸಿಕೊಂಡರು. ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಮತ್ತು ತಾವು ರಚಿಸಿದ ಚಿತ್ರಗಳ ಬಗ್ಗೆ ಶಿಕ್ಷಕರು ಹಾಗೂ ಮೇಲ್ವಿಚಾರಕರಿಗೆ ವಿವರಿಸಲು ಮಕ್ಕಳು ಬಹಳ ಸಂತೋಷಪಟ್ಟರು. ಶಿಕ್ಷಕರು ಈ ಯಶಸ್ವಿ ಅನುಭವವನ್ನು ತಮ್ಮ ವಲಯದ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಇತರ ಶಿಕ್ಷಕರೊಂದಿಗೆ ಹಂಚಿಕೊಂಡರು. ಇದನ್ನು ನೋಡಿ ಸ್ಫೂರ್ತಿ ಪಡೆದ ಇತರ ಕೆಲವು ಶಿಕ್ಷಕರು ಸಹ ಅದೇ ತಂತ್ರವನ್ನು ತಮ್ಮ ಕೇಂದ್ರಗಳಲ್ಲಿ ಅಳವಡಿಸಿಕೊಳ್ಳಲು ಪ್ರಾರಂಭಿಸಿದರು.

ಅಂಗನವಾಡಿ ಮೇಲ್ವಿಚಾರಕರು ನಿಜಕ್ಕೂ ಬದಲಾವಣೆಯ ಹರಿಕಾರರಾಗಿದ್ದಾರೆ. ಒಂದು ಅಂಗನವಾಡಿಯಲ್ಲಿ ಅವರು ಪರಿಚಯಿಸುವ ಉತ್ತಮ ಅಭ್ಯಾಸಗಳನ್ನು ಇತರ ಅನೇಕ ಅಂಗನವಾಡಿ ಕೇಂದ್ರಗಳು ಸುಲಭವಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಒಬ್ಬ ಮೇಲ್ವಿಚಾರಕರು 8 ರಿಂದ 12 ಹಳ್ಳಿಗಳಲ್ಲಿ ಹರಡಿರುವ 20 ರಿಂದ 25 ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆಯನ್ನು ನೋಡಿಕೊಳ್ಳುತ್ತಾರೆ. ಅಂಗನವಾಡಿ ಶಿಕ್ಷಕರಿಗೆ ನಿಯತವಾಗಿ ಬೆಂಬಲ ಮತ್ತು ಮಾರ್ಗದರ್ಶನ ನೀಡುವುದರಲ್ಲಿ ಇವರ ಪಾತ್ರ ದೊಡ್ಡದು. ಇದರಿಂದ ಶಿಕ್ಷಕರು ಮಕ್ಕಳೊಂದಿಗೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಕೇಂದ್ರದ ದೈನಂದಿನ ಕಾರ್ಯಗಳನ್ನು ಗಮನಿಸುವುದು, ಶಿಕ್ಷಕರಿಗೆ ಅಗತ್ಯ ತರಬೇತಿ ನೀಡುವುದು, ಮಕ್ಕಳ ಪೋಷಣೆ ಹಾಗೂ ಆರಂಭಿಕ ಬಾಲ್ಯದ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಸಮುದಾಯದೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವುದು ಇವರ ಪ್ರಮುಖ ಜವಾಬ್ದಾರಿಗಳಲ್ಲಿ ಸೇರಿವೆ.

ಅಜೀಂ ಪ್ರೇಮ್‌ಜಿ ಫೌಂಡೇಷನ್, ಅಂಗನವಾಡಿ ಶಿಕ್ಷಕಿಯರನ್ನು ಆಯಾ ವಲಯಗಳಲ್ಲಿ ಬೆಂಬಲಿಸಲು ವಲಯ ಮೇಲ್ವಿಚಾರಕರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತದೆ. ಈ ವಿಧಾನವು ಅತ್ಯಂತ ಪರಿಣಾಮಕಾರಿ ಎಂದು ಸಾಬೀತಾಗಿದೆ. ನಾವು ಅನುಸರಿಸುತ್ತಿರುವ ಈ ಕಾರ್ಯವಿಧಾನಗಳು ಅಂಗನವಾಡಿಗಳು ಕಾರ್ಯನಿರ್ವಹಿಸುವ ರೀತಿಯಲ್ಲಿ ಗಮನಾರ್ಹ ಬದಲಾವಣೆ ತಂದಿದ್ದು, ಅವುಗಳನ್ನು ನಾವು ಈ ಲೇಖನದಲ್ಲಿ ಹಂಚಿಕೊಳ್ಳುತ್ತಿದ್ದೇವೆ. ಮೇಲ್ವಿಚಾರಕರ ಪಾತ್ರವು ಈಗ ಕೇವಲ ತಪಾಸಣೆಗೆ ಸೀಮಿತವಾಗದೆ 'ಸಹಾಯಕರಾಗಿ' ಬದಲಾಗಿರುವುದರಿಂದ, ಇದು ಮೇಲ್ವಿಚಾರಕರು ಮತ್ತು ಶಿಕ್ಷಕರ ನಡುವಿನ ಸಮನ್ವಯವನ್ನು ಗಣನೀಯವಾಗಿ ಸುಧಾರಿಸಿದೆ.

## ಅಂಗನವಾಡಿ ಕೇಂದ್ರಗಳಿಗೆ ವ್ಯವಸ್ಥಿತ ಭೇಟಿ

ಅಂಗನವಾಡಿ ಶಿಕ್ಷಕಿಯರು ಮಕ್ಕಳನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಾಗ ಆಗಾಗ್ಗೆ ಹಲವು ಸವಾಲುಗಳನ್ನು ಎದುರಿಸುತ್ತಾರೆ. ಮೇಲ್ವಿಚಾರಕರು ನಿಯತವಾಗಿ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿದಾಗ, ಅವರು ಶಿಕ್ಷಕರಿಗೆ ಈ ಚಟುವಟಿಕೆಗಳನ್ನು ನಡೆಸಲು ಪ್ರಾಯೋಗಿಕವಾಗಿ ಸಹಾಯ ಮಾಡುತ್ತಾರೆ. ಉದಾಹರಣೆಗೆ, ಅಂಗನವಾಡಿ ಶಿಕ್ಷಕರಿಗೆ ಎಲ್ಲಾ ಮಕ್ಕಳನ್ನು ಒಟ್ಟಾಗಿ ಗುಂಪು ಚಟುವಟಿಕೆಯಲ್ಲಿ ನಿರ್ವಹಿಸಲು ಅಥವಾ ಸಂಘಟಿಸಲು ಕಷ್ಟವಾದಾಗ, ಮೇಲ್ವಿಚಾರಕರು ತರಗತಿಯನ್ನು ಉತ್ತಮವಾಗಿ ನಿಭಾಯಿಸಲು ಸಹಾಯವಾಗುವಂತಹ ಸರಳ ಮತ್ತು ಕಡಿಮೆ ಸಮಯ ತೆಗೆದುಕೊಳ್ಳುವಂತಹ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುತ್ತಾರೆ.

ವಾರದ ಪಾಠ ಯೋಜನೆಗಳನ್ನು ರಚಿಸುವಲ್ಲಿ ಮತ್ತು ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಶಿಕ್ಷಕರಿಗೆ ಅಗತ್ಯ ಬೆಂಬಲ ನೀಡಲಾಗುತ್ತದೆ. ಉದಾಹರಣೆಗೆ, ಒಂದು ಅಂಗನವಾಡಿ ಕೇಂದ್ರದಲ್ಲಿ 21 ಮಕ್ಕಳಿದ್ದರು. ಮೇಲ್ವಿಚಾರಕರ ಸಹಾಯದಿಂದ ಅಲ್ಲಿನ ಶಿಕ್ಷಕರು 10 ದಿನಗಳ ಅವಧಿಗೆ ಪಾಠದ ಯೋಜನೆಯನ್ನು ಸಿದ್ಧಪಡಿಸಿ ಯಶಸ್ವಿಯಾಗಿ ಜಾರಿಗೆ ತಂದರು.

ಪ್ರತಿದಿನ ಅವರು ಮಕ್ಕಳ ವಯಸ್ಸಿಗೆ ಅನುಗುಣವಾದ ಚಟುವಟಿಕೆಗಳನ್ನು ವೀಡಿಯೊ ಮತ್ತು ಚಿತ್ರಗಳ ರೂಪದಲ್ಲಿ ದಾಖಲಿಸುತ್ತಿದ್ದರು ಹಾಗೂ ಅವುಗಳನ್ನು ವಲಯದ ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಹಂಚಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಅವರು ಚಟುವಟಿಕೆಯ ಒಂದು ಅಥವಾ ಎರಡು ಮುಖ್ಯಾಂಶಗಳಿಗೆ ವಿಶೇಷ ಪ್ರಾಮುಖ್ಯತೆ ನೀಡುತ್ತಿದ್ದರು. ಉದಾಹರಣೆಗೆ: "ಪ್ರಕ್ರಿಯೆಯಾದ್ಯಂತ ಮಕ್ಕಳು ಸಂತೋಷವಾಗಿದ್ದರು", "ಚಟುವಟಿಕೆಯನ್ನು ಪೂರ್ಣಗೊಳಿಸಿದ ನಂತರ ಮಕ್ಕಳು ತಮ್ಮ ಭಾವನೆಗಳನ್ನು ಹಂಚಿಕೊಂಡರು", ಅಥವಾ "ಕೆಲಸದ ಸಮಯದಲ್ಲಿ ಮಕ್ಕಳು ಪರಸ್ಪರ ಸಹಾಯ ಮಾಡುತ್ತಿದ್ದರು" ಇತ್ಯಾದಿ. ಜೊತೆಗೆ, ಮಕ್ಕಳು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬರಿಗೂ ಮಾತನಾಡಲು, ಕೇಳಲು ಮತ್ತು ಪ್ರತಿಕ್ರಿಯಿಸಲು ತಾವು ಹೇಗೆ ಅವಕಾಶ ನೀಡುತ್ತಿದ್ದೇವೆ ಎಂಬುದನ್ನು ಸಹ ಶಿಕ್ಷಕರು ವಿವರಿಸುತ್ತಿದ್ದರು. ಇದು ಗುಂಪಿನಲ್ಲಿರುವ ಇತರ ಶಿಕ್ಷಕರಿಗೂ ಪ್ರತಿದಿನ ಒಂದೆರಡು ಉತ್ತಮ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಅವುಗಳನ್ನು ತಮ್ಮ ಕೇಂದ್ರಗಳಲ್ಲಿ ಪುನರಾವರ್ತಿಸಲು ಸ್ಫೂರ್ತಿ ನೀಡಿತು.

ಬುನಾದಿ ಹಂತಕ್ಕೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಮಕ್ಕಳ ವಯಸ್ಸಿಗೆ ಅನುಗುಣವಾಗಿ ವಿವರಿಸಲಾದ ಕಲಿಕಾ ಫಲಿತಗಳಿಗೆ ಅನುಗುಣವಾಗಿ, ಮಕ್ಕಳನ್ನು ವಿಷಯಾಧಾರಿತ ಕಲಿಕೆಯಲ್ಲಿ ತೊಡಗಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ ಕೆಲವು ಮೇಲ್ವಿಚಾರಕರು ಮತ್ತು ಶಿಕ್ಷಕರು ಇತ್ತೀಚೆಗೆ ಮಕ್ಕಳ ಬೆಳವಣಿಗೆಯ ಪ್ರಮುಖ ಅಂಶಗಳಾದ ಬರವಣಿಗೆ ಮತ್ತು ಬಣ್ಣಗಳ ಬಳಕೆಯ ಬಗ್ಗೆ ಹೆಚ್ಚು ಆಳವಾಗಿ ಕೆಲಸ ಮಾಡಲು ಪ್ರಾರಂಭಿಸಿದ್ದಾರೆ. ಮೇಲ್ವಿಚಾರಕರು ಮತ್ತು ಶಿಕ್ಷಕರು ಜಂಟಿಯಾಗಿ 'ಕಾರ್ಯಹಾಳೆ'ಗಳನ್ನು ರೂಪಿಸಿದ್ದಾರೆ. ಉದಾಹರಣೆಗೆ, ಈ ಹಾಳೆಗಳಲ್ಲಿ ವಿವಿಧ ಆಕಾರಗಳನ್ನು ಪೂರ್ಣಗೊಳಿಸಲು ಚುಕ್ಕೆಗಳ ರೇಖೆಗಳನ್ನು ನೀಡಲಾಗಿದೆ ಮತ್ತು ಬಣ್ಣ ತುಂಬಲು ಅವಕಾಶ ಕಲ್ಪಿಸಲಾಗಿದೆ. ಇದರೊಂದಿಗೆ, ಸದಾ ಲಭ್ಯವಿರುವ ರನ್ನಿಂಗ್ ಬ್ಲಾಕ್‌ಬೋರ್ಡ್ ಮೇಲೆ ಮುಕ್ತವಾಗಿ ಚಿತ್ರಿಸಲು ಮತ್ತು ಬರೆಯಲು ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತದೆ. ಕ್ರಮಬದ್ಧವಾದ ಭೇಟಿಗಳ ಮೂಲಕ, ಮೇಲ್ವಿಚಾರಕರು ಈ ಕೆಳಗಿನ ವಿಧಾನಗಳಲ್ಲಿ ಶಿಕ್ಷಕರಿಗೆ ಸಹಾಯ ಮಾಡಬಹುದು:

### *ಶಿಕ್ಷಕರ ವಿಷಯಾಧಾರಿತ ಬೋಧನೆಯನ್ನು ಬಲಪಡಿಸಲು ಸಹಕರಿಸುವ ಚಟುವಟಿಕೆಗಳ ಪ್ರಾತ್ಯಕ್ಷಿಕೆ*

ಮೇಲ್ವಿಚಾರಕರು ಚಟುವಟಿಕೆಗಳನ್ನು ತಾವೇ ಮಾಡಿ ತೋರಿಸುವುದರಿಂದ, ಶಿಕ್ಷಕರು ತಮ್ಮ ವಿಷಯಾಧಾರಿತ ಬೋಧನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಡೆಸಲು ನೆರವಾಗುತ್ತದೆ. ಉದಾಹರಣೆಗೆ, 'ಪ್ರಾಣಿಗಳು' ಎಂಬ ವಿಷಯದ ಕುರಿತು ಪಾಠ ಮಾಡುವಾಗ, ಮಕ್ಕಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಕವಿತೆಗಳು ಮತ್ತು ಕಥೆಗಳನ್ನು ಉತ್ತಮ ಮಾಧ್ಯಮವಾಗಿ ಬಳಸಬಹುದು. ಮೇಲ್ವಿಚಾರಕರು ಈ ಸಂದರ್ಭದಲ್ಲಿ ಬೆರಳಿನ ಬೊಂಬೆಗಳು (Finger Puppets) ಅಥವಾ ಸಣ್ಣ ಮರದ ಗೊಂಬೆಗಳನ್ನು ಬಳಸಿ, ಧ್ವನಿಯ ಏರಿಳಿತದೊಂದಿಗೆ ಕಥೆ ಹೇಳುವಿಕೆಯನ್ನು ಪ್ರದರ್ಶಿಸುತ್ತಾರೆ. ಬೊಂಬೆಗಳು ಮತ್ತು ಮುಖದ ಅಭಿವ್ಯಕ್ತಿಗಳನ್ನು ಬಳಸುವುದರಿಂದ ಕಥೆ ಹೇಳುವಿಕೆಯು ಮಕ್ಕಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ನೇರವಾಗಿ ನೋಡಲು ಇದು ಶಿಕ್ಷಕರಿಗೆ ಸಹಾಯ ಮಾಡುತ್ತದೆ.

ಒಂದು ಅಂಗನವಾಡಿ ಕೇಂದ್ರದ ಶಿಕ್ಷಕಿಯೊಬ್ಬರು ಕಥೆ ಹೇಳುವ ಚಟುವಟಿಕೆಯ ಬಗ್ಗೆ ಸ್ವಲ್ಪ ಗೊಂದಲಕ್ಕೊಳಗಾಗಿದ್ದರು. ತಾವು ಮಕ್ಕಳಿಗೆ ಕಥೆ ಹೇಳುವಾಗಲೆಲ್ಲಾ ಅವರ ಗಮನ ಬೇಗನೆ ಬೇರೆಡೆಗೆ ತಿರುಗಿ, ಕಥೆಯನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದು ಅವರು ಮೇಲ್ವಿಚಾರಕರಿಗೆ ವಿವರಿಸಿದರು. ಇದನ್ನು ಗಮನಿಸಿದ ಮೇಲ್ವಿಚಾರಕರು, ಶಿಕ್ಷಕರು ಕಥೆ ಹೇಳುವ ವಿಧಾನವನ್ನು ಸೂಕ್ಷ್ಮವಾಗಿ ವೀಕ್ಷಿಸಿದರು. ನಂತರ ಅವರೇ ಸ್ವತಃ ಚಿತ್ರಗಳನ್ನೊಳಗೊಂಡ ಕಾರ್ಡ್‌ಗಳು ಮತ್ತು ಧ್ವನಿಯ ಏರಿಳಿತವನ್ನು (Voice Modulation) ಬಳಸಿ ಅದೇ ಕಥೆಯನ್ನು ಪುನಃ ಹೇಳಿದರು. ಅವರು ಕಥೆಯ ಸಂದರ್ಭಕ್ಕೆ ತಕ್ಕಂತೆ ಕೆಲವು ಪ್ರಾಣಿಗಳ ಧ್ವನಿ ಮತ್ತು ಕ್ರಿಯೆಗಳನ್ನು ಅನುಕರಿಸಿದರು.

ಮಕ್ಕಳು ಕಥೆಯನ್ನು ಆನಂದಿಸಿದ್ದು ಮಾತ್ರವಲ್ಲದೆ, ಬಹಳ ಕುತೂಹಲದಿಂದ ಆಲಿಸಿದರು. ಕಥೆ ಮುಗಿದ ನಂತರ ಮೇಲ್ವಿಚಾರಕರು ಕಥೆಗೆ ಸಂಬಂಧಿಸಿದ ಕೆಲವು ಸರಳ ಪ್ರಶ್ನೆಗಳನ್ನು ಕೇಳಿದರು; ಅದಕ್ಕೆ ಮಕ್ಕಳು ಅತ್ಯಂತ ಉತ್ಸಾಹದಿಂದ ಉತ್ತರಿಸಿದರು.

### *ಅನುಷ್ಠಾನದಲ್ಲಿ ಸವಾಲುಗಳನ್ನು ಎದುರಿಸುತ್ತಿರುವ ಕಾರ್ಯಕರ್ತೆಯರಿಗೆ ತಕ್ಷಣದ ನೆರವು*

ಕೇಂದ್ರದ ವೀಕ್ಷಣೆಯ ಸಮಯದಲ್ಲಿ ಮೇಲ್ವಿಚಾರಕರು ತಕ್ಷಣವೇ ಅಗತ್ಯ ಸಹಾಯವನ್ನು ನೀಡಬಹುದು. ಉದಾಹರಣೆಗೆ, ದೈಹಿಕ ಚಟುವಟಿಕೆ ಅಥವಾ



ಚಿತ್ರ 2: ವಲಯ ಮಟ್ಟದ ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು.

ಕವಿತೆ ಪಠಣದ ಸಮಯದಲ್ಲಿ ಸ್ಥಳಾವಕಾಶದ ಕೊರತೆಯಿಂದಾಗಿ, ಎಲ್ಲ ಮಕ್ಕಳನ್ನು ಒಂದೇ ವೃತ್ತದಲ್ಲಿ ಕೂರಿಸಲು ಶಿಕ್ಷಕರು ಕಷ್ಟಪಡುತ್ತಿರಬಹುದು. ಅಂತಹ ಸಂದರ್ಭದಲ್ಲಿ ಮೇಲ್ವಿಚಾರಕರು ಮಕ್ಕಳ ವಯಸ್ಸಿನ ಆಧಾರದ ಮೇಲೆ ಎರಡು ವೃತ್ತಗಳಲ್ಲಿ ಕುಳಿತುಕೊಳ್ಳಲು ಅಥವಾ ನಿಲ್ಲಲು ಸೂಚಿಸಬಹುದು. ಉದಾಹರಣೆಗೆ: 3ರಿಂದ 4 ವರ್ಷದ ಮಕ್ಕಳಿಗೆ 'ಒಳವೃತ್ತ' ಮತ್ತು 4ರಿಂದ 6 ವರ್ಷದ ಮಕ್ಕಳಿಗೆ 'ಹೊರವೃತ್ತ'.

## ಮಾಸಿಕ ವಲಯದ ಕಾರ್ಯಾಗಾರಗಳು ಮತ್ತು ಸಭೆಗಳು

ವಲಯ ಮಟ್ಟದ ಸಭೆಗಳು ಮತ್ತು ಕಾರ್ಯಾಗಾರಗಳು ಶಿಕ್ಷಕರಿಗೆ ತಮ್ಮ ಉತ್ತಮ ಅನುಭವಗಳನ್ನು ಹಂಚಿಕೊಳ್ಳಲು, ಕೆಲಸದಲ್ಲಿನ ಅನುಮಾನಗಳನ್ನು ಪರಿಹರಿಸಿಕೊಳ್ಳಲು ಮತ್ತು ಸಾಮಾನ್ಯ ವಿಷಯಾಧಾರಿತ ಚಟುವಟಿಕೆಗಳನ್ನು ಯೋಜಿಸಲು ಒಂದು ಉತ್ತಮ ವೇದಿಕೆಯನ್ನು ಒದಗಿಸುತ್ತವೆ.

ಮಾಸಿಕ ವಲಯ ಕಾರ್ಯಾಗಾರಗಳಲ್ಲಿ, ನಿರ್ದಿಷ್ಟ ವಿಷಯಾಧಾರಿತ ಚಟುವಟಿಕೆಗಳನ್ನು ವಲಯದ ಮೇಲ್ವಿಚಾರಕರು ಅಥವಾ ಮಾದರಿಯಾಗಿ ಕೆಲಸ ಮಾಡುತ್ತಿರುವ ಕೆಲವು ಶಿಕ್ಷಕರು ಪ್ರದರ್ಶಿಸುತ್ತಾರೆ. ಶಿಕ್ಷಕರು ಈ ಕಾರ್ಯಾಗಾರಗಳಲ್ಲಿ ಚಟುವಟಿಕೆಗಳನ್ನು ತಾವೇ ಮಾಡಿ ಅಭ್ಯಾಸ ಮಾಡುತ್ತಾರೆ ಮತ್ತು ನಂತರ ಅವುಗಳನ್ನು ತಮ್ಮ ಕೇಂದ್ರಗಳಲ್ಲಿ ಮಕ್ಕಳೊಂದಿಗೆ ಪುನರಾವರ್ತಿಸುತ್ತಾರೆ. ಮುಂದೆ ಅವರು ತಮ್ಮ ಕೇಂದ್ರಗಳಲ್ಲಿ ನಡೆಸಿದ ಚಟುವಟಿಕೆಗಳ ಫೋಟೋಗಳು, ವೀಡಿಯೊಗಳನ್ನು ಹಂಚಿಕೊಳ್ಳುವುದರ ಜೊತೆಗೆ, ತಾವು ಹೊಸದಾಗಿ ಕಲಿತದ್ದನ್ನು ಹೇಗೆ ಕಾರ್ಯಗತಗೊಳಿಸುತ್ತಿದ್ದೇವೆ ಎಂಬ ಕುರಿತು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳುತ್ತಾರೆ. ಕೆಲವು ಶಿಕ್ಷಕರು ತಮ್ಮ ಮಕ್ಕಳಲ್ಲಿನ ಪ್ರಗತಿಯನ್ನು ಹಂಚಿಕೊಳ್ಳಲು ಪ್ರಾರಂಭಿಸಿದ್ದಾರೆ. ಉದಾಹರಣೆಗೆ: "ಮೂರು ತಿಂಗಳ ಹಿಂದೆ ಬಣ್ಣ ಹಚ್ಚಲು ಕಷ್ಟಪಡುತ್ತಿದ್ದ ಮಗು, ಈಗ ವೃತ್ತದ ಒಳಗಡೆಯೇ ಬಣ್ಣ ತುಂಬಲು ಕಲಿಯುತ್ತಿದೆ" ಎಂಬಂತಹ ಸಕಾರಾತ್ಮಕ ಬದಲಾವಣೆಗಳನ್ನು ಅವರು ದಾಖಲಿಸುತ್ತಿದ್ದಾರೆ.

ವಲಯ ಸಭೆಗಳಲ್ಲಿ ಮೇಲ್ವಿಚಾರಕರು ಕೆಲಸದ ಪ್ರಗತಿಯನ್ನು ಗಮನಿಸುತ್ತಾರೆ. ಕೇಂದ್ರಗಳಲ್ಲಿ ಚಟುವಟಿಕೆಗಳನ್ನು ಹೇಗೆ ನಡೆಸಲಾಗುತ್ತಿದೆ, ಯಾವ ಸವಾಲುಗಳು ಎದುರಾಗುತ್ತಿವೆ ಮತ್ತು ಅವುಗಳನ್ನು ಹೇಗೆ ಪರಿಹರಿಸಲಾಗುತ್ತಿದೆ ಎಂಬುದನ್ನು ಪರಿಶೀಲಿಸುತ್ತಾರೆ. ಅವರು ವಾಟ್ಸ್ಆ್ಯಪ್ ಗುಂಪುಗಳು ಮತ್ತು ವಲಯದ ಸಭೆಗಳಲ್ಲಿ ಶಿಕ್ಷಕರಿಗೆ ರಚನಾತ್ಮಕ ಸಲಹೆಗಳನ್ನು ನೀಡುತ್ತಾರೆ. ಜೊತೆಗೆ, ಯಾವುದೇ ಚಟುವಟಿಕೆಯನ್ನು ನಡೆಸುವ ಮೊದಲು ಮಾಡಿಕೊಳ್ಳಬೇಕಾದ ಸಿದ್ಧತೆಯ ಮಹತ್ವವನ್ನು ವ್ಯವಸ್ಥಿತವಾಗಿ ಒತ್ತಿಹೇಳುತ್ತಾರೆ.

## ಇಸಿಸಿಇ ದಿನಾಚರಣೆಗಳು

ಮಕ್ಕಳ ಕಲಿಕೆ ಮತ್ತು ವಿಕಸನದ ಪಯಣದಲ್ಲಿ ಪೋಷಕರನ್ನು ತೊಡಗಿಸಿಕೊಳ್ಳುವುದು ಹಾಗೂ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆ ಅತ್ಯಗತ್ಯ ಎಂಬುದನ್ನು ಶಿಕ್ಷಕರು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಪ್ರತಿ ತಿಂಗಳು ಆಚರಿಸಲಾಗುವ 'ಇಸಿಸಿಇ ದಿನ'ದಂದು, ಮಕ್ಕಳ ಕಲಿಕೆಯ ಪ್ರಗತಿಯನ್ನು ಹಂಚಿಕೊಳ್ಳಲು, ಪೋಷಕರ ಒಳಗೊಳ್ಳುವಿಕೆಯನ್ನು ಹೆಚ್ಚಿಸಲು ಮತ್ತು ಶಿಕ್ಷಕರ ಶ್ರಮವನ್ನು ಗುರುತಿಸಲು ಸಮುದಾಯ ಕಾರ್ಯಕ್ರಮವೊಂದನ್ನು ಆಯೋಜಿಸಲಾಗುತ್ತದೆ.

ಒಂದು ಕೇಂದ್ರದ ಶಿಕ್ಷಕರು ಮತ್ತು ಸಹಾಯಕರು, ಮಕ್ಕಳು ಹಾಗೂ ಪೋಷಕರಿಗೆ ಮನೆಯಲ್ಲಿ ಬಳಸಿ ಎಸೆಯುವ ವಸ್ತುಗಳನ್ನು (ಉದಾಹರಣೆಗೆ: ರಟ್ಟಿನ ಪೆಟ್ಟಿಗೆಗಳು, ಆಹಾರದ ಪೊಟ್ಟಣಗಳು ಮತ್ತು ಇತರ ಬಳಸಿ ಬಿಸಾಡಿದ ವಸ್ತುಗಳು) ಶಾಲೆಗೆ ತರುವಂತೆ ತಿಳಿಸಿದರು. ಇವುಗಳನ್ನು ಬಳಸಿಕೊಂಡು ಅವರು ವಿಷಯಾಧಾರಿತ ಚಾರ್ಟ್‌ಗಳು, ಹವಾಮಾನ ಚಾರ್ಟ್‌ಗಳು, ಹುಟ್ಟುಹಬ್ಬದ ಬೋರ್ಡ್‌ಗಳು, ಕ್ಯಾಲೆಂಡರ್‌ಗಳು ಮತ್ತು ಪ್ರಾಸದ ಚಾರ್ಟ್‌ಗಳನ್ನು ತಯಾರಿಸಿದರು. ಈ ಮೂಲಕ ಕೇಂದ್ರದಲ್ಲಿ ಆಕರ್ಷಕವಾದ ಮುದ್ರಣ ಸಮೃದ್ಧ ಕಲಿಕಾ ವಾತಾವರಣವನ್ನು ಸೃಷ್ಟಿಸಿದರು. ಅವರು ಸಮುದಾಯದ ಸದಸ್ಯರನ್ನು ಇಸಿಸಿಇ ದಿನದಂದು ಕೇಂದ್ರಕ್ಕೆ ಭೇಟಿ ನೀಡಲು ಆಹ್ವಾನಿಸಿದರು. ಅಲ್ಲಿಗೆ ಬಂದ ಪೋಷಕರು ಶಿಕ್ಷಕರ ಈ ಸೃಜನಾತ್ಮಕ ಪ್ರಯತ್ನಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಇಂತಹ ಸಾಮಗ್ರಿಗಳು ಮಕ್ಕಳಿಗೆ ಕಲಿಯಲು ಹೇಗೆ ಸಹಕಾರಿಯಾಗುತ್ತವೆ ಎಂಬುದನ್ನು ಶಿಕ್ಷಕರು ಪೋಷಕರಿಗೆ ವಿವರಿಸಿದರು ಮತ್ತು ಮಕ್ಕಳು ಮಾಡಿದ ಕೆಲಸಗಳನ್ನು ಅವರಿಗೆ ಹೆಮ್ಮೆಯಿಂದ ತೋರಿಸಿದರು

## ಅಂಗನವಾಡಿ ಕೇಂದ್ರದ ಪರಿಶೀಲನಾ ಪಟ್ಟಿ

ಅಂಗನವಾಡಿಗಳ ಕಾರ್ಯವೈಖರಿಯನ್ನು ಸುಧಾರಿಸಲು ನಾವು ಏಳು ಅಂಶಗಳ ಪರಿಶೀಲನಾಪಟ್ಟಿಯನ್ನು ರೂಪಿಸಿದ್ದೇವೆ. ಇವು ಸರಳವಾಗಿದ್ದರೂ, ಪ್ರತಿಯೊಂದು ಕೇಂದ್ರವೂ ಕಡ್ಡಾಯವಾಗಿ ಪಾಲಿಸಬೇಕಾದ ಅಗತ್ಯತೆಗಳಾಗಿವೆ. ಈ ನಿಯತಾಂಕಗಳಲ್ಲಿ ಕೇಂದ್ರ ಮತ್ತು ಅದರ ಪರಿಸರ, ಮಕ್ಕಳ ಅಭಿವೃದ್ಧಿ ಹಾಗೂ ಶಿಕ್ಷಕರ ಬೋಧನಾ ಅಭ್ಯಾಸಗಳು ಸೇರಿವೆ.

ಈ ಏಳು ಅಂಶಗಳನ್ನು ವಲಯದ ಮೇಲ್ವಿಚಾರಕರು ಮತ್ತು ಶಿಕ್ಷಕರು ಸ್ವತಃ ಪರಿಶೀಲಿಸುತ್ತಾರೆ. ಈ ಮಾನದಂಡಗಳ ಪ್ರಗತಿಯನ್ನು ಕ್ರಮಬದ್ಧವಾಗಿ ಅವಲೋಕಿಸಲಾಗುತ್ತದೆ ಮತ್ತು ಮಾಸಿಕ ಸಭೆಗಳಲ್ಲಿ ಚರ್ಚಿಸಲಾಗುತ್ತದೆ. ಈ ಪರಿಶೀಲನಾಪಟ್ಟಿಯು ಅಂಗನವಾಡಿಗಳ ಸುಗಮ ಕಾರ್ಯನಿರ್ವಹಣೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವುದಲ್ಲದೆ, ಎಲ್ಲಾ ಪಾಲುದಾರರಿಗೆ ಕಾಲಕಾಲಕ್ಕೆ ಮಾಹಿತಿ ಒದಗಿಸುತ್ತದೆ. ಈ ಪರಿಶೀಲನಾಪಟ್ಟಿಯಲ್ಲಿ ಸೇರಿಸಲಾದ ಮಾನದಂಡಗಳು ಹೀಗಿವೆ:

1. ಅಂಗನವಾಡಿಯು ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 3:30 ರವರೆಗೆ ನಿಗದಿತ ವೇಳಾಪಟ್ಟಿಯಂತೆ ಸರಿಯಾಗಿ ಕಾರ್ಯನಿರ್ವಹಿಸುತ್ತಿದೆಯೇ?
2. ಅಂಗನವಾಡಿಯ ಪರಿಸರವು ಮಕ್ಕಳಿಗೆ ಸ್ವಚ್ಛ ಮತ್ತು ಸುರಕ್ಷಿತವಾಗಿದೆಯೇ?
3. ಅಂಗನವಾಡಿಯಲ್ಲಿ ಸೂಕ್ತವಾದ ಆಟದ ಸಾಮಗ್ರಿಗಳು, ಕಪ್ಪುಹಲಗೆಗಳು ಮತ್ತು ಕಲಿಕಾ ಮೂಲೆಗಳಂತಹ ಪೂರಕ ಕಲಿಕಾ ಸಾಮಗ್ರಿಗಳನ್ನು ಬಳಸಲಾಗುತ್ತಿದೆಯೇ?
4. ದಾಖಲಾದ ಮಕ್ಕಳಲ್ಲಿ ಕನಿಷ್ಠ 80% ರಷ್ಟು ಮಕ್ಕಳು ನಿಯತವಾಗಿ ಅಂಗನವಾಡಿಗೆ ಹಾಜರಾಗುತ್ತಿದ್ದಾರೆಯೇ?
5. ನಿಯಮಿತವಾಗಿ ಹಾಜರಾಗುವ ಈ 80%ರಷ್ಟು ಮಕ್ಕಳು ಕೇಂದ್ರದಲ್ಲಿ ಆಯೋಜಿಸಲಾಗುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆಯೇ?

6. ಶಿಕ್ಷಕರು ಮಕ್ಕಳ ಬಗ್ಗೆ ಸಂವೇದನಾಶೀಲರಾಗಿರುತ್ತಾರೆಯೇ? ಅಂದರೆ, ಮಕ್ಕಳನ್ನು ಚಟುವಟಿಕೆಗಳಲ್ಲಿ ತೊಡಗಿಸುವುದು, ಅವರನ್ನು ಪ್ರೇರೇಪಿಸುವುದು ಹಾಗೂ ಅವರು ಪರಸ್ಪರ ಹಂಚಿಕೊಳ್ಳಲು, ಸಹಕರಿಸಲು ಮತ್ತು ತಮ್ಮನ್ನು ತಾವು ವ್ಯಕ್ತಪಡಿಸಲು ಪೂರಕ ಅವಕಾಶಗಳನ್ನು ಒದಗಿಸುತ್ತಿದ್ದಾರೆಯೇ?
7. ಮುಕ್ತ ಆಟದ ಜೊತೆಗೆ, ಮಕ್ಕಳಿಗೆ ಪ್ರತಿದಿನ ಕನಿಷ್ಠ ಒಂದು ಗಂಟೆ ಕಾಲ ಯೋಜಿತ ಅಥವಾ ರಚನಾತ್ಮಕ ಚಟುವಟಿಕೆಗಳನ್ನು ಒದಗಿಸಲಾಗುತ್ತಿದೆಯೇ?

ಈ ಮಾನದಂಡಗಳು ಅನೇಕ ಅಂಗನವಾಡಿ ಕೇಂದ್ರಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗಿವೆ. ಅಲ್ಲದೆ, ವಿವಿಧ ಕೇಂದ್ರಗಳಲ್ಲಿ ಅನೇಕ ಶಿಕ್ಷಕರು ಮಕ್ಕಳ ಸಮಗ್ರ ಅಭಿವೃದ್ಧಿಯನ್ನು ಖಚಿತಪಡಿಸುವಂತಹ ಉತ್ತಮ ಬೋಧನಾ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಮೇಲ್ವಿಚಾರಕರು ಅಂಗನವಾಡಿ ಶಿಕ್ಷಕರಿಗೆ ಅಗತ್ಯ ಬೆಂಬಲ ನೀಡಲು, ಅವರ ಸವಾಲುಗಳನ್ನು ಗುರುತಿಸಿ ಚರ್ಚಿಸಲು ಹಾಗೂ ಕಾರ್ಯಾಗಾರಗಳಲ್ಲಿ ಅವರ ಅತ್ಯುತ್ತಮ ಆಟ ಆಧಾರಿತ ಚಟುವಟಿಕೆಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ.



**ಶ್ರೇಷ್ಠ ಮಿಶ್ರಾ** ಅವರು ಛತ್ತೀಸ್‌ಗಢದ ರಾಯ್‌ಪುರದಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಹಾಯಕ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಆರಂಭದಿಂದಲೂ ರಾಜ್ಯದ ಆರಂಭಿಕ ಬಾಲ್ಯದ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಇವರು, ಪ್ರಸ್ತುತ ಫೌಂಡೇಷನ್‌ನ 'ಕ್ರೆಶ್' (Creche) ಉಪಕ್ರಮದಲ್ಲಿ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** shrestha.mishra@azimpremjifoundation.org



**ರಜತ್ ಶರ್ಮಾ** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಫೆಲೋ ಆಗಿ ವೃತ್ತಿಜೀವನ ಆರಂಭಿಸಿದರು. ಮೊದಲು ಗಣಿತ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ ಇವರು, ಕ್ರಮೇಣ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡರು. ಪ್ರಸ್ತುತ ಇವರು ಛತ್ತೀಸ್‌ಗಢದ ರಾಯಗಢದಲ್ಲಿ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** rajat.sharma@azimpremjifoundation.org

ಅನುವಾದ: ಅನುರೂಪಾ ರವೀಂದ್ರ | ಪರಿಶೀಲನೆ: ಕಿರಣ್ ಮಂಜುನಾಥ್

# ಮೋಡಿ ಮಾಡಿದ ಆ ಕ್ಷಣ

**ಕಲ್ಪನಾ ಪವಾರ್**

**ಆರಂಭಿಕ ಬಾಲ್ಯದ ಹಂತದಲ್ಲಿ ಆರೈಕೆ ಎಂಬ ಪದಕ್ಕೆ ಬಹಳ ದೊಡ್ಡ ಅರ್ಥವಿದೆ. ಈ ಆರೈಕೆಗೂ ಮತ್ತು ಮಕ್ಕಳ ಕಲಿಕೆಗೂ ನೇರವಾದ ಹಾಗೂ ಬಲವಾದ ಸಂಬಂಧವಿದೆ. ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವರು ಯಾವುದೇ ಭಯ ಅಥವಾ ಹಿಂಜರಿಕೆಯಿಲ್ಲದೆ ತಮ್ಮನ್ನು ತಾವು ವ್ಯಕ್ತಪಡಿಸಲು ಅವಕಾಶ ನೀಡುವುದು ಬಹಳ ಮುಖ್ಯ. ಹೀಗೆ ಮಾಡಿದಾಗ ಮಕ್ಕಳೊಂದಿಗೆ ನಮಗೆ ಏರ್ಪಡುವ ನಿಕಟವಾದ ಪ್ರೀತಿಯ ಬಾಂಧವ್ಯವು, ಅವರು ಕಲಿಯಲು ಸಿದ್ಧರಾಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಲೇಖನವು ಇಂತಹ ಅನುಭವಗಳನ್ನೇ ಆಧರಿಸಿದೆ.**

ಬೆಳಗ್ಗೆ ನಾನು ತರಗತಿಯೊಳಗೆ ಪ್ರವೇಶಿಸುತ್ತಿದ್ದಂತೆ ಮಕ್ಕಳ 'ಗುಡ್ ಮಾರ್ನಿಂಗ್ ಮೇಡಂ', 'ಗುಡ್ ಮಾರ್ನಿಂಗ್ ಮೇಡಂ' ಎಂಬ ಸಿಹಿಯಾದ ಧ್ವನಿ ಕೇಳಿಬರುತ್ತದೆ. ನಾನು ಕೂಡ ಅಷ್ಟೇ ಉತ್ಸಾಹದಿಂದ 'ಗುಡ್ ಮಾರ್ನಿಂಗ್' ಎನ್ನುತ್ತಾ ಅವರ ನಗು ಮತ್ತು ಉತ್ಸಾಹಕ್ಕೆ ನನ್ನ ಮುಗುಳ್ನಗೆಯ ಮೂಲಕ ಉತ್ತರಿಸುತ್ತೇನೆ. ಶುಭಾಶಯ ವಿನಿಮಯದ ಈ ಕ್ಷಣಗಳಲ್ಲಿ ಕೇಳಿಬರುವ ಮಾತುಗಳು ಮಗುವಿನ ಮನಸ್ಥಿತಿ, ಭಾವನಾತ್ಮಕ ಮತ್ತು ಜ್ಞಾನಾತ್ಮಕ ಸ್ಥಿತಿಯನ್ನು ಪ್ರತಿಬಿಂಬಿಸುವುದಲ್ಲದೆ, ಅವರ ದಿನದ ಸಕಾರಾತ್ಮಕ ಆರಂಭದೊಂದಿಗೆ ಸರ್ವಾಂಗೀಣ ಬೆಳವಣಿಗೆಗೆ ಬಲವಾದ ಅಡಿಪಾಯವನ್ನು ಹಾಕುತ್ತವೆ.

ಸಾಮಾನ್ಯವಾಗಿ ನಾನು ದಿನವನ್ನು ಮಕ್ಕಳೊಂದಿಗೆ ಮಾತನಾಡುವ ಮೂಲಕ ಪ್ರಾರಂಭಿಸುತ್ತೇನೆ. ಮಕ್ಕಳು ತಮ್ಮ ಮನಸಿನ ಮಾತುಗಳನ್ನು ಹೇಳಲು ಹಂಬಲಿಸುತ್ತಿರುತ್ತಾರೆ. "ಇಂದು ನಾನು ಎಲ್ಲರಿಗೂ ಹಂಚಲು ಬಿಸ್ಕತ್ತುಗಳನ್ನು ತಂದಿದ್ದೇನೆ"; "ಅಮ್ಮ ನಿನ್ನೆ ನನಗೆ ಹೊಸ ಸ್ಕೂಲ್ ಬ್ಯಾಗ್ ತಂದಿದ್ದಾರೆ"; "ಮೇಡಂ, ನಾನೇನು ಮಾಡಿದ್ದೇನೆ ನೋಡಿ?" ಎಂಬಿತ್ಯಾದಿ ವಿಚಾರಗಳವು ಅವು. ಕೆಲವು ಮಕ್ಕಳು ತಮ್ಮ ಹೆಸರಿನೊಂದಿಗೆ 'ಗುಡ್ ಮಾರ್ನಿಂಗ್' ಕೇಳಿಸಿಕೊಳ್ಳುವ ಮೂಲಕ ತೃಪ್ತಿ ಪಡುತ್ತಾರೆ; ಇನ್ನು ಕೆಲವರು ತಮ್ಮ ವಸ್ತುಗಳ ಕುರಿತು ಹೊಗಳಿಕೆಗಳನ್ನು ಕೇಳಿ ಸಂತಸಪಡುತ್ತಾರೆ. ಇನ್ನು ಕೆಲವು ಮಕ್ಕಳು "ವ್ಹಾ! ಇದು ಚೆನ್ನಾಗಿದೆ! ಉತ್ತಮವಾಗಿದೆ, ಸರಿಯಾಗಿದೆ; ಬ್ರೇಕ್ ಸಮಯದಲ್ಲಿ ನಾವು ಹಂಚಿಕೊಂಡು ತಿನ್ನೋಣ" ಎಂಬ ಮಾತುಗಳನ್ನು ಕೇಳಿ ಖುಷಿ ಪಡುತ್ತಾರೆ.

ಇದೆಲ್ಲ ಮಾತುಕತೆ ನಡೆಯುತ್ತಿರುವ ವೇಳೆಯಲ್ಲಿ ಇನ್ನು ಕೆಲವು ಮಕ್ಕಳು ದೂರ ನಿಂತು ಮೌನವಾಗಿ ಇದೆಲ್ಲವನ್ನೂ ಗಮನಿಸುತ್ತಿರುತ್ತಾರೆ. ಅವರ ಮುಖದಲ್ಲಿನ ಭಾವನೆಗಳನ್ನು ಕಂಡು, ನಾನು ಅವರೊಂದಿಗೆ ಮಾತನಾಡಲು ಆರಂಭಿಸುತ್ತೇನೆ. ಉದಾಹರಣೆಗೆ, "ಹಲೋ ಆರವ್ ಪುಟ್ಟಾ! ಏನಾಯ್ತು? ಸ್ವಲ್ಪ ಬೇಜಾರಾದಂತೆ ಕಾಣುತ್ತಿದ್ದೀಯಾ? ಏನಾಯಿತು?" ಎಂದು ಕೇಳುತ್ತೇನೆ. ಅದಕ್ಕೆ ಮಗು, "ಮೇಡಂ, ನಾನು ಇವತ್ತು ತಿಂಡಿ ತಿನ್ನಲಿಲ್ಲ" ಎನ್ನಬಹುದು. "ಒಹೋ! ನೀವ್ಯಾಕೆ ಇವತ್ತು ತಿಂಡಿ ತಿಂದಿಲ್ಲ?" ಎಂದು ವಿಚಾರಿಸಿದಾಗ, "ಮೇಡಂ, ಅಮ್ಮನಿಗೆ ತಡವಾಗುತ್ತಿತ್ತು. ಹಾಗಾಗಿ ಅಮ್ಮ ನನಗೆ ಬರೀ ಚಹಾ ಕೊಟ್ಟಳು ಮತ್ತು ಶಾಲೆಯಲ್ಲಿ ತಿನ್ನಲು ಹೇಳಿದಳು" ಎಂಬ ಉತ್ತರ ಬರುತ್ತದೆ. ಆಗ ನಾನು, "ಹೌದಾ? ಸರಿ, ಇನ್ನೇನು ಈಗ ಹಾಲು ಮತ್ತು ಮೊಟ್ಟೆ ಬರುತ್ತದೆ ಅಲ್ವಾ? ಅದನ್ನು ನಿನಗೆ ಬೇಗ ಕೊಡುತ್ತೇನೆ. ಆಮೇಲೆ ನಿಮ್ಮ ತಂದೆ-ತಾಯಿಗೆ



ಚಿತ್ರ 1: ಶಿಕ್ಷಕರು ಯಾವಾಗಲೂ ಮಕ್ಕಳನ್ನು ಪ್ರೋತ್ಸಾಹಿಸುವಂತಹ ಪದಗಳನ್ನೇ ಬಳಸಬೇಕು.

> **ಶಾಲಾ-ಪೂರ್ವ ತರಗತಿಗಳಲ್ಲಿ, ಶಿಕ್ಷಕರಿಗೆ ಓದುವ ಮತ್ತು ಬರೆಯುವ ಕೌಶಲಗಳನ್ನು ಕಲಿಸುವುದಲ್ಲದೆ, ಮಗುವಿನ ದೃಷ್ಟಿಕೋನ ಮತ್ತು ಅನುಭವಗಳನ್ನು ಅರ್ಥಮಾಡಿಕೊಳ್ಳಲು ಸಮಯ ನೀಡುವ ಹೊಣೆಗಾರಿಕೆಯೂ ಇರುತ್ತದೆ.**

ಫೋನ್ ಮಾಡಿ, ಇಂದು ತಿಂಡಿ ಮಾಡಲು ಏಕೆ ಸಾಧ್ಯವಾಗಲಿಲ್ಲ ಎಂದು ವಿಚಾರಿಸುತ್ತೇನೆ" ಎಂದು ಧೈರ್ಯ ತುಂಬುತ್ತೇನೆ.

ಆ ನಂತರ ದೂರುಗಳ ಸರದಿ ಶುರುವಾಗುತ್ತದೆ ನೋಡಿ! ಅಲೀನಾ ಬಂದು, "ಮನುಜ್ ಚೆಂಡಿನಿಂದ ಶ್ಯಾಮ್‌ಗೆ ಹೊಡೆದಿದ್ದಾನೆ" ಎಂದು ದೂರುತ್ತಾಳೆ. ಆಗ ನಾನು ಮಕ್ಕಳೊಂದಿಗೆ ಮಾತನಾಡಿ ಘಟನೆಯ ಬಗ್ಗೆ ವಿಚಾರಿಸುತ್ತೇನೆ. ಮನುಜ್‌ನನ್ನು ಕೇಳುತ್ತೇನೆ, "ನೀನು ಚೆಂಡಿನಿಂದ ಹೊಡೆದೆಯಾ?". ಇದಕ್ಕೆ ಅವನು, "ಇಲ್ಲ ಮೇಡಂ, ನನಗೆ ಗೊತ್ತಿಲ್ಲದಂತೆ ಚೆಂಡು ತಾಗಿತು! ನಾನು ಅವನಿಗೆ ಕ್ಷಮೆ ಕೇಳಿದೆ" ಎಂಬುದಾಗಿ ಉತ್ತರಿಸುತ್ತಾನೆ. ಅವರಿಬ್ಬರ ಮಾತನ್ನು ಕೇಳಿಸಿಕೊಂಡ ನಂತರ ನಾನು, "ಮನುಜ್‌ಗೆ ಆಕಸ್ಮಿಕವಾಗಿ ಚೆಂಡು ತಾಗಿದೆ ಮತ್ತು ಅದಕ್ಕಾಗಿ ಅವನು ಕ್ಷಮೆಯನ್ನೂ ಕೇಳಿದ್ದಾನೆ" ಎಂದು ತಿಳಿವಳಿಕೆ ಹೇಳುತ್ತೇನೆ. ಇದನ್ನು ಕೇಳಿದ ನಂತರ ಇಬ್ಬರೂ ಸಮಾಧಾನಗೊಂಡಾಗ, ತರಗತಿಯ ವಾತಾವರಣವು ತಿಳಿಯಾಗುತ್ತದೆ.

ಕೊನೆಯದಾಗಿ ಬರುವ ಸರದಿ, ಹಿಂಜರಿಕೆ ಅಥವಾ ಆತ್ಮವಿಶ್ವಾಸದ ಕೊರತೆಯಿಂದಾಗಿ ಸುಮ್ಮನೆ ಕುಳಿತುಕೊಳ್ಳುವ ಮಕ್ಕಳದ್ದು. ಕೆಲವು ಮಕ್ಕಳು ಕೇವಲ 'ಗುಡ್ ಮಾರ್ನಿಂಗ್' ಎಂದು ಸುಮ್ಮನಾದರೆ, ಇನ್ನು ಕೆಲವರು ಮೌನವಾಗಿ ಶಿಕ್ಷಕಿಯನ್ನೇ ನೋಡುತ್ತಿರುತ್ತಾರೆ. ಅಂತಹ ಸನ್ನಿವೇಶದಲ್ಲಿ, ಶಿಕ್ಷಕಿಯು ಪ್ರತಿ ಮಗುವಿನ ಸ್ವಭಾವವನ್ನು ಅರಿತು ವಿಭಿನ್ನ ರೀತಿಯಲ್ಲಿ ಬೆರೆಯುವುದು ಬಹಳ ಮುಖ್ಯ. ಕೆಲವೊಮ್ಮೆ ಮುಗುಳ್ನಗುತ್ತ "ಗುಡ್ ಮಾರ್ನಿಂಗ್" ಹೇಳುವುದು, ಅವರ ಮೆಚ್ಚಿನ ಆಟ ಅಥವಾ ಆಟದ ಸಾಮಾನಿನ ಬಗ್ಗೆ ಏನಾದರೂ ಕೇಳುವುದು, ಪ್ರೀತಿಯಿಂದ ಅಡ್ಡಹೆಸರಿಟ್ಟು ಕರೆಯುವುದು, ಅಥವಾ ಆ ದಿನದಲ್ಲಿ ನಡೆದ ಯಾವುದಾದರೂ ವಿಷಯದ ಬಗ್ಗೆ ಚರ್ಚಿಸುವುದು ಇತ್ಯಾದಿಗಳನ್ನು ಮಾಡಬೇಕಾಗುತ್ತದೆ. ಈ ಸಣ್ಣ ಸಂವಾದಗಳು ಅವರಿಗೆ ಆಪ್ತತೆ ಮತ್ತು ಸುರಕ್ಷತೆಯ ಭಾವವನ್ನು ನೀಡುತ್ತವೆ. ಹೀಗೆ ಸುಮಾರು 15-10 ನಿಮಿಷಗಳಲ್ಲಿ, ಇಡೀ ಪ್ರಕ್ರಿಯೆಯು ತರಗತಿಯ ವಾತಾವರಣವನ್ನು ಹಗುರಗೊಳಿಸಿ, ದಿನದ ಸಕಾರಾತ್ಮಕ ಆರಂಭಕ್ಕೆ ಅಡಿಪಾಯವನ್ನು ಹಾಕುತ್ತದೆ. ಕೇವಲ 2-1 ನಿಮಿಷಗಳ ಮಾತುಕತೆಯಾದರೂ, ಅವರ ಕುತೂಹಲ ಮತ್ತು ಭಾವನೆಗಳನ್ನು ಆಲಿಸುವುದು ಅವರ ಸರ್ವಾಂಗೀಣ ಬೆಳವಣಿಗೆಯ ಹಲವು ಅಂಶಗಳಿಗೆ ಪೂರಕವಾದ ಪ್ರೋತ್ಸಾಹವನ್ನು ನೀಡುತ್ತದೆ.

ಶಾಲಾ-ಪೂರ್ವ ತರಗತಿಗಳಲ್ಲಿ, ಶಿಕ್ಷಕರಿಗೆ ಓದುವ ಮತ್ತು ಬರೆಯುವ ಕೌಶಲಗಳನ್ನು ಕಲಿಸುವುದಲ್ಲದೆ, ಮಗುವಿನ ದೃಷ್ಟಿಕೋನ ಮತ್ತು ಅನುಭವಗಳನ್ನು ಅರ್ಥಮಾಡಿಕೊಳ್ಳಲು ಸಮಯ ನೀಡುವ ಹೊಣೆಗಾರಿಕೆಯೂ ಇರುತ್ತದೆ. ಆದ್ದರಿಂದ ಒಬ್ಬ ಶಿಕ್ಷಕರ ಜವಾಬ್ದಾರಿ ಅತ್ಯಂತ ಮಹತ್ವದ್ದಾಗಿರುತ್ತದೆ. ತರಗತಿಯಲ್ಲಿ ಎಲ್ಲಾ ಮಕ್ಕಳ ಮಾತುಗಳನ್ನು ಆಲಿಸಿ, ಆಯಾ ಸಂದರ್ಭದ ಪರಿಸ್ಥಿತಿಗೆ ಅನುಗುಣವಾಗಿ ಪ್ರತಿಕ್ರಿಯಿಸುವುದು ಶಿಕ್ಷಕರಿಗೆ ಒಂದು ದೊಡ್ಡ ಸವಾಲೇ ಸರಿ. ಅಂತಹ ಪರಿಸ್ಥಿತಿಯಲ್ಲಿ ಶಿಕ್ಷಕರಿಗೆ, ಶಾಲೆಗೆ ಬರುವ ಮುನ್ನ ನಡೆದ ಘಟನೆ ಅಥವಾ ಮಗುವಿನ ಅಂದಿನ ಮನಸ್ಥಿತಿಯ ಬಗ್ಗೆ ಯಾವುದೇ ಮುನ್ಸೂಚನೆ ಇರುವುದಿಲ್ಲ.

ಪ್ರತಿದಿನ ಬೆಳಿಗ್ಗೆ ಮಕ್ಕಳು ಬೇರೆ-ಬೇರೆ ಭಾವನೆಗಳು ಮತ್ತು ಅನುಭವಗಳೊಂದಿಗೆ ಶಾಲೆಗೆ ಬರುತ್ತಾರೆ. ಯಾರೋ ಉಪಹಾರ ಸೇವಿಸದೆ, ಇನ್ಯಾರೋ ಮನೆಯಲ್ಲಿ ಬೈಸಿಕೊಂಡು, ಮತ್ತೆ ಕೆಲವರು ಕೌಟುಂಬಿಕ ಸಮಸ್ಯೆಗಳಿಂದ ಬೇಸರಗೊಂಡು ಬಂದರೆ, ಇನ್ನು ಕೆಲವರು ಯಾವುದೋ ಸಂತೋಷ ಅಥವಾ ಹಬ್ಬದ ಸಂಭ್ರಮದಲ್ಲಿರುತ್ತಾರೆ. ಅದರ ಪ್ರಭಾವವು ಅವರ ಮುಖದ ಭಾವನೆ, ನಡವಳಿಕೆ ಮತ್ತು ಉತ್ಸಾಹದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಬೆಳಗಿನ ಆ ಸುಂದರ ಕ್ಷಣಗಳಲ್ಲಿ ಪ್ರೀತಿ ಮತ್ತು ಸೌಹಾರ್ದತೆಯಿಂದ ಪ್ರತಿಯೊಬ್ಬ ಮಗುವಿನ ಭಾವನೆಗಳನ್ನು ಅರ್ಥಮಾಡಿಕೊಂಡು ನಿಭಾಯಿಸಬೇಕಾಗುತ್ತದೆ. ಮಕ್ಕಳು ಯಾರಾದರೂ ತಮ್ಮ ಮಾತನ್ನು ಗಮನವಿಟ್ಟು ಆಲಿಸಲಿ, ತಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳಲಿ ಎಂದು ಬಯಸುವ ಅಮೂಲ್ಯ ಕ್ಷಣಗಳಾಗಿರುತ್ತವೆ ಅವು. ಅಲ್ಲದೆ ಅವು, ಶಿಕ್ಷಕಿಯು ಬೇಸರದಿಂದಿರುವ ಮಗುವಿಗೆ ಮುಗುಳ್ನಕ್ಕು ಆದರಿಸುವ, ಚಿಂತೆಗೀಡಾದ ಮಗುವಿಗೆ ಧೈರ್ಯ ತುಂಬುವ ಹಾಗೂ ಅವರ ಖುಷಿಯಲ್ಲಿ ತಾವೂ ಪಾಲ್ಗೊಳ್ಳುವ ಸಮಯಗಳಾಗಿರುತ್ತವೆ. ಈ ಮೂಲಕ ತರಗತಿಯಲ್ಲಿ ಒಂದು ಸಹಜ, ಸಂವೇದನಾಶೀಲ ಹಾಗೂ ಸೃಜನಶೀಲ ಕಲಿಕಾ ವಾತಾವರಣವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ.

ಮಕ್ಕಳೊಂದಿಗೆ ತೊಡಗಿಸಿಕೊಳ್ಳುವಾಗ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂವಾದದ ಪ್ರಾಮುಖ್ಯತೆಯನ್ನು ನಾನು ಈ ಕೆಳಗಿನ ಅನುಭವಗಳಿಂದ ಅರ್ಥಮಾಡಿಕೊಂಡಿದ್ದೇನೆ:

## ಆಲಿಸುವ ಕಲೆ

ಸೋಹನ್ ಯಾರನ್ನಾದರೂ ಚೆಂಡಿನಿಂದ ಹೊಡೆಯುವುದು ಅಥವಾ ಸುಪ್ರಿಯಾ ತನ್ನ ವಸ್ತುವನ್ನು ಹಂಚಿಕೊಳ್ಳಲು ನಿರಾಕರಿಸುವುದು, ಅವರ ಭಾವನೆಗಳನ್ನು ವ್ಯಕ್ತಪಡಿಸುವ ವಿಧಾನಗಳಾಗಿರುತ್ತವೆ. ಶಿಕ್ಷಕರು ಪ್ರತಿಯೊಂದು ಧ್ವನಿಯನ್ನೂ ಗಮನವಿಟ್ಟು ಆಲಿಸುವುದು ಮತ್ತು ಅರ್ಥಮಾಡಿಕೊಳ್ಳುವುದು ತುಂಬಾ ಮುಖ್ಯ. ಮಗುವಿನ ವಿಶ್ವಾಸವನ್ನು ಶಿಕ್ಷಕರು ಗೆಲ್ಲದಿದ್ದರೆ, ಆ ಮಕ್ಕಳು ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಹಿಂಜರಿಯುವುದು ಮಾತ್ರವಲ್ಲದೆ, ಕಲಿಯುವಾಗ ಉಂಟಾಗುವ ತಪ್ಪುಗಳು, ಅನುಮಾನಗಳು ಅಥವಾ ತೊಂದರೆಗಳನ್ನು ಎಂದಿಗೂ ಶಿಕ್ಷಕರ ಮುಂದೆ ಹೇಳಿಕೊಳ್ಳುವುದಿಲ್ಲ. ಈ ರೀತಿ ಆಲಿಸುವುದು ಮತ್ತು ಅರ್ಥಮಾಡಿಕೊಳ್ಳುವುದೇ ಶಿಕ್ಷಕರ ಹಾಗೂ ಮಗುವಿನ ನಡುವಿನ ನಂಬಿಕೆ ಮತ್ತು ಸಂಬಂಧದ ಮೊದಲ ಮೆಟ್ಟಿಲಾಗಿದೆ.

## ಅರ್ಥ ಮಾಡಿಕೊಳ್ಳುವ ಜವಾಬ್ದಾರಿ

ಅನೇಕ ಬಾರಿ ಘಟನೆಗಳು ಮೊದಲ ನೋಟಕ್ಕೆ ಕಂಡಷ್ಟು ಸರಳವಾಗಿರುವುದಿಲ್ಲ. ಮನುಜ್, ಶ್ಯಾಮ್ ಮತ್ತು ಅಲೀನಾ ಅವರ ಸಂಭಾಷಣೆಯಲ್ಲಿ ನಾವು ನೋಡಿದಂತೆ, ಆಟವಾಡುವಾಗ ಅಚಾನಕ್ ಆಗಿ ಏಟು ಬಿದ್ದಿತ್ತು. ಒಬ್ಬ ಶಿಕ್ಷಕಿಯಾಗಿ, ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದೆ ಅದು ಉದ್ದೇಶಪೂರ್ವಕವಾಗಿ ನಡೆದಿದೆ ಎಂದು ನಾನು ಭಾವಿಸಿದ್ದರೆ, ಅದು ತಪ್ಪು ನಿರ್ಧಾರವಾಗುತ್ತಿತ್ತು ಮಾತ್ರವಲ್ಲದೆ ಮನುಜ್‌ನ ಆತ್ಮವಿಶ್ವಾಸವೂ ಇದರಿಂದ ಘಾಸಿಗೊಳ್ಳುತ್ತಿತ್ತು. ಪ್ರತಿಯೊಂದು ಸಂದರ್ಭವನ್ನು ತಾಳ್ಮೆ ಮತ್ತು ಸಂವೇದನಾಶೀಲತೆಯಿಂದ ಅರ್ಥಮಾಡಿಕೊಳ್ಳುವುದು ಎಷ್ಟು ಮುಖ್ಯ ಎಂಬುದನ್ನು ಈ ಅನುಭವವು ನನಗೆ ಕಲಿಸಿತು. ಶಿಕ್ಷಕರಾಗಿ ನಾವು ಘಟನೆಗಳನ್ನು ಕೇವಲ ಮೇಲ್ನೋಟದಿಂದ ಗ್ರಹಿಸಬಾರದು; ಬದಲಾಗಿ ಸಮಗ್ರ ಚಿತ್ರಣವನ್ನು ಗಮನದಲ್ಲಿಟ್ಟುಕೊಂಡು ಎರಡೂ ಕಡೆಯ ಆಯಾಮಗಳನ್ನು ಪರಿಶೀಲಿಸಬೇಕು. ಈ ದೃಷ್ಟಿಕೋನವು ನಮಗೆ ಸತ್ಯವನ್ನು ಅರಿಯಲು ಸಹಾಯ ಮಾಡುತ್ತದೆ. ಈ ಪ್ರಕ್ರಿಯೆಯಿಂದ ಮಕ್ಕಳು ಕೂಡ ಸಮಾಜದ ಪೂರ್ವಗ್ರಹ ಪೀಡಿತ ಅಭಿಪ್ರಾಯಗಳನ್ನು ಕುರುಡಾಗಿ ಒಪ್ಪುವ ಬದಲು, ತಮ್ಮ ತರ್ಕ ಮತ್ತು ಸತ್ಯದ ಆಧಾರದ ಮೇಲೆ ಪರಿಸ್ಥಿತಿಯನ್ನು ವಿಶ್ಲೇಷಿಸಲು ಕಲಿಯುತ್ತಾರೆ.

## ಪೂರ್ವಗ್ರಹಗಳನ್ನು ಮೀರುವುದು

ಪ್ರತಿಯೊಂದು ಮಗುವಿನ ಸ್ವಭಾವವೂ ವಿಭಿನ್ನವಾಗಿರುತ್ತದೆ. ಕೆಲವರು ದೂರು ನೀಡುತ್ತಾರೆ, ಇನ್ನು ಕೆಲವರು ಎಲ್ಲವನ್ನೂ ಮೌನವಾಗಿ ಸಹಿಸಿಕೊಳ್ಳುತ್ತಾರೆ, ಮತ್ತೆ ಕೆಲವರು ಹಠಮಾರಿಗಳಂತೆ ಕಾಣುತ್ತಾರೆ. ನಾವು ಅತಿ ಬೇಗನೆ 'ಈ ಮಗು ಯಾವಾಗಲೂ ಪೋಕರಿ' ಎಂದು

ತೀರ್ಮಾನಿಸಿಬಿಡುತ್ತೇವೆ. ಆದರೆ ಅದು ಯಾವಾಗಲೂ ಸರಿಯಾಗಿರುವುದಿಲ್ಲ. ಒಮ್ಮೆ ಮಂದೀಪ್ ಕೈಯಿಂದ ನೀರು ಕೆಳಗೆ ಚೆಲ್ಲಿತು. ತಕ್ಷಣವೇ ಕೆಲವು ಮಕ್ಕಳು, 'ಈಗ ನೀನು ತಪ್ಪು ಮಾಡಿದ್ದೀಯಾ, ನಿನಗೆ ಶಿಕ್ಷೆ ಆಗುತ್ತದೆ!' ಎಂದು ಕಿರಿಚತೊಡಗಿದರು. ಅವರ ಧ್ವನಿಯಲ್ಲಿ ಕಠೋರತೆ ಮತ್ತು ಭಯವಿತ್ತು. ಇದೊಂದು ಸರಿಪಡಿಸಬಹುದಾದ ತಪ್ಪು ಎಂದು ಯಾರೂ ಯೋಚಿಸಲಿಲ್ಲ. ಆಗ ನಾನು ತಕ್ಷಣ ಅವರಿಗೆ ಹೊಸ ಉಪಾಯವೊಂದನ್ನು ನೀಡಿದೆ, 'ಮಕ್ಕಳೇ, ಇದು ಕೇವಲ ಒಂದು ತಪ್ಪು, ಇದನ್ನು ಸರಿಪಡಿಸಲು ಅವಕಾಶವಿದೆ. ತಪ್ಪು ನಡೆದ ತಕ್ಷಣ ಶಿಕ್ಷೆ ವಿಧಿಸಲೇಬೇಕು ಎಂದೇನಿಲ್ಲ. ನಿಮ್ಮೆಲ್ಲರ ಕೈಯಿಂದಲೂ ಒಂದಿಲ್ಲೊಂದು ಸಲ ತಪ್ಪುಗಳಾಗುತ್ತವೆ ಅಲ್ಲವೇ?' ಎಂದು ಕೇಳಿದೆ. ನಂತರ ಮುಗುಳ್ನಗುತ್ತ ಮಂದೀಪ್‌ನನ್ನು ಕೇಳಿದೆ, 'ಹೇಳು ಮಂದೀಪ್, ಈಗ ನೀನು ಏನು ಮಾಡಬಹುದು?'. ಅವನು ಕೂಡಲೇ 'ನಾನು ನೀರನ್ನು ಒರೆಸುತ್ತೇನೆ' ಎಂದನು. ಉಳಿದ ಮಕ್ಕಳಿಗೆ ಈ ಉಪಾಯ ಇಷ್ಟವಾಯಿತು. ನೀರು ಒರೆಸುವುದನ್ನು ಮಕ್ಕಳು ಶಿಕ್ಷೆ ಎಂದು ಭಾವಿಸಬಾರದು ಎಂಬ ಉದ್ದೇಶದಿಂದ, "ಮಂದೀಪ್‌ಗೆ ಯಾರಾದರೂ ಸಹಾಯ ಮಾಡಬಹುದೇ?" ಎಂದು ಕೇಳಿದೆ. ಕೆಲವು ಮಕ್ಕಳು ಒಪ್ಪಿದರೆ, ಮತ್ತೆ ಕೆಲವು ಮಕ್ಕಳು "ತಪ್ಪು ಮಾಡಿದವನೇ ಒರೆಸಲಿ" ಎಂದರು. ಆಗ ನಾನು "ಸರಿ, ನಾನೇ ಮಂದೀಪ್‌ಗೆ ಸಹಾಯ ಮಾಡುತ್ತೇನೆ" ಎಂದೆ. ಅಷ್ಟರಲ್ಲಿ ಇಬ್ಬರು ಮಕ್ಕಳು ಮುಂದೆ ಬಂದರು, ನಂತರ ಇನ್ನೂ ಕೆಲವರು ಸೇರಿಕೊಂಡರು. ಈಗ ಚೆಲ್ಲಿದ ನೀರನ್ನು ಒರೆಸುವುದು ಕೇವಲ ಕೆಲಸವಾಗದೆ ಒಂದು ಚಟುವಟಿಕೆಯಾಗಿ ಬದಲಾಯಿತು ಮತ್ತು ಅದರೊಳಗೆ ಒಂದು ಸಕಾರಾತ್ಮಕ ಪಾಠವೂ ಇತ್ತು.

## ರೂಢಿಗತವಾದುದನ್ನು ತ್ಯಜಿಸುವುದು

ಒಂದು ದಿನ ನಾವು ತರಗತಿಯನ್ನು ಸ್ವಚ್ಛಗೊಳಿಸಲು ನಿರ್ಧರಿಸಿದೆವು. ನಾನು ಒಬ್ಬ ಮಗುವಿಗೆ ಕಸದ ಬುಟ್ಟಿಯನ್ನು ತರಲು ಹೇಳಿದಾಗ, ಅವನು ತಕ್ಷಣ "ಛೀ-ಛೀ" ಎನ್ನುತ್ತಾ ನಿರಾಕರಿಸಿದನು. ಆಗ ನಾನೇ ಮುಗುಳ್ನಗುತ್ತಾ ಕಸದ ಬುಟ್ಟಿಯನ್ನು ಎತ್ತಿಕೊಂಡು ಬಂದೆ. ಉಳಿದ ಮಕ್ಕಳು ಕೂಡ "ಛೀ-ಛೀ, ಗಲೀಜು!" ಎಂದು ಕೂಗಿದರು. ಸ್ವಚ್ಛಗೊಳಿಸುವುದು ಯಾವುದೋ ಒಂದು ನಿರ್ದಿಷ್ಟ ವರ್ಗದ ಕೆಲಸ ಅಥವಾ ಕೀಳುಮಟ್ಟದ ಕೆಲಸ ಎಂಬ ಪೂರ್ವಗ್ರಹವು ಈ ಮಕ್ಕಳಲ್ಲಿ ಸಮಾಜದಿಂದಲೇ ಬಂದಿದೆ ಎಂಬುದು ನನಗೆ ಅರಿವಾಯಿತು. ನಾನು ಅವರಿಗೆ, "ಸ್ವಚ್ಛಗೊಳಿಸುವುದು ಯಾವುದೇ ಕೆಲಸಕ್ಕಿಂತ ಕಡಿಮೆಯಲ್ಲ; ಇದು ನಮ್ಮ ಜವಾಬ್ದಾರಿ. ನಾವು ಮನೆಯನ್ನು ಹೇಗೆ ಸ್ವಚ್ಛವಾಗಿಡುತ್ತೇವೆಯೋ, ಹಾಗೆಯೇ ಶಾಲೆ ಮತ್ತು ಪರಿಸರವನ್ನು ಸ್ವಚ್ಛವಾಗಿಡುವುದು ನಮ್ಮದೇ ಕರ್ತವ್ಯ" ಎಂದು ವಿವರಿಸಿದೆ. ಮಕ್ಕಳು ನನ್ನ ಮಾತನ್ನು ಆಲಿಸಿ, ಒಪ್ಪಿಗೆ ಸೂಚಿಸಿ, ಸಂತೋಷದಿಂದ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡರು. ಶಿಕ್ಷಕರ ಸಂವಾದ, ಉದಾಹರಣೆ ಮತ್ತು ಮಾರ್ಗದರ್ಶನವು ಮಕ್ಕಳಲ್ಲಿರುವ ಪೂರ್ವಗ್ರಹ ಹಾಗೂ ತಾರತಮ್ಯಗಳನ್ನು ಹೋಗಲಾಡಿಸಿ ಹೊಸ ದೃಷ್ಟಿಕೋನವನ್ನು ಮೂಡಿಸಲು ಸಹಾಯ ಮಾಡುತ್ತದೆ ಎಂಬುದು ಈ ಅನುಭವದಿಂದ ಸಾಬೀತಾಯಿತು.

## ಪದಗಳ ಮಹತ್ವದ ಶಕ್ತಿ

ಶಿಕ್ಷಕರ ಸಣ್ಣಪುಟ್ಟ ಸಕಾರಾತ್ಮಕ ಮೆಚ್ಚುಗೆಯ ಮಾತುಗಳು, ಅಂದರೆ, "ನೀನು ತುಂಬಾ ಸುಂದರವಾದ ಚಿತ್ರ ಬಿಡಿಸಿದ್ದೀಯಾ", "ನೀನು ಇದನ್ನು ಮಾಡಬಲ್ಲೆ" ಅಥವಾ "ನಾನು ನಿನಗೆ ಸಹಾಯ ಮಾಡಲೇ?" ಎಂದು ಕೇಳುವುದು ಮಗುವಿನ ಆತ್ಮವಿಶ್ವಾಸಕ್ಕೆ ರೆಕ್ಕೆ ಮೂಡಿಸುತ್ತದೆ. ಅದೇ ರೀತಿ ಒಂದು ನಕಾರಾತ್ಮಕ ಮಾತು, ಉದಾಹರಣೆಗೆ, "ನಿನಗೆ ಇಷ್ಟೂ ಮಾಡಲು ಬರುವುದಿಲ್ಲವೇ!", "ನಿನಗೆ ಇದನ್ನು ಮಾಡಲು ಬರಲ್ಲ" ಅಥವಾ "ನಿನ್ನಿಂದ ಆಗಲ್ಲ ಬಿಡು" ಎಂಬಿತ್ಯಾದಿ ಕೊಂಕು ಮಾತುಗಳು ಅವರ ಮನೋಬಲವನ್ನು ಕುಗ್ಗಿಸಿಬಿಡಬಹುದು. ಈ ಸಂದರ್ಭದಲ್ಲಿ "ಇದು ನನಗೆ ಮಾಡಲು ಬರುತ್ತದೆ" ಎಂದು ಪದೇಪದೇ ಎಂದು ಹೇಳುತ್ತಿದ್ದ ಭಾರತಿ ಎಂಬ ಮಗು ನೆನಪಿಗೆ ಬರುತ್ತದೆ. ಒಮ್ಮೆ ಅವಳು ತನ್ನ ಶೂ ಲೇಸ್ ಕಟ್ಟಲು ಪ್ರಯತ್ನಿಸುತ್ತಿದ್ದಳು. ಸ್ವಲ್ಪ ಸಮಯದ ನಂತರ ನಾನು "ಭಾರತಿ, ಲೇಸ್ ಕಟ್ಟಿ ಆಯಿತೇ?" ಎಂದು ಕೇಳಿದಾಗ ಅವಳು "ನಾನು ಕಟ್ಟುತ್ತಿದ್ದೇನೆ" ಎಂದು ಪದೇಪದೇ ಹೇಳಿದಳು. ಎರಡು-ಮೂರು ಬಾರಿ ಹೀಗಾದಾಗ ಏನೋ ತೊಂದರೆ ಇರಬಹುದು ಎಂದು ನನಗೆ ಅನಿಸಿತು. ಹತ್ತಿರ ಹೋಗಿ ನೋಡಿದಾಗ ಲೇಸ್‌ನಲ್ಲಿ ಗಂಟು ಬಿದ್ದಿರುವುದು ತಿಳಿಯಿತು. ಆಗ ನಾನು ಮೆಲ್ಲನೆ ಸಕಾರಾತ್ಮಕವಾಗಿ "ಭಾರತಿ, ನಾನು ನಿನಗೆ ಸಹಾಯ ಮಾಡಲೇ?" ಎಂದು ಕೇಳಿದೆ. ಅದಕ್ಕವಳು "ಹ್ಞೂಂ" ಎಂದು ಒಪ್ಪಿಕೊಳ್ಳುತ್ತಲೇ, "ನನಗೆ ಮಾಡಲು ಬರುತ್ತದೆ" ಎಂದು ಹೇಳಿದಳು. ನಾನು ಗಂಟನ್ನು ಬಿಡಿಸಿ ಅವಳಿಗೆ ಲೇಸ್ ಕಟ್ಟಲು ಅವಕಾಶ ನೀಡಿದೆ. ನಾನು ಅವಳನ್ನು ಅಸಮರ್ಥಳು ಎಂದು ಭಾವಿಸಬಹುದು ಎಂಬ ಭಯ ಅವಳಲ್ಲಿತ್ತು ಅನ್ನಿಸುತ್ತದೆ. ಮಕ್ಕಳ ಮುಂದೆ ಅವರನ್ನು ಪ್ರೋತ್ಸಾಹಿಸುವ ಮತ್ತು ಆತ್ಮವಿಶ್ವಾಸ ಹೆಚ್ಚಿಸುವ ಪದಗಳನ್ನೇ ಬಳಸುವುದು ಯಾವಾಗಲೂ ಉತ್ತಮವಾದ ನಡೆ ಎಂದು ಈ ಅನುಭವ ನನಗೆ ಕಲಿಸಿಕೊಟ್ಟಿತು.

---



**ಕಲ್ಪನಾ ಪನ್ವಾರ್** ಅವರು ಕಳೆದ ಏಳು ವರ್ಷಗಳಿಂದ ಉತ್ತರಾಖಂಡದ ಉತ್ತರಕಾಶಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಆರಂಭಿಕ ಬಾಲ್ಯದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದು, ಶಾಲೆಯಲ್ಲಿ ಬುನಾದಿ ಹಂತದ ಶೈಕ್ಷಣಿಕ ಚಟುವಟಿಕೆಗಳ ಯೋಜನೆ ಮತ್ತು ಅನುಷ್ಠಾನದ ಜವಾಬ್ದಾರಿಯನ್ನು ಹೊತ್ತಿದ್ದಾರೆ.

**ಸಂಪರ್ಕ:** kalpana.panwar@azimpremjifoundation.org

ಅನುವಾದ: ಆಶಾ ಸಿಂಗ್ | ಪರಿಶೀಲನೆ: ರಾಕೇಶ್ ಪೂಂಜ

# ಹಾಜರಾತಿ ಪಟ್ಟಿಯ ಮೂಲಕ ಕಲಿಕೆ

**ಸ್ವಪ್ನಾಲಿ ಚವ್ಹಾಣ್**

**ಕೊಲ್ಹಾಪುರದ ಆನಂದಿ ಬಾಲಭವನ ಫೌಂಡೇಶನ್‌ನಲ್ಲಿ 3ರಿಂದ 12 ವರ್ಷದ ಮಕ್ಕಳಿಗಾಗಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗುತ್ತದೆ. ಇಲ್ಲಿ 'ಆಟವೇ ಆಧಾರ' ಎಂಬ ತತ್ತ್ವದಡಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಹೊಸ ಹೊಸ ಚಟುವಟಿಕೆಗಳನ್ನು ನಿರಂತರವಾಗಿ ಸೇರಿಸಲಾಗುತ್ತದೆ. ಮುಖ್ಯವಾಗಿ ಮಕ್ಕಳ ದೊಡ್ಡ ಸ್ನಾಯುಗಳ ಚಲನೆ (Gross Motor) ಮತ್ತು ಸೂಕ್ಷ್ಮ ಸ್ನಾಯುಗಳ ಚಲನೆಯ (Fine Motor) ಕೌಶಲಗಳನ್ನು ವೃದ್ಧಿಸುವುದು, ಪ್ರಕೃತಿ ವೀಕ್ಷಣೆ ಮತ್ತು ಭಾಷಾ ಬೆಳವಣಿಗೆಯನ್ನು ಉತ್ತೇಜಿಸುವುದು ಈ ಚಟುವಟಿಕೆಗಳ ಮುಖ್ಯ ಉದ್ದೇಶ.**



ಚಿತ್ರ 1: ಮಕ್ಕಳು ತಮ್ಮ ಭಾವನೆಗಳನ್ನು ತಮ್ಮದೇ ಆದ ರೀತಿಯಲ್ಲಿ ವ್ಯಕ್ತಪಡಿಸಲು ಸ್ವಾತಂತ್ರ್ಯ ನೀಡಿದಾಗ ಮಾತ್ರ ಅವರ ಭಾವನಾತ್ಮಕ ಬೆಳವಣಿಗೆ ಸಾಧ್ಯವಾಗುತ್ತದೆ.

"A ಫಾರ್? B ಫಾರ್?" ಎಂದು ಅನಯನ ತಾಯಿ ಕೇಳುತ್ತಾರೆ. ಅನಯನಿಗೆ ಈಗ ಒಂದೂವರೆ ವರ್ಷ. ಅವನು ಇತ್ತೀಚೆಗಷ್ಟೇ ಮಾತನಾಡಲು ಶುರು ಮಾಡಿದ್ದಾನೆ. "ಸಾನು, ನೀನು 'ಅ' ಅಕ್ಷರವನ್ನು ಹೀಗೆ ಬರೆಯಬೇಕು...", ಸ್ವಾನಂದಿಯ ತಾಯಿ ತಮ್ಮ ಮಗಳ ಕೈ ಹಿಡಿದು 'ಅ' ಅಕ್ಷರದ ಆಕಾರವನ್ನು ಬರೆಯಲು ಕಲಿಸುತ್ತಾರೆ. ಮತ್ತೊಂದು ಉದಾಹರಣೆಯಲ್ಲಿ, ತಾಯಿಯೊಬ್ಬರು ತಮ್ಮ ಮಗುವು ಅಕ್ಷರಗಳನ್ನು ಉಲ್ಟಾ (ಮಿರರ್ ಇಮೇಜ್ ಅಥವಾ ಕನ್ನಡಿಯ ಪ್ರತಿಬಿಂಬದಂತೆ) ಬರೆಯುತ್ತಿರುವುದನ್ನು ಕಂಡು ಮುನಿಸಿಕೊಳ್ಳುತ್ತಾರೆ. ಆ ಮಗು ಈಗಷ್ಟೇ ನರ್ಸರಿಗೆ ದಾಖಲಾಗಿದೆ. ಸಾಮಾನ್ಯವಾಗಿ ನಾವು ನಮ್ಮ ಸುತ್ತಮುತ್ತ ಇಂತಹ ಘಟನೆಗಳನ್ನು ಅದೆಷ್ಟೋ ಬಾರಿ ನೋಡುತ್ತಿರುತ್ತೇವೆ. ಮಗು ಶಾಲೆಗೆ ಹೋಗಲು ಶುರು ಮಾಡುತ್ತಿದ್ದಂತೆಯೇ, ಪೋಷಕರು ಅದಕ್ಕೆ ಓದು-ಬರಹ ಕಲಿಸಲು ತರಾತುರಿಗೆ ಬೀಳುತ್ತಾರೆ. ಇವೆಲ್ಲ ಪ್ರಕ್ರಿಯೆಗಳ ನಡುವೆ, ಆ ಮಗುವು ಅದನ್ನು ಕಲಿಯುತ್ತಿದೆಯೇ ಅಥವಾ ಅರ್ಥೈಸಿಕೊಳ್ಳುತ್ತಿದೆಯೇ ಎಂಬ ವಿಷಯವೇ ಗೌಣವಾಗಿಬಿಡುತ್ತದೆ. ಪೋಷಕರು ಮಗುವನ್ನು ಒಂದು ಚೌಕಟ್ಟಿಗೆ ಒಳಪಡಿಸಲು ಪ್ರಯತ್ನಿಸುವುದರಿಂದ, ಮಗುವು ಕ್ರಮೇಣ ತನ್ನನ್ನು ತಾನು ಸ್ವತಂತ್ರವಾಗಿ ಅಭಿವ್ಯಕ್ತಗೊಳಿಸುವುದನ್ನೇ ಮರೆತುಬಿಡುತ್ತದೆ.

ಒಂದು ವೇಳೆ ಮಗುವು ಮನಸ್ಸಿಗೆ ತೋಚಿದಂತೆ ಗೆರೆಗಳನ್ನು ಎಳೆಯುತ್ತಿದ್ದರೆ ಅಥವಾ ಅರ್ಥಹೀನವೆನಿಸುವ ಆಕೃತಿಗಳನ್ನು ಬಿಡಿಸುತ್ತಿದ್ದರೆ, ಪೋಷಕರು ಅದನ್ನು ಗಮನಿಸಬೇಕು. ಆ ಆಕೃತಿಗಳು ಪೋಷಕರಿಗೆ ಅರ್ಥಹೀನವಾಗಿ ಕಂಡರೂ, ಮಗುವಿನ ದೃಷ್ಟಿಯಲ್ಲಿ ಅದಕ್ಕೊಂದು ಅರ್ಥ ಮತ್ತು ಹೆಸರಿರುತ್ತದೆ. ಓರೆಕೋರೆಯಾದ ಹಾಗೂ ಚಿತ್ರವಿಚಿತ್ರವಾದ ಇಂತಹ ಚಿತ್ರಗಳೇ ಮಗು ತನ್ನನ್ನು ತಾನು ಅಭಿವ್ಯಕ್ತಿಸಿಕೊಳ್ಳುವ ವಿಧಾನಗಳೆಂದು ಪೋಷಕರು ಅರ್ಥಮಾಡಿಕೊಳ್ಳಬೇಕು. ಮಗು ತನ್ನದೇ ಆದ ರೀತಿಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸಲು ನಾವು ಅವಕಾಶ ಮತ್ತು ಸ್ವಾತಂತ್ರ್ಯ ನೀಡಿದಾಗ ಮಾತ್ರ ಅದರ ಭಾವನಾತ್ಮಕ ಬೆಳವಣಿಗೆ ಸಾಧ್ಯವಾಗುತ್ತದೆ. ಮಕ್ಕಳ ಮನೋವಿಜ್ಞಾನದ ಅನೇಕ ಅಧ್ಯಯನಗಳು ಈ ವಿಷಯವನ್ನು ಪುಷ್ಟೀಕರಿಸುತ್ತವೆ. ಇಂದಿನ ಪರಿಸ್ಥಿತಿಯಲ್ಲಿ ಬೌದ್ಧಿಕ ಮಟ್ಟಕ್ಕಿಂತ (IQ), ಭಾವನಾತ್ಮಕ ಬುದ್ಧಿವಂತಿಕೆಯನ್ನು (EQ) ಹೆಚ್ಚು ಮಹತ್ವದ್ದೆಂದು ಪರಿಗಣಿಸಲಾಗುತ್ತಿದೆ.

ಕೊಲ್ಹಾಪುರದ ಆನಂದಿ ಬಾಲಭವನ ಫೌಂಡೇಶನ್‌ನಲ್ಲಿ 3ರಿಂದ 12 ವರ್ಷದ ಮಕ್ಕಳಿಗಾಗಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗುತ್ತದೆ. ಇಲ್ಲಿ 'ಆಟವೇ ಆಧಾರ' ಎಂಬ ತತ್ವದಡಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಹೊಸ ಹೊಸ ಚಟುವಟಿಕೆಗಳನ್ನು ನಿರಂತರವಾಗಿ ಸೇರಿಸಲಾಗುತ್ತದೆ. ಮುಖ್ಯವಾಗಿ ಮಕ್ಕಳ ದೊಡ್ಡ ಸ್ನಾಯುಗಳ ಚಲನೆ (Gross Motor) ಮತ್ತು ಸೂಕ್ಷ್ಮ ಸ್ನಾಯುಗಳ ಚಲನೆಯ (Fine Motor) ಕೌಶಲಗಳನ್ನು ವೃದ್ಧಿಸುವುದು, ಪ್ರಕೃತಿ ವೀಕ್ಷಣೆ ಮತ್ತು ಭಾಷಾ ಬೆಳವಣಿಗೆಯನ್ನು

ಉತ್ತೇಜಿಸುವುದು ಈ ಚಟುವಟಿಕೆಗಳ ಮುಖ್ಯ ಉದ್ದೇಶ. ಈ ಎಲ್ಲಾ ಚಟುವಟಿಕೆಗಳನ್ನು ನಡೆಸುವಾಗ, ಮಕ್ಕಳು ಮುಕ್ತವಾಗಿ ಮಾತನಾಡಲು ಮತ್ತು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸುವುದರ ಕಡೆಗೆ ನಾವು ವಿಶೇಷ ಗಮನ ಹರಿಸುತ್ತೇವೆ.

ಕಳೆದ ವರ್ಷ ಭಾಷಾ ಬೆಳವಣಿಗೆಗಾಗಿ ಇನ್ನೂ ಏನೇನು ಮಾಡಬಹುದು ಎಂದು ನಾವು ಆಲೋಚಿಸುತ್ತಿದ್ದ ಸಂದರ್ಭದಲ್ಲಿ, ನಮಗೆ ಕ್ವೆಸ್ಟ್ ಸಂಸ್ಥೆಯ ಪಲಾವಿ ಯೋಜನೆಯಡಿ ಪ್ರಕಟವಾದ 'ಮಾಝಿ ಅಂಗನವಾಡಿ' ಎಂಬ ಪುಸ್ತಕ ದೊರೆಯಿತು. ಕ್ವೆಸ್ಟ್ ಸಂಸ್ಥೆಯು ಶಿಕ್ಷಣಕ್ಷೇತ್ರದಲ್ಲಿ ರಚನಾತ್ಮಕ ದೃಷ್ಟಿಕೋನದಲ್ಲಿ (Constructivism) ಕೆಲಸ ಮಾಡುತ್ತದೆ.[1] ಮಕ್ಕಳ ಹಾಜರಾತಿಯ ಪ್ರಮಾಣವನ್ನು ಸುಧಾರಿಸಲು ಮತ್ತು ಅವರಲ್ಲಿ ಬೆಳೆಯುತ್ತಿರುವ ಬರವಣಿಗೆಯ ಕೌಶಲಗಳ ಮೇಲಾಗುವ ಪರಿಣಾಮವನ್ನು ಅಭ್ಯಾಸ ಮಾಡಲು, ನಾವು ಈ ನೂತನ ಚಟುವಟಿಕೆಯನ್ನು ಪ್ರಯೋಗಿಸಲು ನಿರ್ಧರಿಸಿದೆವು.

## ಹಾಜರಾತಿ ಪಟ್ಟಿಯ ತಯಾರಿಕೆ

ಪ್ರಾರಂಭದಲ್ಲಿ, ನಾವು ಒಂದು ದೊಡ್ಡ ಪೋಸ್ಟರ್ ಪೇಪರ್ ಮೇಲೆ ಏಳು ದಿನಗಳಿಗೆ ಏಳು ಕಾಲಂಗಳಿರುವ ಸಾಪ್ತಾಹಿಕ ಹಾಜರಾತಿ ಚಾರ್ಟ್ ಅನ್ನು ಸಿದ್ಧಪಡಿಸಿದೆವು. ಇದರಲ್ಲಿ ಕ್ರಮ ಸಂಖ್ಯೆ ಮತ್ತು ಮಕ್ಕಳ ಹೆಸರು ಬರೆಯಲು ಪ್ರತ್ಯೇಕ ಕಾಲಂಗಳಿದ್ದವು. ದಿನ ಮತ್ತು ದಿನಾಂಕಗಳನ್ನು ಕೆಂಪು ಬಣ್ಣದ ಸ್ಕೆಚ್ ಪೆನ್ನಿನಿಂದ ಬರೆಯಲಾಗಿತ್ತು. ಮಕ್ಕಳು ಕೆಂಪು ಬಣ್ಣದಲ್ಲಿ ಬರೆದ ಪದಗಳನ್ನು ಅಥವಾ ಪದ್ಯವನ್ನು ಸುಲಭವಾಗಿ ನೆನಪಿಟ್ಟುಕೊಳ್ಳುತ್ತಾರೆ ಎಂಬುದನ್ನು ನಾವು ಗಮನಿಸಿದೆವು. ಅವರಿಗೆ ಆ ಪದಗಳ ಅರ್ಥ ತಿಳಿಯದಿದ್ದರೂ ಸಹ, ಅವರ ಮೆದುಳು ಅಕ್ಷರಗಳ ಆಕಾರವನ್ನು ಬಹಳ ಬೇಗನೆ ಗ್ರಹಿಸಬಲ್ಲದು. ಅಂದಹಾಗೆ, ಪ್ರತಿಯೊಬ್ಬ ಮಗುವಿನ ಹೆಸರನ್ನು ಕೂಡ ಬೇರೆ ಬೇರೆ ಬಣ್ಣಗಳಲ್ಲಿ ಬರೆಯಲಾಗಿತ್ತು.

ಪ್ರತಿಯೊಬ್ಬ ಮಗುವಿನ ಹೆಸರಿನ ಮುಂದೆ ಮತ್ತು ವಾರದ ಪ್ರತಿಯೊಂದು ದಿನದ ಕೆಳಗೆ ಒಂದು ಆಯತಾಕಾರದ ಸ್ಥಳವನ್ನು ಬಿಡಲಾಗಿತ್ತು. ಪ್ರತಿ ಮಗುವು ಪ್ರತಿದಿನ, ಆಯಾ ದಿನದ ಕೆಳಗೆ ನೀಡಲಾದ ಚೌಕದಲ್ಲಿ ತನ್ನ ಹೆಸರನ್ನು ಬರೆಯಬೇಕು ಎಂದು ನಿರ್ಧರಿಸಲಾಯಿತು.

## ಚಟುವಟಿಕೆಯ ಅನುಷ್ಠಾನ

ಮುಂದಿನ ಹಂತವು ಮಕ್ಕಳಿಂದ ಚಾರ್ಟ್ ಅನ್ನು ಭರ್ತಿ ಮಾಡಿಸುವುದಾಗಿತ್ತು. ಪ್ರತಿಯೊಬ್ಬ ಮಗುವನ್ನು ಹತ್ತಿರ ಕರೆದು, ಆ ಮಗುವಿನ ಹೆಸರಿನ ಪ್ರತಿಯೊಂದು ಅಕ್ಷರದ ಮೇಲೆ ಬೆರಳಿಟ್ಟು ಎರಡು-ಮೂರು ಬಾರಿ ಹೆಸರನ್ನು ಓದಿ ಹೇಳಲಾಯಿತು. ಅದೇ ರೀತಿ, ದಿನ ಮತ್ತು ದಿನಾಂಕವನ್ನೂ ಸಹ ಓದಿ ಹೇಳಲಾಯಿತು. ಆನಂತರ, ಆಯಾ ದಿನದ ಕಾಲಂನಲ್ಲಿ ನೀಡಲಾದ ಸ್ಥಳದಲ್ಲಿ ತನ್ನ ಹೆಸರನ್ನು ಬರೆಯಲು ಮಗುವಿಗೆ ತಿಳಿಸಲಾಯಿತು.

ಐದು ವರ್ಷ ಮೀರಿದ ಮಕ್ಕಳಿಗೆ ತಮ್ಮ ಹೆಸರನ್ನು ಬರೆಯಲು ಅದಾಗಲೇ ಬರುತ್ತಿದ್ದುದರಿಂದ, ಅವರು ಬೇಗನೆ ಹೆಸರನ್ನು ಬರೆದರು. ನಾಲ್ಕರಿಂದ ಐದು ವರ್ಷದ ಕೆಲವು ಮಕ್ಕಳು ಚಾರ್ಟ್ ಮೇಲೆ ಬರೆದಿದ್ದ ಹೆಸರುಗಳನ್ನು ನೋಡಿ ನಕಲು ಮಾಡಲು ಪ್ರಯತ್ನಿಸಿದರು. ಇನ್ನು ಕೆಲವು ಮಕ್ಕಳು ಕೇವಲ ವೃತ್ತಗಳು, ಗೆರೆಗಳು, ಚಿತ್ರಗಳು ಅಥವಾ ವಿನ್ಯಾಸಗಳನ್ನು ಬಿಡಿಸಿದರು. ಈ ಚಟುವಟಿಕೆಯು ವರ್ಷಪೂರ್ತಿ ಮುಂದುವರಿಯುವುದರಿಂದ, ನಾವು ಈ ಮಕ್ಕಳ ಪ್ರಗತಿಯ ಮೇಲೆ ವಿಶೇಷವಾಗಿ ಗಮನಹರಿಸಿದೆವು.

ಪ್ರತಿ ವಾರ, ನಾವು ಮಕ್ಕಳ ಹೆಸರುಗಳನ್ನು ಒಂದೇ ಬಣ್ಣದಲ್ಲಿ ಮತ್ತು ಅದೇ ಕ್ರಮದಲ್ಲಿ ಬರೆಯಲು ಪ್ರಾರಂಭಿಸಿದೆವು. ಇದರ ಪರಿಣಾಮವಾಗಿ, ಮಕ್ಕಳಿಗೆ ತಮ್ಮ ಹೆಸರಿನ ಬಣ್ಣ ಮತ್ತು ಅದು ಇರುವ ಜಾಗ ನೆನಪಿನಲ್ಲಿ ಉಳಿಯಲು ಶುರುವಾಯಿತು. ಅವರಿಗೆ ಇನ್ನೂ ಅಕ್ಷರಗಳ ಗುರುತೇ ಇಲ್ಲದಿದ್ದರೂ

> **ಆಟಗಳ ಸಮಯದಲ್ಲಿ ಮಕ್ಕಳ ಉತ್ಸಾಹವನ್ನು ನೋಡಲು ಬಹಳ ಮುದ ನೀಡುತ್ತದೆ. ಮಕ್ಕಳ ಈ ಉತ್ಸಾಹವು ಅವರ ಕಲಿಕೆಯಲ್ಲಿ ಶಿಕ್ಷಕರಿಗೆ ಬಹಳ ಸಹಕಾರಿಯಾಗುತ್ತದೆ.**

ಸಹ, ಬಣ್ಣ ಮತ್ತು ಕ್ರಮಸಂಖ್ಯೆಯ ಆಧಾರದ ಮೇಲೆ ತಮ್ಮ ಹೆಸರನ್ನು ಗುರುತಿಸಲು ಪ್ರಯತ್ನಿಸುತ್ತಿದ್ದರು.

ಪ್ರತಿ ಬಾರಿ ಹೆಸರು ಬರೆಯುವ ಮೊದಲು, ನಾವು ತಪ್ಪದೇ ದಿನ ಮತ್ತು ದಿನಾಂಕವನ್ನು ಓದಿ ಹೇಳುತ್ತಿದ್ದೆವು ಮತ್ತು ನಮ್ಮ ಬೆರಳುಗಳಿಂದ ಆ ಅಕ್ಷರಗಳ ಕಡೆಗೆ ಸಂಜ್ಞೆ ಮಾಡುತ್ತಿದ್ದೆವು. ನಂತರ ನಾವು ಹೇಳಿದ ಮೇಲೆ ದಿನ ಮತ್ತು ದಿನಾಂಕವನ್ನು ಪುನರಾವರ್ತಿಸಲು ಅವರಿಗೆ ಹೇಳುತ್ತಿದ್ದೆವು. ನಾವು ಅವರಿಗೆ "ನಿಮ್ಮ ಹೆಸರನ್ನು ಹುಡುಕಬಲ್ಲಿರಾ?" ಎಂದು ಕೇಳಿದಾಗ, ಅವರು ಬಣ್ಣದ ಸುಳಿವುಗಳ ಮೂಲಕ ತಮ್ಮ ಹೆಸರನ್ನು ತೋರಿಸುತ್ತಿದ್ದರು. ನಂತರ ತಮ್ಮ ಹೆಸರಿಗಾಗಿ ನೀಡಲಾದ ಜಾಗದಲ್ಲಿ ಅವರದೇ ಆದ ಶೈಲಿಯಲ್ಲಿ ಹೆಸರುಗಳನ್ನು ಬರೆಯುತ್ತಿದ್ದರು.

ಆಟಗಳ ಸಮಯದಲ್ಲಿ ಮಕ್ಕಳ ಉತ್ಸಾಹವನ್ನು ನೋಡಲು ಬಹಳ ಮುದ ನೀಡುತ್ತದೆ. ಮಕ್ಕಳ ಈ ಉತ್ಸಾಹವು ಅವರ ಕಲಿಕೆಯಲ್ಲಿ ಶಿಕ್ಷಕರಿಗೆ ಬಹಳ ಸಹಕಾರಿಯಾಗುತ್ತದೆ.

ವೇದಶ್ರೀಯು ಆರಂಭದಲ್ಲಿ ತನ್ನ ಹೆಸರಿನ ಬದಲು ಐಸ್‌ಕ್ರೀಮ್ ಮತ್ತು ಚಾಕೊಲೇಟ್ ಚಿತ್ರಗಳನ್ನು ಬಿಡಿಸಿದಳು. ಪಿಯೂಷ್ ತನ್ನ ಹೆಸರಿನ ಅಕ್ಷರಗಳ ಆಕೃತಿಯನ್ನು ಹೋಲುವ ಒಂದು ವಿನ್ಯಾಸವನ್ನು ಬರೆಯಲು ಪ್ರಯತ್ನಿಸಿದನು. ವೇದಾಂತ್, ಗೆರೆಗಳು ಮತ್ತು ವೃತ್ತಗಳಂತಹ ಕೆಲವು ಆಕೃತಿಗಳನ್ನು ಬಿಡಿಸಿದನು. ವಿಶ್ವೇಶ್ ತನ್ನ ಹೆಸರಿನ ಕೆಲವು ಅಕ್ಷರಗಳನ್ನು ಬರೆಯಲು ಪ್ರಯತ್ನಿಸಿದ್ದಲ್ಲದೆ, ಅವುಗಳ ಜೊತೆಗೆ ಕೆಲವು ಗೆರೆಗಳನ್ನೂ ಎಳೆದನು. ಓವಿ ತನ್ನ ಹೆಸರನ್ನು ಬಹುತೇಕ ಸರಿಯಾಗಿ ಬರೆಯಲು ಪ್ರಯತ್ನಿಸಿದಳಾದರೂ, ಕೆಲವು ಅಕ್ಷರಗಳು ಬಿಟ್ಟುಹೋಗಿದ್ದವು. ನಾವು ಹೆಸರುಗಳನ್ನು ಮರಾಠಿಯಲ್ಲಿ ಬರೆದಿದ್ದರೂ, ಆದಿನಾಥ್ ಮಾತ್ರ ಸತತವಾಗಿ ತನ್ನ ಹೆಸರನ್ನು ಇಂಗ್ಲಿಷ್‌ನಲ್ಲಿಯೇ ಬರೆಯುತ್ತಿದ್ದನು. ಅರ್ಣವ್ ತನ್ನ ಹೆಸರನ್ನು ತಕ್ಷಣವೇ ಗುರುತಿಸಿದ್ದಲ್ಲದೆ, ಅದನ್ನು ನೋಡಿ ಬರೆಯಲು ಯತ್ನಿಸುತ್ತಿದ್ದನು. ಎಲ್ಲಾ ಮಕ್ಕಳು ಕುಳಿತುಕೊಂಡು ಹೆಸರು ಬರೆಯಲು ಪ್ರಯತ್ನಿಸುತ್ತಿದ್ದರೆ, ಅರ್ಣವ್ ಮಾತ್ರ ಮಲಗಿಕೊಂಡೇ ಚಾರ್ಟ್ ಮೇಲೆ ನಿಧಾನವಾಗಿ ತನ್ನ ಹೆಸರು ಬರೆಯುತ್ತಿದ್ದನು. ಏನಾದರೂ ತಪ್ಪಾದರೆ ಅದನ್ನು ಅಳಿಸಿ, ಮತ್ತೆ ಸರಿಯಾಗಿ ಬರೆಯಲು ಪ್ರಯತ್ನಿಸುತ್ತಿದ್ದನು. ಪಿಯೂಷ್ ಕೂಡ ಸತತವಾಗಿ ಇದೇ ರೀತಿಯ ಪ್ರಯತ್ನವನ್ನು ಮಾಡುತ್ತಿದ್ದನು. ವಿಹಾನ್ ಬಹಳ ಗಮನವಿಟ್ಟು ನೋಡಿ ತನ್ನ ಹೆಸರನ್ನು ಬರೆಯುತ್ತಿದ್ದನು. ಆದರೆ ಕೆಲವು ಮಕ್ಕಳು ಆಟವಾಡುವ ಗಡಿಬಿಡಿಯಲ್ಲಿದ್ದ ಕಾರಣ, ತರಾತುರಿಯಲ್ಲಿ ಹೆಸರು ಬರೆದು ಓಡಿ ಹೋಗುತ್ತಿದ್ದರು. ನಾವು ಈ ಚಟುವಟಿಕೆಯನ್ನು ಜುಲೈ 1ರಿಂದ ಪ್ರಾರಂಭಿಸಿ ಸೆಪ್ಟೆಂಬರ್‌ವರೆಗೆ ಮುಂದುವರಿಸಿದೆವು.

## ಮಕ್ಕಳ ಪ್ರಗತಿ

ಮೂರು ತಿಂಗಳ ನಂತರ, ನಾವು ಚಾರ್ಟ್‌ನಲ್ಲಿದ್ದ ಮಕ್ಕಳ ಹೆಸರುಗಳ ಬಣ್ಣ ಮತ್ತು ಅನುಕ್ರಮವನ್ನು ಬದಲಾಯಿಸಿದೆವು. ಹಾಗೂ ಎಂದಿನಂತೆ, ಅವರ ಹೆಸರುಗಳನ್ನು ಹುಡುಕಲು ಅವರಿಗೆ ಹೇಳಿದೆವು. ಆಗ ಕೆಲವು ಮಕ್ಕಳು ಗೊಂದಲಕ್ಕೊಳಗಾದರು. ವೇದಾಂತ್ ಮತ್ತು ವೇದಶ್ರೀ ಅವರ ಹೆಸರುಗಳಲ್ಲಿ 'ವೇ' ಎಂಬ ಮೊದಲ ಅಕ್ಷರವು ಸಮಾನವಾಗಿದ್ದರಿಂದ, ಇಬ್ಬರೂ ಒಬ್ಬರ ಹೆಸರನ್ನು ಮತ್ತೊಬ್ಬರದ್ದೆಂದು ತಪ್ಪಾಗಿ ತಿಳಿದುಕೊಂಡರು. ಅರ್ಣವ್, ಪಿಯೂಷ್ ಮತ್ತು ವಿಹಾನ್ ತಮ್ಮ ಹೆಸರುಗಳನ್ನು ಗುರುತಿಸಿದರು. ಓವಿ, ಆದಿನಾಥ್ ಮತ್ತು ವಿಶ್ವೇಶ್ ಸ್ವಲ್ಪ ಗೊಂದಲಕ್ಕೊಳಗಾದರು. ಮೊದಲು ತನ್ನ ಹೆಸರನ್ನು ಸ್ವಲ್ಪವೂ ಗುರುತಿಸಲು ಸಾಧ್ಯವಾಗದಿದ್ದ ಕೀರ್ತಿ, ಈಗ ಸರಿಯಾಗಿ ಗುರುತಿಸಲು ಪ್ರಾರಂಭಿಸಿದ್ದಳು. ವೇದಶ್ರೀ ಅನತಿ ಸಮಯದಲ್ಲೇ

ಚಿತ್ರ ಬಿಡಿಸುವುದನ್ನು ಬಿಟ್ಟು, ತನ್ನ ಹೆಸರಿನ ಅಕ್ಷರಗಳನ್ನು ಗಮನವಿಟ್ಟು ನೋಡಿ ಬರೆಯಲು ಪ್ರಯತ್ನಿಸತೊಡಗಿದಳು. ಈ ಎಲ್ಲಾ ಮಕ್ಕಳು 4ರಿಂದ 6 ವರ್ಷ ವಯಸ್ಸಿನವರಾಗಿದ್ದರು. ಹೆಸರನ್ನು ನೋಡಿ ಬರೆಯಲು ನಾವು ಆದಿನಾಥನಿಗೆ ಪದೇ ಪದೇ ನೆನಪಿಸುತ್ತಿದ್ದೆವು. ಆದರೆ ಅವನು ತನ್ನ ಹೆಸರನ್ನು ಇಂಗ್ಲಿಷ್‌ನಲ್ಲಿಯೇ ಬರೆಯಬೇಕೆಂದು ಹಠಕ್ಕೆ ಬಿದ್ದಿದ್ದನು. ಪಿಯೂಷ್, ಅರ್ಣವ್, ವಿಶ್ವೇಶ್ ಮತ್ತು ಓವಿ ಸಾಕಷ್ಟು ಪ್ರಗತಿ ಸಾಧಿಸಿದ್ದರು. ಈಗ ಅವರು ಗುರುತಿಸಬಹುದಾದ ರೀತಿಯಲ್ಲಿ ಹೆಸರುಗಳನ್ನು ಬರೆಯಲಾರಂಭಿಸಿದ್ದರು. ಅಷ್ಟಾದರೂ, ಇನ್ನು ಕೆಲವರಿಗೆ ಪಟ್ಟಿಯಲ್ಲಿ ತಮ್ಮ ಹೆಸರನ್ನು ಹುಡುಕಲು ಈಗಲೂ ಕಷ್ಟವಾಗುತ್ತಿತ್ತು ಮತ್ತು ನಾವು ಅವರಿಗೆ ಸಹಾಯ ಮಾಡುವುದನ್ನು ಮುಂದುವರಿಸಿದೆವು.

ಕೆಲವು ಮಕ್ಕಳಂತೂ ಇನ್ನೂ ಕೇವಲ ಗೆರೆಗಳು ಮತ್ತು ವೃತ್ತಗಳನ್ನು ಬಿಡಿಸುವುದರಲ್ಲಿಯೇ ಸಂತುಷ್ಟರಾಗಿದ್ದರು. ಅವರು ಹಾಜರಾತಿ ಚಾರ್ಟ್ ಕುರಿತು ಎಷ್ಟು ಕುತೂಹಲಭರಿತರಾಗಿದ್ದರೆಂದರೆ, ಮನೆಗೆ ಹೋಗುವ ಮುನ್ನ "ಮೌಸಿ, ನಾನು ಹಾಜರಾತಿ ಚಾರ್ಟ್ ಮೇಲೆ ನನ್ನ ಹೆಸರು ಬರೆಯಬೇಕು" ಎಂದು ನಮಗೆ ನೆನಪಿಸುತ್ತಿದ್ದರು. ಅವರು ಈ ಕೆಲಸವನ್ನು ಬಹಳ ಖುಷಿಯಿಂದ ಮಾಡುತ್ತಿದ್ದರು. ಮುಂದೆ, ಮೊದಲು ಯಾರು ಹೆಸರು ಬರೆಯಬೇಕು ಎನ್ನುವ ಬಗ್ಗೆ ಅವರಲ್ಲಿ ಸಣ್ಣಪುಟ್ಟ ಜಗಳಗಳು ಕೂಡ ನಡೆಯಲಾರಂಭಿಸಿದವು. ನಾವು ಕೂಡ ಮಕ್ಕಳ ಜೊತೆ ಈ ಕ್ಷಣಗಳನ್ನು ಆನಂದಿಸುತ್ತಿದ್ದೆವು. ಈಗ ಪ್ರತಿ ವಾರ ಎಚ್ಚರಿಕೆಯಿಂದ ಚಾರ್ಟ್ ಸಿದ್ಧಪಡಿಸುವುದು ನಮ್ಮ ಜವಾಬ್ದಾರಿಯಾಯಿತು. ಹೀಗೆ ಮಾಡುವಾಗ ನಾವು ಕೂಡ ಒಂದಿಷ್ಟು ಸಣ್ಣಪುಟ್ಟ ವಿಷಯಗಳನ್ನು ಕಲಿತೆವು. ಉದಾಹರಣೆಗೆ, ಪೋಸ್ಟರ್ ಹಾಳೆಯ ಹಿಂಭಾಗವನ್ನೂ ಸಹ ಬಳಸಬಹುದು ಎಂಬುದು ನಮ್ಮ ಅರಿವಿಗೆ ಬಂತು.



ಚಿತ್ರ 2: ಮಕ್ಕಳು ತಾವಾಗಿಯೇ ತಮ್ಮ ಹಾಜರಾತಿಯನ್ನು ದಾಖಲಿಸಿರುವ ಹಾಜರಾತಿ ಪಟ್ಟಿ.

## ನಾವು ಕಠಿಣತೆಯ ಮಟ್ಟವನ್ನು ಹೇಗೆ ಹೆಚ್ಚಿಸಿದೆವು?

ಈ ನಡುವೆ ದೀಪಾವಳಿ ರಜೆ ಬಂತು. ಆಗ ಒಂದು ತಿಂಗಳವರೆಗೆ ಈ ಚಟುವಟಿಕೆಯನ್ನು ಮಾಡಲು ಸಾಧ್ಯವಾಗಿರಲಿಲ್ಲ. ಡಿಸೆಂಬರ್‌ನಲ್ಲಿ ನಾವು ಮಕ್ಕಳ ಮುಂದೆ ಒಂದು ಹೊಸ ಸವಾಲನ್ನು ಇಟ್ಟೆವು. ಈ ಬಾರಿ ಎಲ್ಲಾ ಹೆಸರುಗಳನ್ನು ಒಂದೇ ಬಣ್ಣದಲ್ಲಿ ಬರೆದೆವು. ಅಷ್ಟಾದರೂ ಅನೇಕ ಮಕ್ಕಳು ತಮ್ಮ ಹೆಸರನ್ನು ಗುರುತಿಸಲು ಶಕ್ತರಾದರು. ಕೆಲವರಿಗೆ ಮಾತ್ರ ಮತ್ತೆ ಸ್ವಲ್ಪ ಸಹಾಯದ ಅವಶ್ಯಕತೆಯಿತ್ತು. ಆದಿನಾಥ್ ಈಗ ತನ್ನ ಹೆಸರನ್ನು ಮರಾಠಿಯಲ್ಲಿ ಬರೆಯಲು ಪ್ರಾರಂಭಿಸಿದ್ದನು. ನಾಲ್ಕು ವರ್ಷದ ಅರ್ಣವ್ ಹಠಾತ್ತನೆ ತನ್ನ ಹೆಸರಿನ ಇಂಗ್ಲಿಷ್ ಅಕ್ಷರಗಳನ್ನು ಬರೆಯಲು ಶುರು ಮಾಡಿದನು; ಆದರೆ ಒಂದು ತಿಂಗಳಲ್ಲೇ ಮತ್ತೆ ಮರಾಠಿಯಲ್ಲಿಯೇ ತನ್ನ ಹೆಸರನ್ನು ಬರೆಯತೊಡಗಿದನು. ಅರ್ಣವ್ ತನ್ನ ಹೆಸರಿನಲ್ಲಿ 'ರ' ಅಕ್ಷರ ಇರುವುದನ್ನು ಗಮನಿಸಿ, ನಮ್ಮ ಬಳಿ ಬಂದು "ನನ್ನ ಹೆಸರಿನಲ್ಲಿ 'ರ' ಇದೆ" ಎಂದು ಹೇಳತೊಡಗಿದನು. ಇದು ನಮಗೆ ತುಂಬ ಖುಷಿ ಕೊಟ್ಟ ವಿಷಯವಾಗಿತ್ತು. ಏಕೆಂದರೆ, ಮಕ್ಕಳು ಪದಗಳಲ್ಲಿನ ಧ್ವನಿಗಳನ್ನು ಗುರುತಿಸಲು ಪ್ರಾರಂಭಿಸಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಯಿತು.

ಅದರ ಮುಂದಿನ ತಿಂಗಳು ನಾವು ಮತ್ತೊಂದು ಪ್ರಯೋಗ ಮಾಡಿದೆವು. ನಾವು ಮಕ್ಕಳ ಹೆಸರುಗಳಿರುವ ಕಾಗದದ ಪಟ್ಟಿಗಳನ್ನು ಸಿದ್ಧಪಡಿಸಿ, ಅವುಗಳನ್ನು ಅಲ್ಲಲ್ಲಿ ಹರಡಿದೆವು. ನಂತರ ಮಕ್ಕಳನ್ನು ತಮ್ಮ ಹೆಸರನ್ನು ಹುಡುಕಲು ಹೇಳಿದೆವು. ಅನೇಕ ಮಕ್ಕಳು ತಮ್ಮ ಹೆಸರನ್ನು ಹುಡುಕುವಲ್ಲಿ ಯಶಸ್ವಿಯಾದರು. ಕಠಿಣತೆಯನ್ನು ಇನ್ನಷ್ಟು ಹೆಚ್ಚಿಸುವ ಉದ್ದೇಶದಿಂದ ನಾವು ಅವರ ಹೆಸರಿನ ಅಕ್ಷರಗಳನ್ನು ಪ್ರತ್ಯೇಕಿಸಿದೆವು ಹಾಗೂ ಅವುಗಳನ್ನು ಬೇರೆ ಬೇರೆ ಚೀಟಿಗಳ ಮೇಲೆ ಬರೆದೆವು. ನಂತರ ಆ ಚೀಟಿಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ತಮ್ಮ ಹೆಸರನ್ನು ರಚಿಸಲು ಮಕ್ಕಳಿಗೆ ಹೇಳಿದೆವು.

ಇಲ್ಲಿ ನಮಗೆ ಅಚ್ಚರಿ ಕಾದಿತ್ತು. ಅರ್ಧಕ್ಕಿಂತ ಹೆಚ್ಚು ಮಕ್ಕಳು ಈ ಎರಡೂ ಚಟುವಟಿಕೆಗಳನ್ನು ಯಶಸ್ವಿಯಾಗಿ ಪೂರೈಸಿದ್ದರು! ಈ ಆಟಗಳ ಸಮಯದಲ್ಲಿ ನೀವು ಮಕ್ಕಳ ಉತ್ಸಾಹವನ್ನು ನೋಡಬೇಕಿತ್ತು. ಅವರ ಈ ಉತ್ಸಾಹವು ನಮಗೆ ಹೊಸ ವಿಧಾನಗಳ ಬಗ್ಗೆ ಯೋಚಿಸಲು ಸ್ಫೂರ್ತಿ ನೀಡಿತು. ಆಗ ನಾವು ಪದಗಳಲ್ಲಿನ ಧ್ವನಿಗಳನ್ನು ಗುರುತಿಸುವ ಆಟವನ್ನು ಆಡಲು ಪ್ರಾರಂಭಿಸಿದೆವು. ಈ ಆಟದಲ್ಲಿ, ಮಕ್ಕಳು ಜೋರಾಗಿ ಒಂದು ಪದವನ್ನು ಹೇಳುತ್ತಾರೆ; ಒಂದು ಬಾರಿ ಚಪ್ಪಾಳೆ ತಟ್ಟುತ್ತಾರೆ ಹಾಗೂ ಆ ಪದದಲ್ಲಿ ಬರುವ ಪ್ರತಿಯೊಂದು ಶಬ್ದದ ಧ್ವನಿಗೆ ಒಂದು ಬಾರಿ ಜಿಗಿಯುತ್ತಾರೆ. ಅವರಿಗೆ ಈ ಆಟ ತುಂಬಾ ಇಷ್ಟವಾಯಿತು. ಕೆಲವರು ಅದ್ಭುತವಾಗಿ ಪ್ರಯತ್ನಿಸಿದರೆ, ಇನ್ನು ಕೆಲವರು ಒಂದಿಷ್ಟು ಗೊಂದಲಕ್ಕೊಳಗಾದರು. ಉದಾಹರಣೆಗೆ, ಮೂರು ಧ್ವನಿಗಳಿರುವ ಪದಗಳಲ್ಲಿ ಉಚ್ಚಾರಣೆ ಬಹಳ ವೇಗವಾಗಿದ್ದಾಗ, ಮಕ್ಕಳು ಕೆಲವೊಮ್ಮೆ ಕೇವಲ ಎರಡು ಬಾರಿ ಮಾತ್ರ ಚಪ್ಪಾಳೆ ತಟ್ಟುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ನಾವು ಅವರ ನೆರವಿಗೆ ನಿಲ್ಲುತ್ತಿದ್ದೆವು ಮತ್ತು ಅವರು ಮತ್ತೆ ಹೊಸ ಉತ್ಸಾಹದಿಂದ ಆಟವಾಡಲು ಪ್ರಾರಂಭಿಸುತ್ತಿದ್ದರು. ಏಪ್ರಿಲ್ ವೇಳೆಗೆ, ಈ ಹಿಂದೆ ಕೇವಲ ವಿನ್ಯಾಸಗಳು, ಚಿತ್ರಗಳು ಮತ್ತು ಗೆರೆಗಳನ್ನು ಎಳೆಯುತ್ತಿದ್ದ ವೇದಶ್ರೀ, ವೇದಾಂತ್, ಪಿಯೂಷ್, ಓವಿ, ಅರ್ಣವ್ ಮತ್ತು ಆದಿನಾಥ್ ಮುಂತಾದ ಮಕ್ಕಳು ಈಗ ತಮ್ಮ ಹೆಸರನ್ನು ಸರಿಯಾದ ರೀತಿಯಲ್ಲಿ ಬರೆಯತೊಡಗಿದ್ದರು. ಅಷ್ಟೇ ಅಲ್ಲದೆ, 'ವಿಶ್ವೇಶ' ಎಂಬ ಕಷ್ಟಕರವಾದ ಅಕ್ಷರಗಳಿರುವ ಹೆಸರನ್ನು ಹೊಂದಿದ್ದ ಮಕ್ಕಳೂ ಸಹ ತಮ್ಮ ಹೆಸರನ್ನು ಚೆನ್ನಾಗಿ ಬರೆಯಲು ಕಲಿತಿದ್ದರು.

ಈಗ ಅವರು ಹೆಸರು ಬರೆಯುವಾಗ ಪ್ರತಿಯೊಂದು ಅಕ್ಷರದ ಧ್ವನಿಯನ್ನು ಜೋರಾಗಿ ಉಚ್ಚರಿಸುತ್ತಿದ್ದರು. "ಇದು ನನ್ನ ಸಹಿ", "ಮೌಸಿ, ನಾನು ಚಾರ್ಟ್ ಮೇಲೆ ನನ್ನ ಸಹಿ ಮಾಡಬೇಕಿದೆ" ಎಂದೆಲ್ಲಾ ಸಂಭ್ರಮದಿಂದ ಮಾತನಾಡತೊಡಗಿದ್ದರು. ತಮ್ಮದೇ ಹೆಸರನ್ನು 'ಸಹಿ' ಮಾಡುವ ಅವರ ಈ ಸಂಭ್ರಮದಲ್ಲಿ ನಾವು ಕೂಡ ಭಾಗಿಯಾಗುತ್ತಿದ್ದೆವು.

ಮಕ್ಕಳಿಗೆ ಮೊದಲು ತಮ್ಮದೇ ಆದ ರೀತಿಯಲ್ಲಿ ಬರೆಯಲು ಅವಕಾಶ ಒದಗಿಸಬೇಕು. ಅವು ಕೇವಲ ಗೆರೆಗಳು, ವೃತ್ತಗಳು ಅಥವಾ ಚಿತ್ರಗಳೇ ಆಗಿರಲಿ;

ಇವು ಅವರಿಗೆ ಕ್ರಮೇಣವಾಗಿ ಬರೆಯುವುದನ್ನು ಮತ್ತು ಓದುವುದನ್ನು ಕಲಿಯಲು ಬುನಾದಿಯಾಗುತ್ತವೆ. ಇದರ ಜೊತೆಗೆ, ಪದದ ಮೇಲೆ ಬೆರಳಿಟ್ಟು ಅಕ್ಷರಗಳ ಧ್ವನಿಯನ್ನು ಹೊರಡಿಸುವ ವಿಧಾನವನ್ನು ಕಲಿಸುವುದರಿಂದ, ಅವರಿಗೆ ಅಕ್ಷರ ಮತ್ತು ಧ್ವನಿಯ ನಡುವಿನ ಸಂಬಂಧವನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ. ಇದು ಅವರಿಗೆ ಓದುವಿಕೆ ಮತ್ತು ಬರೆಯುವಿಕೆ ಎರಡನ್ನೂ ಪ್ರಯತ್ನಿಸಲು ಪ್ರೋತ್ಸಾಹ ನೀಡುತ್ತದೆ. ಹಾಜರಾತಿ ಚಾರ್ಟ್ ಚಟುವಟಿಕೆಯನ್ನು ಮಕ್ಕಳು ಬಹಳ ಉತ್ಸಾಹದಿಂದ ಮಾಡಿದರು. ನಾವು ಇತರರು ಮಾಡಿದ ಆರಂಭಿಕ ಸಾಕ್ಷರತಾ ಪ್ರಯೋಗಗಳ ಬಗ್ಗೆ ಓದಿದ್ದೆವು ಮತ್ತು ಅವುಗಳ ಚಿತ್ರಗಳನ್ನು ಸಹ ನೋಡಿದ್ದೆವು; ಆದರೆ ಈಗ ಈ ಪ್ರಕ್ರಿಯೆಯ ಮೂಲಕ ಮಕ್ಕಳ ಬರವಣಿಗೆಯ ಸಾಮರ್ಥ್ಯವು ಯಾವ ರೀತಿಯಲ್ಲಿ ವಿಕಸನಗೊಳ್ಳುತ್ತದೆ ಎಂಬುದು ಪ್ರತ್ಯಕ್ಷವಾಗಿ ನಮ್ಮ ಅನುಭವಕ್ಕೆ ಬಂದಿತು.

ಈ ವರ್ಷ ನಾವು ಹೊಸ ಚಟುವಟಿಕೆಗಳನ್ನು ಒಳಗೊಂಡಿರುವ ಮುಂದಿನ ಹಂತಕ್ಕೆ ಪ್ರವೇಶಿಸಲಿದ್ದೇವೆ. ಅವುಗಳ ಮುಖೇನ, ಈಗಷ್ಟೇ ಓದಲು ಮತ್ತು ಬರೆಯಲು ಪ್ರಾರಂಭಿಸಿದ ಮಕ್ಕಳು ತಮ್ಮ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲಿದ್ದಾರೆ ಹಾಗೂ ತಮ್ಮನ್ನು ತಾವು ಅಭಿವ್ಯಕ್ತಿಪಡಿಸಿಕೊಳ್ಳುವ ನೂತನ ಮಾರ್ಗಗಳನ್ನು ಕಂಡುಕೊಳ್ಳಲಿದ್ದಾರೆ. ಈ ನಿರಂತರ ಪ್ರಕ್ರಿಯೆಗಳು ಕೇವಲ ಶೈಕ್ಷಣಿಕ ದೃಷ್ಟಿಯಿಂದ ಮಾತ್ರವಲ್ಲದೆ, ಮಕ್ಕಳು ಹೆಚ್ಚು ಓದುವುದನ್ನು, ಬರೆಯುವುದನ್ನು ಮತ್ತು ತಮ್ಮನ್ನು ತಾವು ಮುಕ್ತವಾಗಿ ಅಭಿವ್ಯಕ್ತಗೊಳಿಸುವುದನ್ನು ಖಾತರಿಪಡಿಸುತ್ತವೆ.

**ಉಲ್ಲೇಖ**

[1] ಶಿಕ್ಷಣದಲ್ಲಿ ರಚನಾತ್ಮಕ ದೃಷ್ಟಿಕೋನ (Constructivism) ಎಂದರೆ, ಕಲಿಯುವವರು ಕೇವಲ ನಿಷ್ಕ್ರಿಯವಾಗಿ ಮಾಹಿತಿಯನ್ನು ಪಡೆಯುವ ಬದಲು, ತಮ್ಮ ತಿಳಿವಳಿಕೆ ಮತ್ತು ಜ್ಞಾನವನ್ನು ಸಕ್ರಿಯವಾಗಿ ತಾವೇ ರೂಪಿಸಿಕೊಳ್ಳುವುದನ್ನು ಸೂಚಿಸುವ ಒಂದು ಸಿದ್ಧಾಂತ.



**ಸ್ವಪ್ನಾಲಿ ಚವ್ಹಾಣ್** ಅವರು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿರುವ 'ಆನಂದಿ ಬಾಲ ಭವನ ಪ್ರತಿಷ್ಠಾನ'ದಲ್ಲಿ ಸಂಯೋಜಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯೋಗದ ಅಧ್ಯಯನ ಮತ್ತು ಮಕ್ಕಳ ಸಾಹಿತ್ಯ ಇವರ ಆಸಕ್ತಿಯ ಕ್ಷೇತ್ರಗಳಾಗಿವೆ.

**ಸಂಪರ್ಕ:** swapnalichavan28@gmail.com

ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಅನುರೂಪಾ ರವೀಂದ್ರ

# ಮಕ್ಕಳ ಕಲಿಕೆಯ ಲಯಕ್ಕೆ ತಕ್ಕಂತೆ ಬೋಧನೆ

ಭಾವನಾ ನಾಯಕ್

**ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಕಲಿಕೆಗೆ ಪೂರಕವಾದ ಮತ್ತು ಸಮೃದ್ಧವಾದ ವಾತಾವರಣವನ್ನು ನಿರ್ಮಿಸಲು 'ವೇಗ' ಅಥವಾ ಸರಿಯಾದ ಕಾಲಮಿತಿಯನ್ನು ಕಾಯ್ದುಕೊಳ್ಳುವುದು ಬಹಳ ಮುಖ್ಯ. ಮಕ್ಕಳ ಕಲಿಕೆಯ ವೇಗಕ್ಕೆ ತಕ್ಕಂತೆ ಚಟುವಟಿಕೆಗಳನ್ನು ರೂಪಿಸಿದಾಗ, ಅವರು ತಮ್ಮದೇ ಆದ ಗತಿಯಲ್ಲಿ ವಿಷಯಗಳನ್ನು ಅನ್ವೇಷಿಸಲು, ಕಲಿಯಲು ಮತ್ತು ಬೆಳೆಯಲು ಸಹಾಯವಾಗುತ್ತದೆ. ಇದು ಅವರ ಕಲಿಕೆಯ ಅನುಭವವನ್ನು ಹೆಚ್ಚು ಆನಂದದಾಯಕ ಮತ್ತು ಪರಿಣಾಮಕಾರಿಯನ್ನಾಗಿ ಮಾಡುತ್ತದೆ.**



ಚಿತ್ರ 1: ತಮ್ಮದೇ ವೇಗದಲ್ಲಿ ಕಲಿಯುವ ಅವಕಾಶ ಸಿಕ್ಕಾಗ, ಮಕ್ಕಳು ತರಗತಿಯಲ್ಲಿ ಹೆಚ್ಚು ಉತ್ಸಾಹ ಮತ್ತು ಆಸಕ್ತಿಯಿಂದ ಪಾಲ್ಗೊಳ್ಳುತ್ತಾರೆ.

ಬೋಧನೆಯ ಸಮಯದಲ್ಲಿ ಸಣ್ಣ ಮಕ್ಕಳ ಆಸಕ್ತಿಯನ್ನು ಕಾಯ್ದುಕೊಳ್ಳುವುದು ಸವಾಲಿನ ಕೆಲಸ. ಏಕೆಂದರೆ, ಯಾವುದೇ ವಿಷಯದ ಮೇಲೆ ಅವರು ನೀಡುವ ಗಮನದ ಅವಧಿ (Attention span) ತುಂಬಾ ಕಡಿಮೆ ಇರುತ್ತದೆ. ಆರಂಭದಲ್ಲಿ ಅವರ ಗಮನ ಸೆಳೆಯುವ ವಿಷಯವು ಬಹಳ ಬೇಗನೆ ಬೇಸರ ತರಿಸಬಹುದು ಅಥವಾ ಪಾಠದ ನಡುವೆಯೇ ಅವರ ಆಸಕ್ತಿ ಕಡಿಮೆಯಾಗಬಹುದು. ಇನ್ನು ಕೆಲವು ಬಾರಿ ಚಟುವಟಿಕೆಗಳು ಎಷ್ಟು ವೇಗವಾಗಿ ಸಾಗುತ್ತವೆ ಎಂದರೆ, ಮಕ್ಕಳಿಗೆ ಅವುಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಪರಿಸ್ಥಿತಿಯು ಮಕ್ಕಳು ಮತ್ತು ಶಿಕ್ಷಕರು—ಇಬ್ಬರಿಗೂ ನಿರಾಶೆ ಉಂಟುಮಾಡುತ್ತದೆ; ಇದರಿಂದ ಯಶಸ್ವಿ ಮತ್ತು ಅರ್ಥಪೂರ್ಣ ಕಲಿಕೆ-ಬೋಧನೆ ಕಷ್ಟವಾಗುತ್ತದೆ.

ಶಿಕ್ಷಕರ ಬೋಧನಾ ವಿಧಾನಗಳು ಮಕ್ಕಳ ಗಮನದ ಅವಧಿಗೆ ಅನುಗುಣವಾಗಿದ್ದಾಗ ಮಾತ್ರ ತರಗತಿಯಲ್ಲಿ ಕಲಿಕೆಯ ಒಂದು ಕ್ರಿಯಾತ್ಮಕ ಮತ್ತು ಸಂವಾದಾತ್ಮಕ ವಾತಾವರಣ ನಿರ್ಮಾಣವಾಗುತ್ತದೆ. ಇದು ಮಕ್ಕಳಲ್ಲಿ ಕಲಿಕೆಯ ಬಗ್ಗೆ ಆಸಕ್ತಿ ಹುಟ್ಟಿಸುತ್ತದೆ. ಪರಿಣಾಮಕಾರಿ ಬೋಧನಾ ತಂತ್ರಗಳಿಗಾಗಿ, ಪ್ರತಿ ಕಲಿಕಾ ಚಟುವಟಿಕೆಯನ್ನು ಪೂರ್ಣಗೊಳಿಸಲು ಮಕ್ಕಳಿಗೆ ಸಾಕಷ್ಟು ಸಮಯ ನೀಡುವುದು ಮತ್ತು ಅವರು ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ಸುಲಭವಾಗಿ ಮುಂದುವರೆಯುವಂತೆ ನೋಡಿಕೊಳ್ಳುವುದು ಅತ್ಯಗತ್ಯ.

## ಆರಂಭಿಕ ಬಾಲ್ಯದ ತರಗತಿಗಳಲ್ಲಿ ಮಕ್ಕಳ ಲಯಕ್ಕೆ ತಕ್ಕ ಬೋಧನೆ: ಸೂಕ್ತ ಸಮತೋಲನದ ಅನ್ವೇಷಣೆ

ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಗತಿಶೀಲತೆ ಅಂದರೆ ವಿವಿಧ ಅಂಶಗಳ ನಡುವೆ ಒಂದು ಸಮತೋಲನವನ್ನು ಕಾಪಾಡಿಕೊಳ್ಳುವುದು. ಇದು ಮಗುವಿಗೆ ಬೇಕಾದ ಆಟದ ಚಟುವಟಿಕೆಗಳು, ವಿಶ್ರಾಂತಿ ಮತ್ತು ಹೊಸ ವಿಷಯಗಳನ್ನು ಅನ್ವೇಷಿಸುವ ಅವಕಾಶಗಳನ್ನು ಒದಗಿಸಿ, ಪಾಠಗಳು ಮತ್ತು ಚಟುವಟಿಕೆಗಳ ಮೂಲಕ ಮಕ್ಕಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಅವರ ಆಸಕ್ತಿ ಮತ್ತು ಏಕಾಗ್ರತೆಯನ್ನು ಉಳಿಸಿಕೊಳ್ಳಲು, ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ಮಕ್ಕಳು ಯಾವುದೇ ಗೊಂದಲವಿಲ್ಲದೆ ಸುಗಮವಾಗಿ ಬದಲಾಗುವಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಅಂದರೆ, ಮಕ್ಕಳು ತಮ್ಮದೇ ವೇಗದಲ್ಲಿ ಕಲಿಯುತ್ತಿದ್ದಾರೆ ಎಂದು ಅವರಿಗೆ ಭಾಸವಾಗುವಂತಹ ವಾತಾವರಣವನ್ನು ನಿರ್ಮಿಸುವುದು ಮತ್ತು ಇಡೀ ತರಗತಿಯ ಅವಧಿಯಲ್ಲಿ ಅವರು ಸ್ವಯಂಪ್ರೇರಿತರಾಗಿ ತೊಡಗಿಕೊಳ್ಳುವಂತೆ ನೋಡಿಕೊಳ್ಳುವುದೇ ಇದರ ಮುಖ್ಯ ಉದ್ದೇಶ.

ನನ್ನ ತರಗತಿಯ ಒಂದು ಉದಾಹರಣೆಯ ಮೂಲಕ ನಾನು ಈ ಪ್ರಕ್ರಿಯೆಯನ್ನು ವಿವರಿಸುತ್ತಿದ್ದೇನೆ. ಅಂದು ತರಗತಿಯಲ್ಲಿ 'ಗಾಳಿ' ಎಂಬ ವಿಷಯದ ಬಗ್ಗೆ ಪಾಠ ಮಾಡಬೇಕಿತ್ತು. ದಿನದ ಆರಂಭವು ಅತ್ಯಂತ

ಉತ್ಸಾಹಭರಿತ 'ಸರ್ಕಲ್ ಟೈಮ್'ನೊಂದಿಗೆ ಪ್ರಾರಂಭವಾಯಿತು. ಆಗ ನಾನು ಒಂದು ಕವಿತೆಯ ಬಗ್ಗೆ ಈ ಕೆಳಗಿನಂತೆ ಚರ್ಚೆ ಆರಂಭಿಸಿದೆ:

The wind brushes past my skin so cool,
a gentle touch, a swirling pool.
It dances free, I feel its might,
A fleeting breeze from day to night.

ತಂಗಾಳಿ ಬೀಸಿ ತಂಪಾಯಿತು ಮೈಯೆಲ್ಲ,
ಮೆಲ್ಲಗೆ ಸೋಕಿ ಸುಳಿಯಂತೆ ಬಂತಲ್ಲ.
ತನ್ನಷ್ಟಕ್ಕೆ ತಾನು ಕುಣಿಯುತಿದೆ ಹಾಯಾಗಿ,
ಹಗಲಿರುಳು ಬೀಸುವ ಗಾಳಿ ಹಿತವಾಗಿ.

ಇದಾದ ನಂತರ, ರಿಷಭ್ ಎಂಬ ಮಗು ತನ್ನ ತಂದೆಯೊಂದಿಗೆ ಸೈಕಲ್ ಮೇಲೆ ಶಾಲೆಗೆ ಬರುವಾಗ ತನ್ನ ಮುಖಕ್ಕೆ ಗಾಳಿ ಸೋಕಿದ ಅನುಭವದ ಬಗ್ಗೆ ಮಾತನಾಡಲು ಪ್ರಾರಂಭಿಸಿದ. ನಂತರ ನಾನು ಅವರಿಗೆ 'ಜಾಕ್‌ನ ಗಾಳಿಪಟ' ಎಂಬ ಚಿತ್ರಪಟದ ಪುಸ್ತಕದಿಂದ ಒಂದು ಕಥೆಯನ್ನು ಓದಿ ಹೇಳಿದೆ. ಈ ಕಥೆಯಲ್ಲಿ ಜಾಕ್ ಗಾಳಿಪಟ ಹಾರಿಸಲು ಪ್ರಯತ್ನಿಸುತ್ತಾನೆ; ಅವನಿಗೆ ಅದನ್ನು ಹಾರಿಸಲು ಸಾಧ್ಯವಾಗದಿದ್ದಾಗ ಜಾಕ್‌ನ ತಂದೆ ಅವನಿಗೆ ಗಾಳಿಯ ವಿರುದ್ಧ ದಿಕ್ಕಿನಲ್ಲಿ ಗಾಳಿಪಟ ಹಾರಿಸುವುದನ್ನು ಕಲಿಸುತ್ತಾರೆ. ಕಥೆ ಹೇಳುವ ಸಮಯದಲ್ಲಿ ನಡೆದ ಸಂವಾದವು ತರಗತಿಯಲ್ಲಿ ಅನ್ವೇಷಣೆ ಮತ್ತು ಕುತೂಹಲದ ವಾತಾವರಣವನ್ನು ಸೃಷ್ಟಿಸಿತು.

ನಂತರ ನಾನು ಮಕ್ಕಳಿಗೆ, "ಬನ್ನಿ, ಈಗ ಹೊರಗೆ ಹೋಗೋಣ!" ಎಂದಾಗ, ಇದುವರೆಗೆ ಸುಮ್ಮನೆ ಕುಳಿತು ಕಥೆ ಕೇಳುತ್ತಿದ್ದ ಮಕ್ಕಳು ಹೊಸ ಶಕ್ತಿ ಮತ್ತು ಉತ್ಸಾಹವನ್ನು ತುಂಬಿಕೊಂಡರು. ರೋಹನ್ ಕೈಗಳನ್ನು ಚಾಚುತ್ತಾ ಮುಂದೆ ಓಡಿ, "ಗಾಳಿ ತುಂಬಾ ಚೆನ್ನಾಗಿದೆ!" ಎಂದು ಸಂಭ್ರಮದಿಂದ ಕೂಗಿದನು. ಅನನ್ಯಾ ಬೆರಳು ಮಾಡಿ ತೋರಿಸುತ್ತಾ, "ನೋಡಿ, ಮಾವಿನ ಮರದ ಎಲೆಗಳು ಅಲುಗಾಡುತ್ತಿವೆ!" ಎಂದಳು. ಈ ರೀತಿಯ ಪ್ರಾಯೋಗಿಕ ಅನುಭವವು ಮಕ್ಕಳ ತಿಳುವಳಿಕೆಯನ್ನು ಹೆಚ್ಚಿಸುವುದು ಮಾತ್ರವಲ್ಲದೆ, ಅವರನ್ನು ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸುತ್ತದೆ.

ನಾವು ಗಾಳಿಯ ಆನಂದವನ್ನು ಸವಿಯುತ್ತಾ, ಅದರ ಬಗ್ಗೆ ಮಾತನಾಡುತ್ತಾ ಹೊರಗೆ ಓಡಾಡಿ, ತರಗತಿಗೆ ಬಂದು ಚಿತ್ರ ಬಿಡಿಸುವ ಚಟುವಟಿಕೆಯಲ್ಲಿ ತೊಡಗಿದೆವು. ನಾನು ಹೇಳಿದೆ, "ಮಕ್ಕಳೇ, ಗಾಳಿಯನ್ನು ಅನುಭವಿಸಿದಾಗ ನಿಮ್ಮ ಮನಸ್ಸಿಗೆ ಏನು ಬರುತ್ತದೋ ಅದನ್ನು ಚಿತ್ರದಲ್ಲಿ ಬಿಡಿಸಬಲ್ಲಿರಾ?". ಇದರ ನಂತರ ಸೃಜನಾತ್ಮಕತೆಯ ಮತ್ತೊಂದು ಘಟ್ಟ ಪ್ರಾರಂಭವಾಯಿತು. ಯಶಿಕಾ ಬಲೂನ್ ಚಿತ್ರದ ಮೇಲೆ ಬಣ್ಣದ ಕಾಗದದ ತುಂಡುಗಳನ್ನು ಹರಿದು ಅಂಟಿಸಿ, ಒಂದು ಸುಂದರವಾದ ಬಲೂನ್ ಸಿದ್ಧಪಡಿಸಿದಳು.




ಚಿತ್ರ 2: ಮಕ್ಕಳ ಸೃಜನಶೀಲತೆ ಮತ್ತು ಕಲ್ಪನಾ ಶಕ್ತಿಯ ಹಾರಾಟ.

ರೋಹನ್ ತನ್ನ ಕಲ್ಪನೆಯಂತೆ ಎಲೆಗಳು ಗಾಳಿಯಲ್ಲಿ ತೇಲುತ್ತಿರುವ ಚಿತ್ರ ಬಿಡಿಸಿದನು. ಬಣ್ಣದ ಕಾಗದಗಳನ್ನು ಅವರ ಕಲ್ಪನೆಗೆ ತಕ್ಕಂತೆ ಕತ್ತರಿಸಲು ಮತ್ತು ಅಂಟಿಸಲು ನಾನು ಹಾಗೂ ನನ್ನ ಸಹಾಯಕರು ಮಕ್ಕಳಿಗೆ ಸಹಾಯ ಮಾಡಿದೆವು.

ಮಕ್ಕಳು ಸಕ್ರಿಯ ಅನ್ವೇಷಣೆಯಿಂದ ಸೃಜನಾತ್ಮಕ ಅಭಿವ್ಯಕ್ತಿಯ ಕಡೆಗೆ ಸಾಗಿದಾಗ ಅವರ ಕಲಿಕೆಯ ಗತಿಶೀಲತೆಯು ಸರಿಯಾಗಿರುತ್ತದೆ—ಅದು ರೋಮಾಂಚಕವಾಗಿರುವ ಜೊತೆಗೆ ಶಾಂತಿಯುತವಾಗಿಯೂ ಇರುತ್ತದೆ. ಶಿಕ್ಷಕರು ಮಕ್ಕಳನ್ನು ಒಂದು ಚಟುವಟಿಕೆಯಿಂದ ಇನ್ನೊಂದು ಚಟುವಟಿಕೆಗೆ ಸರಾಗವಾಗಿ ಕರೆದೊಯ್ದರೆ, ಅವರ ಕಲಿಕೆಯ ಅನುಭವವು ಆಸಕ್ತಿದಾಯಕ ಮತ್ತು ಸಮತೋಲಿತವಾಗಿರುತ್ತದೆ.

## ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ಮುಂದುವರಿಯವುದು

ಸಣ್ಣ ಮಕ್ಕಳಿಗೆ ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ಬದಲಾಗುವುದು ಆಗಾಗ್ಗೆ ಕಷ್ಟವೆನಿಸಬಹುದು; ಏಕೆಂದರೆ ಅವರಿಗೆ ಮುಂದಿನ ಹಂತದ ಸೂಚನೆಗಳು ಸರಿಯಾಗಿ ತಿಳಿದಿರುವುದಿಲ್ಲ. ಇದು ಅವರಲ್ಲಿ ಒತ್ತಡ ಅಥವಾ ಗೊಂದಲದ ಭಾವನೆಯನ್ನು ಉಂಟುಮಾಡಬಹುದು. ಈ ಪ್ರಕ್ರಿಯೆಗಳನ್ನು ಸುಲಭಗೊಳಿಸಲು ನಾವು ನಿರಂತರವಾಗಿ 'ಶಾಂತಗೊಳಿಸುವ ಸಂಕೇತ'ಗಳನ್ನು ಬಳಸುತ್ತೇವೆ. ಉದಾಹರಣೆಗೆ, ಸ್ವಚ್ಛಗೊಳಿಸುವ ಅಥವಾ ಆಟಿಕೆಗಳನ್ನು ಅವುಗಳ ಜಾಗದಲ್ಲಿ ಮರಳಿ ಇಡುವ ಸಮಯವಾಗಿದೆ ಎಂದು ತಿಳಿಸಲು ಮಕ್ಕಳಿಗೆ ಪರಿಚಿತವಿರುವ ಒಂದು ಕವಿತೆಯನ್ನು ಹಾಡುವುದು.

ಮಕ್ಕಳಿಗೆ ಹೊಸ ಚಟುವಟಿಕೆಯನ್ನು ಮಾಡಲು ಪ್ರೇರೇಪಿಸುವಾಗ ನಾವು ಕೆಲವು ಆಕರ್ಷಕ ವಾಕ್ಯಗಳನ್ನು ಬಳಸುತ್ತೇವೆ. ಉದಾಹರಣೆಗೆ: "ಬನ್ನಿ, ಏನಾದರೂ ಹೊಸದನ್ನು ಮಾಡಲು ಸಿದ್ಧರಾಗಿ!", "ಬನ್ನಿ, ಒಂದು ರೋಮಾಂಚಕಾರಿ ಕೆಲಸ ಮಾಡೋಣ!" ಇತ್ಯಾದಿ. ಉದಾಹರಣೆಗೆ, ಮಕ್ಕಳು ಕಥೆ ಕೇಳುವ ಹಂತದಿಂದ ಚಿತ್ರ ಬಿಡಿಸುವ ಹಂತಕ್ಕೆ ಹೋಗುವಾಗ ನಾವು ಈ ಕೆಳಗಿನ ಕವಿತೆಯನ್ನು ಹಾಡುತ್ತೇವೆ:

Hey! Little kids hey!
Little kids Story is done, colours are fun
Take out your crayons,
Let's start one by one.

ಹೇ! ಪುಟ್ಟ ಮಕ್ಕಳೇ ಹೇ!
ಕಥೆಯು ಮುಗಿಯಿತು, ಬಣ್ಣಗಳ ಸಮಯವಿದು
ತೆಗೆಯಿರಿ ನಿಮ್ಮ ಕ್ರಯಾನ್‌ಗಳನ್ನು,
ಒಬ್ಬೊಬ್ಬರಾಗಿ ಶುರು ಮಾಡೋಣ ಬನ್ನಿ!

ಹಾಗೆಯೇ, ಒಳಾಂಗಣ ಆಟಗಳಿಂದ ಹೊರಾಂಗಣ ಆಟಗಳಿಗೆ ಹೋಗುವಾಗ ಮಕ್ಕಳನ್ನು ಒಟ್ಟುಗೂಡಿಸಲು ಮತ್ತು ಅವರೊಂದಿಗೆ ಮುಂದಿನ ಯೋಜನೆಯ ಬಗ್ಗೆ ಚರ್ಚಿಸಲು ನಾನು ಇಂತಹ ಸಂಕೇತಗಳನ್ನು ನೀಡುತ್ತೇನೆ: "ಸ್ವಲ್ಪ ಮೋಜು ಮಾಡೋಣವೇ? ಎಲ್ಲರೂ ಸಿದ್ಧರಿದ್ದೀರಾ?". ಇದು ಮಕ್ಕಳು ಮುಂದಿನ ಚಟುವಟಿಕೆಗಳಿಗೆ ಮಾನಸಿಕವಾಗಿ ಸಿದ್ಧವಾಗಲು ಸಹಾಯ ಮಾಡುತ್ತದೆ. ಈ ಅಭ್ಯಾಸವು ಅವರ ಮನಸ್ಸನ್ನು ಶಾಂತಗೊಳಿಸುವುದಲ್ಲದೆ, ಪ್ರಶ್ನೆ ಕೇಳುವುದು ಮತ್ತು ಆಲೋಚನೆಗಳನ್ನು ಹಂಚಿಕೊಳ್ಳುವಂತಹ ಸಾಮಾಜಿಕ ಕೌಶಲಗಳನ್ನು ಬಲಪಡಿಸಲು ಮುಕ್ತ ಅವಕಾಶ ನೀಡುತ್ತದೆ.

## ಗತಿಶೀಲ ಯೋಜನೆಯ ಸಕಾರಾತ್ಮಕ ಫಲಿತಾಂಶಗಳು

ಮಕ್ಕಳು ಇಡೀ ತರಗತಿಯ ಅವಧಿಯಲ್ಲಿ ಉತ್ಸಾಹಭರಿತರಾಗಿ ಮತ್ತು ಸಕ್ರಿಯವಾಗಿರುತ್ತಾರೆ. ಇದು ಅವರ ಕೆಲಸವನ್ನು ನಿಗದಿತ ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಲು ಸಹಾಯ ಮಾಡುತ್ತದೆ. ಅವರು ಸಣ್ಣ ಪುಟ್ಟ



ಚಿತ್ರ 3: ವಿವಿಧ ರೀತಿಯ ಚಟುವಟಿಕೆಗಳನ್ನು ಆಯೋಜಿಸುವುದರಿಂದ, ಮಕ್ಕಳ ಬೇರೆ ಬೇರೆ ಕಲಿಕಾ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುತ್ತದೆ.

ಚಟುವಟಿಕೆಗಳನ್ನೂ ಆನಂದಿಸುತ್ತಾರೆ. ಉದಾಹರಣೆಗೆ ಭಾವಿಕಾ ಎಂಬ ಮಗು, “ನಾನು ಬೇರೆ ಬೇರೆ ಬಣ್ಣದ ಇನ್ನೂ ಕೆಲವು ಬಲೂನ್ ಚಿತ್ರಗಳನ್ನು ಬಿಡಿಸಬಹುದೇ?” ಎಂದು ಕೇಳಿದಳು. ಇಂತಹ ಉತ್ಸಾಹವು ತರಗತಿಯನ್ನು ಸದಾ ಸಕ್ರಿಯವಾಗಿರಿಸುತ್ತದೆ.

ಮಕ್ಕಳು ಚಟುವಟಿಕೆಗಳ ನಡುವಿನ ಬದಲಾವಣೆಗೆ ಬೇಗನೆ ಹೊಂದಿಕೊಳ್ಳುತ್ತಾರೆ. ಇದರಿಂದ ಒಂದು ಕೆಲಸದಿಂದ ಇನ್ನೊಂದಕ್ಕೆ ಗಮನ ಹರಿಸುವುದು ಅವರಿಗೆ ಸುಲಭವಾಗುತ್ತದೆ. ನನ್ನ ತರಗತಿಯಲ್ಲಿ ಈಗ ಮಕ್ಕಳು ಕೇವಲ ಒಂದು ಸರಳ ಕವಿತೆಯ ಸಂಕೇತದಿಂದಲೇ, ಕಥೆ ಕೇಳುವುದರಿಂದ ಹಿಡಿದು ಚಿತ್ರಕಲೆಯವರೆಗೆ ಎಲ್ಲಾ ಚಟುವಟಿಕೆಗಳಲ್ಲಿ ಬಹಳ ಆಸಕ್ತಿಯಿಂದ ತೊಡಗಿಕೊಳ್ಳುತ್ತಾರೆ.

ಇದೆಲ್ಲವೂ ನನಗೆ ಪಾಠದ ಯೋಜನೆ ತಯಾರಿಸಲು ಮತ್ತು ದೈನಂದಿನ ಬೋಧನಾ ಉದ್ದೇಶಗಳನ್ನು ಪೂರೈಸಲು ಸಹಾಯ ಮಾಡುತ್ತದೆ. ಗತಿಶೀಲ ಯೋಜನೆಯಿಂದಾಗಿ, ಯಾವುದೇ ವಿಷಯದ ಬಗ್ಗೆ ಕನಿಷ್ಠ 15 ನಿಮಿಷಗಳ ಚರ್ಚೆ ನಡೆಸಿ, ನಂತರ ಒಂದು ಚಟುವಟಿಕೆಯನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತದೆ.

ನಾನು ಯಾವುದೇ ಅಡೆತಡೆಯಿಲ್ಲದೆ ಕಲಿಕೆ ಮತ್ತು ಬೋಧನೆಯ ಎಲ್ಲಾ ಕ್ಷೇತ್ರಗಳನ್ನು ಸಮಗ್ರವಾಗಿ ಒಳಗೊಳ್ಳಬಹುದು. ಉದಾಹರಣೆಗೆ, 5 ನಿಮಿಷ ಗಾಳಿಯ ವೀಕ್ಷಣೆ ಮತ್ತು ನಂತರ 5 ನಿಮಿಷ ಪೇಂಟಿಂಗ್ ಮಾಡಿಸುವುದು ಮಕ್ಕಳನ್ನು ವಿಷಯದೊಂದಿಗೆ ಆಳವಾಗಿ ತೊಡಗಿಸಿಕೊಂಡು, ಅವರ ಚಲನ ಕೌಶಲಗಳನ್ನು (Motor skills) ಹೆಚ್ಚಿಸಲು ಸಹಕಾರಿಯಾಯಿತು.

## ನನ್ನ ತರಗತಿಯಲ್ಲಿ ಯಶಸ್ವಿಯಾದ ತಂತ್ರಗಳು

ಪ್ರತಿ ಮಗುವಿಗೆ ಸೂಕ್ತವಾದ ಸಮತೋಲನವನ್ನು ರೂಪಿಸಲು ಶಿಕ್ಷಕರು ಈ ಕೆಳಗಿನ ತಂತ್ರಗಳನ್ನು ಗಮನಿಸಬಹುದು:

1. **ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಿ:** ಮಕ್ಕಳು ವಿವಿಧ ಚಟುವಟಿಕೆಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಗಮನಿಸಲು ಶಿಕ್ಷಕರು ಸಮಯ ಮೀಸಲಿಡಬೇಕು. ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆಯೇ ಅಥವಾ ಅವರ ಗಮನ ಬೇರೆಡೆ ಇದೆಯೇ? ಮುಂದಿನ ಪಾಠಗಳ ಗತಿಶೀಲತೆಯನ್ನು ಮಕ್ಕಳ ಆಸಕ್ತಿಗೆ ಅನುಗುಣವಾಗಿ ಸರಿಹೊಂದಿಸಲು ಈ ಅವಲೋಕನಗಳನ್ನು ಬಳಸಿ.
2. **ಬದಲಾವಣೆಯ ಕ್ರಮವನ್ನು ಜಾಣ್ಮೆಯಿಂದ ಬಳಸಿ:** ಸಣ್ಣ ಮಕ್ಕಳಿಗೆ ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ಸಾಗುವುದು ಸವಾಲಿನ ಕೆಲಸ. ಮುಂದಿನ ಚಟುವಟಿಕೆಗೆ ಅವರನ್ನು ಸಿದ್ಧಪಡಿಸಲು ಶಾಂತಿಯುತ ಮಾರ್ಗಗಳನ್ನು ಬಳಸುವುದು ಉತ್ತಮ. ಒಂದು ಸಣ್ಣ ಹಾಡು, ಚಪ್ಪಾಳೆ ತಟ್ಟುವುದು ಅಥವಾ ಸ್ವಲ್ಪ ವಿಶ್ರಾಂತಿ ನೀಡುವುದು ಮಕ್ಕಳಿಗೆ ಗಮನವನ್ನು ಮರಳಿ ಕೇಂದ್ರೀಕರಿಸಲು ಸಹಾಯ ಮಾಡುತ್ತದೆ.
3. **ವಿವಿಧ ರೀತಿಯ ಚಟುವಟಿಕೆಗಳನ್ನು ನೀಡಿ:** ಪ್ರಾಯೋಗಿಕ ಯೋಜನೆಗಳು, ಕಥೆ ಹೇಳುವುದು, ಗುಂಪು ಚರ್ಚೆ ಮತ್ತು ಶಾಂತವಾಗಿ ಆಲೋಚಿಸುವುದು—ಹೀಗೆ ವಿವಿಧ ಚಟುವಟಿಕೆಗಳನ್ನು ಒಟ್ಟಾಗಿ ಸೇರಿಸಿ. ಈ ವೈವಿಧ್ಯತೆಯು ಮಕ್ಕಳ ವಿವಿಧ ಕಲಿಕಾ ಶೈಲಿಗಳಿಗೆ ಪೂರಕವಾಗಿರುತ್ತದೆ.
4. **ಕೆಲಸ ಮತ್ತು ವಿಶ್ರಾಂತಿಯ ನಡುವೆ ಸಮತೋಲನ:** ಮಕ್ಕಳು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಸಮಯದ ಜೊತೆಗೆ, ಶಾಂತವಾಗಿ ಆಲೋಚಿಸಲು ಅಥವಾ ವಿಶ್ರಾಂತಿ ಪಡೆಯಲು ಸಮಯವನ್ನು ನೀಡಿ. ಇದು ಮಕ್ಕಳ ಶಕ್ತಿಯ ಮಟ್ಟವನ್ನು ಮತ್ತು ಗಮನವನ್ನು ಕಾಯ್ದುಕೊಳ್ಳಲು ಸಹಾಯ ಮಾಡುತ್ತದೆ.
5. **ಸಮಯ ನಿರ್ವಹಣೆ:** ಚಟುವಟಿಕೆಗಳು ಬಹಳ ದೀರ್ಘವಾಗಿ ಅಥವಾ ಅತಿ ಚಿಕ್ಕದಾಗಿರದಂತೆ ನೋಡಿಕೊಳ್ಳುವುದು ಮುಖ್ಯ. ಸರಿಯಾದ ಸಮಯದ ಚೌಕಟ್ಟು ಮಕ್ಕಳ ಆಸಕ್ತಿಯನ್ನು ಸತತವಾಗಿ ಕಾಯ್ದುಕೊಳ್ಳಲು ನೆರವಾಗುತ್ತದೆ.

## ಅಂತಿಮ ನುಡಿ

ನನ್ನ ತರಗತಿಯಲ್ಲಿ ನಾನು ಅನೇಕ ಧನಾತ್ಮಕ ಬದಲಾವಣೆಗಳನ್ನು ಕಂಡಿದ್ದೇನೆ. ಅತ್ಯಂತ ಸಂಕೋಚದ ಮಗು ಚಿತ್ರಕಲೆಯ ಸಮಯದಲ್ಲಿ ಉತ್ಸಾಹಭರಿತವಾಗಿ ತೊಡಗಿಕೊಳ್ಳುವುದನ್ನು ಅಥವಾ ಸದಾ ಚಂಚಲವಾಗಿರುವ ಮಗು ಗಣಿತದ ಆಟದ ಸಮಯದಲ್ಲಿ ಪೂರ್ಣ ಗಮನವನ್ನು ಕೇಂದ್ರೀಕರಿಸುವುದನ್ನು ನಾನು ನೋಡಿದ್ದೇನೆ. ಪ್ರತಿ ಮಗುವಿನ ವೈಯಕ್ತಿಕ ಕಲಿಕೆಯ ವೇಗದೊಂದಿಗೆ ತಾಳಮೇಳ ಸಾಧಿಸಿ ಬೋಧಿಸಿದರೆ, ಅದು ಶಿಕ್ಷಣದ ಕಡೆಗಿನ ನಮ್ಮ ಒಟ್ಟಾರೆ ದೃಷ್ಟಿಕೋನವನ್ನೇ ಬದಲಾಯಿಸಬಲ್ಲದು. ಅಷ್ಟೇ ಅಲ್ಲದೆ, ಇದು ಮಕ್ಕಳಲ್ಲಿ ಜೀವಮಾನವಿಡೀ ಉಳಿಯುವಂತಹ ‘ಕಲಿಕೆಯ ಹಸಿವನ್ನು’ ಹೆಚ್ಚಿಸಲು ಸಹಕಾರಿಯಾಗುತ್ತದೆ.



**ಭಾವನಾ ನಾಯಕ್** ಅವರು ಪ್ರಸ್ತುತ ಛತ್ತೀಸ್‌ಗಢದ ಧಮ್ತರಿಯ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನ ಇಸಿಸಿಇ (ECCE) ತಂಡದ ಸದಸ್ಯರಾಗಿದ್ದಾರೆ. ಮಕ್ಕಳಿಗೆ ಕಲಿಕೆಯನ್ನು ಆಟದಂತೆ ಮೋಜಿನದಾಗಿಸುವುದು ಮತ್ತು ಅವರೊಂದಿಗೆ ಕೆಲಸ ಮಾಡುವುದು ಇವರಿಗೆ ಬಹಳ ಇಷ್ಟ.

**ಸಂಪರ್ಕ:** bhavna.nayak@azimpremjifoundation.org

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಅನುರೂಪಾ ರವೀಂದ್ರ

# ಮಕ್ಕಳ ಮೇಳ | ಒಂದು ಸಮುದಾಯ ಕಾರ್ಯಕ್ರಮವು ದೃಷ್ಟಿಕೋನಗಳನ್ನು ಬದಲಿಸಿದ ಕಥೆ

ಜೆ. ವಿಮಲಾ

**ಸಮರ್ಪಣಾ ಭಾವದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಮಕ್ಕಳಿಗೆ ಖುಷಿ ಕೊಡುವಂತಹ ಮತ್ತು ಆಟ ಆಧಾರಿತ ಪಠ್ಯಕ್ರಮ - ಇವು ಮಕ್ಕಳು ಸಾಮಾಜಿಕವಾಗಿ, ಭಾವನಾತ್ಮಕವಾಗಿ, ಮತ್ತು ಮಾನಸಿಕವಾಗಿ ಬೆಳೆಯಲು ನೆರವಾಗಬಲ್ಲದು. ಇದನ್ನು ಪೋಷಕರು ಮತ್ತು ಸಮುದಾಯಕ್ಕೆ ಅರ್ಥ ಮಾಡಿಸಲು *ಮಕ್ಕಳ ಮೇಳ* ಒಂದು ಅವಕಾಶ.**

ಮಕ್ಕಳ ಮೇಳದಂತಹ ಸಾಮುದಾಯಿಕ ಕಾರ್ಯಕ್ರಮಗಳು ಅಂಗನವಾಡಿ ಮತ್ತು ಶಾಲೆಯ ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳಲು ಸಮುದಾಯಕ್ಕೆ ಹಾಗೂ ಪೋಷಕರಿಗೆ ಸಹಾಯ ಮಾಡುತ್ತವೆ. ನಾಲ್ಕು ಅಂಗನವಾಡಿ ಕೇಂದ್ರಗಳು ಒಟ್ಟಾಗಿ ಆಯೋಜಿಸಿದ ಈ ಮಕ್ಕಳ ಮೇಳವು, ಮಕ್ಕಳ ಬೆಳವಣಿಗೆಯಲ್ಲಿ ಅಂಗನವಾಡಿಯ ಪಾತ್ರವೇನು ಎಂಬುದನ್ನು ಪೋಷಕರಿಗೆ ಮನವರಿಕೆ ಮಾಡಿಕೊಟ್ಟಿದ್ದಲ್ಲದೆ, ಶಿಕ್ಷಕರು ಮತ್ತು ಪೋಷಕರ ನಡುವೆ ನಂಬಿಕೆ ಬೆಳೆಸಲು ಹೇಗೆ ಸಹಕಾರಿಯಾಯಿತು ಎಂದು ಈ ಲೇಖನವು ವಿವರಿಸುತ್ತದೆ.

ಒಬ್ಬ ಮೇಲ್ವಿಚಾರಕಿಯಾಗಿ ಅಂಗನವಾಡಿಗಳಿಗೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನು ಗಮನಿಸುವುದು ನನ್ನ ಕೆಲಸದ ಅತ್ಯಂತ ಸಂತಸದ ಭಾಗ. ಮಕ್ಕಳೊಂದಿಗೆ ಸಮಯ ಕಳೆಯುವುದು, ಅವರ ಮಾತುಗಳನ್ನು ಕೇಳುವುದು ಮತ್ತು ಅವರ ಕಲಿಕಾ ಪ್ರಕ್ರಿಯೆಗಳನ್ನು ಗಮನಿಸುವುದು ನನಗೆ ಬಹಳ ಇಷ್ಟ.



ಚಿತ್ರ 1: ಆಟದ ಚಟುವಟಿಕೆಗಳಿಂದ ಮಕ್ಕಳಿಗೆ ಕಲಿಕೆಯು ಒಂದು ಮೋಜಿನ ಅನುಭವವಾಗುತ್ತದೆ.

ಒಂದು ಬೆಳಿಗ್ಗೆ ನಾನು ಅಂಗನವಾಡಿಗೆ ಭೇಟಿ ನೀಡಿದಾಗ, ಅಲ್ಲಿನ ಶಿಕ್ಷಕಿಯರು ಚಿಂತೆಯಲ್ಲಿದ್ದಂತೆ ಕಂಡಿತು. ಕೇಂದ್ರದಲ್ಲಿ ಕೆಲವೇ ಮಕ್ಕಳು ಹಾಜರಿದ್ದುದು ಅವರ ಕಳವಳಕ್ಕೆ ಮುಖ್ಯ ಕಾರಣವಾಗಿತ್ತು. ಅಲ್ಲಿ ಕೆಲವು ಮಕ್ಕಳು ಮೌನವಾಗಿ ಚಿತ್ರ ಬಿಡಿಸುತ್ತಿದ್ದರು ಮತ್ತು ಒಂದು ಮಗು ಹಾಡೊಂದನ್ನು ಗುನುಗುತ್ತಿತ್ತು. ಮೇಲ್ನೋಟಕ್ಕೆ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿರುವಂತೆ ತೋರುತ್ತಿದ್ದರೂ, ಅನೇಕ ಮಕ್ಕಳ ಗೈರುಹಾಜರಿಯು ಒಂದು ಪ್ರಮುಖ ಸಮಸ್ಯೆಯನ್ನು ಎತ್ತಿ ತೋರಿಸುತ್ತಿತ್ತು. ಅನಾರೋಗ್ಯ, ಕುಟುಂಬದ ವಾತಾವರಣ ಮತ್ತು ಉದ್ಯೋಗಕ್ಕಾಗಿ ಪೋಷಕರು ಹೊರ ಊರುಗಳಿಗೆ ವಲಸೆ ಹೋಗುವುದು ಇವೆಲ್ಲವೂ ಮಕ್ಕಳ ಗೈರುಹಾಜರಿಗೆ ಕಾರಣಗಳಾಗಿದ್ದವು. ಸಾಮಾನ್ಯವಾಗಿ ಅನೇಕ ಕಡೆ ಇದೇ ಪರಿಸ್ಥಿತಿ ಇರುತ್ತದೆ. ಶಿಕ್ಷಕಿಯರು ಕಲಿಸಲು ಸಿದ್ಧರಿರುತ್ತಾರೆ, ಆದರೆ ಕಲಿಯಲು ಮಕ್ಕಳು ಹಾಜರಿರುವುದಿಲ್ಲ. ಇಂತಹ ಅನಿಯಮಿತ ಹಾಜರಾತಿಯು ಮಕ್ಕಳ ಕಲಿಕೆ ಮತ್ತು ಬೆಳವಣಿಗೆಗೆ ಅಡ್ಡಿಯಾಗುತ್ತದೆ.

ಅನೇಕ ಪೋಷಕರು ಅಂಗನವಾಡಿಯಲ್ಲಿ ಮಕ್ಕಳ ದೈನಂದಿನ ಹಾಜರಾತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದಿಲ್ಲ. ಏಕೆಂದರೆ ಔಪಚಾರಿಕ ಶಿಕ್ಷಣವು ಪ್ರಾಥಮಿಕ ಶಾಲೆಯಿಂದಲೇ ಪ್ರಾರಂಭವಾಗುತ್ತದೆ ಎಂದು ಅವರು ಭಾವಿಸಿರುತ್ತಾರೆ. ಕೆಲವರು ತಮ್ಮ ಮಕ್ಕಳನ್ನು ಸ್ವಲ್ಪ ಸಮಯದವರೆಗೆ ಮಾತ್ರ ಅಂಗನವಾಡಿಗೆ ಕಳುಹಿಸುತ್ತಾರೆ. ಅಂದರೆ, ಮಕ್ಕಳು ಒಂದೆಡೆ ಕುಳಿತುಕೊಳ್ಳುವುದು, ಸೂಚನೆಗಳನ್ನು ಪಾಲಿಸುವುದು ಮತ್ತು ಮೂಲಭೂತ ನೈರ್ಮಲ್ಯದಂತಹ ದೈನಂದಿನ ಅಭ್ಯಾಸಗಳನ್ನು ಕಲಿಯಲಿ ಎಂಬ ಉದ್ದೇಶದಿಂದ ಮಾತ್ರ ಕಳುಹಿಸಿ, ಆ ನಂತರ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಾರೆ. ನಾವು ಪೋಷಕರೊಂದಿಗೆ ಹಾಜರಾತಿಯ ಬಗ್ಗೆ ಚರ್ಚಿಸಿದಾಗ, "ಮಕ್ಕಳು ಇನ್ನೂ ಚಿಕ್ಕವರು" ಅಥವಾ "ಹಿರಿಯ ವಿದ್ಯಾರ್ಥಿಗಳೇ ಶಾಲೆಗೆ ಸರಿಯಾಗಿ ಹೋಗುತ್ತಿಲ್ಲವಲ್ಲ" ಎಂಬಂತಹ ಉತ್ತರಗಳು ಸಿಗುತ್ತಿದ್ದವು. ಆರಂಭಿಕ ಬಾಲ್ಯ ಶಿಕ್ಷಣದ ಬಗೆಗಿನ ಇಂತಹ ತಪ್ಪು ಕಲ್ಪನೆಗಳು ಪೋಷಕರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಮತ್ತು ಮಕ್ಕಳ ನಿರಂತರ ಹಾಜರಾತಿಗೆ ಅಡೆತಡೆಗಳನ್ನು ಸೃಷ್ಟಿಸುತ್ತವೆ.

## ಸರಳ ಮತ್ತು ಪರಿಣಾಮಕಾರಿ ಪರಿಹಾರ: ಮಕ್ಕಳ ಮೇಳ

ಈ ಸವಾಲುಗಳನ್ನು ಎದುರಿಸಲು ನಾವು 'ಮಕ್ಕಳ ಮೇಳ' ಎಂಬ ನೇರ ಹಾಗೂ ಪರಿಣಾಮಕಾರಿ ಪರಿಹಾರವನ್ನು ಜಾರಿಗೆ ತಂದೆವು. ಸಮುದಾಯದಲ್ಲಿ ಜಾಗೃತಿ ಮೂಡಿಸಲು ಈ ಕಾರ್ಯಕ್ರಮವು ಒಂದು ಅತ್ಯುತ್ತಮ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ದೀರ್ಘಕಾಲದವರೆಗೆ ಪೋಷಕರು ಅಂಗನವಾಡಿ ಕೇಂದ್ರಗಳನ್ನು ಕೇವಲ ಕೆಲಸಕ್ಕೆ ಹೋಗುವಾಗ ತಮ್ಮ ಮಕ್ಕಳನ್ನು ಸುರಕ್ಷಿತವಾಗಿ ಬಿಟ್ಟು ಹೋಗುವ ಸ್ಥಳವೆಂದು ಮಾತ್ರ ಪರಿಗಣಿಸುತ್ತಿದ್ದರು. ಆದರೆ, ಮಕ್ಕಳ ಮೇಳವು ಪೋಷಕರನ್ನು ಮತ್ತು ಸಮುದಾಯದವರನ್ನು ಅಲ್ಲಿನ ಚಟುವಟಿಕೆಗಳನ್ನು ನೇರವಾಗಿ ವೀಕ್ಷಿಸಲು ಆಹ್ವಾನಿಸುವ ಮೂಲಕ, ಅವರ ಈ ದೃಷ್ಟಿಕೋನವನ್ನು ಬದಲಾಯಿಸಲು ನಮಗೆ ಅವಕಾಶ ಮಾಡಿಕೊಟ್ಟಿತು.

ಮಕ್ಕಳ ಮೇಳದಲ್ಲಿ ತಮ್ಮ ಮಕ್ಕಳು ತೊಡಗಿಸಿಕೊಂಡಿರುವ ವಿವಿಧ ಚಟುವಟಿಕೆಗಳನ್ನು ನೋಡಿದಾಗ, ಪೋಷಕರು ಅಲ್ಲಿನ ಕಲಿಕೆಯ ವಾತಾವರಣವನ್ನು ಕಂಡು ನಿಜಕ್ಕೂ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಮೇಳದ ಈ ಅನೌಪಚಾರಿಕ ವಾತಾವರಣವು ಒಂದು ಮುಕ್ತ ಸಂವಾದಕ್ಕೆ ಪ್ರೋತ್ಸಾಹ ನೀಡುತ್ತದೆ. ಈ ಸಂದರ್ಭದಲ್ಲಿ ಪ್ರತಿ ಚಟುವಟಿಕೆಯ ಉದ್ದೇಶ ಮತ್ತು ಅದು ಮಗುವಿನ ಬೆಳವಣಿಗೆಗೆ ಹೇಗೆ ಕೊಡುಗೆ ನೀಡುತ್ತದೆ ಎಂಬುದನ್ನು ವಿವರಿಸಲು ನಮಗೆ ಸಾಧ್ಯವಾಗುತ್ತದೆ. ಪೋಷಕರೊಂದಿಗಿನ ಇಂತಹ ವೈಯಕ್ತಿಕ ಸಂವಾದವು ಕೇವಲ ಔಪಚಾರಿಕ ಮಾತುಕತೆಗಿಂತ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ.

## ಒಂದು ಹೊಸ ಉಪಕ್ರಮ

ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ತೋಗರಾಪಲ್ಲಿ ಗ್ರಾಮದಲ್ಲಿ, ಅಜೀಂ ಪ್ರೇಮ್‌ಜಿ ಫೌಂಡೇಷನ್ ತಂಡದ ಸಹಯೋಗದೊಂದಿಗೆ ನಾಲ್ಕು ಅಂಗನವಾಡಿಗಳು ಒಟ್ಟಾಗಿ ಈ ಮಕ್ಕಳ ಮೇಳವನ್ನು ಆಯೋಜಿಸಿದ್ದವು. ಪೋಷಕರಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು ಮತ್ತು ಮಕ್ಕಳ ಬೆಳವಣಿಗೆಯಲ್ಲಿ ಅಂಗನವಾಡಿಗಳ ಮಹತ್ವದ ಪಾತ್ರವನ್ನು ಮನವರಿಕೆ ಮಾಡಿಕೊಡುವುದು ಈ ಸಂತೋಷದಾಯಕ ಉಪಕ್ರಮದ ಮುಖ್ಯ ಗುರಿಯಾಗಿತ್ತು. ಆರಂಭದಲ್ಲಿ, ಮಕ್ಕಳಿಗೆ ಇಂತಹ ಮೇಳದ ಅನುಭವವಿಲ್ಲದ ಕಾರಣ ಮತ್ತು ಸುಗ್ಗಿ ಕಾಲದಲ್ಲಿ ಪೋಷಕರು ವ್ಯವಸಾಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ ಎಂಬ ಕಾರಣಗಳಿಂದ ಶಿಕ್ಷಕರು ಮೇಳವನ್ನು ನಡೆಸಲು ಹಿಂಜರಿಯುತ್ತಿದ್ದರು. ಆದರೆ, ಮೇಳದಿಂದಾಗುವ ಸಕಾರಾತ್ಮಕ ಪರಿಣಾಮಗಳ ಬಗ್ಗೆ ಸಮಾಲೋಚಿಸಿದಾಗ ಅವರು ಕಾರ್ಯಕ್ರಮದ ತಯಾರಿಗಾಗಿ ಉತ್ಸಾಹದಿಂದ ಕೆಲಸ ಮಾಡಿದರು.

## ಎಲ್ಲರನ್ನೂ ಒಟ್ಟುಗೂಡಿಸುವುದು

ಮಕ್ಕಳ ಮೇಳದ ನಿಜವಾದ ಶಕ್ತಿಯೆಂದರೆ ಇಡೀ ಸಮುದಾಯವನ್ನು ಒಂದುಗೂಡಿಸುವ ಅದರ ಸಾಮರ್ಥ್ಯ. ಈ ಒಗ್ಗಟ್ಟಿನ ಭಾವನೆಯು ಮೇಳದ ಯೋಜನೆ ಮತ್ತು ಸಿದ್ಧತೆಯ ಹಂತದಲ್ಲೇ ಗೋಚರಿಸತೊಡಗಿತು. ನಮ್ಮ ಮಾರ್ಗದರ್ಶನದಲ್ಲಿ ನಾಲ್ವರು ಶಿಕ್ಷಕಿಯರು ಮತ್ತು ಸಹಾಯಕಿಯರು ಪ್ರತಿಯೊಂದು ವಿಷಯವನ್ನು ಎಚ್ಚರಿಕೆಯಿಂದ ಯೋಜಿಸಿ ಕೆಲಸ ಮಾಡಿದರು. ಪೋಷಕರು, ಸಮುದಾಯದ ಸದಸ್ಯರು ಮತ್ತು ಸ್ಥಳೀಯ ಹಿರಿಯರನ್ನು ಆಹ್ವಾನಿಸಲು ನಾವು ಮನೆ ಮನೆಗೆ ಭೇಟಿ ನೀಡಿದೆವು.

ಆರಂಭದಲ್ಲಿ ಅನೇಕ ಪೋಷಕರು ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದರಿಂದ ಹೆಚ್ಚಿನ ಆಸಕ್ತಿ ತೋರಿಸಿರಲಿಲ್ಲ. ಆದರೆ ಶಿಕ್ಷಕಿಯರು, "ನಿಮ್ಮ ತಂದೆ-ತಾಯಿಯರ ಉಪಸ್ಥಿತಿ ಬಹಳ ಮುಖ್ಯ" ಎಂದು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು. ಪೋಷಕರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಹಳ್ಳಿಯ ವಾಟ್ಸಾಪ್ ಗುಂಪುಗಳ ಮೂಲಕ ಸಂದೇಶ ಕಳುಹಿಸುವುದು, ವೈಯಕ್ತಿಕ ಆಹ್ವಾನ ಪತ್ರಗಳನ್ನು ಹಂಚುವುದು ಮತ್ತು ಮುಖ್ಯವಾಗಿ, ಮಕ್ಕಳು ತಮ್ಮ ಪೋಷಕರನ್ನು ತಾವೇ ಆಹ್ವಾನಿಸುವಂತೆ ಪ್ರೋತ್ಸಾಹಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಯಿತು.

ಶಿಕ್ಷಕಿಯರು ಸಮುದಾಯದ ಸದಸ್ಯರು ಮತ್ತು ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ಅವರ ಸಹಕಾರವನ್ನು ಕೋರಿದರು. ಮೇಳಕ್ಕಾಗಿ ಸೂಕ್ತ ಸ್ಥಳದ ವ್ಯವಸ್ಥೆ ಮಾಡುವುದು, ಅತಿಥಿ ಗಣ್ಯರನ್ನು ಆಹ್ವಾನಿಸುವುದು ಮತ್ತು ಕಾರ್ಯಕ್ರಮಕ್ಕೆ ಅಗತ್ಯವಿರುವ ವಸ್ತುಗಳನ್ನು ಸಮುದಾಯದ ನೆರವಿನಿಂದಲೇ ಸಂಗ್ರಹಿಸುವುದು—ಇವೆಲ್ಲವೂ ಈ ಸಮಾಲೋಚನೆಯ ಭಾಗವಾಗಿದ್ದವು. ಇದು ಸಮುದಾಯದಲ್ಲಿ ಮಾಲೀಕತ್ವದ ಪ್ರಜ್ಞೆಯನ್ನು ಬೆಳೆಸುವ ಒಂದು ಪ್ರಜ್ಞಾಪೂರ್ವಕ ಪ್ರಯತ್ನವಾಗಿತ್ತು. 'ಇದು ನಮ್ಮ ಅಂಗನವಾಡಿ' ಮತ್ತು 'ಇವರು ನಮ್ಮ ಮಕ್ಕಳು' ಎಂಬ ಭಾವನೆಯನ್ನು ಎಲ್ಲರಲ್ಲೂ ಮೂಡಿಸಲು ನಾವು ವಿಶೇಷ ಒತ್ತು ನೀಡಿದೆವು. ಈ ವಿಧಾನವು ಅತ್ಯಂತ ಯಶಸ್ವಿಯಾಯಿತು; ಸಮುದಾಯದ ಸದಸ್ಯರು ಸಕಾರಾತ್ಮಕವಾಗಿ ಸ್ಪಂದಿಸಿದ್ದಲ್ಲದೆ, ಮೇಳಕ್ಕೆ ಸಂಪೂರ್ಣ ಬೆಂಬಲ ನೀಡಿದರು.



ಚಿತ್ರ 2: ಮಕ್ಕಳ ಮೇಳದ ಸಂದರ್ಭದಲ್ಲಿ ಪೋಷಕರು ತಮ್ಮ ಮಕ್ಕಳೊಂದಿಗೆ ಆಟೋಟಗಳಲ್ಲಿ ಭಾಗವಹಿಸುತ್ತಿರುವುದು.

## ಮಕ್ಕಳ ಮೇಳ: ಸಂತೋಷದ ದಿನ

ಮಕ್ಕಳ ಮೇಳದ ದಿನದಂದು ಪೋಷಕರು ಮತ್ತು ಸಮುದಾಯದ ಸದಸ್ಯರು ಉತ್ಸಾಹದಿಂದ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಮಕ್ಕಳಂತೂ ಎಷ್ಟು ಸಂಭ್ರಮದಲ್ಲಿದ್ದರೆಂದರೆ, ಸಾಮಾನ್ಯವಾಗಿ ನಾಚಿಕೆಪಡುವ ಮಕ್ಕಳು ಕೂಡ ತಮ್ಮ ಸ್ನೇಹಿತರೊಂದಿಗೆ ಬೆರೆತು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಮಕ್ಕಳಿಂದ ನಾಟಕದ ರೂಪದಲ್ಲಿ ಕಥೆಯನ್ನು ಪ್ರಸ್ತುತಪಡಿಸಿದ್ದು ಈ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. ಮಕ್ಕಳು ಸಂಭಾಷಣೆಗಳನ್ನು ಹೇಳುತ್ತಾ ಕಥೆಯನ್ನು ತಾವೇ ಮುನ್ನಡೆಸುವ ಸಾಮರ್ಥ್ಯವನ್ನು ಕಂಡು ಪೋಷಕರು ಅಚ್ಚರಿಗೊಂಡರು. ಕಥೆ ಹೇಳುವುದು, ವಿಷಯಾಧಾರಿತ ಚಟುವಟಿಕೆಗಳು ಮತ್ತು ವಸ್ತುಗಳನ್ನು ಎಣಿಸುವುದು—ಇವೇ ಮೊದಲಾದ ವೈವಿಧ್ಯಮಯ ಚಟುವಟಿಕೆಗಳಿಗೆ ಶಿಕ್ಷಕಿಯರು ಮಕ್ಕಳನ್ನು ಸಿದ್ಧಪಡಿಸಿದ್ದರು. ಇದರಿಂದ ಮಕ್ಕಳು ಕೇವಲ ಹಾಡು ಮತ್ತು ಆಟಗಳನ್ನಷ್ಟೇ ಅಲ್ಲದೆ, ಅದಕ್ಕಿಂತಲೂ ಮಿಗಿಲಾದ ಕಲಿಕೆಯಲ್ಲಿ ತೊಡಗಿದ್ದಾರೆ ಎಂಬ ಅರಿವು ಪೋಷಕರಲ್ಲಿ ಮೂಡಿತು. ಪ್ರತಿಯೊಂದು ಚಟುವಟಿಕೆಯ ನಂತರ, ಆ ನಿರ್ದಿಷ್ಟ ಚಟುವಟಿಕೆಯು ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಹೇಗೆ ಪೂರಕವಾಗಿದೆ ಎಂಬುದನ್ನು ಶಿಕ್ಷಕಿಯರು ಪೋಷಕರಿಗೆ ಮನವರಿಕೆ ಮಾಡಿಕೊಟ್ಟರು.

ಪೋಷಕರು ತಮ್ಮ ಮಕ್ಕಳೊಂದಿಗೆ ಆಟ ಆಡುವುದನ್ನು ನೋಡುವುದು ಬಹಳ ಪ್ರೋತ್ಸಾಹದಾಯಕ ಅನುಭವವಾಗಿತ್ತು. ದೈನಂದಿನ ಜೀವನದಲ್ಲಿ ಇಂತಹ ದೃಶ್ಯಗಳು ನಮಗೆ ಅಪರೂಪವಾಗಿ ಕಾಣಸಿಗುತ್ತವೆ. ಹೀಗೆ ಪೋಷಕರು ಮತ್ತು ಮಕ್ಕಳು ಬೆರೆತುಹೋಗುವುದು, 'ಪರಸ್ಪರ ಸೇರಿ ಕಲಿಯುವ ವಾತಾವರಣ'ದ ಪರಿಕಲ್ಪನೆಯನ್ನು ಮತ್ತಷ್ಟು ಬಲಪಡಿಸಿತು. ಮೇಳದ ಒಂದು ವಿಶೇಷ ಅವಧಿಯಲ್ಲಿ, ಸಮತೋಲಿತ ಆಹಾರ ಮತ್ತು ನೈರ್ಮಲ್ಯದ ಮಹತ್ವವನ್ನು ವಿವರಿಸಲಾಯಿತು. ಅದರ ಜೊತೆಗೆ, ಅಂಗನವಾಡಿಯಲ್ಲಿ ಮಕ್ಕಳ ಪೌಷ್ಟಿಕಾಂಶ ಮತ್ತು ಆರೋಗ್ಯದ ಬಗ್ಗೆ ಹೇಗೆ ಕಾಳಜಿ ವಹಿಸಲಾಗುತ್ತದೆ ಎಂಬ ಬಗ್ಗೆ ಸರಳ ಪ್ರಾತ್ಯಕ್ಷಿಕೆಗಳನ್ನು ನೀಡಲಾಯಿತು.

ಕೆಲವು ತಾಯಂದಿರು ಮೊದಲಿಗೆ ಹಿಂಜರಿಕೆಯಿಂದ ದೂರ ನಿಂತಿದ್ದರು, ಆದರೆ ತಮ್ಮ ಮಕ್ಕಳ ಆತ್ಮವಿಶ್ವಾಸವನ್ನು ಕಂಡು ಅವರು ಅಂಗನವಾಡಿಯ ಕೆಲಸದ ಮಹತ್ವವನ್ನು ಅರಿತುಕೊಂಡರು. ಕೊನೆಯಲ್ಲಿ ಒಬ್ಬ ತಾಯಿ, "ನನ್ನ ಮಗುವಿಗೆ ಇಷ್ಟೊಂದು ಆತ್ಮವಿಶ್ವಾಸವಿದೆ ಎಂದು ನನಗೆ ತಿಳಿದಿರಲಿಲ್ಲ. ಇದು ಅವನಿಗೆ ತುಂಬಾ ಒಳ್ಳೆಯದು" ಎಂದು ಹಂಚಿಕೊಂಡರು. ಇನ್ನೊಬ್ಬ ಪೋಷಕರು ತಮ್ಮ ಅಭಿಪ್ರಾಯ ತಿಳಿಸುತ್ತಾ, "ನಮ್ಮ ಅಂಗನವಾಡಿಯು ಕೇವಲ ಮಕ್ಕಳನ್ನು ಬಿಟ್ಟು ಹೋಗುವ ಸ್ಥಳಕ್ಕಿಂತ ಹೆಚ್ಚಿನದು ಎಂದು ನಮಗೆ ಎಂದಿಗೂ ಅನಿಸಿರಲಿಲ್ಲ. ಮಕ್ಕಳು ಇಲ್ಲಿ ಎಷ್ಟು ಕಲಿಯುತ್ತಿದ್ದಾರೆ

**ಕೋಷ್ಟಕ 1:** ಮಕ್ಕಳ ಮೇಳಕ್ಕೆ ಮುಂಚಿತವಾಗಿ ಅಜೀಂ ಪ್ರೇಮ್‌ಜಿ ಫೌಂಡೇಷನ್ನಿನ ಇಸಿಇ ಸಂಗಾರರ್ಡ್ಡ ತಂಡದ ಸಹಯೋಗದೊಂದಿಗೆ ಶಿಕ್ಷಕಿಯರು ಮತ್ತು ಸಹಾಯಕಿಯರು ಸಿದ್ಧಪಡಿಸಿದ ವಿವರವಾದ ಕಾರ್ಯಕ್ರಮದ ವಿವರ ಹೀಗಿದೆ:

| ಸಮಯ | ಚಟುವಟಿಕೆ | ಜವಾಬ್ದಾರಿ |
|---|---|---|
| **9:00-9:30** | ಮಕ್ಕಳನ್ನು ಕಾರ್ಯಕ್ರಮದ ಸ್ಥಳಕ್ಕೆ ಕರೆತರುವುದು | ಅಂಗನವಾಡಿ ಸಹಾಯಕಿ |
| **9:30-9:45** | • ಪೋಷಕರನ್ನು ಆಹ್ವಾನಿಸುವುದು ಮತ್ತು ಕಾರ್ಯಕ್ರಮಕ್ಕಾಗಿ ಮಕ್ಕಳನ್ನು ಸಿದ್ಧಪಡಿಸುವುದು<br>• ಮಕ್ಕಳಿಗಾಗಿ ಮುಖದ ಮೇಲೆ ಪೇಂಟಿಂಗ್ | ಅಂಗನವಾಡಿ ಶಿಕ್ಷಕಿ ಮತ್ತು ಸಂಪನ್ಮೂಲ ವ್ಯಕ್ತಿ |
| **9:45-10:00** | *ಮಕ್ಕಳಿಗಾಗಿ ಸ್ವತಂತ್ರ ಚಿತ್ರಕಲೆ ಚಟುವಟಿಕೆ* | ಅಂಗನವಾಡಿ ಶಿಕ್ಷಕಿ |
| **10:00-10:10** | ಆರಂಭಿಕ ಮಾತು: ಮಕ್ಕಳ ಮೇಳದ ಪರಿಚಯ, ಕಾರ್ಯಕ್ರಮದ ಉದ್ದೇಶ ಮತ್ತು ಕಾರ್ಯಕ್ರಮದ ವಿವರಗಳನ್ನು ನೀಡುವುದು | ಅಂಗನವಾಡಿ ಶಿಕ್ಷಕಿ / ಮೇಲ್ವಿಚಾರಕರು |
| **10:10-10:40** | ಹಾಡು: ಭಾಷಾ ಬೆಳವಣಿಗೆಗೆ ಸಂಬಂಧಿಸಿದ ಹಾಡುಗಳ ಪ್ರಸ್ತುತಿ (ಪಠ್ಯಪುಸ್ತಕದ ಹಾಡುಗಳು) | ಅಂಗನವಾಡಿ ಶಿಕ್ಷಕಿ |
| **10:40-11:00** | ಚರ್ಚೆ: ಚಿತ್ರ ಪುಸ್ತಕಗಳನ್ನು ಬಳಸಿ ಭಾಷಾ ಬೆಳವಣಿಗೆಯ ಬಗ್ಗೆ ಸಂವಾದ | ಅಂಗನವಾಡಿ ಶಿಕ್ಷಕಿ |
| **11:00-11:15** | ಆರಂಭಿಕ ವರ್ಷಗಳಲ್ಲಿ ಮೆದುಳಿನ ಬೆಳವಣಿಗೆಯ ಮಹತ್ವದ ಬಗ್ಗೆ ಮಾಹಿತಿ | ಅಂಗನವಾಡಿ ಶಿಕ್ಷಕಿ / ಮೇಲ್ವಿಚಾರಕರು |
| **11:15-12:00** | ಸಂಜ್ಞಾನಾತ್ಮಕ ಬೆಳವಣಿಗೆಯ (cognitive development) ಚಟುವಟಿಕೆಗಳು: ಪೋಷಕರು ಮತ್ತು ಮಕ್ಕಳು<br>• ಆಕಾರಗಳ ಹೊಂದಾಣಿಕೆ<br>• ಇಂದ್ರಿಯ ಸಂವೇದನಾ ಆಟ (ಕಣ್ಣಿಗೆ ಬಟ್ಟೆ ಕಟ್ಟಿ ವಸ್ತುಗಳನ್ನು ಗುರುತಿಸುವುದು) | ಅಂಗನವಾಡಿ ಶಿಕ್ಷಕಿ / ಸಂಪನ್ಮೂಲ ವ್ಯಕ್ತಿ |
| **12:00-12:30** | ಪೋಷಕರಿಗಾಗಿ ಸ್ನಾಯು-ಚಲನಾ ಬೆಳವಣಿಗೆಗೆ ಸಂಬಂಧಿಸಿದ ಚಟುವಟಿಕೆಗಳು :<br>• ದಾರದಲ್ಲಿ ಮಣಿಗಳನ್ನು ಪೋಣಿಸುವುದು<br>• ಲೇಸಿಂಗ್ ಬೋರ್ಡ್ ಬಳಕೆ<br>• ಬಣ್ಣ ತುಂಬುವುದು / ಚಿತ್ರಕಲೆ | ಅಂಗನವಾಡಿ ಶಿಕ್ಷಕಿ / ಸಂಪನ್ಮೂಲ ವ್ಯಕ್ತಿ |
| **12:15** | ಪೋಷಕರ ಚಟುವಟಿಕೆಯ ಸಮಯದಲ್ಲಿ ಮಕ್ಕಳಿಗೆ ಊಟದ ವ್ಯವಸ್ಥೆ | ಅಂಗನವಾಡಿ ಸಹಾಯಕಿ |
| **12:30-12:50** | ವಿವರಣೆ:<br>• ಮಕ್ಕಳನ್ನು ಅಂಗನವಾಡಿ ಕೇಂದ್ರಗಳಿಗೆ ಕಳುಹಿಸುವಲ್ಲಿ ಪೋಷಕರ ಪಾತ್ರ<br>• ಅಂಗನವಾಡಿ ಕೇಂದ್ರದ ಚಟುವಟಿಕೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ | ಅಂಗನವಾಡಿ ಶಿಕ್ಷಕಿ / ಮೇಲ್ವಿಚಾರಕರು |
| **12:50-1:05** | • ಅಂಗನವಾಡಿ ಮತ್ತು ಮಕ್ಕಳ ಬೆಳವಣಿಗೆಯ ಬಗ್ಗೆ ಪೋಷಕರ ಅನಿಸಿಕೆಗಳು<br>• ಸರ್ಕಾರಿ ಶಾಲಾ ಶಿಕ್ಷಕರಿಂದ ಅನುಭವ ಹಂಚಿಕೆ | ಪೋಷಕರು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರು |
| **1:05-1:15** | ಸಮಾರೋಪ | ಅಂಗನವಾಡಿ ಶಿಕ್ಷಕಿ |

ಮತ್ತು ಮೋಜು ಮಾಡುತ್ತಿದ್ದಾರೆ ಎಂಬುದನ್ನು ಇಂದು ನಾವು ಕಣ್ಣಾರೆ ನೋಡಿದೆವು" ಎಂದರು.

ಈ ಪ್ರತಿಕ್ರಿಯೆಗಳು, ಪೋಷಕರ ಧೋರಣೆಯನ್ನು ಬದಲಿಸುವಲ್ಲಿ ಮತ್ತು ಅವರಲ್ಲಿ ವಿಶ್ವಾಸ ಮೂಡಿಸುವಲ್ಲಿ ಕಾರ್ಯಕ್ರಮವು ಯಶಸ್ವಿಯಾಗಿದೆ ಎಂಬುದನ್ನು ಸ್ಪಷ್ಟಪಡಿಸಿದವು. ಗ್ರಾಮದ ಮುಖ್ಯಸ್ಥರು, ಜನಪ್ರತಿನಿಧಿಗಳು, ವಿಭಾಗೀಯ ಶಿಕ್ಷಣಾಧಿಕಾರಿಗಳು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರು ಸಹ ಮೇಳದಲ್ಲಿ ಭಾಗವಹಿಸಿದ್ದರು. ಶಿಕ್ಷಕರು ತಯಾರಿಸಿದ ಕಡಿಮೆ ವೆಚ್ಚದ ಮತ್ತು ವೆಚ್ಚವೇ ಇಲ್ಲದ ಬೋಧನಾ ಸಾಮಗ್ರಿಗಳನ್ನು ವಿಭಾಗೀಯ ಶಿಕ್ಷಣಾಧಿಕಾರಿಗಳು ಕುತೂಹಲದಿಂದ ಗಮನಿಸಿದರು. ಅಂಗನವಾಡಿ ಮಕ್ಕಳು ಪ್ರಾಥಮಿಕ ಶಾಲೆಗೆ ಸೇರಿದಾಗ ಇತರ ಮಕ್ಕಳಿಗಿಂತ ಉತ್ತಮವಾಗಿ ಕಲಿಯುತ್ತಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ, ಈ ಪ್ರದೇಶದ ಎಲ್ಲಾ ಅರ್ಹ ಮಕ್ಕಳನ್ನೂ ನಿಯತವಾಗಿ ಅಂಗನವಾಡಿಗಳಿಗೆ ಕಳಿಸುವಂತೆ ಅವರು ಪೋಷಕರಲ್ಲಿ ಮನವಿ ಮಾಡಿದರು.

## ದೀರ್ಘಕಾಲದ ಪರಿಣಾಮ

ಬಾಲಮೇಳದ ಸಕಾರಾತ್ಮಕ ಪರಿಣಾಮವು ದೀರ್ಘಕಾಲದವರೆಗೆ ಉಳಿಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಾಲ್ಕು ಅಂಗನವಾಡಿ ಕೇಂದ್ರಗಳು ಹಲವು ಆಯಾಮಗಳಲ್ಲಿ ಬಲಗೊಂಡವು. ನಮ್ಮ ಮುಂದಿನ ಭೇಟಿಯ ಸಂದರ್ಭಗಳಲ್ಲಿ ಇದರ ಸ್ಪಷ್ಟ ಫಲಿತಾಂಶಗಳು ನಮಗೆ ಗೋಚರಿಸಿದವು. ಪೋಷಕರು ಮತ್ತು ಶಿಕ್ಷಕರ ನಡುವಿನ ಬಾಂಧವ್ಯ ವೃದ್ಧಿಸಿತು ಮತ್ತು ಮಕ್ಕಳ ಮೇಳದ ನಂತರದ ವಾರಗಳಲ್ಲಿ ಮಕ್ಕಳ ಹಾಜರಾತಿಯೂ ಗಣನೀಯವಾಗಿ ಹೆಚ್ಚಾಯಿತು.

ಮಕ್ಕಳ ಮೇಳದಿಂದ ಕೇವಲ ಮಕ್ಕಳು, ಪೋಷಕರು ಮತ್ತು ಸಮುದಾಯಕ್ಕೆ ಮಾತ್ರವಲ್ಲದೆ, ಸ್ವತಃ ಶಿಕ್ಷಕಿಯರಿಗೂ ಬಹಳ ಪ್ರಯೋಜನವಾಯಿತು. ಶಿಕ್ಷಕಿಯರು ತಮ್ಮ ನಡುವೆ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಮತ್ತು ಪರಸ್ಪರ ಸಹಕರಿಸಲು ಮುಂದಾಗಿದ್ದರಿಂದ, ಅವರಲ್ಲಿ ಒಂದು

ಉತ್ತಮ ತಂಡ ರೂಪುಗೊಂಡದ್ದನ್ನು ನಾವು ಗಮನಿಸಿದೆವು. ಇದು ವಿವಿಧ ಅಂಗನವಾಡಿಗಳ ನಡುವಿದ್ದ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ದೂರ ಮಾಡಿತು. ಅಷ್ಟೇ ಅಲ್ಲದೆ, ಚಟುವಟಿಕೆಗಳ ಯೋಜನೆ, ದಾಖಲೆಗಳ ನಿರ್ವಹಣೆ ಹಾಗೂ ಸಭೆಗಳನ್ನು ನಡೆಸುವಲ್ಲಿ ಸಹಯೋಗದಿಂದ ಕೆಲಸ ಮಾಡುವ ಉತ್ತಮ ಸಂಸ್ಕೃತಿಯನ್ನು ಬೆಳೆಸಿತು.

ಶಿಕ್ಷಕಿಯರೊಂದಿಗೆ ಮಕ್ಕಳ ಮೇಳದ ಪರಿಣಾಮಗಳ ಬಗ್ಗೆ ಚರ್ಚಿಸಿದಾಗ, ಅವರು ಈ ಕೆಳಗಿನ ಪ್ರಮುಖ ಬದಲಾವಣೆಗಳನ್ನು ಗುರುತಿಸಿದರು:

- ಎಲ್ಲಾ ನಾಲ್ಕು ಅಂಗನವಾಡಿಗಳ ದಾಖಲಾತಿಯಲ್ಲಿ ಗಣನೀಯ ಹೆಚ್ಚಳವಾಗಿದೆ.ಮಕ್ಕಳು ಈಗ ನಿಯತವಾಗಿ ಕೇಂದ್ರಕ್ಕೆ ಬರುತ್ತಿದ್ದಾರಲ್ಲದೆ, ಅಲ್ಲಿ ಹೆಚ್ಚಿನ ಸಮಯ ಕಳೆಯಲು ಆಸಕ್ತಿ ತೋರುತ್ತಿದ್ದಾರೆ.

- ಮಕ್ಕಳು ಅಂಗನವಾಡಿಗೆ ಬರಲು ಎಂದಿಗಿಂತಲೂ ಹೆಚ್ಚು ಉತ್ಸುಕರಾಗಿದ್ದಾರೆ. ಪೋಷಕರು ಈಗ ಮಕ್ಕಳಿಗೆ ಕರವಸ್ತ್ರ ಮತ್ತು ನೀರಿನ ಬಾಟಲಿಯಂತಹ ಅಗತ್ಯ ವಸ್ತುಗಳನ್ನು ನೀಡಿ ಕಳುಹಿಸುತ್ತಾರೆ. ಅಲ್ಲದೆ, ಮಕ್ಕಳು ಸಮಯಕ್ಕೆ ಸರಿಯಾಗಿ ಕೇಂದ್ರವನ್ನು ತಲುಪುವ ಬಗ್ಗೆಯೂ ಪೋಷಕರು ಕಾಳಜಿ ವಹಿಸುತ್ತಿದ್ದಾರೆ.

- ಪೋಷಕರು 'ಇಸಿಸಿಇ ದಿನ'ದಂದು ನಡೆಯುವ ಮಾಸಿಕ ಪೋಷಕರ ಸಭೆಗಳಿಗೆ ತಪ್ಪದೆ ಹಾಜರಾಗುತ್ತಿದ್ದಾರೆ ಮತ್ತು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ.

- ಕೆಲವು ಪೋಷಕರು ಈಗ ಪ್ರತಿದಿನ ತಮ್ಮ ಮಕ್ಕಳನ್ನು "ಇಂದು ಅಂಗನವಾಡಿಯಲ್ಲಿ ಏನು ಮಾಡಿದಿರಿ?" ಎಂದು ಪ್ರೀತಿಯಿಂದ ಕೇಳುತ್ತಾ, ಅವರ ಕಲಿಕೆಯ ಮಾತುಗಳನ್ನು ಆಲಿಸುತ್ತಿದ್ದಾರೆ.

- ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಪೋಷಕರು ಸ್ವಯಂಪ್ರೇರಿತರಾಗಿ ಸಹಾಯ ಮಾಡುತ್ತಿದ್ದಾರೆ.

- ಸಮುದಾಯದ ಸದಸ್ಯರು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದು, ಕೇಂದ್ರದ ಮೂಲಭೂತ ಅಗತ್ಯಗಳನ್ನು ಪೂರೈಸಲು ತಮ್ಮ ಕೈಲಾದ ನೆರವು ನೀಡಲು ಪ್ರಾರಂಭಿಸಿದ್ದಾರೆ.

## ಪೋಷಕರ ಪ್ರತಿಕ್ರಿಯೆ

ಮಕ್ಕಳ ಮೇಳದಲ್ಲಿ ಭಾಗವಹಿಸಿದ ಪೋಷಕರು, ಮಕ್ಕಳ ಆರಂಭಿಕ ಬೆಳವಣಿಗೆಗಾಗಿ ಅವರನ್ನು ಅಂಗನವಾಡಿಗಳಿಗೆ ಕಳುಹಿಸುವ ಮಹತ್ವದ ಅರಿವು ನಮಗಾಯಿತು ಎಂದು ಹಂಚಿಕೊಂಡರು. ಮೇಳದಲ್ಲಿ ಭಾಗವಹಿಸಿದ ತಾಯಿಯೊಬ್ಬರು, "ನನ್ನ ಮಗುವನ್ನು ಖಾಸಗಿ ಶಾಲೆಗೆ ಕಳುಹಿಸಲು ಅನೇಕರು ಸಲಹೆ ನೀಡಿದ್ದರು. ಆದರೆ ಇಲ್ಲಿ ಶಿಕ್ಷಕಿಯರು ಆಯೋಜಿಸಿದ ಆಕರ್ಷಕ ಚಟುವಟಿಕೆಗಳನ್ನು ನೋಡಿದ ನಂತರ, ನಾನು ಮಗುವನ್ನು ಅಂಗನವಾಡಿಗೆ ಸೇರಿಸಿ ಸರಿಯಾದ ನಿರ್ಧಾರವನ್ನೇ ಮಾಡಿದ್ದೇನೆ ಎಂಬ ಸಂತೋಷ ನನಗಿದೆ," ಎಂದರು.

ಈ ಮೇಳದ ಎರಡನೇ ಪ್ರಮುಖ ಸಾಧನೆಯೆಂದರೆ ತಂದೆಯರ ಪಾಲ್ಗೊಳ್ಳುವಿಕೆ. ಸಾಮಾನ್ಯವಾಗಿ ಇಂತಹ ಕಾರ್ಯಕ್ರಮಗಳು ಕೇವಲ ಮಹಿಳೆಯರಿಗೆ ಸಂಬಂಧಿಸಿದ್ದು ಎಂಬ ಅಭಿಪ್ರಾಯದಿಂದ ತಂದೆಯರು ಅಷ್ಟಾಗಿ ಬರುತ್ತಿರಲಿಲ್ಲ. ಆದರೆ ಈ ಬಾರಿ ಅವರು ಮೇಳಕ್ಕೆ ಬಂದಿದ್ದಲ್ಲದೆ, ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಆಸಕ್ತಿ ವಹಿಸಿದರು. ಇಂತಹ ಒಬ್ಬ ತಂದೆ ಮಾತನಾಡುತ್ತಾ, "ಇಷ್ಟು ದಿನ ಅಂಗನವಾಡಿ ಎಂದರೆ ಕೆಲಸಕ್ಕೆ ಹೋಗುವಾಗ ಮಗುವನ್ನು ಬಿಟ್ಟು ಹೋಗುವ ಒಂದು ಸುರಕ್ಷಿತ ಸ್ಥಳವೆಂದು ಮಾತ್ರ ಭಾವಿಸಿದ್ದೆವು. ಆದರೆ ನಮ್ಮ ಸ್ವಂತ ಸಮುದಾಯದಲ್ಲೇ ಅಂಗನವಾಡಿಯು ಇಷ್ಟು ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂಬುದು ಈ ಮೇಳದ ಮೂಲಕ ನಮಗೆ ತಿಳಿಯಿತು," ಎಂದು ಹೇಳಿದರು. ಮನೆಯಲ್ಲಿ ತುಂಬಾ ಶಾಂತವಾಗಿ ಮತ್ತು ನಾಚಿಕೆಯಿಂದ ಇರುತ್ತಿದ್ದ ತಮ್ಮ ಮಕ್ಕಳು, ಇಲ್ಲಿ ಇಷ್ಟು ಆತ್ಮವಿಶ್ವಾಸದಿಂದ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಕಂಡು ಅವರು ಆಶ್ಚರ್ಯ ಪಟ್ಟರು.

## ಉಪಸಂಹಾರ

ಮಕ್ಕಳ ಮೇಳವು ಎಲ್ಲರಿಗೂ ಒಂದು ಅಪೂರ್ವ ಅನುಭವ ನೀಡಿತು. ಮಗುವಿನ ಸಮಗ್ರ ಬೆಳವಣಿಗೆಗೆ ಅಂಗನವಾಡಿ ವ್ಯವಸ್ಥೆಯು ಅತ್ಯುತ್ತಮ ಮಾರ್ಗವಾಗಿದೆ ಎಂಬ ತಿಳಿವಳಿಕೆ ಸಮುದಾಯಕ್ಕೆ ಲಭಿಸಿತು. ಜೀವನದ ಉತ್ತಮ ಆರಂಭಕ್ಕೆ ದುಬಾರಿ ಶುಲ್ಕ ಕಟ್ಟುವ ಅಗತ್ಯವಿಲ್ಲ; ಬದಲಾಗಿ, ಕರ್ತವ್ಯನಿಷ್ಠ ಶಿಕ್ಷಕರು ಮತ್ತು ಪೋಷಕರ ಸಹಕಾರವಿದ್ದರೆ ಸಾಕು ಎಂಬುದನ್ನು ಈ ಕಾರ್ಯಕ್ರಮವು ಸಾಬೀತುಪಡಿಸಿತು. ಅದೇ ಸಮಯದಲ್ಲಿ, ಆಟದ ಮೂಲಕ ಕಲಿಕೆಗೆ ಒತ್ತು ನೀಡುವ ಮತ್ತು ಮಕ್ಕಳ ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕ ವಿಕಸನಕ್ಕೆ ಪೂರಕವಾದ ಸಂತೋಷದಾಯಕ ಪಠ್ಯಕ್ರಮದ ಅವಶ್ಯಕತೆಯನ್ನು ಇದು ಎತ್ತಿ ತೋರಿಸಿತು. ಈ ಕಾರ್ಯಕ್ರಮವು ಅಂಗನವಾಡಿಯನ್ನು ಕೇವಲ ಒಂದು 'ಆರೈಕೆ ಕೇಂದ್ರ' ಎನ್ನುವ ಹಣೆಪಟ್ಟಿಯಿಂದ ಮುಕ್ತಗೊಳಿಸಿ, ನಮ್ಮ ಮಕ್ಕಳ ಉಜ್ವಲ ಭವಿಷ್ಯವನ್ನು ನಿರ್ಮಿಸುವ 'ಪ್ರಮುಖ ಶೈಕ್ಷಣಿಕ ಕೇಂದ್ರ'ವನ್ನಾಗಿ ಪರಿವರ್ತಿಸಿತು.

**ಕೃತಜ್ಞತೆ:** ಈ ಲೇಖನವನ್ನು ಸಿದ್ಧಪಡಿಸಲು ಅಮೂಲ್ಯವಾದ ಬೆಂಬಲ ಮತ್ತು ಮಾರ್ಗದರ್ಶನ ನೀಡಿದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸುಜಾತಾ ರವಿ ಅವರಿಗೆ ವಿಶೇಷ ಧನ್ಯವಾದಗಳು.



**ಜೆ. ವಿಮಲಾ** ಅವರು ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಸದಾಶಿವಪೇಟ್ ಯೋಜನೆಯಲ್ಲಿ ವಿಸ್ತರಣಾ ಅಧಿಕಾರಿ (ಮೇಲ್ವಿಚಾರಕರು) ಮತ್ತು ಒಬ್ಬ ಪ್ರಮುಖ ಮಾಸ್ಟರ್ ಟ್ರೇನರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಸಾಮರ್ಥ್ಯ ವರ್ಧನಾ ಕಾರ್ಯಕ್ರಮಗಳ ನೇತೃತ್ವವನ್ನು ಇವರೇ ವಹಿಸಿದ್ದಾರೆ. ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರು ತಮ್ಮ ವೈಯಕ್ತಿಕ ಹಾಗೂ ವೃತ್ತಿಪರ ಬೆಳವಣಿಗೆಗಾಗಿ ದೂರ ಶಿಕ್ಷಣದ ಮೂಲಕ ಉನ್ನತ ವ್ಯಾಸಂಗ ಮುಂದುವರಿಸಲು ಇವರು ಸದಾ ಪ್ರೇರೇಪಿಸುತ್ತಾರೆ.

**ಸಂಪರ್ಕ:** vimala.tanay@gmail.com

ಅನುವಾದ: ಆಶಾ ಸಿಂಗ್ | ಪರಿಶೀಲನೆ: ಕಿರಣ್ ಮಂಜುನಾಥ್

# ಮಕ್ಕಳಿಂದ ಕಲಿಯುವುದು

ತರನ್ನುಮ್ ನಿಶಾ

**ಈ ಲೇಖನವು 3ರಿಂದ 6 ವರ್ಷದ ಪುಟ್ಟ ಮಕ್ಕಳೊಂದಿಗೆ ನಾನು ಕೆಲಸ ಮಾಡಿದ ಅನುಭವದ ಕುರಿತಾಗಿದೆ. ಮಕ್ಕಳಿಗಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುವಾಗ, ನನಗೆ ಗಿಜುಭಾಯಿ ಬಧೇಕಾ ಮತ್ತು ತೊತ್ತೋ-ಚಾನ್ ಅವರ ಶಿಕ್ಷಣ ಚಿಂತನೆಗಳು ಬಹಳ ಪ್ರೇರಣೆ ನೀಡಿದವು. ನಾನು ಮಕ್ಕಳ ವಯಸ್ಸಿಗೆ ಅನುಗುಣವಾದ ವಿವಿಧ ಆಟಗಳನ್ನು ಪುಸ್ತಕಗಳಿಂದ ಮತ್ತು ಯೂಟ್ಯೂಬ್ ಸಂಪನ್ಮೂಲಗಳಿಂದ ಆಯ್ದುಕೊಂಡಿದ್ದೇನೆ.**

ನಿಗದಿಪಡಿಸಿದ ದಿನದಂದು ನಾನು ಅಂಗನವಾಡಿ ಕೇಂದ್ರಕ್ಕೆ ಹೋದಾಗ, ಅದು ಸ್ವಲ್ಪ ಅಸ್ತವ್ಯಸ್ತವಾಗಿತ್ತು. ಅಂಗನವಾಡಿ ಶಿಕ್ಷಕರು ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ಮಕ್ಕಳು ಚಾಪೆಯ ಮೇಲೆ ಕುಳಿತು ಆಟಿಕೆಗಳೊಂದಿಗೆ ಆಟವಾಡುತ್ತಿದ್ದರು. ಸಹಾಯಕರು ಒಂದು ಮೂಲೆಯಲ್ಲಿ ಕುಳಿತು, ಮಕ್ಕಳು ಯಾರಿಗೂ ತಿಳಿಸದೆ ಮನೆಗೆ ಹೋಗದಂತೆ ಗಮನಿಸುತ್ತಿದ್ದರು. ನನ್ನನ್ನು ಕಂಡ ತಕ್ಷಣ ಶಿಕ್ಷಕರು ಗೌರವದಿಂದ ಕುರ್ಚಿ ನೀಡಿದರು. ಆದರೆ, ನಾನು ಮಕ್ಕಳೊಂದಿಗೆ ಬೆರೆಯಲು ಚಾಪೆಯ ಮೇಲೆ ಕುಳಿತುಕೊಳ್ಳುವುದೇ ಸೂಕ್ತವೆಂದು ಭಾವಿಸಿ, ಅವರ ನಡುವೆಯೇ ಕುಳಿತೆ.

ಸ್ವಲ್ಪ ಸಮಯದ ನಂತರ ಶಿಕ್ಷಕರು ತರಗತಿಯ ಪ್ರಕ್ರಿಯೆಯನ್ನು ಪ್ರಾರಂಭಿಸಿದರು. ಮೊದಲು ಅವರು ಎಲ್ಲಾ ಮಕ್ಕಳನ್ನು ಸಾಲುಗಳಲ್ಲಿ ಕುಳ್ಳಿರಿಸಿ, ಪ್ರತಿಯೊಬ್ಬರ ಹೆಸರುಗಳನ್ನು ಕೇಳತೊಡಗಿದರು. ಕೆಲವರು ಉತ್ತರಿಸಿದರೆ, ಇನ್ನು ಕೆಲವರು ಮೌನವಾಗಿ ಕುಳಿತಿದ್ದರು. ನಾನು ಮಕ್ಕಳೊಂದಿಗೆ ಮಾತನಾಡಿಸಲು ಪ್ರಯತ್ನಿಸಿದೆ, ಆದರೆ ಯಾರೂ ಪ್ರತಿಕ್ರಿಯಿಸಲಿಲ್ಲ. ಶಿಕ್ಷಕರು ಕೇಳಿದಾಗ ಉತ್ತರಿಸುತ್ತಿದ್ದ ಮಕ್ಕಳು ಕೂಡ ನನ್ನ ಮುಂದೆ ಮೌನವಾಗಿದ್ದರು. ನಂತರ ನಾನು ಅಲ್ಲಿ ನಡೆಯುತ್ತಿದ್ದ ಪ್ರಕ್ರಿಯೆಗಳನ್ನು ಮೌನವಾಗಿ ಗಮನಿಸಲು ಪ್ರಾರಂಭಿಸಿದೆ.

ಶಿಕ್ಷಕರ ಮಾತಿನ ರೀತಿ ಬಹಳ ಪ್ರೀತಿಯಿಂದ ಕೂಡಿತ್ತು. ಅವರ ಮಾತುಗಳನ್ನು ಕೇಳಿದರೆ, ಅವರಿಗೆ ಮಕ್ಕಳೊಂದಿಗೆ ಒಂದು ಆಪ್ತವಾದ ಸಂಬಂಧವಿದೆ ಎಂದು ತಿಳಿಯುತ್ತಿತ್ತು. ಶಿಕ್ಷಕರು ಸಂಭಾಷಣೆಯ ನಡುವೆ ತಮ್ಮ ಕುಟುಂಬದ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದರು; ಮಕ್ಕಳು ಕೂಡ ಅದಕ್ಕೆ ಉತ್ಸಾಹದಿಂದ ಪ್ರತಿಕ್ರಿಯಿಸುತ್ತಿದ್ದರು. ಇದನ್ನು ಗಮನಿಸಿದ ನಂತರ, ಮಕ್ಕಳೊಂದಿಗೆ ಸಂಭಾಷಣೆಯನ್ನು ಹೇಗೆ ಪ್ರಾರಂಭಿಸಬೇಕು ಎಂಬುದು ನನಗೆ ಅರ್ಥವಾಯಿತು. ನಂತರ ಶಿಕ್ಷಕರು ಮಕ್ಕಳೊಂದಿಗೆ



ಚಿತ್ರ 1: ಮಕ್ಕಳಿಗೆ ಕಲಿಯಲು ಪೂರಕವಾದ ಅವಕಾಶಗಳು ಮತ್ತು ಪ್ರೀತಿಯಿಂದ ಕೂಡಿದ ವಾತಾವರಣವಿದ್ದರೆ ಅವರ ಕಲಿಕೆ ಸುಲಭವಾಗುತ್ತದೆ.

ಅಕ್ಷರಗಳು ಮತ್ತು ಸಂಖ್ಯೆಗಳನ್ನು ಪಠಿಸುವ ಪ್ರಕ್ರಿಯೆಯನ್ನು ಶುರು ಮಾಡಿದರು. ಅವರು ಮೊದಲು ಹೇಳುತ್ತಿದ್ದರು, ನಂತರ ಮಕ್ಕಳು ಅದನ್ನು ಪುನರಾವರ್ತಿಸುತ್ತಿದ್ದರು. ಸ್ವಲ್ಪ ಸಮಯದ ನಂತರ ಊಟದ ಸಮಯವಾಯಿತು. ಮಕ್ಕಳಿಗೆ ಆಹಾರವನ್ನು ನೀಡುವ ಮೊದಲು ಕೈಗಳನ್ನು ತೊಳೆದುಕೊಳ್ಳಲು, ಸಾಲಾಗಿ ಕುಳಿತುಕೊಳ್ಳಲು ಮತ್ತು ಪ್ರಾರ್ಥನೆ ಮಾಡಲು ತಿಳಿಸಲಾಯಿತು. ಊಟ ಮುಗಿದ ನಂತರ, ಕೆಲವು ಮಕ್ಕಳು ಮತ್ತೆ ಆಟಿಕೆಗಳೊಂದಿಗೆ ಆಟವಾಡಲು ಪ್ರಾರಂಭಿಸಿದರು, ಇನ್ನು ಕೆಲವರು ತಾವು ಮನೆಗೆ ಹೋಗುತ್ತೇವೆ ಎಂದು ಹೇಳಿದರು.

ಅಂಗನವಾಡಿ ಶಿಕ್ಷಕರು ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ನಾನು ತರಗತಿಯ ಪ್ರಕ್ರಿಯೆಗಳ ಬಗ್ಗೆ ಅವರೊಂದಿಗೆ ಚರ್ಚಿಸಲು ಬಯಸಿದ್ದೆ. ನಾನು ವಿನಂತಿಸಿದಾಗ, ಅವರು ನನಗೆ ಸ್ವಲ್ಪ ಸಮಯ ನೀಡಲು ಒಪ್ಪಿಕೊಂಡರು. ಮಕ್ಕಳು ಶಾಲೆಗೆ ಬರಲು ಮನೆಮನೆಗೆ ಹೋಗಿ ಕರೆಯಬೇಕಾಗುತ್ತದೆ, ಈಗ ಅವರಲ್ಲಿ ಹೆಚ್ಚಿನವರು ಬರಲು ಪ್ರಾರಂಭಿಸಿದ್ದಾರೆ ಎಂದು ಅವರು ವಿವರಿಸಿದರು. ಇದಲ್ಲದೆ, ಅವರು ಪ್ರತಿದಿನ ಬೇರೆ ಬೇರೆ ವಿಷಯಗಳ ಬಗ್ಗೆ ಮಕ್ಕಳಿಗೆ ಮಾಹಿತಿಯನ್ನು ನೀಡುತ್ತಿದ್ದರು. ಅವರ ಮಾತುಗಳನ್ನು ಕೇಳಿದಾಗ, ಮಕ್ಕಳ ವಯಸ್ಸು ಮತ್ತು ಸಾಮರ್ಥ್ಯಕ್ಕೆ ಅನುಗುಣವಾದ ಚಟುವಟಿಕೆಗಳ ಕೊರತೆಯಿದೆ ಎಂಬುದು ನನಗೆ ಅರಿವಾಯಿತು. ಅಲ್ಲದೆ, ಶಾಲಾಪೂರ್ವ ಅಥವಾ ಅನೌಪಚಾರಿಕ ಶಿಕ್ಷಣದ ಬಗ್ಗೆ ಶಿಕ್ಷಕರಿಗೆ ಇರುವ ತಿಳುವಳಿಕೆಯು ಅಲ್ಪ ಎಂಬುದು ತಿಳಿಯಿತು. ಇದೇ ಸಂಭಾಷಣೆಯ ಸಮಯದಲ್ಲಿ, ನಾನು ಮರುದಿನದ ಕ್ರಿಯಾ ಯೋಜನೆಯನ್ನು ಅವರೊಂದಿಗೆ ಹಂಚಿಕೊಂಡೆ. ನಾನು ಅಂಗನವಾಡಿಯಿಂದ ಹೊರಡುವಾಗ ನನ್ನ ಮನಸ್ಸು ಆಲೋಚನೆಗಳಿಂದ ತುಂಬಿತ್ತು. ಇಂದು ನಾನು ನಿರೀಕ್ಷಿಸಿದಂತೆ ಏನೂ ನಡೆಯಲಿಲ್ಲ; ಮಕ್ಕಳು ನನ್ನೊಂದಿಗೆ ಮಾತನಾಡಲಿಲ್ಲ ಮತ್ತು ನಾನು ಹೇಳಿದ್ದನ್ನು ಕೇಳಿಸಿಕೊಳ್ಳಲೂ ಇಲ್ಲ. ಪುಸ್ತಕಗಳನ್ನು ಓದುವಾಗ ಇದೆಲ್ಲವೂ ತುಂಬಾ ಸುಲಭ ಎಂದು ಅನಿಸಿತ್ತು, ಆದರೆ ನೇರವಾಗಿ ಅಂಗನವಾಡಿಗೆ ಭೇಟಿ ನೀಡಿದ ನಂತರವಷ್ಟೇ ನನಗೆ ಅಲ್ಲಿನ ನೈಜ ಸವಾಲುಗಳು ಅರ್ಥವಾದವು.

ಮರುದಿನ ನಾನು ಕೇಂದ್ರಕ್ಕೆ ಬಂದ ತಕ್ಷಣ, ಎಲ್ಲಕ್ಕಿಂತ ಮೊದಲು ತರಗತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದೆ. ಮಕ್ಕಳಿಗೆ ನೆಲದ ಮೇಲೆ ಕುಳಿತುಕೊಳ್ಳಲು ಸಾಕಷ್ಟು ಜಾಗದ ವ್ಯವಸ್ಥೆ ಮಾಡಿದೆ. ಚಟುವಟಿಕೆಗಳನ್ನು ನಡೆಸಲು ಹೆಚ್ಚಿನ ಸ್ಥಳಾವಕಾಶ ಬೇಕಾಗಿದ್ದರಿಂದ, ಶಿಕ್ಷಕರ ಮೇಜು ಮತ್ತು ಕುರ್ಚಿಯನ್ನು ಮತ್ತೊಂದು ಕೋಣೆಗೆ ಸ್ಥಳಾಂತರಿಸಿದೆ. ನಂತರ ಮಕ್ಕಳ ಹತ್ತಿರವೇ ಕುಳಿತು ಅವರೊಂದಿಗೆ ಮಾತನಾಡಲು ಪ್ರಾರಂಭಿಸಿದೆ. ಮೂರು ವರ್ಷದ ಸೌಮ್ಯ ಸ್ವಲ್ಪ ಹೆಚ್ಚು ಮಾತನಾಡುತ್ತಾಳೆ ಎನಿಸಿತು; ಹಾಗಾಗಿ ನಾನು ಮೊದಲು ಅವಳೊಂದಿಗೇ ಮಾತು ಶುರುಮಾಡಿದೆ.

ನಾನು ಅವಳನ್ನು “ನಿನ್ನ ಹೆಸರೇನು?” ಎಂದು ಕೇಳಿದೆ.

ಅವಳು “ನನ್ನ ಹೆಸರು ಸೌಮ್ಯ” ಎಂದಳು. ಅಷ್ಟೇ ಅಲ್ಲದೆ, ತಕ್ಷಣವೇ “ನೀವು ಯಾಕೆ ನನ್ನ ಹೆಸರು ಕೇಳುತ್ತಿದ್ದೀರಿ?” ಎಂದು ನನ್ನನ್ನೇ ಪ್ರಶ್ನಿಸಿದಳು. ಅದಕ್ಕೆ ನಾನು, “ನಾನು ನಿಮ್ಮೆಲ್ಲರ ಜೊತೆ ಆಟವಾಡಲು ಬಂದಿದ್ದೇನೆ” ಎಂದು ಉತ್ತರಿಸಿದೆ.



ಚಿತ್ರ 2: ಮಕ್ಕಳು ತಾವು ಕಲಿಯುವ ಪ್ರತಿಯೊಂದು ವಿಷಯವನ್ನು ತಮ್ಮ ಸ್ವಂತ ಅನುಭವಗಳಿಗೆ ಹೋಲಿಸಿ ನೋಡುತ್ತಾರೆ.



ಚಿತ್ರ 3: ಮಕ್ಕಳಿಗೆ ಅವರ ವಯಸ್ಸಿಗೆ ತಕ್ಕ ಚಟುವಟಿಕೆಗಳನ್ನು ನೀಡುವುದು ಮತ್ತು ಅವುಗಳಲ್ಲಿ ಅವರನ್ನು ತೊಡಗಿಸುವುದು ಬಹಳ ಮುಖ್ಯ.

ನಾನು ಮಕ್ಕಳೊಂದಿಗೆ ಲೋಕಾಭಿರಾಮವಾಗಿ ಸಂಭಾಷಣೆ ನಡೆಸಿದೆ. ಉದಾಹರಣೆಗೆ - ಅವರಿಗೆ ಯಾವ ಆಟಗಳೆಂದರೆ ಇಷ್ಟ; ಅವರ ಮನೆಯಲ್ಲಿ ಯಾರೆಲ್ಲಾ ಇದ್ದಾರೆ; ಅವರಿಗೆ ಯಾವ ಪ್ರಾಣಿಗಳ ಬಗ್ಗೆ ತಿಳಿದಿದೆ; ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಿಸಿದೆ. ಮಾತನಾಡುವಾಗ, ನಾನು ಅವರಿಗೆ ಆಟೋ, ಸೈಕಲ್, ಬಸ್ ಮುಂತಾದ ಕೆಲವು ವಾಹನಗಳ ಚಿತ್ರಗಳನ್ನು ತೋರಿಸಿದೆ. ಎಲ್ಲಾ ಮಕ್ಕಳು ಚಿತ್ರಗಳನ್ನು ನೋಡಿ ಅವುಗಳ ಹೆಸರನ್ನು ಸರಿಯಾಗಿ ಹೇಳಿದರು. ಈ ಅನುಕ್ರಮದಲ್ಲಿ, ನನ್ನ ಯೋಜನೆಯ ಪ್ರಕಾರ ಚಟುವಟಿಕೆಗಳನ್ನು ನಡೆಸುವುದನ್ನು ಮುಂದುವರಿಸಿದೆ. ಎಲ್ಲರೂ ಆ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿರುವುದನ್ನು ಕಂಡೆ. ನಾನು ಪ್ರತಿದಿನ ಕೇಂದ್ರಕ್ಕೆ ಹೋಗಿ ಶಿಕ್ಷಕರ ಮಾರ್ಗದರ್ಶಿಯಲ್ಲಿ ಸೂಚಿಸಲಾದ ಚಟುವಟಿಕೆಗಳನ್ನು ಮಕ್ಕಳೊಂದಿಗೆ ನಡೆಸಿದೆ. ಸುಮಾರು 15 ದಿನಗಳ ಕಾಲ ಈ ರೀತಿ ಚಟುವಟಿಕೆಗಳನ್ನು ನಡೆಸಿದ ನಂತರ, ಮಕ್ಕಳಿಗೆ ನನ್ನ ಸಂಭಾಷಣೆಯ ಶೈಲಿ ಮತ್ತು ಚಟುವಟಿಕೆಗಳು ಚೆನ್ನಾಗಿ ಅರ್ಥವಾದವು. ಇದರ ಪರಿಣಾಮವಾಗಿ, ಎಲ್ಲಾ ಮಕ್ಕಳು ನಿಯಮಿತವಾಗಿ ಕೇಂದ್ರಕ್ಕೆ ಬರಲು ಪ್ರಾರಂಭಿಸಿದರು.

## ಮಕ್ಕಳ ಕಲಿಕೆ

ಚಿಕ್ಕ ಮಕ್ಕಳು ವಿಷಯಗಳನ್ನು ಬೇಗನೆ ಮರೆತುಬಿಡುತ್ತಾರೆ ಅಥವಾ ಅದರೆಡೆಗೆ ಗಮನಹರಿಸುವುದಿಲ್ಲ ಎಂದು ನಾವು ಹೆಚ್ಚಾಗಿ ಭಾವಿಸುತ್ತೇವೆ. ಆದರೆ ನಾನು ಅವರೊಂದಿಗೆ ಕೆಲಸ ಮಾಡಿದಾಗ, ಮಕ್ಕಳು ಬೇಗ ಕಲಿಯುತ್ತಾರೆ ಎಂದು ನಾನು ಅರಿತುಕೊಂಡೆ. ಅವರು ಆಸಕ್ತಿಯಿಂದ ಕೇಳಿದಾಗ ಅಥವಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಾಗ, ಸಂದರ್ಭವನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅವರ ಆಲೋಚನೆಗಳನ್ನು ಸಂದರ್ಭಕ್ಕೆ ಸಂಪರ್ಕಿಸುತ್ತಾರೆ. ಮಕ್ಕಳ ಕಲಿಕೆಯ ಪ್ರಕ್ರಿಯೆಯ ಬಗ್ಗೆ ಅನೇಕ ಅಂಶಗಳನ್ನು ಒತ್ತಿಹೇಳುವ ಕೆಲವು ಅನುಭವಗಳು ಇಲ್ಲಿವೆ.

***ಮಕ್ಕಳು ಸೂಕ್ಷ್ಮವಾಗಿ ಗಮನಿಸುತ್ತಾರೆ***

ನಾನು ಮಕ್ಕಳೊಂದಿಗೆ ವಾಹನಗಳ ಬಗ್ಗೆ ಮಾತನಾಡುತ್ತಿದ್ದೆ. ಅವರಿಗೆ ವಿವಿಧ ವಾಹನಗಳ ಚಿತ್ರಗಳನ್ನು ತೋರಿಸಿ ಯಾವ ವಾಹನ ಎಲ್ಲಿ ಓಡುತ್ತದೆ ಎಂದು ಕೇಳಿದೆ. ಸೈಕಲ್ ನೋಡಿದಾಗ ಮಕ್ಕಳು ಅದು ರಸ್ತೆಯಲ್ಲಿ ಓಡುತ್ತದೆ ಎಂದು ಹೇಳಿದರು. ಬಸ್ ಕೂಡ ರಸ್ತೆಯಲ್ಲಿ ಓಡುತ್ತದೆ. ವಿಮಾನ ಆಕಾಶದಲ್ಲಿ ಹಾರುತ್ತದೆ. ನಾನು ಅವರಿಗೆ ದೋಣಿ ತೋರಿಸಿದಾಗ, ಅವರು ಸ್ವಲ್ಪ ಯೋಚಿಸಲು ಪ್ರಾರಂಭಿಸಿದರು. ಕೊಳದಲ್ಲಿ ಏನು ಚಲಿಸುತ್ತದೆ ಎಂಬುದರ ಬಗ್ಗೆ ನಾನು ಅವರಿಗೆ ಸುಳಿವು ನೀಡಿದೆ. ಕೊಳವು ಅಂಗನವಾಡಿ ಕೇಂದ್ರದಿಂದ ಸ್ವಲ್ಪವೇ ದೂರದಲ್ಲಿದೆ ಮತ್ತು ಅಲ್ಲಿಗೆ ಎಲ್ಲರೂ ಹೋಗಿ ಬರಲು ಅವಕಾಶವಿರುವುದರಿಂದ, ಮಕ್ಕಳು ಖಂಡಿತವಾಗಿಯೂ ಸರಿಯಾದ ಉತ್ತರ ನೀಡುತ್ತಾರೆ ಎಂಬ ಪೂರ್ಣ ವಿಶ್ವಾಸ ನನಗಿತ್ತು. ಆದರೆ ಅವರ ಉತ್ತರಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು! ಕೇಂದ್ರದಲ್ಲಿದ್ದ ಸುಮಾರು 15 ಮಕ್ಕಳು ಜೆಸಿಬಿ ಮತ್ತು ಟ್ರ್ಯಾಕ್ಟರ್‌ಗಳು ಕೊಳದಲ್ಲಿ ಚಲಿಸುತ್ತವೆ ಎಂದು ಹೇಳಿದರು. ಕೆಲವು ಜನರು ತಮ್ಮ ಕಾರುಗಳನ್ನು ಕೂಡ ಕೊಳದೊಳಗೆ ಓಡಿಸುತ್ತಾರೆ ಎಂದು ಸೌಮ್ಯ ಬಹಳ ವಿಶ್ವಾಸದಿಂದ ಹೇಳಿದಳು. ಮಕ್ಕಳು ಹೀಗೆ ಹೇಳಲು ಅವರ ಸ್ವಂತ ಅನುಭವವೇ ಕಾರಣವಾಗಿತ್ತು. ಬಹಳ ದಿನಗಳಿಂದ ಆ ಕೊಳವನ್ನು ಸ್ವಚ್ಛಗೊಳಿಸುವ ಕೆಲಸ ನಡೆಯುತ್ತಿದ್ದರಿಂದ, ಮಕ್ಕಳು ಅಲ್ಲಿ ದೋಣಿ ಹೋಗುವುದನ್ನು ಎಂದಿಗೂ ನೋಡಿರಲಿಲ್ಲ. ಬದಲಾಗಿ, ಕೊಳದ ಹೂಳೆತ್ತಲು ಇಳಿದಿದ್ದ ಜೆಸಿಬಿ ಮತ್ತು ಟ್ರ್ಯಾಕ್ಟರ್‌ಗಳನ್ನೇ ಅವರು ನೋಡಿದ್ದರು. ಹಾಗಾಗಿ, ತಾವು ಕಣ್ಣಾರೆ ಕಂಡದ್ದನ್ನೇ ಅವರು ವಿವರಿಸಿದ್ದರು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ನಾವು ಮತ್ತೊಂದು ಚಟುವಟಿಕೆ ಮಾಡಿದೆವು. ವಿವಿಧ ಆಕಾರಗಳ ಕಟೌಟ್‌ಗಳನ್ನು ಬಳಸಿ ವಾಹನಗಳ ಮಾದರಿಗಳನ್ನು ಜೋಡಿಸುವ ಕೆಲಸವನ್ನು ಅವರಿಗೆ ನೀಡಿದೆವು. ಪ್ರತಿ ಮಗುವಿಗೆ ಒಂದು ಆಯತಾಕಾರದ ತುಂಡು, ಕೆಲವು ವೃತ್ತಾಕಾರದ ಮತ್ತು ಕೆಲವು ತ್ರಿಕೋನಾಕಾರದ ತುಂಡುಗಳನ್ನು ನೀಡಲಾಯಿತು. ಪ್ರತಿಯೊಬ್ಬ ಮಗುವೂ ತನ್ನದೇ ಆದ ವಿಶಿಷ್ಟ ಆಕಾರಗಳನ್ನು ರಚಿಸಬಹುದು ಎಂಬ ನಿರೀಕ್ಷೆ ನಮ್ಮದಾಗಿತ್ತು. ಮಕ್ಕಳು ತಮಗೆ ನೀಡಿದ ಕಟೌಟ್‌ಗಳನ್ನು ತಮಗೆ ಸರಿಹೊಂದುವಂತೆ ಜೋಡಿಸಲು ಪ್ರಯತ್ನಿಸಿದರು. ಅಷ್ಟರಲ್ಲಿ ಇಬ್ಬರು ಮಕ್ಕಳು ತಮ್ಮಲ್ಲಿದ್ದ ಕಟೌಟ್‌ಗಳನ್ನು ಒಟ್ಟುಗೂಡಿಸಿ ಒಂದು ದೊಡ್ಡ ಆಕೃತಿಯನ್ನು ರಚಿಸಿದರು. ಇದನ್ನು ಕಂಡ ಅಂಗನವಾಡಿ ಶಿಕ್ಷಕರು ಆ ಮಕ್ಕಳ ಸೃಜನಶೀಲತೆಯನ್ನು ಮೆಚ್ಚಿ ಕೊಂಡಾಡಿದರು. ಇದನ್ನು ನೋಡಿ ಸ್ಫೂರ್ತಿ ಪಡೆದ ಉಳಿದ ಎಲ್ಲಾ ಮಕ್ಕಳು ತಮ್ಮ ಕಟೌಟ್‌ಗಳನ್ನು ಒಂದಕ್ಕೊಂದು ಜೋಡಿಸಿ, ಕೊನೆಗೆ ಒಂದು ಸುಂದರವಾದ ರೈಲನ್ನು ಸಿದ್ಧಪಡಿಸಿದರು.

> **ಚಿಕ್ಕ ಮಕ್ಕಳು ವಿಷಯಗಳನ್ನು ಬೇಗನೆ ಮರೆತುಬಿಡುತ್ತಾರೆ ಅಥವಾ ಅದರೆಡೆಗೆ ಗಮನಹರಿಸುವುದಿಲ್ಲ ಎಂದು ನಾವು ಹೆಚ್ಚಾಗಿ ಭಾವಿಸುತ್ತೇವೆ. ಆದರೆ ನಾನು ಅವರೊಂದಿಗೆ ಕೆಲಸ ಮಾಡಿದಾಗ, ಮಕ್ಕಳು ಬೇಗ ಕಲಿಯುತ್ತಾರೆ ಎಂದು ನಾನು ಅರಿತುಕೊಂಡೆ.**

***ಮಕ್ಕಳು ತಮ್ಮ ಅನುಭವದಿಂದ ಉತ್ತರಿಸುತ್ತಾರೆ***

ನಾನು ಹಡಗಿನ ಚಿತ್ರವನ್ನು ತೋರಿಸಿದಾಗ, ಎಲ್ಲಾ ಮಕ್ಕಳು ತಕ್ಷಣವೇ ಅದು 'ಹಡಗು' ಎಂದು ಹೇಳಿದರು. ಮಕ್ಕಳು ಹಡಗನ್ನು ಇದುವರೆಗೆ ಕಣ್ಣಾರೆ ನೋಡಿರಲಿಲ್ಲ, ಆದರೂ ಅದನ್ನು ಅಷ್ಟು ಬೇಗ ಹೇಗೆ ಗುರುತಿಸಿದರು ಎಂದು ನನಗೆ ಆಶ್ಚರ್ಯವಾಯಿತು. ನಾನು ಮಾತನ್ನು ಮುಂದುವರಿಸಿ, "ಹಡಗು ಚಲಿಸುವುದನ್ನು ನೀವು ನೋಡಿದ್ದೀರಾ?" ಎಂದು ಕೇಳಿದೆ. ಆಗ ಮಕ್ಕಳು ತಮ್ಮ ಕೈ ಸಜ್ಞೆಗಳ ಮೂಲಕ ಹಡಗು ಹೇಗೆ ಚಲಿಸುತ್ತದೆ ಎಂದು ವಿವರಿಸಲು ಶುರು ಮಾಡಿದರು. ಅವರ ಮಾತುಗಳಲ್ಲಿ 'ಅಲೆ' ಮತ್ತು 'ಸಮುದ್ರ'ದಂತಹ ಪದಗಳು ಕೇಳಿಬಂದವು.

ಪ್ರತಿಯೊಬ್ಬರೂ ಹಡಗನ್ನು ತಮ್ಮದೇ ಆದ ರೀತಿಯಲ್ಲಿ ಬಣ್ಣಿಸಿದರು. "ನೀವು ಹಡಗನ್ನು ಎಲ್ಲಿ ನೋಡಿದ್ದೀರಿ?" ಎಂದು ನಾನು ಕೇಳಿದಾಗ, "ಟಿ.ವಿ.ಯಲ್ಲಿ ನೋಡಿದ್ದೇವೆ" ಎಂದು ಉತ್ತರಿಸಿದರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮಕ್ಕಳು ಟಿ.ವಿ.ಯಲ್ಲಿ ನೋಡಿದ ಹಡಗನ್ನು ತಕ್ಷಣ ಗುರುತಿಸಿದರಾದರೂ, ತಮ್ಮ ಮುಂದೆಯೇ ಇದ್ದ ಕೊಳದಲ್ಲಿ ಚಲಿಸುವ ದೋಣಿಯ ಬಗ್ಗೆ ಅವರಿಗೆ ಸ್ವಲ್ಪ ಗೊಂದಲವಿತ್ತು.

ಆದಾಗ್ಯೂ, ಎರಡೂ ಸಂದರ್ಭಗಳಲ್ಲಿ ಮಕ್ಕಳು ತಮ್ಮದೇ ಆದ ಅನುಭವಗಳನ್ನು ಬಳಸುತ್ತಿದ್ದರು. ಮೂರು ವರ್ಷದ ಪುಟ್ಟ ಮಕ್ಕಳೂ ಸಹ ವಿಷಯಗಳನ್ನು ಎಷ್ಟು ಎಚ್ಚರಿಕೆಯಿಂದ ಗಮನಿಸುತ್ತಾರೆ, ಅವುಗಳನ್ನು ತಮ್ಮದೇ ಆದ ಸಂದರ್ಭಗಳಿಗೆ ಹೇಗೆ ಜೋಡಿಸುತ್ತಾರೆ ಮತ್ತು ನಿಜವಾದ ಕಲಿಕೆ ಎಲ್ಲಿಂದ ಪ್ರಾರಂಭವಾಗುತ್ತದೆ ಎಂಬುದು ನನಗೆ ಅರಿವಾಯಿತು. ಬಹುಶಃ ಇದೇ ಕಾರಣಕ್ಕೆ ನಾವು ಕೇಳುವ ಒಂದೇ ಪ್ರಶ್ನೆಗೆ ಮಕ್ಕಳಿಂದ ಹತ್ತಾರು ವಿಭಿನ್ನ ಉತ್ತರಗಳು ಬರುತ್ತವೆ.

***ಮಕ್ಕಳ ಕಲ್ಪನೆಗೆ ಮಿತಿಯಿಲ್ಲ***

ಮಕ್ಕಳು ಯಾವಾಗಲೂ ತಮ್ಮ ಸುತ್ತಮುತ್ತಲಿನ ವಿಷಯಗಳ ಬಗ್ಗೆ ಆಲೋಚಿಸುತ್ತಿದ್ದರು ಮತ್ತು ಮಾತನಾಡುತ್ತಿದ್ದರು. ಅದರ ಜೊತೆಗೆ ಅವರು ಕೆಲವೊಮ್ಮೆ ಅದ್ಭುತವಾಗಿ ಕಲ್ಪನೆ ಮಾಡಿಕೊಳ್ಳುತ್ತಿದ್ದರು. ಉದಾಹರಣೆಗೆ, ಒಂದು ಮಗು ಹೀಗೊಂದು ಕಥೆ ಹೇಳಿತು: "ಕಾಡಿನಲ್ಲಿ ಒಂದು ದೆವ್ವ ವಾಸಿಸುತ್ತಿದೆ. ಒಂದು ದಿನ ಅದು ನಮ್ಮ ಮನೆಗೆ ಬಂದು ನನ್ನ ಕಾರನ್ನು ಕೇಳಿತು. ಆಮೇಲೆ ಅದು ನಮ್ಮ ಮನೆಯ ಛಾವಣಿಯ ಮೇಲೆ ಹಾರಿತು. ತಕ್ಷಣ ನಾನು ಅದನ್ನು ಕೋಲಿನಿಂದ ಹೊಡೆದು ಓಡಿಸಿದೆ!"

ನಾನು ಕುತೂಹಲದಿಂದ, "ನೀನು ದೆವ್ವವನ್ನು ಎಲ್ಲಿ ನೋಡಿದೆ?" ಎಂದು ಕೇಳಿದೆ. ಅದಕ್ಕೆ ಅವನು, "ನಮ್ಮ ಅಜ್ಜ 'ಬಹಳ ದೊಡ್ಡ ದೆವ್ವ ಇದೆ' ಅಂತ ನನಗೆ ಸದಾ ಹೇಳುತ್ತಿರುತ್ತಾರೆ," ಎಂದು ಉತ್ತರಿಸಿದನು.

ನಂತರ ತರಗತಿಯಲ್ಲಿ ದೆವ್ವಗಳ ಬಗ್ಗೆಯೇ ದೊಡ್ಡ ಚರ್ಚೆ ಶುರುವಾಯಿತು. ದೆವ್ವಗಳು ಹೇಗಿರುತ್ತವೆ? ಅವು ಏನನ್ನು ತಿನ್ನುತ್ತವೆ? ಅವುಗಳ ಮನೆಯಲ್ಲಿ ಯಾರೆಲ್ಲ ಇರುತ್ತಾರೆ? ಹೀಗೆ... ಎಲ್ಲಾ ಮಕ್ಕಳು ಉತ್ಸಾಹದಿಂದ ಇಂತಹ ಪ್ರಶ್ನೆಗಳಿಗೆ ಉತ್ತರಿಸುತ್ತಾ ಈ ಸಂಭಾಷಣೆಯನ್ನು ಆನಂದಿಸಿದರು.

***ನಂಬಿಕೆ ಬಹಳ ಮುಖ್ಯ***

ಸಿಯಾ ಹೊಸದಾಗಿ ಅಂಗನವಾಡಿ ಕೇಂದ್ರಕ್ಕೆ ಬರಲು ಪ್ರಾರಂಭಿಸಿದಳು. ಅವಳ ತಾಯಿ ಪ್ರತಿದಿನ ಅವಳನ್ನು ಬಲವಂತವಾಗಿ ಕೇಂದ್ರದಲ್ಲಿ ಬಿಟ್ಟು ಹೋಗುತ್ತಿದ್ದರು. ಸಿಯಾ ಸ್ವಲ್ಪ ಹೊತ್ತು ಅಳುತ್ತಿದ್ದಳು, ನಂತರ ಒಂದು ಮೂಲೆಯಲ್ಲಿ ಸದ್ದಿಲ್ಲದೆ ಕುಳಿತುಕೊಳ್ಳುತ್ತಿದ್ದಳು. ಇದು ಸುಮಾರು ಮೂರು-ನಾಲ್ಕು ದಿನಗಳ ಕಾಲ ಮುಂದುವರಿಯಿತು. ಅಷ್ಟರಲ್ಲಿ ಅಂಗನವಾಡಿ ಶಿಕ್ಷಕರು ಮತ್ತು ನಾನು ಅವಳನ್ನು ಮಾತನಾಡಿಸಲು ಎಷ್ಟೇ ಪ್ರಯತ್ನಿಸಿದರೂ ಅವಳು ಯಾವುದೇ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಆದರೂ ನಾವು ನಮ್ಮ ಪ್ರಯತ್ನಗಳನ್ನು ಕೈಬಿಡದೆ ಮುಂದುವರಿಸಿದೆವು. ಐದನೇ ದಿನ ಸಿಯಾ ಕೇಂದ್ರಕ್ಕೆ ಬಂದಾಗ, ಶಿಕ್ಷಕರು ಯಾವುದೋ ಕೆಲಸದಲ್ಲಿ ನಿರತರಾಗಿದ್ದರು ಮತ್ತು ತಕ್ಷಣವೇ ಅವಳನ್ನು ಮಾತನಾಡಿಸಲು ಸಾಧ್ಯವಾಗಲಿಲ್ಲ. ಆದರೆ ಅಂದು ಸಿಯಾಳೇ ಸ್ವತಃ ಶಿಕ್ಷಕರ ಬಳಿಗೆ ಹೋಗಿ, "ನಾನು ಇಂದು ಸಮೋಸಾ ತಿಂದೆ. ಅಪ್ಪ ನಿನ್ನೆ ರಾತ್ರಿ ಅಮ್ಮನನ್ನು ಹೊಡೆದರು, ಅದಕ್ಕೆ ನಾನು ಅಳಲು ಶುರುಮಾಡಿದೆ" ಎಂದು ಹೇಳಿದಳು. ಶಿಕ್ಷಕರು ಅವಳ ಮಾತನ್ನು ಸಮಾಧಾನದಿಂದ ಕೇಳಿ, ಪ್ರೀತಿಯಿಂದ ಮಾತನಾಡಿಸಿ ಅವಳ ಗಮನವನ್ನು ಇತರ ವಿಷಯಗಳ ಕಡೆಗೆ ತಿರುಗಿಸಿದರು.

ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಮಕ್ಕಳು ನಮ್ಮ ಮೇಲೆ ನಂಬಿಕೆ ಇಡುವುದು ಬಹಳ ಮುಖ್ಯ. ಶಿಕ್ಷಕರ ಪ್ರೀತಿಯ ಮಾತುಗಳು ಮತ್ತು ತಮ್ಮ ಪ್ರಶ್ನೆಗಳಿಗೆ ಅವಳು ಉತ್ತರಿಸದಿದ್ದರೂ ಅವಳನ್ನು ಗದರಿಸದೆ ನಗುತ್ತಲೇ ಮಾತನಾಡಿಸುತ್ತಿದ್ದ ರೀತಿ, ಅವಳಲ್ಲಿ ನಂಬಿಕೆಯ ಭಾವನೆಯನ್ನು ತುಂಬಿತು ಎಂದು ನನಗೆ ಅರಿವಾಯಿತು. ಈ ಕಾರಣದಿಂದಲೇ ಸಿಯಾ ಈಗ ತಾನಾಗಿಯೇ ಎಲ್ಲರೊಂದಿಗೆ ಮಾತನಾಡುತ್ತಾಳೆ. ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾಳೆ ಮತ್ತು ಈಗ ಅವಳಿಗೆ ಮನೆಗೆ ಹೋಗಲು ಮನಸ್ಸೇ ಬರುವುದಿಲ್ಲ. ಇಲ್ಲಿ ಶಿಕ್ಷಕರ ತಾಳ್ಮೆ ಬಹಳ ನಿರ್ಣಾಯಕವಾಗಿತ್ತು. ಸಿಯಾಳನ್ನು ತರಗತಿಯ ಭಾಗವಾಗಿಸಿಕೊಳ್ಳುವಲ್ಲಿ ಅವರು ತೋರಿಸಿದ ಸಹನೆ ನಿಜಕ್ಕೂ ಶ್ಲಾಘನೀಯ.

***ಒಟ್ಟಿಗೆ ಆಡಲು ಮಕ್ಕಳಿಗೆ ಹೇಳಿಕೊಡಬಹುದು***

ನಾನು ಮೊದಲ ಬಾರಿಗೆ ಕೇಂದ್ರಕ್ಕೆ ಭೇಟಿ ನೀಡಿದಾಗ, ಎಲ್ಲಾ ಮಕ್ಕಳು ತಮ್ಮ ಪಾಡಿಗೆ ತಾವು ಪ್ರತ್ಯೇಕವಾಗಿ ಆಟವಾಡುತ್ತಿರುವುದನ್ನು ಗಮನಿಸಿದೆ. ಕ್ರಮೇಣ ನಾನು ಮಕ್ಕಳ ಆಟಗಳಲ್ಲಿ ಭಾಗವಹಿಸಿ, ಅವರಿಗೆ ಗುಂಪುಗಳಲ್ಲಿ ಆಡುವ ಅವಕಾಶಗಳನ್ನು ನೀಡಿದೆ. ಮೊದಮೊದಲು ಮಕ್ಕಳು ಪರಸ್ಪರ ಸೇರಿ ಆಡುತ್ತಿರಲಿಲ್ಲ. ಚೆಂಡು, ಹಗ್ಗ ಅಥವಾ ಮುಖವಾಡದಂತಹ ಯಾವುದೇ ಆಟಿಕೆಗಳಿದ್ದರೂ ಅವುಗಳನ್ನು ತಮ್ಮ ಬಳಿಯೇ ಇಟ್ಟುಕೊಳ್ಳಲು ಬಯಸುತ್ತಿದ್ದರು. ಯಾರಾದರೂ ಅವುಗಳನ್ನು ತೆಗೆದುಕೊಳ್ಳಲು ಬಂದರೆ ಅಳುತ್ತಿದ್ದರು. ನಾವು "ಚೆಂಡನ್ನು ಬಕೆಟ್‌ನಲ್ಲಿ ಹಾಕು" ಎನ್ನುವಂತಹ ಚಟುವಟಿಕೆಗಳನ್ನು ಶುರು ಮಾಡಿದಾಗ, ಚೆಂಡು ಬಕೆಟ್‌ಗೆ ಬೀಳದಿದ್ದರೆ ಅಳುತ್ತಿದ್ದರು; ಇಲ್ಲವಾದರೆ ಚೆಂಡನ್ನು ಹಿಡಿದುಕೊಂಡು ಓಡಿ ಹೋಗುತ್ತಿದ್ದರು.

ಆರಂಭದಲ್ಲಿ ಎಲ್ಲರನ್ನೂ ಸೇರಿಸಿ ಒಟ್ಟಿಗೆ ಆಟ ಆಡಿಸುವುದು ನಿಜಕ್ಕೂ ದೊಡ್ಡ ಸವಾಲಾಗಿತ್ತು! ಆದರೆ ನಾನು ಪ್ರತಿದಿನ ಮಕ್ಕಳೊಂದಿಗೆ ಗುಂಪು ಆಟಗಳನ್ನು ಆಡಲು ಶುರುಮಾಡಿದಾಗ, ಅವರು ಕ್ರಮೇಣ ಗುಂಪಿನಲ್ಲಿ ಆಟವಾಡುವ ನಿಯಮಗಳನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದರು. ತಮ್ಮ ಸರದಿ ಬರುವವರೆಗೂ ತಾಳ್ಮೆಯಿಂದ ಕಾಯುವುದನ್ನು ಕಲಿತರು. ಯಾರಾದರೂ ತಮ್ಮ ಸರದಿಯನ್ನು ಮರೆತರೆ ಅಥವಾ ನಿಯಮ ತಪ್ಪಿದರೆ, ಉಳಿದ ಮಕ್ಕಳೇ ಅವರಿಗೆ ನೆನಪಿಸುತ್ತಿದ್ದರು. ಆಟದಲ್ಲಿ ಕಷ್ಟಪಡುವ ಸ್ನೇಹಿತರಿಗೆ ಇತರ ಮಕ್ಕಳು ಸಹಾಯ ಮಾಡುವುದನ್ನು ನೋಡುವುದೇ ಸಂಭ್ರಮವಾಗಿತ್ತು. ಉದಾಹರಣೆಗೆ, 3 ವರ್ಷದ ಪುಟ್ಟ ಮಕ್ಕಳಿಗೆ ಚಕ್ರವನ್ನು ಉರುಳಿಸಲು ಕಷ್ಟವಾಗುತ್ತಿದ್ದರೆ, 5-6 ವರ್ಷದ ಮಕ್ಕಳು ಅವರಿಗೆ ನೆರವಾಗುತ್ತಿದ್ದರು. ಯಾವುದೇ ಚಟುವಟಿಕೆ ಸರಿಯಾಗಿ ಪೂರ್ಣಗೊಳ್ಳದಿದ್ದರೆ, ಬೇಸರ ಮಾಡಿಕೊಳ್ಳದೆ ಅದನ್ನು ಮತ್ತೆ ಮತ್ತೆ ಪುನರಾವರ್ತಿಸುತ್ತಿದ್ದರು. ಕೆಲವೊಮ್ಮೆ ಶಿಕ್ಷಕರು ಕೆಲಸದ ಒತ್ತಡದಲ್ಲಿ ಗುಂಪು ಆಟವಾಡಿಸಲು ಮರೆತರೆ, ಮಕ್ಕಳೇ ಅವರ ಬಳಿ ಹೋಗಿ "ಅಕ್ಕ, ದಯವಿಟ್ಟು ಆ ಆಟವನ್ನು ಆಡಿಸಿ" ಎಂದು ಹಠ ಮಾಡುತ್ತಿದ್ದರು.

## ಅಂತಿಮ ನುಡಿ

ಕೊನೆಯದಾಗಿ, ಮಕ್ಕಳನ್ನು ಪ್ರೀತಿಯಿಂದ ಮಾತನಾಡಿಸಿದರೆ ಅವರು ನಾವು ಹೇಳುವ ಎಲ್ಲವನ್ನೂ ಆಸಕ್ತಿಯಿಂದ ಕೇಳುತ್ತಾರೆ ಮತ್ತು ಅರ್ಥಮಾಡಿಕೊಳ್ಳುತ್ತಾರೆ ಎಂಬ ಸತ್ಯವನ್ನು ನಾವು ಅರಿಯುವುದು ಬಹಳ ಮುಖ್ಯ. ಕಲಿಕೆಯು ಮಕ್ಕಳೊಂದಿಗೆ ನಡೆಸುವ ಸಂಭಾಷಣೆಯಿಂದಲೇ ಪ್ರಾರಂಭವಾಗುತ್ತದೆ. ಅದರಲ್ಲೂ ವಿಶೇಷವಾಗಿ ಅವರ ಕುಟುಂಬ ಮತ್ತು ಸುತ್ತಮುತ್ತಲಿನ ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾತನಾಡಿಸಿದರೆ, ಅವರು ಬಹಳ ಸುಲಭವಾಗಿ ಮತ್ತು ಮುಕ್ತವಾಗಿ ಪ್ರತಿಕ್ರಿಯಿಸುತ್ತಾರೆ.

ನಾನು ಮಕ್ಕಳೊಂದಿಗೆ 24 ದಿನಗಳ ಕಾಲ ನಿರಂತರವಾಗಿ ತೊಡಗಿಸಿಕೊಂಡೆ. ಈ ಸಮಯವು ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದನ್ನು ಆಳವಾಗಿ ಅರ್ಥಮಾಡಿಕೊಳ್ಳಲು ನನಗೆ ಸಹಾಯ ಮಾಡಿತು. ಅವರು ಯಾವುದಾದರೂ ಹೊಸ ವಿಷಯವನ್ನು ಕಲಿತಾಗ ಅವರಲ್ಲಿ ಕುತೂಹಲ ಇನ್ನೂ ಹೆಚ್ಚಾಗುತ್ತದೆ ಮತ್ತು ಅವರು ಹೊಸ ಆಲೋಚನೆಗಳನ್ನು ಕಲ್ಪಿಸಿಕೊಳ್ಳಲು ಪ್ರಾರಂಭಿಸುತ್ತಾರೆ. ಮಕ್ಕಳಿಗೆ ಮಾತನಾಡಲು ಪೂರ್ಣ ಸ್ವಾತಂತ್ರ್ಯ ನೀಡಿದರೆ, ಅವರು ತಮ್ಮ ಕಲ್ಪನಾ ಲೋಕವನ್ನು ನಮ್ಮ ಮುಂದೆ ಬಿಚ್ಚಿಡುತ್ತಾರೆ.

ಮಕ್ಕಳ ವಯಸ್ಸಿಗೆ ಅನುಗುಣವಾದ ಚಟುವಟಿಕೆಗಳನ್ನು ಮಾಡಿಸುವುದು ಅತ್ಯಗತ್ಯ. ಕಲಿಕೆಗೆ ಸಾಕಷ್ಟು ಅವಕಾಶಗಳನ್ನು ನೀಡುವುದು ಮತ್ತು ಶಿಕ್ಷಕರ ಪ್ರೀತಿಯ ನಡವಳಿಕೆಯು ಮಕ್ಕಳ ಉಜ್ವಲ ಭವಿಷ್ಯವನ್ನು ಖಚಿತಪಡಿಸುತ್ತದೆ. ಪ್ರತಿಯೊಂದು ಮಗುವೂ ತನ್ನದೇ ಆದ ಸಾಮರ್ಥ್ಯ ಮತ್ತು ಮಟ್ಟಕ್ಕೆ ಅನುಗುಣವಾಗಿ ಕಲಿಯುತ್ತದೆ; ತನ್ನದೇ ಆದ ಕಲ್ಪನಾ ಶಕ್ತಿಯನ್ನು ಬೆಳೆಸಿಕೊಳ್ಳುತ್ತದೆ ಮತ್ತು ಈ ಜಗತ್ತನ್ನು ಹೊಸ ದೃಷ್ಟಿಕೋನದಿಂದ ನೋಡಲು ಪ್ರಾರಂಭಿಸುತ್ತದೆ.



**ತರನ್ನುಮ್ ನಿಶಾ** ಅವರು 2018ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಶಿಕ್ಷಣ ಮತ್ತು ಶಿಕ್ಷಕರ ತರಬೇತಿ ವಿಭಾಗದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳ ಮಕ್ಕಳಿಗೆ (ವಿಶೇಷವಾಗಿ ವಿಜ್ಞಾನ ವಿಷಯಗಳಲ್ಲಿ) ಬೋಧಿಸಿದ ಸುದೀರ್ಘ ಅನುಭವ ಇವರಿಗಿದೆ. ಪ್ರಸ್ತುತ ಇವರು ಮಧ್ಯಪ್ರದೇಶದ ಸಾಗರ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** tarannum.nisha@azimpremjifoundation.org

ಅನುವಾದ: ಅನುರೂಪಾ ರವೀಂದ್ರ | ಪರಿಶೀಲನೆ: ಕಿರಣ್ ಮಂಜುನಾಥ್



# ಆಟದ ಮೂಲಕ ಕುತೂಹಲವನ್ನು ಬೆಳೆಸುವುದು

ಮುನ್ನಿ ದಹರಿಯಾ

ಮಕ್ಕಳ ಮುಗ್ಧ ನಗು, ಕುತೂಹಲಭರಿತ ಮಾತುಕತೆ ಮತ್ತು ಅವರ ಪುಟ್ಟ ಕೈಗಳಿಂದ ತಯಾರಿಸಿದ ಆಕೃತಿಗಳೇ ಜೀವನದಲ್ಲಿ ನಾನು ಸಂಪಾದಿಸಿದ ಅತ್ಯಂತ ದೊಡ್ಡ ಆಸ್ತಿ. ನಾನು ಲೈಲುಂಗಾ ತಾಲ್ಲೂಕಿನ ಗಾಂಧಿನಗರ ಬಡಾವಣೆಯ ಅಂಗನವಾಡಿಯಲ್ಲಿ ಕೆಲಸ ಶುರು ಮಾಡಿದಾಗ, ಅಲ್ಲಿನ ಗೋಡೆಗಳೆಲ್ಲ ಖಾಲಿ ಖಾಲಿಯಾಗಿದ್ದವು. ಮಕ್ಕಳೂ ಸಹ ಕಲಿಕೆಯಲ್ಲಿ ಹೆಚ್ಚು ಆಸಕ್ತಿ ತೋರುತ್ತಿರಲಿಲ್ಲ. ಅವರು ಕೇಂದ್ರಕ್ಕೆ ಬಂದ ಕೂಡಲೇ ಜಗಳ ಶುರು ಮಾಡುತ್ತಿದ್ದರು ಮತ್ತು ಬಹು ಬೇಗನೆ ನಿರುತ್ಸಾಹಗೊಳ್ಳುತ್ತಿದ್ದರು. ಅವರಿಗೆ ಅಂಗನವಾಡಿಗೆ ಬರಲು ಯಾವುದೇ ಆಕರ್ಷಣೆಯೇ ಇರಲಿಲ್ಲ.

ಅದನ್ನೆಲ್ಲ ನೋಡಿದಾಗ, ನನ್ನ ಕೆಲಸದ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಸೂಕ್ತ ಎಂದು ನನಗೆ ಅನಿಸಿತು. ಆ ಬದಲಾವಣೆಯು ಮಕ್ಕಳನ್ನು ಸೆಳೆಯುವಂತಿರಬೇಕು ಮತ್ತು ಕಲಿಕೆಯನ್ನು ಆನಂದಮಯವಾಗಿಸುವಂತಿರಬೇಕು ಎಂದು ನಾನು ನಿರ್ಧರಿಸಿದೆ. ಈ ಹೊಸ ಪ್ರಯತ್ನವನ್ನು ನಾನು ಬಣ್ಣಗಳಿಂದಲೇ ಆರಂಭಿಸಿದೆ. ಒಂದು ದಿನ ನಾನು ಮಕ್ಕಳಿಗೆ ಬಣ್ಣ ಬಣ್ಣದ ಕ್ರೇಯಾನ್ಸ್ ಮತ್ತು ಚಾರ್ಟ್ ಪೇಪರ್‌ಗಳನ್ನು ಕೊಟ್ಟು, “ನಿಮ್ಮ ಮನಸ್ಸಿಗೆ ತೋಚಿದ್ದನ್ನು ಬಿಡಿಸಿ” ಎಂದು ಹೇಳಿದೆ. ಬಬ್ಲಿ ಸೂರ್ಯನ ಚಿತ್ರ ಬಿಡಿಸಿದರೆ, ತೋಸಿಯಾ ಮರವನ್ನು, ಮದನ್ ಹೂವನ್ನು ಹಾಗೂ ಮನಕರನ್ ಚಿಟ್ಟೆಯ ಚಿತ್ರವನ್ನು ಬಿಡಿಸಿದನು. ನಾನು ಎಲ್ಲರ ಚಿತ್ರಗಳನ್ನು ಪ್ರಶಂಸಿಸುತ್ತಾ, “ಅರೇ ಬಬ್ಲಿ, ನಿನ್ನ ಸೂರ್ಯ ತುಂಬಾ ಮಿಂಚುತ್ತಿದ್ದಾನೆ! ಮನಕರನ್, ನಿನ್ನ ಈ ಬಣ್ಣ ಬಣ್ಣದ ಚಿಟ್ಟೆಯು ಮದನ್ ಬಿಡಿಸಿದ ಸುಂದರವಾದ ಹೂವಿನ ಮೇಲೆ ಹಾರಾಡುತ್ತಿದೆ!” ಎಂದು ಹೇಳಿದೆ. ಇದನ್ನು ಕೇಳಿ ಮಕ್ಕಳೆಲ್ಲ ಸಂತೋಷದಿಂದ ಮುಗುಳ್ನಕ್ಕರು. ಕ್ರಮೇಣ, ಖಾಲಿ ಗೋಡೆಗಳು ಮಕ್ಕಳ ಕಲ್ಪನೆಯಿಂದ ರಂಗೇರಿದವು. ಅವರ ಭಾವನೆಗಳನ್ನು ಪ್ರತಿಬಿಂಬಿಸುವ ಚಿತ್ರಗಳು ಗೋಡೆಗಳ ಮೇಲೆ ರಾರಾಜಿಸಲು ಪ್ರಾರಂಭಿಸಿದವು. ಈಗ ಅಂಗನವಾಡಿಯೊಳಗೆ ಕಾಲಿಡುತ್ತಿದ್ದಂತೆಯೇ ಮಕ್ಕಳ ಕಣ್ಣುಗಳಲ್ಲಿ ಹೊಸ ಹೊಳಪು ಕಾಣಿಸತೊಡಗಿತು.

ಇದೇ ಸಮಯದಲ್ಲಿ ನನ್ನ ಗಮನವು ಪ್ರಗತಿ ಎಂಬ ಬಾಲಕಿಯ ಮೇಲೆ ಬಿತ್ತು. ಆಕೆ ಚಿಕ್ಕವಳಾಗಿದ್ದರೂ, ಮನಸ್ಸಿನೊಳಗೆ ಅಪಾರ ಕುತೂಹಲ ಹೊಂದಿದ್ದಳು. ಆರಂಭದಲ್ಲಿ ಅವಳು ಕೂಡ ಸ್ವಲ್ಪ ಸಂಕೋಚಪಡುತ್ತಿದ್ದಳು. ಆದರೆ ಶೀಘ್ರದಲ್ಲೇ ಅವಳ ಆಸಕ್ತಿ ಎಲ್ಲರಿಗಿಂತ ಭಿನ್ನವಾಗಿ ಎದ್ದು ಕಾಣತೊಡಗಿತು. ಅವಳಿಗೆ ಚಿತ್ರ ಬಿಡಿಸುವುದು ಎಂದರೆ ಪಂಚಪ್ರಾಣ. ಅಂಗನವಾಡಿಯಲ್ಲಿ ಅವಳು ಏನೇ ಕಲಿತರೂ, ಮನೆಗೆ ಹೋಗಿ ಅದನ್ನು ಪೋಷಕರ ಮುಂದೆ ಮಾಡಿ ತೋರಿಸುತ್ತಿದ್ದಳು. ಒಂದು ದಿನವಂತೂ ಅವಳು ದಿನಪತ್ರಿಕೆಯನ್ನು ಮಡಿಚಿ, ಅದರಲ್ಲಿದ್ದ ಇಂಗ್ಲಿಷ್ ಅಕ್ಷರಗಳನ್ನು ಬಳಸಿ ಚಾರ್ಟ್ ಒಂದನ್ನು ತಯಾರಿಸಿ ನನಗೆ ಉಡುಗೊರೆಯಾಗಿ ನೀಡಿದಳು. ಅವಳ ಸೃಜನಶೀಲತೆಯನ್ನು ಕಂಡು ನನ್ನ ಮನಸ್ಸು ತುಂಬಿ ಬಂತು. ನಾನು ಆ ಚಾರ್ಟ್ ಅನ್ನು ಎಲ್ಲಾ ಮಕ್ಕಳಿಗೂ ಕಾಣುವಂತೆ ಗೋಡೆಯ ಮೇಲೆ ನೇತುಹಾಕಿದೆ.

ಆದರೆ ಅಂಗನವಾಡಿಯ ಪ್ರತಿಯೊಂದು ದಿನವೂ ಅಷ್ಟೊಂದು ಸುಲಭವಾಗಿರಲಿಲ್ಲ. ಚಟುವಟಿಕೆಗಳ ಸಮಯದಲ್ಲಿ ಸವಾಲುಗಳು ಎದುರಾಗುತ್ತಲೇ ಇದ್ದವು. ಮಕ್ಕಳಿಗೆ ಆಕೃತಿಗಳಲ್ಲಿ ಬಣ್ಣ ತುಂಬಲು ನೀಡಿದಾಗ, ಅವರು ಅನೇಕ ಬಾರಿ ತಪ್ಪು ಮಾಡುತ್ತಿದ್ದರು. ಯಾರೋ ಒಬ್ಬರು ಗೆರೆಯಿಂದ ಹೊರಗೆ ಬಣ್ಣ ಹಚ್ಚಿದರೆ, ಇನ್ನೊಬ್ಬರು ಅರ್ಧಕ್ಕೆ ಬಿಟ್ಟುಬಿಡುತ್ತಿದ್ದರು. ಹಾಗಂತ ಅದು ತಪ್ಪೇನಲ್ಲ; ಪುಟ್ಟ ಮಕ್ಕಳ ದೃಷ್ಟಿಯಿಂದ ಅದೆಲ್ಲ ಸಹಜವೇ ಆಗಿತ್ತು. ಪಜ಼ಲ್‌ನ ತುಣುಕುಗಳನ್ನು ಜೋಡಿಸುವಾಗಲೂ ಅವರಿಗೆ ಕಿರಿಕಿರಿ ಉಂಟಾಗುತ್ತಿತ್ತು. ಕೆಲವರಂತೂ ಪ್ರಯತ್ನಿಸುವ ಮೊದಲೇ, “ಮಿಸ್, ಇದು ನಮ್ಮಿಂದ ಆಗಲ್ಲ!” ಎಂದುಬಿಡುತ್ತಿದ್ದರು. ಇಂತಹ ಪರಿಸ್ಥಿತಿಗಳು ನನಗೆ ದೊಡ್ಡ ಸವಾಲಾಗಿದ್ದವು. ಮಕ್ಕಳಲ್ಲಿ ಎಲ್ಲಿ ಸೋಲೊಪ್ಪಿಕೊಳ್ಳುವ ಮನೋಭಾವ ಬೆಳೆದುಬಿಡುತ್ತದೆಯೋ ಎಂಬ ಭಯ ನನ್ನನ್ನು ಕಾಡುತ್ತಿತ್ತು.

ಈ ನಡುವೆ ಮಕ್ಕಳಲ್ಲೂ ಸಹಕಾರದ ಭಾವನೆ ಮೂಡತೊಡಗಿತು. ಮೊದಲು ಎಲ್ಲಿ ಆಟಿಕೆಗಳಿಗಾಗಿ ಜಗಳ ನಡೆಯುತ್ತಿತ್ತೋ, ಅಲ್ಲೀಗ ಅವರು ಆಟಿಕೆಗಳನ್ನು ಪರಸ್ಪರ ಹಂಚಿಕೊಳ್ಳತೊಡಗಿದ್ದರು. ಯಾರದ್ದಾದರೂ ಬಣ್ಣ ಮುಗಿದುಹೋದರೆ, ಸಹಪಾಠಿಗಳು ತಮ್ಮ ಬಣ್ಣವನ್ನು ನೀಡಿ ಸಹಾಯ ಮಾಡುತ್ತಿದ್ದರು. ಈ ಬದಲಾವಣೆಯು ನನಗೆ ಬಹಳ ವಿಶೇಷವಾಗಿತ್ತು. ಅಂಗನವಾಡಿ ಈಗ ಕೇವಲ ಅಕ್ಷರ ಕಲಿಯುವ ಜಾಗವಾಗಿ ಉಳಿದಿಲ್ಲ; ಬದಲಿಗೆ, ಅದು ಮಕ್ಕಳ ಸಹಕಾರ ಮತ್ತು ಸ್ನೇಹದ ಪಾಠಶಾಲೆಯಾಗಿ ಮಾರ್ಪಟ್ಟಿದೆ.

ಕೆಲವು ಮಕ್ಕಳು ರಜೆಯ ದಿನಗಳಲ್ಲೂ ನನ್ನನ್ನು ಭೇಟಿ ಮಾಡಲು ಮನೆಗೆ ಬರುತ್ತಿದ್ದರು. ಅಂತಹ ಸಮಯದಲ್ಲಿ ನಾವು ಮನೆಯನ್ನೇ ಅಂಗನವಾಡಿಯನ್ನಾಗಿ ಮಾಡಿಕೊಳ್ಳುತ್ತಿದ್ದೆವು. ಅವರು ಆಟಿಕೆಗಳನ್ನು ಹೊರತೆಗೆಯುತ್ತಿದ್ದರು, ಚಿತ್ರ ಬಿಡಿಸುತ್ತಿದ್ದರು ಮತ್ತು ಕಥೆಗಳನ್ನು ಹೇಳುತ್ತಿದ್ದರು. ನಾನು ಅವರನ್ನು ಹೀಗೆ ಕೇಳುತ್ತಿದ್ದೆ: “ನಿನಗೆ ಗೋಪುರ ಕಟ್ಟುವ ಆಟಿಕೆ ಏಕೆ ಇಷ್ಟ?”, “ಚಿತ್ರದಲ್ಲಿ ನೀನು ಹಕ್ಕಿಯನ್ನೇ ಏಕೆ ಬಿಡಿಸಿದೆ?”, “ಈ ಕಥೆಯಲ್ಲಿ ಗೂಡಿನಿಂದ ಹಕ್ಕಿ ಮರಿ ಕೆಳಗೆ ಬಿದ್ದಾಗ ನಿನಗೆ ಹೇಗನ್ನಿಸಿತು?”. ಇಂತಹ ಹಲವಾರು ಪ್ರಶ್ನೆಗಳಿಗೆ ಅವರು ಯೋಚಿಸಿ ಆಸಕ್ತಿದಾಯಕ ಉತ್ತರಗಳನ್ನೇ ನೀಡುತ್ತಿದ್ದರು. ನಿಜವಾದ ಶಿಕ್ಷಣ ಎಂದರೆ ಇದೇ ಎಂದು ಆ ಕ್ಷಣಗಳಲ್ಲಿ ನನಗನಿಸುತ್ತಿತ್ತು. ಎಲ್ಲಿ ಆಟವಾಡುತ್ತಲೇ ಕಲಿಯುವ ಹಂಬಲ ಹುಟ್ಟುತ್ತದೆಯೋ ಮತ್ತು ಆ ಮೂಲಕ ಮಕ್ಕಳು ಜ್ಞಾನ ಪಡೆಯುತ್ತಾರೋ, ಅದೇ ನಿಜವಾದ ಶಿಕ್ಷಣ.

ಕಾಲಚಕ್ರ ಉರುಳಿತು. ನಮ್ಮ ಅಂಗನವಾಡಿಯ ಅನೇಕ ಮಕ್ಕಳು ಮುಂದಿನ ಶಾಲೆಗಳಿಗೆ ಸೇರಿದರು. ಅಲ್ಲಿನ ಶಿಕ್ಷಕರು ನಮ್ಮ ಮಕ್ಕಳ ಕಲಿಕೆಯನ್ನು ಕಂಡು ಹೊಗಳುತ್ತಿದ್ದರು. ಅವರಲ್ಲಿ ಪ್ರಗತಿ ಕೂಡ ಒಬ್ಬಳು. ಈಗ ಅವಳು ಶಾಲೆಯಲ್ಲೂ ಅತ್ಯಂತ ಆತ್ಮವಿಶ್ವಾಸದಿಂದ ಓದುತ್ತಿದ್ದಾಳೆ. ಅವಳ ನೋಟ್‌ಬುಕ್‌ಗಳು ಅಚ್ಚುಕಟ್ಟಾಗಿರುತ್ತವೆ; ಆ ವಯಸ್ಸಿನ ಮಗುವಿನ ಮಟ್ಟಕ್ಕೆ ಅವಳು ಬಿಡಿಸುವ ಚಿತ್ರಗಳು ಬಹಳ ಸುಂದರವಾಗಿರುತ್ತವೆ. ಅವಳು ಪ್ರಶ್ನೆಗಳಿಗೆ ಪೂರ್ಣ ಆತ್ಮವಿಶ್ವಾಸದಿಂದ ಉತ್ತರಿಸುತ್ತಾಳೆ. ಅವಳ ಶೈಕ್ಷಣಿಕ ಪ್ರಗತಿಯು ಕೇವಲ ಅಂಕಗಳಿಗೆ ಸೀಮಿತವಾಗಿಲ್ಲದೆ ಅವಳ ಆಲೋಚನಾ ಕ್ರಮ ಮತ್ತು ಆತ್ಮವಿಶ್ವಾಸದಲ್ಲೂ ಕಾಣುತ್ತದೆ.

ಹಿಂದಿರುಗಿ ನೋಡಿದಾಗ, ಮಕ್ಕಳಲ್ಲಿ ಬದಲಾವಣೆ ತರಲು ದೊಡ್ಡ ಸಂಪನ್ಮೂಲಗಳ ಅಗತ್ಯವಿಲ್ಲ ಎಂಬ ಸತ್ಯವು ನನಗೆ ಅರಿವಾಗಿದೆ. ಸಣ್ಣಪುಟ್ಟ ಚಟುವಟಿಕೆಗಳೇ ದೊಡ್ಡ ಪಾಠಗಳನ್ನು ಕಲಿಸಿಕೊಡುತ್ತವೆ. ಮಕ್ಕಳನ್ನು ಪ್ರಾಮಾಣಿಕವಾಗಿ ಪ್ರಶಂಸಿಸುವಲ್ಲಿ ಮತ್ತು ಅವರನ್ನು ಪ್ರೋತ್ಸಾಹಿಸುವಲ್ಲಿ ಯಾವತ್ತೂ ಕೊರತೆಯಾಗಬಾರದು ಎಂದು ನನಗೆ ಅನಿಸುತ್ತದೆ. ಪ್ರಗತಿಯ ಕಥೆಯೇ ಇದಕ್ಕೆ ಒಂದು ಉತ್ತಮ ಉದಾಹರಣೆ. ನಾನು ಅವಳ ಪ್ರತಿಯೊಂದು ಸಣ್ಣ ಪ್ರಯತ್ನವನ್ನೂ ಶ್ಲಾಘಿಸುತ್ತಿದ್ದೆ. ಬಹುಶಃ ಇದೇ ಕಾರಣಕ್ಕೆ ಅವಳಲ್ಲಿ ಕಲೆ ಮತ್ತು ಓದು ಎರಡರ ಬಗೆಗೂ ಅಪಾರ ಆಸಕ್ತಿ ಮೂಡಿತು. “ಈ ಬದಲಾವಣೆ ಅಂಗನವಾಡಿಯಿಂದಲೇ ಆಗಿದೆ” ಎಂದು ಅವಳ ಪೋಷಕರು ಹೇಳಿದಾಗ, ನನ್ನ ಹೃದಯ ಹೆಮ್ಮೆಯಿಂದ ತುಂಬಿ ಬರುತ್ತದೆ.

ಇಂದು ನಮ್ಮ ಅಂಗನವಾಡಿ ಮೊದಲಿನಂತಿಲ್ಲ. ಈಗ ಇಲ್ಲಿನ ಗೋಡೆಗಳ ಮೇಲೆ ಮಕ್ಕಳ ಚಿತ್ರಕಲೆಯ ಸೃಜನಶೀಲ ಅಭಿವ್ಯಕ್ತಿಗಳಿವೆ ಮತ್ತು ಅವರ ನಗುವಿನ ಸದ್ದು ಕೊಠಡಿಯಲ್ಲಿ ಸದಾ ಮೊಳಗುತ್ತಿರುತ್ತದೆ. ಕಲಿಕೆ ಈಗ ಕೇವಲ ಪುಸ್ತಕಗಳಿಗೆ ಸೀಮಿತವಾಗಿಲ್ಲ; ಬದಲಿಗೆ ಅದು ಪ್ರತಿ ಆಟ, ಪ್ರತಿ ಹಾಡು ಮತ್ತು ಪ್ರತಿ ಚಟುವಟಿಕೆಯಲ್ಲೂ ಅಡಗಿದೆ. ಮಕ್ಕಳೀಗ ಸವಾಲುಗಳಿಗೆ ಹೆದರುವುದಿಲ್ಲ, ಬದಲಿಗೆ ಅವುಗಳನ್ನು ಕ್ರೀಡಾಮನೋಭಾವದಿಂದ ಸ್ವೀಕರಿಸುತ್ತಾರೆ.

ಇದು ಕೇವಲ ಪ್ರಗತಿಯ ಕಥೆಯಲ್ಲ; ಬದಲಿಗೆ ಅಂಗನವಾಡಿಯ ಈ ಪುಟ್ಟ ಪ್ರಪಂಚವನ್ನು ಬಣ್ಣ, ಉತ್ಸಾಹ ಮತ್ತು ಕಲಿಕೆಯಿಂದ ತುಂಬಿದ ಎಲ್ಲಾ ಮಕ್ಕಳ ಕಥೆಯಾಗಿದೆ. ಇಲ್ಲಿ ಪ್ರತಿ ಸವಾಲೂ ಒಂದು ಆಟ, ಪ್ರತಿ ಕಲಿಕೆಯೂ ಒಂದು ಉತ್ಸವ. ಅಷ್ಟೇ ಅಲ್ಲ, ಪ್ರತಿ ಮಗುವಿನ ಬಾಲ್ಯವೂ ಇಲ್ಲಿ ಅರಳುತ್ತಿದೆ.

ಮುನ್ನಿ ದಹರಿಯಾ, ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಕೇಂದ್ರ, ಗಾಂಧಿ ನಗರ 2, ಲೈಲುಂಗಾ ಡೆವಲಪ್‌ಮೆಂಟ್ ಬ್ಲಾಕ್, ರಾಯ್‌ಗಢ್, ಛತ್ತೀಸ್‌ಗಢ.
ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಅನುರೂಪಾ ರವೀಂದ್ರ



# ಅಂಗನವಾಡಿ ಕಾರ್ಯಕರ್ತೆಯಾಗಿ ನನ್ನ ಅನುಭವಗಳು

**ರೇಖಾ**

ಬೆಳಿಗ್ಗೆ ಅಂಗನವಾಡಿಗೆ ಆಗಮಿಸುವ ಮಕ್ಕಳನ್ನು ನಾನು ಸಂತೋಷದಿಂದ ಬರಮಾಡಿಕೊಳ್ಳುತ್ತೇನೆ. ಅವರ ವೈಯಕ್ತಿಕ ಸ್ವಚ್ಛತೆಯನ್ನು ಪರಿಶೀಲಿಸಿ, ಆ ದಿನದ ಶೈಕ್ಷಣಿಕ ಚಟುವಟಿಕೆಗಳಿಗೆ ಸಿದ್ಧತೆ ಮಾಡಿಕೊಳ್ಳುತ್ತೇನೆ. ನಮ್ಮ ದಿನಚರಿಯು ಪ್ರಾರ್ಥನೆಯ ಮೂಲಕ ಆರಂಭವಾಗುತ್ತದೆ. ನಂತರ ನಾನು ಅವರಿಗೆ ಬೆಳಗಿನ ಉಪಾಹಾರಕ್ಕೆ ಹಾಲು ಮತ್ತು ಸಜ್ಜೆಯ ಲಾಡುಗಳನ್ನು ನೀಡುತ್ತೇನೆ.

ತಿಂಡಿಯ ನಂತರ, ಮುಂದಿನ ಚಟುವಟಿಕೆಗಳಿಗೆ ಮಾನಸಿಕವಾಗಿ ಸಿದ್ಧಗೊಳಿಸಲು ಮಕ್ಕಳನ್ನು ಒಂದು ಸೃಜನಾತ್ಮಕ ಆಟದಲ್ಲಿ ತೊಡಗಿಸುತ್ತೇನೆ. ಪಠ್ಯಕ್ರಮದ ಚಟುವಟಿಕೆಗಳನ್ನು ಆರಂಭಿಸುವ ಮೊದಲು ಈ ಆಟವು ಒಂದು ಹಿತವಾದ 'ವಾರ್ಮ್-ಅಪ್'ನಂತೆ ಕೆಲಸ ಮಾಡುತ್ತದೆ. ಇದರ ನಂತರ, ವರ್ಷಪೂರ್ತಿ ಹರಡಿರುವ 48 ವಿಷಯಗಳಿಗೆ ಸಂಬಂಧಿಸಿದ ಕಲಿಕಾ ಚಟುವಟಿಕೆಗಳಲ್ಲಿ ನಾನು ಮಕ್ಕಳನ್ನು ತೊಡಗಿಸುತ್ತೇನೆ. ಪ್ರತಿ ವಾರ ಒಂದು ವಿಷಯವನ್ನು ನಾನು ಅವರಿಗೆ ಕಲಿಸುತ್ತೇನೆ.

ನನ್ನ ಅಂಗನವಾಡಿ ಗುಂಪಿನ ಮಕ್ಕಳನ್ನು ನಾನು ಚಟುವಟಿಕೆಗಳಲ್ಲಿ ಹೇಗೆ ತೊಡಗಿಸಿಕೊಳ್ಳುತ್ತೇನೆ ಎಂಬುದನ್ನು ವಿವರಿಸಲು, 'ಸೊಪ್ಪು ಮತ್ತು ತರಕಾರಿಗಳು' ಎಂಬ ಪಾಠದ ಉದಾಹರಣೆಯನ್ನು ಇಲ್ಲಿ ನೀಡುತ್ತಿದ್ದೇನೆ.

ಮಕ್ಕಳು ತಾವು ನೋಡಿದ ಅಥವಾ ತಿಂದ ಸೊಪ್ಪು ಮತ್ತು ತರಕಾರಿಗಳ ಬಗ್ಗೆ ಮಾತನಾಡಲು ಆರಂಭಿಸಿದರು. ಪಾಲಕ್, ಮೆಂತ್ಯ, ಆಲೂಗಡ್ಡೆ ಮತ್ತು ಹೂಕೋಸಿನಂತಹ ಮನೆಯಲ್ಲಿ ಸಾಮಾನ್ಯವಾಗಿ ಬೇಯಿಸುವ ತರಕಾರಿಗಳ ಹೆಸರನ್ನು ಮಕ್ಕಳು ಹೇಳಿದರು. ಅಷ್ಟೇ ಅಲ್ಲದೆ, ತಮಗೆ ಇಷ್ಟವಾದ ಅಡುಗೆಗಳು ಮತ್ತು ಅವುಗಳ ರುಚಿಯ ಬಗ್ಗೆಯೂ ಹಂಚಿಕೊಂಡರು. ಕೆಲವು ಮಕ್ಕಳು ತಮಗೆ 'ಆಲೂ-ಪಾಲಕ್' ಇಷ್ಟವೆಂದು ಹೇಳಿದರೆ, ಇನ್ನು ಕೆಲವರು 'ಬೆಂಡೆಕಾಯಿ' ಅಥವಾ 'ಆಲೂ-ಗೋಬಿ' ಇಷ್ಟವೆಂದು ತಿಳಿಸಿದರು. ಈ ಸಂಭಾಷಣೆಯನ್ನು ಇನ್ನಷ್ಟು ಆಸಕ್ತಿದಾಯಕವಾಗಿ ಮುಂದುವರಿಸಲು, ನಾನು ವಿವಿಧ ತರಕಾರಿಗಳ ಚಿತ್ರವಿರುವ ಫ್ಲಾಶ್‌ಕಾರ್ಡ್‌ಗಳನ್ನು ಬಳಸಿದೆ. ಮಕ್ಕಳಿಗೆ ಈಗಾಗಲೇ ಸೊಪ್ಪು ಮತ್ತು ತರಕಾರಿಗಳ ಬಗ್ಗೆ ಸ್ವಲ್ಪ ಪರಿಚಯವಿದ್ದುದರಿಂದ, ಅವುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಅವರು ಮಾನಸಿಕವಾಗಿ ಸಿದ್ಧರಾಗಿದ್ದರು. ಮುಂದಿನ ಹಂತವಾಗಿ, ನಾನು ಎಲ್ಲಾ ಮಕ್ಕಳನ್ನು 'ಸಬ್ಜಿ ಲೇ ಲೋ ಸಬ್ಜಿ' ('ತರಕಾರಿ ತಗೊಳ್ಳಿ ತರಕಾರಿ') ಎಂಬ ಅಭಿನಯ ಗೀತೆಗೆ ಹಾಡುತ್ತಾ ಕುಣಿಯುವ ಚಟುವಟಿಕೆಯಲ್ಲಿ ತೊಡಗಿಸಿದೆ.

ಮಕ್ಕಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಯಲ್ಲಿ ಅಭಿನಯ ಗೀತೆಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಹಾಡುಗಳು ಸ್ವಾತಂತ್ರ್ಯ, ವಿನೋದ ಮತ್ತು ಕಲಿಕೆಯನ್ನು ಸುಂದರವಾಗಿ ಬೆಸೆಯುತ್ತವೆ. ಈ ಹಾಡಿನ ಮೂಲಕ ನಾನು ಮಕ್ಕಳಿಗೆ ವಿವಿಧ ತರಕಾರಿಗಳ ಬಣ್ಣ, ಆಕಾರ, ಗಾತ್ರ ಮತ್ತು ಅವುಗಳಿಂದ ಆಗುವ ಪ್ರಯೋಜನಗಳನ್ನು ಪರಿಚಯಿಸಿದೆ. ಮಕ್ಕಳು ಈ ಹಾಡು, ನೃತ್ಯ ಮತ್ತು ಕಲಿಕೆಯಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸಿದರು.

ಅಭಿನಯ ಗೀತೆಯ ನಂತರ, ಸೊಪ್ಪು ಮತ್ತು ತರಕಾರಿಗಳ ಪರಿಕಲ್ಪನೆಯನ್ನು ಒಳಗೊಂಡಿರುವ ಒಂದು ಕಥೆಯನ್ನು ನಾನು ಬಳಸಿದೆ – ಅದುವೇ 'ಈರುಳ್ಳಿಯ ಕಥೆ'. ಕಥೆಯನ್ನು ಆಯ್ಕೆ ಮಾಡುವಾಗ, ಅದು ಸರಳವಾಗಿರಬೇಕು, ಮೋಜಿನಿಂದ ಕೂಡಿರಬೇಕು ಮತ್ತು ಮಕ್ಕಳ ದೈನಂದಿನ ಅನುಭವಗಳಿಗೆ ಹತ್ತಿರವಾಗಿರಬೇಕು

ಎಂಬುದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಇದು ಮಕ್ಕಳ ಭಾಷಾ ಬೆಳವಣಿಗೆಗೆ ಸಹಾಯ ಮಾಡುತ್ತದೆ, ಅವರ ಶಬ್ದಕೋಶವನ್ನು ಹೆಚ್ಚಿಸುತ್ತದೆ ಮತ್ತು ಅವರ ಕಲ್ಪನಾ ಲೋಕಕ್ಕೆ ರೆಕ್ಕೆಗಳನ್ನು ನೀಡುತ್ತದೆ. ಕಥೆಗಳನ್ನು ಕೇಳುವುದು ಮತ್ತು ಅವುಗಳ ಬಗ್ಗೆ ಚರ್ಚಿಸುವುದು ಮಕ್ಕಳು ಪರೋಕ್ಷವಾಗಿ ಸಾಮಾಜಿಕ ಹಾಗೂ ಮಾನವೀಯ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ತರಗತಿಯಲ್ಲಿ ಕಥೆಗಳನ್ನು ಕೇಳುವಾಗ ಎಲ್ಲಾ ಮಕ್ಕಳು ಬಹಳ ಆಸಕ್ತಿ ತೋರಿಸುತ್ತಾರೆ ಮತ್ತು ಮನಸಾರೆ ಆನಂದಿಸುತ್ತಾರೆ ಎಂಬುದನ್ನು ನಾನು ಗಮನಿಸಿದ್ದೇನೆ.

ಕಥೆಯ ನಂತರ, ಮಕ್ಕಳ ಸೃಜನಶೀಲ ಬೆಳವಣಿಗೆಯನ್ನು ಉತ್ತೇಜಿಸಲು ವಿವಿಧ ಆಸಕ್ತಿದಾಯಕ ಚಟುವಟಿಕೆಗಳನ್ನು ಮಾಡಿಸುತ್ತೇನೆ. ಇವುಗಳಲ್ಲಿ ಪಜ಼ಲ್‌ಗಳು, ಸ್ವಂತ ಕಲ್ಪನೆಯಂತೆ ಚಿತ್ರ ಬಿಡಿಸುವುದು, ಚಿತ್ರಗಳಿಗೆ ಬಣ್ಣ ಹಚ್ಚುವುದು ಹಾಗೂ ಕಲ್ಲು ಮತ್ತು ಕಡ್ಡಿಗಳಿಂದ ವಿವಿಧ ಆಕೃತಿಗಳನ್ನು ರಚಿಸುವುದು ಸೇರಿವೆ. ಮಕ್ಕಳು ಹಳೆಯ ದಿನಪತ್ರಿಕೆಗಳಿಂದ ವಿಮಾನ, ದೋಣಿ, ಚೆಂಡುಗಳಂತಹ ಆಟಿಕೆಗಳನ್ನು ತಯಾರಿಸುತ್ತಾರೆ ಮತ್ತು ಒಬ್ಬರಿಗೊಬ್ಬರು ಅದನ್ನು ಮಾಡುವುದು ಹೇಗೆಂದು ಕಲಿಸಿಕೊಡುತ್ತಾರೆ. ಇಂತಹ ಚಟುವಟಿಕೆಗಳು ಅವರ ಕಣ್ಣು ಮತ್ತು ಕೈಗಳ ನಡುವಿನ ಸಮನ್ವಯ ಸಾಧಿಸಲು ಸಹಾಯ ಮಾಡುತ್ತವೆ. ಜೊತೆಗೆ, ಇವು ಮಕ್ಕಳ ಸೂಕ್ಷ್ಮ ಸ್ನಾಯುಗಳ ಚಲನಾ ಸಾಮರ್ಥ್ಯವನ್ನೂ (Fine motor skills) ಹೆಚ್ಚಿಸುತ್ತವೆ.

ಸೃಜನಶೀಲ ಚಟುವಟಿಕೆಗಳ ನಂತರ ಆರಂಭಿಕ ಸಾಕ್ಷರತೆಯ ಚಟುವಟಿಕೆಗಳ ಸರದಿ ಬರುತ್ತದೆ. ಮೊದಲಿಗೆ, ನಾನು ಮಕ್ಕಳಿಗೆ ಕೆಲವು ಪರಿಚಿತ ಪದಗಳನ್ನು ಹೇಳಿಕೊಡುತ್ತೇನೆ. ನಂತರ, ಅವರು ಕೇಳಿದ ಪದಗಳ ಧ್ವನಿಯನ್ನು ಪುನರಾವರ್ತಿಸುತ್ತೇನೆ ಮತ್ತು ಆ ಪದಗಳನ್ನು ನನ್ನೊಂದಿಗೆ ಉಚ್ಚರಿಸಲು ಅವರಿಗೆ ಅವಕಾಶ ನೀಡುತ್ತೇನೆ. ತದನಂತರ, ಅವೇ ಪದಗಳು ಮತ್ತು ಅಕ್ಷರಗಳನ್ನು ಒಳಗೊಂಡ ಹಾಡನ್ನು ಹಾಡಿಸಿ ಕಲಿಕೆಯ ನಿರಂತರತೆಗೆ ಒತ್ತು ನೀಡುತ್ತೇನೆ. ಇದು ಮಕ್ಕಳಿಗೆ ಕೇವಲ ಕೇಳಿಸಿಕೊಳ್ಳುವುದಕ್ಕಿಂತ ಭಿನ್ನವಾದ, ಕ್ರಿಯಾಶೀಲ ಅನುಭವವನ್ನು ನೀಡುತ್ತದೆ. ಮುಂದಿನ ಹಂತದಲ್ಲಿ, ಅವರ ದೈನಂದಿನ ಜೀವನದಲ್ಲಿ ಬಳಕೆಯಲ್ಲಿರುವ ಪದಗಳನ್ನು 'ವರ್ಡ್ ಕಾರ್ಡ್' ಮೂಲಕ ಓದಿಸುತ್ತೇನೆ. ಈ ಮೂಲಕ, ಅವರು ಪದಗಳನ್ನು ಗಮನವಿಟ್ಟು ಆಲಿಸಲು, ಅಕ್ಷರಗಳು ಮತ್ತು ಪದಗಳ ಧ್ವನಿಗಳನ್ನು ಗುರುತಿಸಲು ಹಾಗೂ ಅವುಗಳನ್ನು ಸರಿಯಾಗಿ ಉಚ್ಚರಿಸಲು ಕಲಿಯುತ್ತಾರೆ. ಹೀಗೆ ಪದಗಳು, ವಾಕ್ಯಗಳು ಮತ್ತು ವಾಕ್ಯ ಸಮೂಹಗಳ ಸ್ವರೂಪದಲ್ಲಿ ಭಾಷಾ ಅಭ್ಯಾಸದ ಚಟುವಟಿಕೆಗಳು ಮುಂದುವರಿಯುತ್ತವೆ. ಮಕ್ಕಳು ತಮಗೆ ತಿಳಿದಿರುವ ವಿಷಯಗಳಿಂದ ತಿಳಿಯದ ವಿಷಯಗಳ ಕಡೆಗೆ ಸಾಗುತ್ತಾ, ಯಾವುದೇ ಹೊರೆಯಿಲ್ಲದೆ ಆಟದ ಮೂಲಕ ಕಲಿಯುತ್ತಾರೆ. ಭಾಷೆಯನ್ನು ಇಷ್ಟು ಸರಳವಾಗಿಯೂ ಕಲಿಸಬಹುದು ಎಂಬುದನ್ನು ನಾನು ಅನುಭವದಿಂದ ಕಂಡುಕೊಂಡಿದ್ದೇನೆ.

ಇದೇ ರೀತಿಯಲ್ಲಿ, ನಾನು ಗಣಿತ ಕಲಿಕೆಯ ಚಟುವಟಿಕೆಗಳನ್ನು ಸಹ ಮಾಡಿಸುತ್ತೇನೆ. ಇದನ್ನು ನಾನು ಬೆಳಗಿನ ಉಪಹಾರದ ಸಮಯದೊಂದಿಗೆ ಬೆಸೆಯುತ್ತೇನೆ. “ಬೆಳಗಿನ ತಿಂಡಿಯಲ್ಲಿ ಎಷ್ಟು ಇಡ್ಲಿ ಅಥವಾ ಚಪಾತಿ ತಿಂದಿದ್ದೀರಿ?” ಎಂದು ಯಾವುದಾದರೂ ಒಂದು ಮಗುವಿಗೆ ಕೇಳುತ್ತೇನೆ. ಆ ಮಗು ಒಂದು ಸಂಖ್ಯೆಯನ್ನು ಹೇಳುತ್ತದೆ. ನಂತರ ನಾನು ಒಂದು, ಎರಡು, ಮೂರು ಹೀಗೆ ಸಂಖ್ಯೆಗಳ ಕಲ್ಪನೆಯನ್ನು ಮೂಡಿಸುತ್ತೇನೆ. ಮಕ್ಕಳಿಗೆ ಇನ್ನಷ್ಟು ಸ್ಪಷ್ಟತೆ ಬರಲು ಎಲೆಗಳು, ಹೂವುಗಳು, ಕಲ್ಲುಗಳು, ಬೀಜಗಳು ಮತ್ತು ಪೆನ್ಸಿಲ್‌ಗಳಂತಹ ಕಣ್ಣಿಗೆ ಕಾಣುವ ನೈಜ ವಸ್ತುಗಳ ಮೇಲೆ ಬೆರಳಿಟ್ಟು ಎಣಿಸಲು ಹೇಳುತ್ತೇನೆ. ಅವರು ವಸ್ತುಗಳನ್ನು ಸಂಖ್ಯೆಗಳಿಗೆ ತಾಳೆ ಮಾಡುತ್ತಾ ಎಣಿಸಲು ಕಲಿಯುತ್ತಾರೆ. ತಾವೇ ಸ್ವತಃ ಕೋಣೆಯಲ್ಲಿನ ಬಾಗಿಲುಗಳು, ಕಿಟಕಿಗಳು, ಫ್ಯಾನ್‌ಗಳು ಮತ್ತು ಚಾರ್ಟ್ ಪೋಸ್ಟರ್‌ಗಳಂತಹ ವಸ್ತುಗಳನ್ನು ಎಣಿಸಿ ಹೇಳುವ ಪ್ರಯತ್ನ ಮಾಡುತ್ತಾರೆ. ಅಂತೆಯೇ, ನಮ್ಮ ಅಂಗನವಾಡಿ ಕೇಂದ್ರದಲ್ಲಿರುವ ಮಕ್ಕಳ ಒಟ್ಟು ಸಂಖ್ಯೆ, ಗುಂಪುಗಳಾಗಿ ವಿಂಗಡಿಸಿದಾಗ ಪ್ರತಿ ಗುಂಪಿನಲ್ಲಿರುವ ಮಕ್ಕಳ ಸಂಖ್ಯೆ ಹಾಗೂ ಸಿರಿಧಾನ್ಯದ ಲಾಡುಗಳನ್ನು ನೀಡುವಾಗ ಅವುಗಳನ್ನು ಎಣಿಸುವುದು ಮತ್ತು ಕೂಡಿಸುವುದನ್ನು ಅಭ್ಯಾಸ ಮಾಡಿಸುತ್ತೇನೆ. ತಮ್ಮ ಸುತ್ತಮುತ್ತಲಿನ ವಸ್ತುಗಳನ್ನು ಎಣಿಸುವುದು ಮತ್ತು ಅವುಗಳನ್ನು ಕೂಡಿ-ಕಳೆದು ಹೇಳುವಲ್ಲಿ ಮಕ್ಕಳು ಬಹಳ ಖುಷಿಪಡುತ್ತಾರೆ. ಅವರಿಗೆ ತಮ್ಮ ಸುತ್ತಲಿರುವ ಸಣ್ಣ-ದೊಡ್ಡ, ದಪ್ಪ-ತೆಳು, ಹಗುರ-ಭಾರ ಹಾಗೂ ದೂರ-ಹತ್ತಿರ ಇರುವಂತಹ ವಸ್ತುಗಳನ್ನು ಹುಡುಕಿ ಹೆಸರಿಸಲು ಹೇಳುತ್ತೇನೆ. ಮಕ್ಕಳು ಈ ಗಣಿತದ ಆಟದಲ್ಲಿ ಅತ್ಯಂತ ಉತ್ಸಾಹದಿಂದ ಮತ್ತು ಸ್ಪರ್ಧಾತ್ಮಕವಾಗಿ ಭಾಗವಹಿಸುತ್ತಾರೆ.

ಚಿಕ್ಕ ಮಕ್ಕಳಿಗೆ ಕೇವಲ ಪುಸ್ತಕದ ಮೂಲಕ ಪಾಠ ಮಾಡುವುದಕ್ಕಿಂತ, ಅನುಭವಗಳ ಮೂಲಕ ಮತ್ತು ಆಟ-ಪಾಠಗಳ ಚಟುವಟಿಕೆಗಳ ಮೂಲಕ ಕಲಿಸುವುದು ಹೆಚ್ಚು ಪರಿಣಾಮಕಾರಿ ಎಂದು ನನಗೆ ಅನಿಸುತ್ತದೆ. ಇದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಯಾಗುತ್ತದೆ. ಅಷ್ಟೇ ಅಲ್ಲದೆ, ಅವರಿಗೆ ಹೊಸ ವಿಷಯಗಳನ್ನು ಕಲಿಯುವ ಆಸಕ್ತಿ ಹೆಚ್ಚಾಗುತ್ತದೆ ಮತ್ತು ಪ್ರತಿದಿನ ಏನಾದರೂ ಹೊಸದನ್ನು ಕಲಿಯುವ ಹಂಬಲವೂ ಮೂಡುತ್ತದೆ.

*ರೇಖಾ ಬಿ, ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಕೇಂದ್ರ, ದರ್ಗಾ ಕಾಲೋನಿ, ದೊಮ್ಮಸಂದ್ರ ಸರ್ಕಲ್, ಆನೇಕಲ್ ತಾಲ್ಲೂಕು, ಬೆಂಗಳೂರು, ಕರ್ನಾಟಕ.*
ಅನುವಾದ: ಆಶಾ ಸಿಂಗ್ | ಪರಿಶೀಲನೆ: ರಾಕೇಶ್ ಪೂಂಜ

---

# ಅಂಗನವಾಡಿಯಲ್ಲಿ ಕಲಿಕೆಗೆ ಪೂರಕವಾದ ವಾತಾವರಣದ ನಿರ್ಮಾಣ: ನನ್ನ ಅನುಭವಗಳು



**ಸಂಧ್ಯಾವಾಲಿ ಗುಪ್ತಾ**

ನಾನು ತಮನಾರ್ ಅಭಿವೃದ್ಧಿ ಬ್ಲಾಕ್‌ನ ಭಾಗೋರಾ-1 ಅಂಗನವಾಡಿ ಕೇಂದ್ರದಲ್ಲಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ಇದು ನನಗೆ ಕೇವಲ ಒಂದು ಉದ್ಯೋಗವಲ್ಲ, ಬದಲಾಗಿ ಸಮಾಜ ನಿರ್ಮಾಣದ ಕೆಲಸ ಎಂದು ಭಾವಿಸಿದ್ದೇನೆ. ಒಬ್ಬ ಅಂಗನವಾಡಿ ಕಾರ್ಯಕರ್ತೆಯಾಗಿ, ಮೊದಲನೆಯದಾಗಿ ಮಕ್ಕಳಿಗೆ ಅನುಕೂಲವಾಗುವಂತಹ ಸ್ನೇಹಪೂರ್ಣ ವಾತಾವರಣವನ್ನು ನಿರ್ಮಿಸುವುದು ಏಕೆ ಅಗತ್ಯ ಎಂಬುದು ನಮಗೆ ತಿಳಿದಿರಬೇಕು. ಎರಡನೆಯದಾಗಿ, ಮಕ್ಕಳ ಅಗತ್ಯಗಳನ್ನು ಅರ್ಥಮಾಡಿಕೊಂಡು ಕಲಿಕೆಗೆ ಪೂರಕವಾದ ಪರಿಸರವನ್ನು ಹೇಗೆ ಸಿದ್ಧಪಡಿಸಬಹುದು ಎಂಬುದು ಮುಖ್ಯವಾಗಿದೆ. ಇಂತಹ ಪೂರಕ ವಾತಾವರಣವನ್ನು ನಿರ್ಮಿಸಲು ಮಕ್ಕಳಿಗೆ ಏನು ಇಷ್ಟವಾಗುತ್ತದೆ, ಮಕ್ಕಳ ಸುತ್ತಮುತ್ತಲಿನ ಪರಿಸರದಲ್ಲಿ ಏನೇನು ಲಭ್ಯವಿದೆ, ಮಕ್ಕಳು ತಮ್ಮೊಂದಿಗೆ ಅನೇಕ ಅನುಭವಗಳನ್ನು ಹೊತ್ತು ತರುತ್ತಾರೆ, ಈ ಅನುಭವಗಳಿಗೆ ಕೇಂದ್ರದಲ್ಲಿ ಹೇಗೆ ಸ್ಥಾನ ನೀಡಬಹುದು ಈ ಮುಂತಾದ ಅಂಶಗಳಿಗೆ ಗಮನ ಕೊಡುವುದು ಮುಖ್ಯ.

ಮಕ್ಕಳಿಗೆ ಕಲಿಕೆಗೆ ಸಕಾರಾತ್ಮಕ ವಾತಾವರಣವನ್ನು ನಿರ್ಮಿಸುವ ಪ್ರಕ್ರಿಯೆಯು ಅವರು ಅಂಗನವಾಡಿಗೆ ಕಾಲಿಟ್ಟ ಕ್ಷಣದಿಂದಲೇ ಪ್ರಾರಂಭವಾಗುತ್ತದೆ. ಇದಕ್ಕಾಗಿ ನಾನು ನನ್ನ ಅಂಗನವಾಡಿಯ ಮುಖ್ಯ ದ್ವಾರದಲ್ಲಿ 'ಸ್ವಾಗತ ಚಾರ್ಟ್' ಅನ್ನು ಹಾಕಿದ್ದೇನೆ. ಈ ಚಾರ್ಟ್‌ನಲ್ಲಿ ನಮಸ್ತೆ, ತಬ್ಬಿಕೊಳ್ಳುವುದು, ಕೈಕುಲುಕುವುದು, ಮೊಣಕೈ ಮುಟ್ಟಿಸುವುದು ಮತ್ತು ಹೈ-ಫೈ ಮುಂತಾದ ಶುಭಾಶಯಗಳ ಚಿಹ್ನೆಗಳನ್ನು ಬಿಡಿಸಲಾಗಿದೆ. ಮಕ್ಕಳು ತಮಗೆ ಇಷ್ಟವಾದ ಶುಭಾಶಯದ ಚಿತ್ರವನ್ನು ಮುಟ್ಟುತ್ತಾರೆ ಮತ್ತು ನಾನು ಅದರಂತೆಯೇ ಪ್ರತಿಯೊಬ್ಬ ಮಗುವನ್ನು ಸ್ವಾಗತಿಸುತ್ತೇನೆ. ಈ ಆರಂಭಿಕ ಮೋಜಿನ ಸ್ವಾಗತವು ನನ್ನ ಮತ್ತು ಮಕ್ಕಳ ನಡುವೆ ಆತ್ಮೀಯ ಸಂಬಂಧವನ್ನು ಬೆಳೆಸುತ್ತದೆ.

ಮಕ್ಕಳು ಆಟವಾಡುತ್ತಾ, ತಮ್ಮ ಸುತ್ತಮುತ್ತಲಿನ ಪರಿಸರದೊಂದಿಗೆ ಸಂವಾದ ನಡೆಸುತ್ತಾ ಕಲಿಯುತ್ತಾರೆ. ಅವರು ನೋಡಬಹುದಾದ, ಮುಟ್ಟಬಹುದಾದ ಮತ್ತು ಮಾತನಾಡಬಹುದಾದ ವಿವಿಧ ಸಾಮಗ್ರಿಗಳನ್ನು ನಾನು ತಯಾರಿಸಿದ್ದೇನೆ. ಉದಾಹರಣೆಗೆ—ಹೆಸರುಗಳ ಚಾರ್ಟ್, ನಿಯಮಗಳ ಚಾರ್ಟ್, ರ್‍ಯಾಪರ್ ಚಾರ್ಟ್, ಹಣ್ಣು, ತರಕಾರಿ, ಪ್ರಾಣಿ-ಪಕ್ಷಿ, ಸಂಚಾರ ನಿಯಮ (ಟ್ರಾಫಿಕ್), ಹವಾಮಾನ ಚಾರ್ಟ್, ಕ್ಯಾಲೆಂಡರ್ ಇತ್ಯಾದಿ. ಮಕ್ಕಳು ಈ ಚಾರ್ಟ್‌ಗಳನ್ನು ನೋಡುತ್ತಾರೆ ಮತ್ತು ತಮಗೆ ತಿಳಿದಿರುವ ವಸ್ತುಗಳ ಹೆಸರುಗಳನ್ನು ಪುನರಾವರ್ತಿಸುತ್ತಾರೆ. ತಮಗೆ ತಿಳಿಯದ ಹೆಸರುಗಳನ್ನು ನನ್ನನ್ನು ಕೇಳಿ ತಿಳಿದುಕೊಳ್ಳುತ್ತಾರೆ ಮತ್ತು ನಂತರ ಒಬ್ಬರಿಗೊಬ್ಬರು ಹಂಚಿಕೊಳ್ಳುತ್ತಾರೆ.

ಪ್ರತಿ ತಿಂಗಳು ಆಯ್ದ ವಿಷಯಕ್ಕೆ ಅನುಗುಣವಾಗಿ ಮಕ್ಕಳೊಂದಿಗೆ ಚಟುವಟಿಕೆಗಳು ನಡೆಯುತ್ತವೆ. ಆ ತಿಂಗಳ ವಿಷಯಕ್ಕೆ ಸಂಬಂಧಿಸಿದ ಸಂಭಾಷಣೆ, ಹಾಡು, ಕವಿತೆ, ಕಥೆ, ಆಟ ಮತ್ತು ಚಿತ್ರಕಲೆ ಮುಂತಾದ ಕಾರ್ಯಕ್ರಮಗಳನ್ನು ಅಂಗನವಾಡಿಯಲ್ಲಿ ಆಯೋಜಿಸುತ್ತೇನೆ. ಉದಾಹರಣೆಗೆ, ಮಕ್ಕಳೊಂದಿಗೆ ಅವರ ಮಾತೃಭಾಷೆಯಲ್ಲಿಯೇ ಸಹಜವಾಗಿ ಮಾತನಾಡುತ್ತಾ ಹೀಗೆ ಕೇಳುತ್ತೇನೆ: "ಹೇಳಿ ನೋಡೋಣ, ಈಗ ಯಾವ ಕಾಲ?"

ಮಕ್ಕಳು: "ಮಳೆಗಾಲ!"

ನಾನು: "ಸರಿ, ಹಾಗಾದರೆ ನಾವೆಲ್ಲರೂ ಸೇರಿ 'ಮಳೆ'ಗೆ ಸಂಬಂಧಿಸಿದ ಒಂದು ಹಾಡನ್ನು ಹಾಡೋಣ. ನಾನು ಹೇಗೆ ಹಾಡುತ್ತಾ ಹಾವಭಾವ ಮಾಡುತ್ತೇನೋ, ನೀವೂ ಹಾಗೆಯೇ ಮಾಡಿ."

ಹಾಡಿನ ನಂತರ ಮಳೆಯ ಬಗ್ಗೆ ಮಕ್ಕಳೊಂದಿಗೆ ಸಂಭಾಷಣೆ ನಡೆಯುತ್ತದೆ. ನಾನು ಪುನಃ ಕೇಳುತ್ತೇನೆ: "ಸರಿ ಮಕ್ಕಳೇ, ಈ ಮಳೆಗಾಲದಲ್ಲಿ ನಾವು ಏನೇನು ವಸ್ತುಗಳನ್ನು ಬಳಸುತ್ತೇವೆ?" ಮಕ್ಕಳು: "ರೈನ್‌ಕೋಟ್, ಛತ್ರಿ, ಪ್ಲಾಸ್ಟಿಕ್ ಶೂ, ಕಾಗದದ ದೋಣಿ, ಪ್ಲಾಸ್ಟಿಕ್ ಹಾಳೆ..." ಹೀಗೆ ತಮಗೆ ತಿಳಿದಿದ್ದನ್ನು ಹೇಳುತ್ತಾರೆ.

ಅವರು ಹೇಳಿದ ಈ ಎಲ್ಲಾ ವಸ್ತುಗಳ ಹೆಸರುಗಳನ್ನು ನಾನು ಒಂದು ಚಾರ್ಟ್ ಮೇಲೆ ಬರೆಯುತ್ತೇನೆ. ನಂತರ ಅದನ್ನು 'ಹವಾಮಾನ ಚಾರ್ಟ್' ರೂಪದಲ್ಲಿ ಸಿದ್ಧಪಡಿಸಿ ಅಂಗನವಾಡಿ ಕೇಂದ್ರದಲ್ಲಿ ಪ್ರದರ್ಶಿಸುತ್ತೇನೆ.

ಮಕ್ಕಳು ದಿನನಿತ್ಯ ತಮ್ಮ ಸುತ್ತಮುತ್ತ ವಿವಿಧ ವಸ್ತುಗಳ ಬಳಕೆಯನ್ನು ಗಮನಿಸುತ್ತಾರೆ. ಅವರ ಹತ್ತಿರ ಈ ಬಗ್ಗೆ ಹಂಚಿಕೊಳ್ಳಲು ಸಾಕಷ್ಟು ವಿಷಯಗಳು ಮತ್ತು ವೈಯಕ್ತಿಕ ಅನುಭವಗಳಿರುತ್ತವೆ. ಉದಾಹರಣೆಗೆ, ಹಲ್ಲುಜ್ಜಲು ಬೇರೆ ಬೇರೆ ಬಗೆಯ ಟೂತ್‌ಪೇಸ್ಟ್ ಬಳಸುವುದು, ಸಾಮಾನು ಖರೀದಿಸಲು ಹಣ ಬೇಕು ಎಂಬ ಜ್ಞಾನ, ಅಡುಗೆಗೆ ಬಳಸುವ ತರಕಾರಿ-ಮಸಾಲೆಗಳು ಹಾಗೂ ಮಾರುಕಟ್ಟೆಯಲ್ಲಿ ಸಿಗುವ ತಿಂಡಿಗಳ ಬಗ್ಗೆ ಅವರಿಗೆ ಮೊದಲೇ ತಿಳಿದಿರುತ್ತದೆ. ಇಂತಹ ಹತ್ತು-ಹಲವು ವಿಷಯಗಳ ಬಗ್ಗೆ ಚರ್ಚಿಸಲು, ನಾನು ಸಂಬಂಧಿತ ವಸ್ತುಗಳ ರ್‍ಯಾಪರ್‌ಗಳನ್ನು ಸಂಗ್ರಹಿಸಿ 'ರ್‍ಯಾಪರ್ ಚಾರ್ಟ್' ತಯಾರಿಸಿ ಅಂಗನವಾಡಿಯಲ್ಲಿ ಪ್ರದರ್ಶಿಸಿದ್ದೇನೆ.

ಮಕ್ಕಳು ಈ ಚಾರ್ಟ್‌ಗಳನ್ನು ಆಸಕ್ತಿಯಿಂದ ನೋಡುತ್ತಾರೆ ಮತ್ತು ಅದಕ್ಕೆ ಸಂಬಂಧಿಸಿದ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. "ನಾನು ಪ್ರತಿದಿನ ಹಲ್ಲುಜ್ಜುತ್ತೇನೆ", "ಪ್ರತಿದಿನ ಸ್ನಾನ ಮಾಡುತ್ತೇನೆ", "ಇಂದು ಇದನ್ನು ತಿಂದೆ" ಎಂದು ಮುಕ್ತವಾಗಿ ಮಾತನಾಡುತ್ತಾರೆ. ಅಷ್ಟೇ ಅಲ್ಲದೆ, ಈ ಚಾರ್ಟ್‌ಗಳು ಅವರಿಗೆ ಅಕ್ಷರಗಳ ಪರಿಚಯವನ್ನೂ ಮಾಡಿಕೊಡುತ್ತವೆ. ಇಂತಹ ಅಭಿವ್ಯಕ್ತಿಯ ಅವಕಾಶಗಳನ್ನು ಒದಗಿಸುವುದರಿಂದ ಮಕ್ಕಳು ಸಹಜವಾಗಿಯೇ ಸುರಕ್ಷಿತ ಭಾವನೆಯನ್ನು ಅನುಭವಿಸುತ್ತಾರೆ.

ನನ್ನ ಕೇಂದ್ರಕ್ಕೆ ಬರುವ ಮಕ್ಕಳ ಮನೆಗಳಲ್ಲಿ ಸಾಕಷ್ಟು ಸಂಪನ್ಮೂಲಗಳು ಅಥವಾ ಪೂರಕ ಶೈಕ್ಷಣಿಕ ವಾತಾವರಣ ಲಭ್ಯವಿರುವುದಿಲ್ಲ. ಆದರೆ ಅಂಗನವಾಡಿಯಲ್ಲಿ ಅವರಿಗೆ ಕಲಿಕಾ ಸಾಮಗ್ರಿಗಳ ಕೊರತೆಯಾಗಬಾರದು ಮತ್ತು ಅವರಲ್ಲಿ ಕಲಿಕೆಯ ಆಸಕ್ತಿ ಸದಾ ಇರಬೇಕಾಗಿರುವುದು ಬಹಳ ಮುಖ್ಯ ಎಂದು ನನಗೆ ಅನಿಸುತ್ತದೆ. ಮಕ್ಕಳ ಕಲಿಕೆಗಾಗಿ ಒಂದು ಪ್ರೇರಕ ವಾತಾವರಣವನ್ನು ಸಿದ್ಧಪಡಿಸಲು, ನಾನು ಕಡಿಮೆ ವೆಚ್ಚದ ಮತ್ತು ಸುತ್ತಮುತ್ತ ಸುಲಭವಾಗಿ ದೊರೆಯುವ ವಸ್ತುಗಳನ್ನು ಸಂಗ್ರಹಿಸಿ ಅನೇಕ ಬೋಧನಾ ಸಾಮಗ್ರಿಗಳನ್ನು ತಯಾರಿಸಿದ್ದೇನೆ. ಇವುಗಳ ಸಹಾಯದಿಂದ ಕಲಿಕೆಗೆ ಪೂರಕವಾದ ಪರಿಸರ ನಿರ್ಮಿಸಲು ಸಾಧ್ಯವಾಗುತ್ತಿದೆ; ಇದು ಮಕ್ಕಳ ಕಲಿಕಾಮಟ್ಟದ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತಿದೆ. ತಮ್ಮ ಮಕ್ಕಳು ವಿವಿಧ ವಸ್ತುಗಳು ಮತ್ತು ಘಟನೆಗಳ ಬಗ್ಗೆ ಆತ್ಮವಿಶ್ವಾಸದಿಂದ ಮಾತನಾಡುವುದನ್ನು ಕಂಡು ಕೇಂದ್ರಕ್ಕೆ ಬರುವ ಪೋಷಕರಲ್ಲಿ ನಂಬಿಕೆ ಮೂಡುತ್ತಿದೆ. ಪೋಷಕರ ಈ ಸಹಭಾಗಿತ್ವವು ಮಕ್ಕಳ ಹಾಜರಾತಿಯನ್ನು ಹೆಚ್ಚಿಸಲು ನೆರವಾಗಿದೆ.

ಕಲಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸುವಲ್ಲಿ ಸೆಕ್ಟರ್ ಮಟ್ಟದಲ್ಲಿ ನಡೆಯುವ ಸಭೆಗಳು ಮತ್ತು ಕಾರ್ಯಾಗಾರಗಳಿಂದ ಸಾಕಷ್ಟು ಸಹಾಯ ದೊರೆತಿದೆ ಎಂಬುದನ್ನು ನಾನು ಒತ್ತಿ ಹೇಳಲು ಬಯಸುತ್ತೇನೆ. ಈ ವೇದಿಕೆಗಳಲ್ಲಿ ದೊರೆಯುವ ಸಲಹೆಗಳಿಂದ ಕಲಿಕೆಯನ್ನು ಮೋಜಿನ ಚಟುವಟಿಕೆಯನ್ನಾಗಿ ಮಾಡಬಹುದು ಎಂಬುದು ನಮಗೆ ಮನವರಿಕೆಯಾಯಿತು. ಈ ಸಭೆಗಳಲ್ಲಿ ನಾವು ನಮ್ಮ ಕೆಲಸದ ಸವಾಲುಗಳು ಮತ್ತು ಯಶಸ್ಸುಗಳನ್ನು ಮುಕ್ತವಾಗಿ ಹಂಚಿಕೊಳ್ಳಬಹುದಾಗಿದ್ದು, ಅವು ನಮಗೆ ಕೆಲಸ ಮಾಡಲು ಬಹಳ ಪ್ರೋತ್ಸಾಹದಾಯಕವಾಗಿರುತ್ತದೆ.

ಸಂಧ್ಯಾವಳಿ ಗುಪ್ತ, ಅಂಗನವಾಡಿ ಭಾಗೋರ-1, ಹಮೀರ್‌ಪುರ ಸೆಕ್ಟರ್, ತಮ್ನಾರ್ ಪ್ರಾಜೆಕ್ಟ್, ರಾಯ್‌ಗಢ್, ಛತ್ತೀಸ್‌ಗಢ.
ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಅನುರೂಪಾ ರವೀಂದ್ರ

# ನನ್ನ ಅಂಗನವಾಡಿ ಕೇಂದ್ರದ ಬದಲಾವಣೆಯ ಕಥೆ – ಸುನೀತಾ ಸಿಂಗ್

ನಿವೇದಿತಾ ತಿವಾರಿ

**ಭೋಪಾಲ್ ನಗರದ ದಮ್‌ಖೇಡಾ ಸೆಕ್ಟರ್ 1 ಪ್ರದೇಶವು ಕಿರಿದಾದ ಗಲ್ಲಿಗಳು, ಕಚ್ಚಾ ರಸ್ತೆಗಳು ಮತ್ತು ಸಣ್ಣ ಸಣ್ಣ ಗುಡಿಸಲುಗಳಿಂದ ಕೂಡಿದೆ. 2006 ರಲ್ಲಿ ಇಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಒಂದು ಅಂಗನವಾಡಿ ಕೇಂದ್ರವನ್ನು ಪ್ರಾರಂಭಿಸಲಾಯಿತು. ಅಲ್ಲಿನ ಶಿಕ್ಷಕಿ ಸುನೀತಾ ಸಿಂಗ್ ಅವರು ತಮ್ಮ ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದಿಂದ ಆ ಕೇಂದ್ರದ ರೂಪವನ್ನೇ ಬದಲಿಸಿದರು. ಮಕ್ಕಳು ಸಂತೋಷದಿಂದ ಆಟವಾಡುತ್ತಾ ಕಲಿಯುವಂತಹ ಒಂದು ಸುಂದರ ತಾಣವನ್ನಾಗಿ ಅದನ್ನು ರೂಪಿಸಿದರು. ಆ ಸಮುದಾಯಕ್ಕೆ ಆಶಾಕಿರಣವಾಗಿ ಮಾರ್ಪಟ್ಟಿರುವ ಈ ಅಂಗನವಾಡಿ ಕೇಂದ್ರದ ಯಶಸ್ಸಿನ ಪಯಣವನ್ನು ಈ ಲೇಖನದಲ್ಲಿ ವಿವರಿಲಾಗಿದೆ.**

## ಸೂರಿಲ್ಲದ ಶಾಲೆ

ಅಂಗನವಾಡಿ ಕೇಂದ್ರದ ಘೋಷಣೆಯಾಯಿತು, ಶಿಕ್ಷಕಿ ಮತ್ತು ಸಹಾಯಕಿಯ ನೇಮಕಾತಿಯೂ ಆಯಿತು; ಆದರೆ ಇದಕ್ಕೆ ಯಾವುದೇ ಕೊಠಡಿ ಸಿಗಲಿಲ್ಲ. ಹೀಗಾಗಿ ಕೆಲವೊಮ್ಮೆ ದೇವಸ್ಥಾನದ ಕಟ್ಟೆಯ ಮೇಲೆ, ಇನ್ನು ಕೆಲವೊಮ್ಮೆ ತೆರೆದ ಆಕಾಶದ ಕೆಳಗೆ ಮಕ್ಕಳಿಗೆ ಪಾಠ ಮಾಡಲಾಗುತ್ತಿತ್ತು. ಬಿಸಿಲು, ಮಳೆ, ಚಳಿ—ಹೀಗೆ ಪ್ರತಿ ಋತುವಿನಲ್ಲೂ ಹೊಸ ಸವಾಲುಗಳಿದ್ದವು. ಅಲ್ಲಿದ್ದ ದೊಡ್ಡ ಸವಾಲೆಂದರೆ, ಅಂಗನವಾಡಿಯ ಬಗ್ಗೆ ಸಮುದಾಯಕ್ಕಿದ್ದ ಸಂಕೋಚ ಮತ್ತು ಶಂಕೆ ತುಂಬಿದ ಮನೋಭಾವ. ಶಿಕ್ಷಕರಾದ ಸುನೀತಾ ಮತ್ತು ಸಹಾಯಕಿ ಪಾರ್ವತಿ ಮನೆ ಮನೆಗೆ ತೆರಳಿ ತಾಯಂದಿರೊಂದಿಗೆ ಮಾತನಾಡಿ, 3 ರಿಂದ 6 ವರ್ಷದ ಮಕ್ಕಳಿಗೆ ಅಂಗನವಾಡಿ ಶಿಕ್ಷಣ ಏಕೆ ಅಗತ್ಯ ಎಂದು ತಿಳಿಹೇಳುತ್ತಿದ್ದರು. ಕ್ರಮೇಣ ಹಲವು ತಾಯಂದಿರು ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸಲು ಪ್ರಾರಂಭಿಸಿದರು.

ಮಕ್ಕಳ ಸಂಖ್ಯೆ ಹೆಚ್ಚಾದಾಗ, 2015ರಲ್ಲಿ ಶಾಲೆಯ ಒಂದು ಕೊಠಡಿಯನ್ನು ಅಂಗನವಾಡಿಗೆ ನೀಡಲಾಯಿತು. ಅಂದರೆ 9 ವರ್ಷಗಳ ಸತತ ಪ್ರಯತ್ನದ ನಂತರ ಒಂದು ಕೊಠಡಿ ಸಿಕ್ಕಿತು. ಕೊಠಡಿ ಸಿಕ್ಕಿತಾದರೂ ಅದು ಮಕ್ಕಳಿಗಾಗಿ ಸಿದ್ಧವಾಗಿರಲಿಲ್ಲ. ಶಾಲಾ ಆವರಣದ ಒಂದು ಮೂಲೆಯಲ್ಲಿದ್ದ ಈ ಕೊಠಡಿಯ ಪಕ್ಕದಲ್ಲೇ ದೊಡ್ಡ ಚರಂಡಿಯಿತ್ತು ಮತ್ತು ಅದರ ಸುತ್ತಲೂ ಕಸದ ರಾಶಿ ಇರುತ್ತಿತ್ತು. ಅಲ್ಲಿನ ಸ್ಥಿತಿ ಎಷ್ಟು ಕೆಟ್ಟದಾಗಿತ್ತೆಂದರೆ, ಕುಳಿತುಕೊಳ್ಳಲು ಮೂಗಿಗೆ ಮಾಸ್ಕ್ ಧರಿಸಬೇಕಾಗುತ್ತಿತ್ತು. ಅಷ್ಟೇ ಅಲ್ಲದೆ, ರಾತ್ರಿ ವೇಳೆಯಲ್ಲಿ ಸಮಾಜವಿರೋಧಿಗಳು ಅಂಗನವಾಡಿ ಕೊಠಡಿಯ ಮುಂದೆ ಮದ್ಯದ ಬಾಟಲಿ ಮತ್ತು ಕಸವನ್ನು ಎಸೆದು ಹೋಗುತ್ತಿದ್ದರು. 2020ರಲ್ಲಿ ಕೋವಿಡ್ ಕಾರಣದಿಂದಾಗಿ ಶಾಲಾ-ಪೂರ್ವ ಶಿಕ್ಷಣದ ಕೆಲಸ ಮತ್ತಷ್ಟು ಕಷ್ಟಕರವಾಯಿತು.




ಚಿತ್ರ 1: ವಿವಿಧ ಚಟುವಟಿಕೆಗಳಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿರುವ ಮಕ್ಕಳು.

ನವೆಂಬರ್ 2022ರಲ್ಲಿ ಶಾಲಾ-ಪೂರ್ವ ಶಿಕ್ಷಣಕ್ಕಾಗಿ ತರಬೇತಿ ನಡೆಯಿತು. ಈ ತರಬೇತಿಯಿಂದ ಸುನೀತಾ ಮತ್ತು ಅವರ ಸಹಾಯಕಿಗೆ ಹೊಸ ಶಕ್ತಿ ಹಾಗೂ ಪ್ರೇರಣೆ ದೊರೆಯಿತು. ಅವರು ಸಮುದಾಯದೊಂದಿಗೆ ನಿಯತವಾಗಿ ಸಂವಹನ ನಡೆಸಲು ಪ್ರಾರಂಭಿಸಿದ್ದು ಮಾತ್ರವಲ್ಲದೆ, ಅಂಗನವಾಡಿಗೂ ಹೊಸ ರೂಪ ನೀಡಿದರು. ಬಿಳಿ ಚೀಲಗಳನ್ನು ಹೊಲಿದು ಮಕ್ಕಳು ಕುಳಿತುಕೊಳ್ಳಲು ಚಾಪೆಗಳನ್ನು ತಯಾರಿಸಿದರು ಮತ್ತು ಗೋಡೆಗಳನ್ನು ವಿವಿಧ ಬಣ್ಣದ ಚಾರ್ಟ್‌ಗಳಿಂದ ಅಲಂಕರಿಸಿದರು. ಇವುಗಳಲ್ಲಿ ಕಥೆ-ಕವನಗಳ ಚಾರ್ಟ್‌ಗಳು, ಅಕ್ಷರ-ಸಂಖ್ಯೆಗಳು ಹಾಗೂ ಹಣ್ಣು ಮತ್ತು ತರಕಾರಿಗಳ ಚಿತ್ರಪಟಗಳು ಸೇರಿದ್ದವು. ಕೇಂದ್ರದ ಪ್ರತಿಯೊಂದು ಮೂಲೆಯೂ ಮಕ್ಕಳನ್ನು ಸ್ವಾಗತಿಸಲು ಸಿದ್ಧವಾಯಿತು.

## ಆಟ ಮತ್ತು ಸೃಜನಶೀಲತೆಗೆ ಒತ್ತು

ಆದರೆ, ಆಗಲೂ ಮಕ್ಕಳು ಕೇವಲ ಊಟ ಮಾಡಲು ಬಂದು ಮನೆಗೆ ಮರಳುತ್ತಿದ್ದರು. ಅಂಗನವಾಡಿಯ ಹೊಸ ಸ್ವರೂಪವನ್ನು ನೋಡಿ ಸಮುದಾಯದ ಜನರು ಕ್ರಮೇಣ ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದರು; ಅಂಗನವಾಡಿ ಕೇವಲ ಪೋಷಣೆಯ ಕೇಂದ್ರವಲ್ಲ, ಬದಲಾಗಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ವೇದಿಕೆಯಾಗಿದೆ ಎಂದು ಅವರಿಗೆ ಮನವರಿಕೆಯಾಯಿತು. ಸುನೀತಾರವರು ಅಂಗನವಾಡಿಯಲ್ಲಿ ಕೆಲವು ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಉದಾಹರಣೆಗೆ:

- ಚೆಂಡು, ಹಗ್ಗ ಮತ್ತು ಬ್ಲಾಕ್‌ಗಳೊಂದಿಗೆ ಆಟವಾಡುವುದು;
- ಮಕ್ಕಳ ಕೈಗುರುತುಗಳನ್ನು (ಅಂಗೈ ಅಚ್ಚು) ಮಾಡಿಸುವುದು;
- ಹೆಸರು ಮತ್ತು ವಯಸ್ಸನ್ನು ಗುರುತಿಸಿ ಬರೆಯುವುದು;



ಚಿತ್ರ 2: ಆಟದ ಮೂಲಕ ಕಲಿಕೆ.



ಚಿತ್ರ 3: ತರಕಾರಿಗಳ ಕುರಿತು ಮಕ್ಕಳೊಂದಿಗೆ ಸಂಭಾಷಣೆ.

- ಚಿತ್ರ ಬಿಡಿಸುವುದು ಮತ್ತು ಬಣ್ಣ ತುಂಬುವುದು;
- ಕಥೆ-ಕವನಗಳನ್ನು ಕೇಳುವುದು ಮತ್ತು ಹೇಳುವುದು ಇತ್ಯಾದಿ.

ಅವರು ತಮ್ಮ ಕೇಂದ್ರದಲ್ಲಿ ವ್ಯವಸ್ಥಿತ ವೇಳಾಪಟ್ಟಿಯನ್ನು ಸಹ ಸಿದ್ಧಪಡಿಸಿದರು. ಇದರಿಂದ ಮಕ್ಕಳು ನಿಯಮಿತವಾಗಿ ಬರಲಾರಂಭಿಸಿದರು. ಈಗ ಅವರು ಕೇವಲ ಊಟ ಮಾಡಿ ಹೋಗುವ ಬದಲು, ಶಾಲೆಯ ವಿವಿಧ ಚಟುವಟಿಕೆಗಳಲ್ಲೂ ಆಸಕ್ತಿ ತೋರಿಸತೊಡಗಿದರು.

## ಆನಂದದಾಯಕ ಶಿಕ್ಷಣದ ಕಲ್ಪನೆ

ಚಿಕ್ಕ ಮಕ್ಕಳ ಮೊದಲ ಶೈಕ್ಷಣಿಕ ಅನುಭವವು ಆನಂದದಾಯಕ, ಸೃಜನಶೀಲ ಮತ್ತು ಪ್ರೇರಣಾದಾಯಕವಾಗಿರಬೇಕು. ಈ ಆಲೋಚನೆಯನ್ನು ಸಾಕಾರಗೊಳಿಸಲು ಸುನೀತಾರವರು ಅಂಗನವಾಡಿ ಕೇಂದ್ರದಲ್ಲಿ 'ಕಲಿಕಾ ಮೂಲೆಗಳನ್ನು' ಸಿದ್ಧಪಡಿಸಿದರು. ಕಲಿಕೆಯ ಈ ಮೂಲೆಗಳು ಮತ್ತು ಅವುಗಳಲ್ಲಿ ಇರಿಸಲಾದ ಕೆಲವು ಸಾಮಗ್ರಿಗಳು ಹೀಗಿವೆ:

- **ಓದುವ ಮೂಲೆ:** ಬಣ್ಣ ಬಣ್ಣದ ಪುಸ್ತಕಗಳು, ಚಿತ್ರಕಥೆಗಳು ಮತ್ತು ಕಥೆ ಕಾರ್ಡ್‌ಗಳು.
- **ಆಟದ ಮೂಲೆ:** ಒಗಟುಗಳು, ಎಣಿಕೆಯ ಆಟಿಕೆಗಳು ಮತ್ತು ಬಣ್ಣದ ಬ್ಲಾಕ್‌ಗಳು.
- **ಸೃಜನಶೀಲತೆಯ ಮೂಲೆ:** ಡ್ರಾಯಿಂಗ್ ಶೀಟ್, ಕ್ರಯಾನ್ಸ್, ಮಣ್ಣು ಮತ್ತು ಇತರ ಕಲಾ ಸಾಮಗ್ರಿಗಳು.
- **ನಾಟಕ ಮತ್ತು ಅಭಿನಯದ ಮೂಲೆ:** ಪುಟ್ಟ ಉಡುಪುಗಳು, ಗೊಂಬೆಗಳು (Puppets) ಮತ್ತು ರಂಗಮಂಚದ ವ್ಯವಸ್ಥೆ.
- **ಬೌದ್ಧಿಕ ಕೌಶಲದ ಮೂಲೆ:** ಪ್ಯಾಟರ್ನ್ ಮ್ಯಾಚಿಂಗ್, ಬಣ್ಣ ಗುರುತಿಸುವಿಕೆ ಮತ್ತು ಆಕಾರಗಳನ್ನು ಕಲಿಯುವ ಚಟುವಟಿಕೆಗಳು.

ಈ ಚಟುವಟಿಕೆಗಳ ಮೂಲಕ ಮಕ್ಕಳು ಆಟವಾಡುತ್ತಲೇ ಬಣ್ಣಗಳನ್ನು ಗುರುತಿಸುವುದು, ಎಣಿಸುವುದು, ಚಿತ್ರ ಬಿಡಿಸುವುದು ಮತ್ತು ಕಥೆ ಹೇಳುವುದನ್ನು ಕಲಿಯುತ್ತಾರೆ. ಇದರಿಂದ ಅವರ ಭಾಷಾ ಬೆಳವಣಿಗೆ, ತರ್ಕಶಕ್ತಿ, ಸಾಮಾಜಿಕ ಸಹಭಾಗಿತ್ವ ಮತ್ತು ಆತ್ಮವಿಶ್ವಾಸ ಹೆಚ್ಚಾಗಿದೆ.

## ಸಮುದಾಯದ ಸಹಭಾಗಿತ್ವ

ಸುನೀತಾರವರು ಪೋಷಕರೊಂದಿಗೆ ನಿಯತವಾಗಿ ಸಂವಾದವನ್ನು ಪ್ರಾರಂಭಿಸಿದರು. ಅವರು ತಮ್ಮ ಕೆಲಸ ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಪೋಷಕರನ್ನು ಅಂಗನವಾಡಿಗೆ ಆಹ್ವಾನಿಸುತ್ತಿದ್ದರು. ಉದಾಹರಣೆಗೆ, ಅವರು ತರಕಾರಿ ಮಾರುವ ಪೋಷಕರೊಬ್ಬರಲ್ಲಿ ವಿನಂತಿಸಿ, ಒಂದು ದಿನ ಅವರ ತರಕಾರಿ ತುಂಬಿದ ತಳ್ಳುವ ಗಾಡಿಯನ್ನು ಅಂಗನವಾಡಿ ಬಳಿ ನಿಲ್ಲಿಸುವಂತೆ ಮಾಡಿದರು. ಇದರಿಂದ ಮಕ್ಕಳಿಗೆ ತರಕಾರಿಗಳ ಗುರುತಿಸುವಿಕೆ, ಮಾರುಕಟ್ಟೆಯ ಕಾರ್ಯವೈಖರಿ ಮತ್ತು ಖರೀದಿ-ಮಾರಾಟದ ಪ್ರಕ್ರಿಯೆಯನ್ನು ನೇರವಾಗಿ ಕಲಿಯುವ ಅವಕಾಶ ಸಿಕ್ಕಿತು. ಅವರು ಕಾಲಕಾಲಕ್ಕೆ ವಿವಿಧ ಪೋಷಕರೊಂದಿಗೆ ಮಾತನಾಡಿ ಇಂತಹ ಚಟುವಟಿಕೆಗಳನ್ನು ಆಯೋಜಿಸುತ್ತಿರುತ್ತಾರೆ. ಅಷ್ಟೇ ಅಲ್ಲದೆ, ಕೆಲವು ತಾಯಂದಿರು ಅಂಗನವಾಡಿಗೆ ಬಂದು ಮಕ್ಕಳೊಂದಿಗೆ ಹಾಡು, ಕವಿತೆ ಮತ್ತು ಕಥೆ ಹೇಳುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮನವೊಲಿಸಿದರು. ಅನೇಕ ತಾಯಂದಿರು ಇದರಲ್ಲಿ ಆಸಕ್ತಿ ತೋರಿ ಮಕ್ಕಳೊಂದಿಗೆ ಕಥೆ-ಕವನಗಳನ್ನು ಹಂಚಿಕೊಂಡರು.

ಸಮುದಾಯವನ್ನು ಸಕ್ರಿಯವಾಗಿರಿಸಲು ಅವರು ಸುತ್ತಮುತ್ತಲಿನ ಯುವಕರನ್ನು ಸಂಪರ್ಕಿಸಿ ಕಾಲಕಾಲಕ್ಕೆ ಹಲವು ಚಟುವಟಿಕೆಗಳನ್ನು ಆಯೋಜಿಸುತ್ತಾರೆ. ಮಣ್ಣಿನ ಮೂರ್ತಿಗಳನ್ನು ತಯಾರಿಸುವುದು, ತೆಂಗಿನ ಚಿಪ್ಪನ್ನು ಕುಂಡವಾಗಿ ಬಳಸಿ ಗಿಡಗಳನ್ನು ನೆಡುವಂತಹ ಕೆಲಸಗಳ ಮೂಲಕ ಪರಿಸರ ಕಾಳಜಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಇದರಿಂದ ಯುವಕರಲ್ಲಿ ಜಾಗೃತಿ ಮೂಡುವುದಲ್ಲದೆ, ಅಂಗನವಾಡಿಯ ಸುತ್ತಮುತ್ತಲಿನ ವಾತಾವರಣವೂ ಸಕಾರಾತ್ಮಕವಾಗುತ್ತಿದೆ. ಅದೇ ರೀತಿ ವನಮಹೋತ್ಸವ, ಮಕ್ಕಳ ದಿನಾಚರಣೆ ಮತ್ತು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭಗಳಲ್ಲಿಯೂ ಅವರು ಸಮುದಾಯದ ಹಿರಿಯ ಮಕ್ಕಳ ಸಹಾಯ ಪಡೆಯುತ್ತಾರೆ.

ಸಮುದಾಯ ಮತ್ತು ಮಕ್ಕಳ ನಡುವಿನ ಸಂಬಂಧವನ್ನು ಗಟ್ಟಿಗೊಳಿಸಲು ಸುನೀತಾರವರು 'ಬಾಲ ಚೌಪಾಲ' ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಇದು ಕೇವಲ ಒಂದು ಕಾರ್ಯಕ್ರಮವಾಗಿರದೆ, ಮಕ್ಕಳು ಆತ್ಮವಿಶ್ವಾಸದಿಂದ ಸಂವಹನ ನಡೆಸಲು ಒಂದು ವೇದಿಕೆಯಾಗಿತ್ತು. ಇಲ್ಲಿ ಮಕ್ಕಳು ಕವಿತೆಗಳನ್ನು ವಾಚಿಸುತ್ತಿದ್ದರು, ಸಣ್ಣ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು ಹಾಗೂ ಹಾಡು ಮತ್ತು ಕಥೆಗಳ ಮೂಲಕ ತಮ್ಮ ಸೃಜನಶೀಲತೆಯನ್ನು ಪ್ರದರ್ಶಿಸುತ್ತಿದ್ದರು. ಪೋಷಕರು ತಮ್ಮ ಮಕ್ಕಳು ವೇದಿಕೆಯ ಮೇಲೆ ನಿಂತು ಪೂರ್ಣ ಆತ್ಮವಿಶ್ವಾಸದಿಂದ ಮಾತನಾಡುವುದನ್ನು ಕಂಡಾಗ ಅವರಿಗೆ ಅಂಗನವಾಡಿಯ ನಿಜವಾದ ಶಕ್ತಿಯ ಅರಿವಾಯಿತು.

ಸುನೀತಾರವರು ಒಂದು ವಾಟ್ಸಾಪ್ ಗ್ರೂಪ್ ರಚಿಸಿ ಅದರಲ್ಲಿ ಎಲ್ಲಾ ಪೋಷಕರನ್ನು ಸೇರಿಸಿದ್ದಾರೆ. ಈ ಗ್ರೂಪ್‌ನಲ್ಲಿ ಅವರು ನಿಯತವಾಗಿ ಮಕ್ಕಳ ಫೋಟೋಗಳು, ಚಟುವಟಿಕೆಗಳ ವೀಡಿಯೊಗಳು ಮತ್ತು ಅವರ ಕಲಿಕೆಯ ಪ್ರಗತಿಯನ್ನು ಹಂಚಿಕೊಳ್ಳುತ್ತಾರೆ. ಪೋಷಕರು ತಮ್ಮ ಮಕ್ಕಳು



ಚಿತ್ರ 4: ಮುಖವಾಡ ಬಳಸಿ ಮಕ್ಕಳಿಗೆ ಚಟುವಟಿಕೆ ಮಾಡಿಸುತ್ತಿರುವ ಸುನೀತಾ.

ನಗುತ್ತಾ, ಆಟವಾಡುತ್ತಾ ಹಾಗೂ ಕವಿತೆ ಹೇಳುತ್ತಾ ಹೊಸ ವಿಷಯಗಳನ್ನು ಕಲಿಯುವುದನ್ನು ನೋಡಿದಾಗ, ಅವರ ನಂಬಿಕೆ ಮತ್ತಷ್ಟು ಗಟ್ಟಿಯಾಯಿತು. ಈಗ ಪರಿಸ್ಥಿತಿ ಹೇಗಿದೆಯೆಂದರೆ, ಪೋಷಕರು ತಾವಾಗಿಯೇ ಬಂದು "ಇಂದು ನನ್ನ ಮಗು ಹೊಸತೇನು ಕಲಿಯಿತು?" ಎಂದು ವಿಚಾರಿಸುತ್ತಾರೆ. ಇದರಿಂದ ಮಕ್ಕಳು ಸಮಯಕ್ಕೆ ಸರಿಯಾಗಿ ಬರತೊಡಗಿದರು, ಶಿಕ್ಷಣದಲ್ಲಿ ನಿರಂತರತೆ ಮೂಡಿತು ಮತ್ತು ಅವರ ಆಸಕ್ತಿಯೂ ಕುಗ್ಗಲಿಲ್ಲ.

## ಸಹಯೋಗದ ಫಲಿತಾಂಶ

ಅಂಗನವಾಡಿಯ ಕೆಲಸಗಳನ್ನು ಸುನೀತಾ ಮತ್ತು ಅವರ ಸಹಾಯಕಿ ಜೊತೆಯಾಗಿ ಮಾಡುತ್ತಾರೆ. ಮಕ್ಕಳೊಂದಿಗೆ ನಡೆಸುವ ಎಲ್ಲಾ ಚಟುವಟಿಕೆಗಳನ್ನು ಸಹಾಯಕಿಯೂ ಕಲಿಯಲು ಸುನೀತಾರವರು ನೆರವಾಗಿದ್ದಾರೆ.

ಅಂಗನವಾಡಿಯ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಹಾಯಕಿಯು ಪ್ರಮುಖ ಪಾತ್ರ ವಹಿಸುತ್ತಾರೆ. ಉದಾಹರಣೆಗೆ:

- ವಿಷಯಾಧಾರಿತ ಮೂಲೆಗಳನ್ನು ನಿರ್ಮಿಸುವುದು—ಜೂಲಾ ಲೈಬ್ರರಿ, ಕಲಾ ಚಟುವಟಿಕೆ ಮೂಲೆ, ಓದುವ ಮೂಲೆ ಮತ್ತು ಆಟದ ಮೂಲೆ.
- ಕಲ್ಲುಗಳು, ಎಲೆಗಳು, ಬೇವರಿ ಹಣ್ಣುಗಳು, ಬಾಟಲಿ ಮುಚ್ಚಳಗಳು ಮತ್ತು ಖಾಲಿ ಬಾಟಲಿಗಳಂತಹ ಸ್ಥಳೀಯ ವಸ್ತುಗಳಿಂದ ಆಕರ್ಷಕ ಕಲಿಕಾ ಸಾಮಗ್ರಿಗಳನ್ನು ತಯಾರಿಸುವುದು.
- ಕಾಲಕಾಲಕ್ಕೆ ಚಾರ್ಟ್‌ಗಳು ಮತ್ತು ಪೋಸ್ಟರ್‌ಗಳನ್ನು ಬದಲಾಯಿಸಿ ಕೇಂದ್ರವನ್ನು ಮಕ್ಕಳಿಗೆ ಇಷ್ಟವಾಗುವಂತೆ ಮಾಡುವುದು.
- ಮಣ್ಣಿನ ಆಟಿಕೆಗಳನ್ನು ತಯಾರಿಸಲು ಮಣ್ಣನ್ನು ತರುವುದು, ಅದನ್ನು ಶೋಧಿಸಿ ಮೃದುವಾಗಿ ಸಿದ್ಧಪಡಿಸಿಡುವುದು.
- ಎಣಿಸುವ, ಕೂಡುವ, ಕಳೆಯುವ ಮತ್ತು ವರ್ಗೀಕರಿಸುವ ಚಟುವಟಿಕೆಗಳಿಗಾಗಿ ಕಲ್ಲುಗಳನ್ನು ಸಂಗ್ರಹಿಸಿ, ಅವುಗಳಿಗೆ ಬಣ್ಣ ಹಚ್ಚಿ ಸಿದ್ಧಪಡಿಸುವುದು.

## ಮಕ್ಕಳ ಸೃಜನಾತ್ಮಕ ಅಭಿವೃದ್ಧಿಗೆ ಕಲಾ ಚಟುವಟಿಕೆಗಳು

ಮಕ್ಕಳ ಸೃಜನಶೀಲ ಬೆಳವಣಿಗೆಗಾಗಿ ಸುನೀತಾ ಅವರು ಅನೇಕ ಆಸಕ್ತಿದಾಯಕ ಚಟುವಟಿಕೆಗಳನ್ನು ಆಯೋಜಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ: ದಾರಗಳಿಗೆ ಬಣ್ಣ ಹಚ್ಚಿ ಚಿತ್ರಗಳನ್ನು ಬಿಡಿಸುವುದು, ಕೈ ಬೆರಳುಗಳಿಂದ ವಿನ್ಯಾಸಗಳನ್ನು ಮಾಡುವುದು ಮತ್ತು ತರಕಾರಿಗಳ ಅಚ್ಚು ಬಳಸಿ ಚಿತ್ರಗಳನ್ನು ತಯಾರಿಸುವುದು.

ಮಕ್ಕಳ ಕಲಿಕೆಗೆ ಯಾವುದೇ ಅಡೆತಡೆ ಉಂಟಾಗಬಾರದು ಎನ್ನುವ ಉದ್ದೇಶದಿಂದ ಅವರು ಲಭ್ಯವಿರುವ ವಸ್ತುಗಳನ್ನು ಹೊಸ ರೀತಿಯಲ್ಲಿ ಬಳಸುತ್ತಾರೆ. ಅವುಗಳಲ್ಲಿ ಗಮನಾರ್ಹವಾದವುಗಳೆಂದರೆ:

- ಮನೆಗೆ ನೀಡುವ ಪೌಷ್ಟಿಕ ಆಹಾರದ ಖಾಲಿ ಚೀಲಗಳ ಮೇಲೆ ಕವಿತೆಗಳನ್ನು ಬರೆದು ಮತ್ತು ಚಿತ್ರಗಳನ್ನು ಬಿಡಿಸಿ ಅವುಗಳನ್ನು ಮರುಬಳಕೆ ಮಾಡುವುದು.
- ಹಳೆಯ ಕ್ಯಾಲೆಂಡರ್‌ಗಳ ಖಾಲಿ ಇರುವ ಹಿಂಭಾಗದಲ್ಲಿ ಕವಿತೆಗಳನ್ನು ಬರೆಯುವುದು.
- ಬಿಳಿ ಬಣ್ಣದ ಚೀಲಗಳನ್ನು ಪೋಸ್ಟರ್‌ಗಳಾಗಿ ಬಳಸುವುದು.

ಕಪ್ಪುಹಲಗೆಗಳ ಕೊರತೆಯನ್ನು ಸುನೀತಾ ಅವರು ಕಪ್ಪು ಬ್ಯಾನರ್‌ಗಳ ಮೂಲಕ ನೀಗಿಸಿದರು. ಈ ಬ್ಯಾನರ್‌ಗಳು ವಾಸ್ತವವಾಗಿ ಚುನಾವಣಾ ಪ್ರಚಾರಕ್ಕಾಗಿ ಬಳಸಲಾದ ಹಳೆಯ ಫ್ಲೆಕ್ಸ್ ಪೋಸ್ಟರ್‌ಗಳಾಗಿದ್ದವು. ಅವುಗಳ ಹಿಂಭಾಗಕ್ಕೆ ಕಪ್ಪು ಬಣ್ಣ ಹಚ್ಚುವ ಮೂಲಕ ಅವರು ಸುತ್ತಬಹುದಾದ ಕಪ್ಪು ಹಲಗೆಗಳನ್ನು ತಯಾರಿಸಿದರು. ಇವನ್ನು ಸುಲಭವಾಗಿ ಗೋಡೆಗೆ ತೂಗು ಹಾಕಬಹುದು ಮತ್ತು ಅಗತ್ಯವಿದ್ದಾಗ ತೆಗೆಯಬಹುದು. ಇಷ್ಟೇ ಅಲ್ಲದೆ, ಹಳೆಯ ಪುಸ್ತಕಗಳ ಚಿತ್ರಗಳಿಂದ ಮಕ್ಕಳಿಗಾಗಿ ಚಿತ್ರ ಕಾರ್ಡ್‌ಗಳನ್ನು ತಯಾರಿಸುತ್ತಾರೆ ಮತ್ತು ಹಳೆಯ ಫ್ಲೆಕ್ಸ್ ಬ್ಯಾನರ್‌ಗಳ ಮೇಲೆ ಕಥೆಗಳನ್ನು ಬರೆಯುತ್ತಾರೆ. ಈ ಬ್ಯಾನರ್ ಮೇಲೆ ಮಕ್ಕಳು ಹೇಳಿದ ಪದಗಳ ಕೆಳಗೆ ಗೆರೆ ಎಳೆಯುತ್ತಾರೆ ಮತ್ತು ನಂತರ ಅವುಗಳನ್ನು ಅಳಿಸಿ ಮತ್ತೆ ಬಳಸುತ್ತಾರೆ.

ಜನರು ಅಂಗನವಾಡಿಯ ಮುಂದೆ ಎಸೆದು ಹೋಗುವ ಗಾಜಿನ ಬಾಟಲಿಗಳಲ್ಲಿ ಮನಿಪ್ಲಾಂಟ್‌ನಂತಹ ಗಿಡಗಳನ್ನು ಬೆಳೆಸುವ ಮೂಲಕ ಸುತ್ತಮುತ್ತಲಿನ ಪ್ರದೇಶವನ್ನು ಸುಂದರಗೊಳಿಸಿದ್ದಾರೆ. ಶಿಕ್ಷಕಿ ಮತ್ತು ಸಹಾಯಕಿ ಮಾರನೇ ದಿನ ಯಾವ ಚಟುವಟಿಕೆಗಳು ನಡೆಯಬೇಕು ಮತ್ತು ಯಾವ ಕಲಿಕಾ ಸಾಮಗ್ರಿ ಬೇಕು ಎಂಬುದನ್ನು ಮೊದಲೇ ನಿರ್ಧರಿಸುತ್ತಾರೆ. ಈ ರೀತಿ ಅವರು ಕಲಿಕಾ ಸಾಮಗ್ರಿಗಳನ್ನು ಸಂಗ್ರಹಿಸಲು ಮತ್ತು ಅವುಗಳನ್ನು ವ್ಯವಸ್ಥಿತವಾಗಿಡಲು ಒಂದು ಶಿಸ್ತುಬದ್ಧ ವಿಧಾನವನ್ನು ರೂಪಿಸಿದ್ದಾರೆ. ಈ ಲವಲವಿಕೆಯಿಂದ ಕೂಡಿದ ವಾತಾವರಣವು ಕೇವಲ ಮಕ್ಕಳನ್ನು ಆಕರ್ಷಿಸುವುದು ಮಾತ್ರವಲ್ಲದೆ, ಸಮುದಾಯದ ಸಹಭಾಗಿತ್ವವನ್ನೂ ಹೆಚ್ಚಿಸುತ್ತಿದೆ.

## ವಿವರವಾದ ಮೌಲ್ಯಾಂಕನ

ಮಗುವಿನ ಪ್ರಗತಿಯನ್ನು ಕೇವಲ ರಿಪೋರ್ಟ್ ಕಾರ್ಡ್‌ನ ಅಂಕಿಅಂಶಗಳಿಂದ ಅಳೆಯಲು ಸಾಧ್ಯವಿಲ್ಲ ಎನ್ನುತ್ತಾರೆ ಸುನೀತಾ. ಅವರು ಪ್ರತಿದಿನ ಮಕ್ಕಳ ಸಾಮರ್ಥ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿ ದಾಖಲಿಸುತ್ತಾರೆ. ಉದಾಹರಣೆಗೆ:

- ಯಾವ ಮಗು ಯಾವ ಬಣ್ಣವನ್ನು ಗುರುತಿಸುತ್ತಿದೆ;
- ಯಾರು ಸಹಾಯವಿಲ್ಲದೆ ಕಥೆ ಹೇಳಬಲ್ಲರು;
- ಯಾರು ಚಿತ್ರಗಳನ್ನು ಜೋಡಿಸಿ ಹೊಸತೇನನ್ನಾದರೂ ಸೃಷ್ಟಿಸುತ್ತಿದ್ದಾರೆ; ಇತ್ಯಾದಿ.

ಈ ಎಲ್ಲಾ ಅಂಶಗಳು ಮತ್ತು ಅನುಭವಗಳನ್ನು ಅವರು ಸಂರಕ್ಷಿಸಿಡುತ್ತಾರೆ. ಅವರ ಬಳಿ ಪ್ರತಿಯೊಂದು ಮಗುವಿನ ಕಲಿಕಾ ಪಯಣದ ವಿವರವಾದ ದಾಖಲೆಗಳಿವೆ.

## ಸಹಕಾರ ಮತ್ತು ಮಾರ್ಗದರ್ಶನ

ಸುನೀತಾರವರು ಕೇವಲ ತಮ್ಮ ಅಂಗನವಾಡಿ ಕೇಂದ್ರಕ್ಕೆ ಮಾತ್ರ ಸೀಮಿತವಾಗಿಲ್ಲದೆ, ಇತರ ಕೇಂದ್ರಗಳ ಕಾರ್ಯಕರ್ತೆಯರಿಗೂ ಪ್ರೇರಣೆ

ಮತ್ತು ಮಾರ್ಗದರ್ಶನದ ಮೂಲವಾಗಿದ್ದಾರೆ. ಅವರಿಗೆ ತಂಡವಾಗಿ ಕೆಲಸ ಮಾಡಲು, ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಕೇಂದ್ರವನ್ನು 'ಬಾಲ್ಯದ ಮೊದಲ ಶಾಲೆ'ಯನ್ನಾಗಿ ಮಾತ್ರವಲ್ಲದೆ 'ಬಾಲ್ಯದ ಮೊದಲ ಮನೆ'ಯನ್ನಾಗಿ ಮಾಡಲು ಸಲಹೆ ನೀಡುತ್ತಾರೆ. ಈಗ ಅನೇಕ ಕಾರ್ಯಕರ್ತೆಯರು ಸುನೀತಾ ಅವರ ಬಳಿ ಸಲಹೆ ಪಡೆಯಲು ಬರುತ್ತಾರೆ ಮತ್ತು ಇವರು ಸಹ ಕಾಲಕಾಲಕ್ಕೆ ಅವರ ಕೇಂದ್ರಗಳಿಗೆ ಭೇಟಿ ನೀಡಿ ಸಹಕರಿಸುತ್ತಾರೆ.

## ಗಮನ ಹರಿಸುವುದರಿಂದ ಬದಲಾದ ವಾತಾವರಣ

ಸುನೀತಾರವರ ಅತ್ಯಂತ ವಿಶೇಷ ಗುಣವೆಂದರೆ, ಪ್ರತಿಯೊಂದು ಮಗುವಿನ ವೈಯಕ್ತಿಕ ಅಗತ್ಯಗಳ ಕಡೆಗೆ ಗಮನ ಹರಿಸುವುದು. ಮೊದಲು ಮಾತನಾಡಲು ಹಿಂಜರಿಯುತ್ತಿದ್ದ ಮತ್ತು ಚಟುವಟಿಕೆಗಳಿಂದ ದೂರವಿರುತ್ತಿದ್ದ ಹರ್ಷ ಎಂಬ ಮಗು, ಇಂದು ಇವರ ಮಾರ್ಗದರ್ಶನದಲ್ಲಿ ಆತ್ಮವಿಶ್ವಾಸ ಗಳಿಸಿಕೊಂಡಿದ್ದಾನೆ. ಈಗ ಅವನು ಕಥೆ ಹೇಳುತ್ತಾನೆ, ಎಣಿಕೆ ಮಾಡುತ್ತಾನೆ ಮತ್ತು ಆಟಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾನೆ. ಇದು ಕೇವಲ ಒಂದು ಮಗುವಿನ ಬದಲಾವಣೆಯಲ್ಲ, ಬದಲಾಗಿ ಇಡೀ ಕೇಂದ್ರದ ಕಲಿಕಾ ವಾತಾವರಣದ ಬದಲಾವಣೆಯಾಗಿದೆ.

## ಪ್ರೇರಣೆಯ ಮಾದರಿ

ತಮ್ಮ ಸಮರ್ಪಣೆ, ನಾವೀನ್ಯತೆ ಮತ್ತು ಸಂವೇದನಾಶೀಲತೆಯಿಂದಾಗಿ ಸುನೀತಾ ಅವರು ನಿಜಕ್ಕೂ 'ಭರವಸೆ ಮೂಡಿಸುವ ಶಿಕ್ಷಕಿ'ಯಾಗಿದ್ದಾರೆ. ಗುರಿ ಮತ್ತು ಉದ್ದೇಶ ಸರಿಯಾಗಿದ್ದರೆ, ಸೀಮಿತ ಸಂಪನ್ಮೂಲಗಳ ನಡುವೆಯೂ ಅದ್ಭುತ ಬದಲಾವಣೆಯ ಮಾದರಿಯನ್ನು ಸೃಷ್ಟಿಸಬಹುದು ಎಂಬುದನ್ನು ಇವರ ಕಥೆ ಸಾಬೀತುಪಡಿಸುತ್ತದೆ.

---



**ನಿವೇದಿತಾ ತಿವಾರಿ** ಅವರು ಕಳೆದ 15 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣದ ಜೊತೆಗೆ ಕವಿತೆ, ಕಥೆಗಳು ಮತ್ತು ಸೃಜನಶೀಲ ಬರವಣಿಗೆಯಲ್ಲಿ ಇವರು ತೊಡಗಿಸಿಕೊಂಡಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಭೋಪಾಲ್‌ನ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** nivedita.tiwari@azimpremjifoundation.org

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಅನುರೂಪಾ ರವೀಂದ್ರ



# ಸತ್ಯ, ಜೋಕೆ!

### ವಿಮರ್ಶೆ: ಗರಿಮಾ ಗುಪ್ತಾ

**‘ಸತ್ಯ, ಜೋಕೆ’** ಸತ್ಯ ಎಂಬ ಅತಿ ಚಟುವಟಿಕೆಯ ಬಾಲಕನ ದಿನಗಳನ್ನು ಚಿತ್ರಿಸುವ ಒಂದು ರೋಮಾಂಚಕ ಕಥೆ ಪುಸ್ತಕ. ತನ್ನ ವಯಸ್ಸಿನ ಇತರ ಮಕ್ಕಳಂತೆ, ಸತ್ಯನಿಗೂ ಕೂಡ ಒಂದೆಡೆ ಸುಮ್ಮನೆ ಕೂರಲು ತಿಳಿಯದು. ತನ್ನ ಸುತ್ತಲಿನ ಪ್ರಪಂಚವನ್ನು ಅನ್ವೇಷಿಸಲು ಅವನು ನೆಗೆಯುತ್ತಾನೆ, ಓಡುತ್ತಾನೆ, ಜಾರುತ್ತಾನೆ, ಜಿಗಿಯುತ್ತಾನೆ ಮತ್ತು ಮರ ಹತ್ತಿ ತೂಗಾಡುತ್ತಾನೆ. ಅತ್ಯಂತ ಸರಳ ವಾಕ್ಯಗಳಲ್ಲಿರುವ ಈ ಕಥೆಯು ಓದುಗರಿಗೆ ಒಂದು ಆನಂದದಾಯಕ ಮತ್ತು ಮೋಜಿನ ಅನುಭವವನ್ನು ನೀಡುತ್ತದೆ.




ಲೇಖಕರು: ಯಾಮಿನಿ ವಿಜಯನ್

ಚಿತ್ರಕಾರರು: ವಿಷ್ಣು ಎಂ. ನಾಯರ್

ವಯಸ್ಸು: 4 ರಿಂದ 8 ವರ್ಷಗಳು

ಪುಟಗಳ ಸಂಖ್ಯೆ: 21

ಭಾಷೆ: ಇಂಗ್ಲಿಷ್ (48 ಇತರ ಭಾಷೆಗಳಲ್ಲಿಯೂ ಲಭ್ಯವಿದೆ)

ಪ್ರಕಾಶಕರು: ಪ್ರಥಮ್ ಬುಕ್ಸ್

ಕಥೆಯ ಶ್ರೀಮಂತ ಚಿತ್ರಣ ಮತ್ತು ವಿವರಣೆಗಳು ಗಮನ ಸೆಳೆಯುತ್ತವೆ. ಅಲ್ಲದೆ, ಕಥೆಯಲ್ಲಿ ಮುಂದೆ ಏನಾಗಬಹುದು ಎಂಬ ಕುತೂಹಲವನ್ನು ಇದು ಓದುಗರಲ್ಲಿ ಮೂಡಿಸುತ್ತದೆ. ಈ ವಿವರಣೆಗಳು ಚಿಕ್ಕ ಮಕ್ಕಳ ಶಬ್ದಸಂಪತ್ತನ್ನು ವೃದ್ಧಿಸುವುದಲ್ಲದೆ, ಅವರ ಸೃಜನಶೀಲತೆ ಮತ್ತು ಕಲ್ಪನಾ ಲೋಕವನ್ನು ಅನ್ವೇಷಿಸಲು ಸಾಕಷ್ಟು ಸ್ಫೂರ್ತಿ ನೀಡುತ್ತವೆ. ಐದು ವರ್ಷದ ಮಗುವಿನ ಜೀವನದ ಒಂದು ಪ್ರಸಂಗವನ್ನು ಸರಳವಾಗಿ ಪ್ರಸ್ತುತಪಡಿಸುವುದಷ್ಟೇ ಅಲ್ಲದೆ, ಪ್ರಾಣಿಗಳು ಮತ್ತು ಅವುಗಳ ಚಟುವಟಿಕೆಗಳಂತಹ ಸಾಮಾನ್ಯ ಪರಿಕಲ್ಪನೆಗಳನ್ನು ಮಕ್ಕಳು ತರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಹೇಗೆ ಕಲಿಯಬಹುದು ಎಂಬುದನ್ನು ಈ ಕಥೆಯು ಕೌಶಲದಿಂದ ವಿವರಿಸುತ್ತದೆ. ಇದಲ್ಲದೆ, ಲೇಖಕರ ಬರವಣಿಗೆಯ ಶೈಲಿ ಮತ್ತು ಪದಗಳ ಆಯ್ಕೆಯು ಈ ಪುಸ್ತಕವನ್ನು ಪ್ರಾಥಮಿಕ ತರಗತಿಗಳಲ್ಲಿ ಕ್ರಿಯಾಶೀಲ ಪದಗಳು (Action words) ಮತ್ತು ಹೋಲಿಕೆಗಳನ್ನು ಕಲಿಸಲು ಒಂದು ಅಮೂಲ್ಯವಾದ ಸಂಪನ್ಮೂಲವನ್ನಾಗಿ ಮಾಡಿದೆ.

ಈ ಕಥೆಯು, ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೈಹಿಕ ಆಟ ಮತ್ತು ಕುತೂಹಲದ ಮೂಲಕ ಐದು ವರ್ಷದ ಬಾಲಕ ಸತ್ಯ ಹೇಗೆ ಕಲಿಯುತ್ತಾನೆ ಎಂಬುದನ್ನು ತೋರಿಸುತ್ತದೆ. ಚಲನೆಯ ಮೂಲಕ ಕಲಿಯುವುದರ ಮಹತ್ವವನ್ನು ಈ ಕಥೆಯು ಎತ್ತಿ ಹಿಡಿಯುತ್ತದೆ. ಮಕ್ಕಳ ಓಡಾಟ, ಅವರ ಶರೀರದ ಚಲನೆಗಳೊಂದಿಗೆ ನಡೆಸುವ ಪ್ರಯೋಗಗಳು ಅವರ ಬೆಳವಣಿಗೆಗೆ ಸಹಜ ಮತ್ತು ಮೂಲಭೂತವಾದವು ಎಂಬುದನ್ನು ಇದು ವಯಸ್ಕರಿಗೆ ನೆನಪಿಸುತ್ತದೆ. ಚಿಕ್ಕ ಮಕ್ಕಳ ಚಲನಶೀಲತೆ ಮತ್ತು ಅನ್ವೇಷಿಸುವ ಪ್ರವೃತ್ತಿಯನ್ನು ನಾವು ನಿಗ್ರಹಿಸಬಾರದು; ಬದಲಿಗೆ ಅದನ್ನು ಪೋಷಿಸಿ, ಪ್ರೋತ್ಸಾಹಿಸಬೇಕು ಎಂಬ ಸಂದೇಶ ಇಲ್ಲಿದೆ.

ಈ ಕಥೆಯು ಮಕ್ಕಳಿಗೆ ಅರ್ಥಪೂರ್ಣವಾಗಿದೆ, ಏಕೆಂದರೆ ಇದು ಸತ್ಯನ ಪಾತ್ರದ ಮೂಲಕ ತಮ್ಮದೇ ಶಕ್ತಿ, ಪ್ರೇರಣೆ ಮತ್ತು ಕಲ್ಪನೆಗಳನ್ನು ಗುರುತಿಸಿಕೊಳ್ಳಲು ಅವರಿಗೆ ನೆರವಾಗುತ್ತದೆ. ಸ್ವಾತಂತ್ರ್ಯ, ಸಾಹಸ ಮತ್ತು ಇಂದ್ರಿಯಾಧಾರಿತ ಅನುಭವಗಳಿಗಾಗಿ ಮಕ್ಕಳಲ್ಲಿರುವ ಸಹಜ ಬಯಕೆಯನ್ನು ಈ ಕಥೆಯು ಗೌರವಿಸುವುದರಿಂದ, ಮಕ್ಕಳು ಸತ್ಯನೊಂದಿಗೆ ಸುಲಭವಾಗಿ ಬಾಂಧವ್ಯ ಬೆಳೆಸಿಕೊಳ್ಳುತ್ತಾರೆ. ಕಥೆಯಲ್ಲಿರುವ “ಅವನು ಜೇಡನಂತೆ ತೂಗಾಡುತ್ತಾನೆ ಮತ್ತು ಲಂಗೂರಿನಂತೆ ಜಿಗಿಯುತ್ತಾನೆ” ಎಂಬಂತಹ ಸಾಲುಗಳು ಮಕ್ಕಳಲ್ಲಿ ನೈಸರ್ಗಿಕ ಪ್ರಪಂಚದ ಬಗ್ಗೆ ವಿಸ್ಮಯ ಮೂಡಿಸುತ್ತವೆ. ಅಲ್ಲದೆ, ತಮ್ಮ ದೇಹದ ಚಲನೆಯಲ್ಲಿ ಅಡಗಿರುವ ಅನಂತ ಸಾಧ್ಯತೆಗಳ ಬಗ್ಗೆ ಕುತೂಹಲವನ್ನು ಜಾಗೃತಗೊಳಿಸುತ್ತವೆ.

ಈ ಕಥೆಯು ಮಕ್ಕಳ ಜೀವನದಲ್ಲಿ ಭಾಗಿಯಾಗಿರುವ ವಯಸ್ಕರ ಪಾತ್ರವನ್ನು ಚರ್ಚಿಸುತ್ತದೆ ಮತ್ತು ಮಕ್ಕಳ ಚಟುವಟಿಕೆಗಳಿಗೆ ಅವರ ಪ್ರತಿಕ್ರಿಯೆಗಳು ಹೇಗಿರುತ್ತವೆ ಎಂಬುದನ್ನು ವಿವರಿಸುತ್ತದೆ. ಸತ್ಯನ ಜೀವನದಲ್ಲಿ ಅಪ್ಪ, ಅಮ್ಮ, ಅಕ್ಕ, ಅಜ್ಜ ಮತ್ತು ಶಿಕ್ಷಕಿ ಹೀಗೆ ಪ್ರತಿಯೊಬ್ಬರೂ ಅವನ ಉತ್ಸಾಹಕ್ಕೆ ಭಿನ್ನವಾಗಿ ಸ್ಪಂದಿಸುತ್ತಾರೆ. ಮನೆಯಲ್ಲಿರುವ ಹಿರಿಯರು ಸತ್ಯನಿಗೆ “ಶಾಂತವಾಗಿ ಕುಳಿತುಕೋ” ಅಥವಾ “ಏನನ್ನೂ ಮುರಿಯಬೇಡ” ಎಂದು ಸೂಚಿಸಿದಾಗ, ಈ ಕಥೆಯು ಅಂತಹ ಪ್ರತಿಕ್ರಿಯೆಗಳನ್ನು ಮತ್ತು ಮಕ್ಕಳ ಬಗ್ಗೆ ನಮಗಿರುವ ನಿರೀಕ್ಷೆಗಳನ್ನು ಮರುಪರಿಶೀಲಿಸುವಂತೆ ನಮಗೆ ಸವಾಲು ಹಾಕುತ್ತದೆ. ಇದಲ್ಲದೆ, ವಯಸ್ಕರು ಮಕ್ಕಳನ್ನು ನಿರಂತರವಾಗಿ ತಿದ್ದುವ ಬದಲು, ಅವರು ಮಾಡುತ್ತಿರುವ ಕೆಲಸಗಳು ಸ್ವೀಕಾರಾರ್ಹ ಎಂದು ಅವರಿಗೆ ಮನವರಿಕೆ ಮಾಡಿಕೊಡಬೇಕು ಮತ್ತು ಅವರೊಂದಿಗೆ ಬೆರೆತು ಕೆಲಸ ಮಾಡಬೇಕು ಎಂದು ಈ ಕಥೆ ಒತ್ತಾಯಿಸುತ್ತದೆ. ಇದು ಮಕ್ಕಳ ಆಂತರಿಕ ಜಗತ್ತನ್ನು ಅರ್ಥಮಾಡಿಕೊಳ್ಳಲು ವಯಸ್ಕರಿಗೆ ಒಂದು ಉತ್ತಮ ಅವಕಾಶವನ್ನು ನೀಡುತ್ತದೆ. ಮಕ್ಕಳು ಓಡಾಡುವುದನ್ನು, ಕ್ರಿಯಾಶೀಲವಾಗಿರುವುದನ್ನು ಆನಂದಿಸುತ್ತಾರೆ. ಇದಕ್ಕೆ ಅಡ್ಡಿಪಡಿಸಿದರೆ ಅಥವಾ ಅವರ ಆಟವನ್ನು ತಪ್ಪಾಗಿ ಅರ್ಥೈಸಿಕೊಂಡರೆ ಅವರು ಸಹಜವಾಗಿಯೇ ನಿರಾಶೆಗೊಳ್ಳುತ್ತಾರೆ. ಹೀಗಾಗಿ, ವಯಸ್ಕರು ಮಕ್ಕಳ ದೃಷ್ಟಿಕೋನಗಳು, ಆಸೆಗಳು ಮತ್ತು ಆಕಾಂಕ್ಷೆಗಳನ್ನು ಗುರುತಿಸಿ ಗೌರವಿಸುವ ಅಗತ್ಯವನ್ನು ಕಥೆ ಒತ್ತಿ ಹೇಳುತ್ತದೆ. ಮಕ್ಕಳನ್ನು ನಿರ್ಬಂಧಿಸುವ ಬದಲು ಕರುಣೆ, ಬೆಂಬಲ ಮತ್ತು ತಾಳ್ಮೆಯಿಂದ ನಡೆಸಿಕೊಳ್ಳಬೇಕು ಎಂದು ಇದು ತಿಳಿಸುತ್ತದೆ. ಈ ಕಥೆಯು ವಯಸ್ಕರಿಗೆ ಮಾರ್ಗದರ್ಶನ ನೀಡುವುದಲ್ಲದೆ, ಮಕ್ಕಳು ‘ಆರೋಗ್ಯಕರ ಸಾಹಸಗಳನ್ನು’ ಮಾಡಲು ಪ್ರೋತ್ಸಾಹಿಸುವಂತೆ ಪ್ರೇರೇಪಿಸುತ್ತದೆ. ಸತ್ಯನ ತಾಯಿಯ ಪ್ರೀತಿಯ ಮತ್ತು ಕಾಳಜಿಯುಳ್ಳ ಪ್ರತಿಕ್ರಿಯೆಗಳ ಮೂಲಕ ಇದನ್ನು ವಿವರಿಸಲಾಗಿದೆ. ಉದಾಹರಣೆಗೆ: “ಬಲವಾದ ಕೊಂಬೆಗಳನ್ನು ಗಟ್ಟಿಯಾಗಿ ಹಿಡಿದುಕೊ, ನನ್ನ ಪುಟ್ಟ ಮಂಗ”; “ಮಣ್ಣು ಜಾರುತ್ತಿದೆ, ಜೋಪಾನ!” ಇತ್ಯಾದಿ.

ಹೊರ ಪ್ರಪಂಚದೊಂದಿಗೆ ತೊಡಗಿಸಿಕೊಳ್ಳುವಾಗ ಮಕ್ಕಳು ಅನುಸರಿಸುವ ವಿಭಿನ್ನ ಹಾಗೂ ಅಸ್ತವ್ಯಸ್ತವಾಗಿರುವ ವಿಧಾನಗಳಲ್ಲಿಯೂ ಒಂದು ಅರ್ಥವಿದೆ ಎಂಬುದನ್ನು ಕಂಡುಕೊಳ್ಳಲು ಇದು ನಮಗೆ ಪ್ರೇರಣೆ ನೀಡುತ್ತದೆ. ವಯಸ್ಕರು ಮಕ್ಕಳ ಸುರಕ್ಷತೆ ಮತ್ತು ಸ್ವಾತಂತ್ರ್ಯದ ನಡುವೆ ಸಮತೋಲನ ಕಾಯ್ದುಕೊಳ್ಳುವ

ಬಗ್ಗೆ ಈ ಕಥೆಯು ಸಹಾನುಭೂತಿಯನ್ನು ಮೂಡಿಸುತ್ತದೆ. ಅಲ್ಲದೆ ನಗು, ಕಥೆ ಹೇಳುವುದು ಮತ್ತು ಜೊತೆಯಾಗಿ ಕಳೆದ ಕ್ಷಣಗಳ ಮೂಲಕ ಮಕ್ಕಳೊಂದಿಗೆ ಬಾಂಧವ್ಯ ಬೆಳೆಸಿಕೊಳ್ಳುವ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಶಿಕ್ಷಕರು ಈ ಕಥೆಯನ್ನು ಬಳಸಿಕೊಂಡು ಸತ್ಯನಂತೆಯೇ ಮಕ್ಕಳನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದು. ಮಕ್ಕಳ ದೈಹಿಕ ಸಾಮರ್ಥ್ಯಗಳನ್ನು ಅನ್ವೇಷಿಸುವ ಮತ್ತು ಅಭಿವೃದ್ಧಿಪಡಿಸುವ ಮೂಲಕ, ಆಟದ ಸಂದರ್ಭದಲ್ಲಿ ಸೂಕ್ತವಾದ ಶಬ್ದಕೋಶವನ್ನು ಬಳಸಿ ವಿವಿಧ ಪ್ರಾಣಿಗಳ ಚಲನೆಗಳ ಬಗ್ಗೆ ಅವರಿಗೆ ಕಲಿಸಬಹುದು. ಮಕ್ಕಳ ಸಮಗ್ರ ಬೆಳವಣಿಗೆಯನ್ನು ಉತ್ತೇಜಿಸಲು ಅಂದರೆ ಅವರ ದೈಹಿಕ, ಭಾವನಾತ್ಮಕ, ಭಾಷಾ ಮತ್ತು ಅರಿವಿನ ವಿಕಾಸವನ್ನು ಪೋಷಿಸಲು ಈ ಕಥೆಯು ಒಂದು ಅತ್ಯುತ್ತಮ ಸಾಧನವಾಗಿದೆ.


---

*ಗರಿಮಾ ಗುಪ್ತಾ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಜುಕೇಷನ್‌ನ ಸದಸ್ಯರಾಗಿದ್ದಾರೆ. ಇವರು ಶಿಕ್ಷಕರ ವೃತ್ತಿಪರ ಅಭಿವೃದ್ಧಿ, ಸಮನ್ವಯ ಶಿಕ್ಷಣ ಮತ್ತು ಆರಂಭಿಕ ಬಾಲ್ಯದ ಶಿಕ್ಷಣ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ.*

ಅನುವಾದ: ಅನುರೂಪಾ ರವೀಂದ್ರ | ಪರಿಶೀಲನೆ: ಕಿರಣ್ ಮಂಜುನಾಥ್

# ಮೈ ಫಸ್ಟ್ ರೈಲ್ವೆ ಜರ್ನಿ

**ವಿಮರ್ಶೆ: ಕಮಲೇಶ್ ಚಂದ್ರ ಜೋಶಿ**




ಲೇಖಕಿ: ಮೃಣಾಲ್ ಮಿತ್ರಾ

ವಯಸ್ಸು: 4ರಿಂದ 6 ವರ್ಷ

ಒಟ್ಟು ಪುಟಗಳು: 16

ಭಾಷೆ: ಹಿಂದಿ, ಇಂಗ್ಲಿಷ್

ಪ್ರಕಾಶಕರು: ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ

ಪ್ರವಾಸದ ನೆನಪುಗಳು ಸದಾ ನಮ್ಮ ಜೊತೆಗಿರುತ್ತವೆ. ಕೆಲವು ನೆನಪುಗಳು ಕಾಲಕ್ರಮೇಣ ಮಸುಕಾಗಬಹುದು, ಇನ್ನು ಕೆಲವು ಹಸಿರಾಗಿ ಉಳಿಯಬಹುದು. ನಾವು ಎಲ್ಲಿಗೆ ಹೋಗಿದ್ದೆವು, ಹೇಗೆ ಹೋಗಿದ್ದೆವು, ಯಾರ ಜೊತೆಗಿದ್ದೆವು, ಅಲ್ಲಿ ಏನೇನು ನೋಡಿದೆವು, ಯಾರನ್ನು ಭೇಟಿ ಮಾಡಿದೆವು ಮತ್ತು ಅಲ್ಲಿ ನಡೆದ ವಿಶೇಷ ಘಟನೆಗಳೇನು ಎಂಬ ಅನುಭವಗಳು ನಮ್ಮ ನೆನಪಿನಂಗಳದಲ್ಲಿ ಅಚ್ಚೊತ್ತಿರುತ್ತವೆ. ನಮಗೆ ಅವಕಾಶ ಸಿಕ್ಕಾಗ ಈ ಅನುಭವಗಳನ್ನು ಯಾರೊಂದಿಗಾದರೂ ಹಂಚಿಕೊಳ್ಳಲು ನಾವು ಬಯಸುತ್ತೇವೆ. ಚಿಕ್ಕ ಮಕ್ಕಳೊಂದಿಗೆ ಕೆಲಸ ಮಾಡುವಾಗ, ಅವರಿಗೆ ತಮ್ಮ ಅನುಭವಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಇಂತಹ ಅವಕಾಶಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಇದರಿಂದ ಅವರಿಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಒಂದು ವೇದಿಕೆ ಸಿಗುತ್ತದೆ ಮತ್ತು ಅವರ ಭಾಷಾ ಬೆಳವಣಿಗೆಯೂ ಆಗುತ್ತದೆ. ಮಕ್ಕಳಿಗಾಗಿ ಇರುವ ಸಣ್ಣ ಸಣ್ಣ ಚಿತ್ರಕಥೆಗಳು ಇಂತಹ ಉತ್ತಮ ಅವಕಾಶಗಳನ್ನು ಒದಗಿಸುತ್ತವೆ. ಮಕ್ಕಳು ಸುಲಭವಾಗಿ ಪುಸ್ತಕದ ವಿಷಯದೊಂದಿಗೆ ಬೆರೆಯುವಂತಿರಬೇಕು. ಅವರ ಅನುಭವಗಳನ್ನು ಸಮೃದ್ಧಗೊಳಿಸುವ ಸರಳ ಹಾಗೂ ಕಣ್ಣಿಗೆ ಕಟ್ಟುವ ವಿವರಣೆಗಳಿಂದ ಕೂಡಿದ ಪುಸ್ತಕಗಳನ್ನು ನಾವು ಆಯ್ದುಕೊಳ್ಳುವುದು ಅವಶ್ಯ.

ಅಂಗನವಾಡಿಗೆ ಬರುವ ಮಕ್ಕಳು ಚೆನ್ನಾಗಿ ಮಾತನಾಡಲು ಬೇಕಾದ ಮೌಖಿಕ ಭಾಷಾ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂಬುದು ನಮ್ಮ ಮುಖ್ಯ ಉದ್ದೇಶವಾಗಿರುತ್ತದೆ. ಇದಕ್ಕಾಗಿ ನಾವು ಅವರಿಗೆ ಮುಕ್ತವಾಗಿ ಮಾತನಾಡಲು ಮತ್ತು ಅವರ ಮನಸ್ಸಿನಲ್ಲಿ ಇರುವುದನ್ನು ಹಂಚಿಕೊಳ್ಳಲು ಹೆಚ್ಚಿನ ಅವಕಾಶಗಳನ್ನು ನೀಡಬೇಕಾಗುತ್ತದೆ. ಮಕ್ಕಳ ಮೌಖಿಕ ಭಾಷಾ ಬೆಳವಣಿಗೆಗೆ ಪೂರಕವಾದ ಪರಿಸರವನ್ನು ಅಂಗನವಾಡಿ ಕೇಂದ್ರಗಳಲ್ಲಿ ನಿರ್ಮಿಸುವುದು ಅತ್ಯಗತ್ಯ.

ಈ ನಿಟ್ಟಿನಲ್ಲಿ ಚಿತ್ರಕಥೆಗಳು ಅತ್ಯಂತ ಉಪಯುಕ್ತವಾಗಿದ್ದು, ಅವುಗಳ ಮೂಲಕ ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ಸಂವಾದ ನಡೆಸಬಹುದು. ಚಿತ್ರಕಥೆಗಳ ಪುಸ್ತಕಗಳಲ್ಲಿ ಹಲವು ವಿಧಗಳಿವೆ. ಕೆಲವು ಪುಸ್ತಕಗಳು ಸಣ್ಣ ಕಥೆ ಅಥವಾ ಕವಿತೆಗಳನ್ನು ಹೊಂದಿರುತ್ತವೆ; ಇನ್ನು ಕೆಲವು ಮಕ್ಕಳ ಸುತ್ತಮುತ್ತಲಿನ ಪರಿಸರದ ಬಗ್ಗೆ ಮಾಹಿತಿಯನ್ನು ಒಳಗೊಂಡಿರುತ್ತವೆ. ಇದರ ಜೊತೆಗೆ, ಇನ್ನೂ ಕೆಲವು ಪುಸ್ತಕಗಳಲ್ಲಿ ಕೇವಲ ಚಿತ್ರಗಳಷ್ಟೇ ಇರುತ್ತವೆ. ಇಂತಹ ಪುಸ್ತಕಗಳಲ್ಲಿ ಚಿತ್ರಗಳೇ ಕಥೆಯನ್ನು ಹೇಳುತ್ತವೆ. ಇವು ಮಕ್ಕಳ ಆಲೋಚನೆಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡುತ್ತವೆ ಮತ್ತು ತಮ್ಮದೇ ಆದ ಅನುಭವಗಳನ್ನು ಸೇರಿಸಲು ಮಕ್ಕಳಿಗೆ ಬಹಳಷ್ಟು ಅವಕಾಶಗಳನ್ನು ಒದಗಿಸುತ್ತವೆ. ಇದರಿಂದ ಮಕ್ಕಳು ತಮ್ಮ ಕಲ್ಪನೆ ಮತ್ತು ಅನುಭವಗಳ ಆಧಾರದ ಮೇಲೆ ಸ್ವಂತ ಕಥೆಗಳನ್ನು ಕಟ್ಟಲು ಸಾಧ್ಯವಾಗುತ್ತದೆ.

ಮೃಣಾಲ್ ಮಿತ್ರಾ ಅವರು ರಚಿಸಿರುವ ಹಾಗೂ ನ್ಯಾಷನಲ್ ಬುಕ್ ಟ್ರಸ್ಟ್ (NBT) ವತಿಯಿಂದ ಪ್ರಕಟವಾಗಿರುವ 'ರೇಲ್ ಗಾಡಿ ಚಲೇ ಛುಕ್-ಛುಕ್' ಎಂಬುದು ಕೇವಲ ಚಿತ್ರಗಳ ಮೂಲಕವೇ ಕಥೆ ಹೇಳುವ ಪುಸ್ತಕವಾಗಿದೆ. ಇದು ತೀರಾ ಹೊಸ ರೀತಿಯ ಪುಸ್ತಕವೇನಲ್ಲದಿದ್ದರೂ, ಮಕ್ಕಳೊಂದಿಗೆ ಸಂವಾದ ನಡೆಸುವ ದೃಷ್ಟಿಯಿಂದ ಬಹಳ ಉಪಯುಕ್ತವಾಗಿದೆ. ಪುಸ್ತಕದ ಮುಂಭಾಗ ಮತ್ತು ಹಿಂಭಾಗದ ಮುಖಪುಟಗಳನ್ನು ಪೂರ್ತಿಯಾಗಿ ತೆರೆದಾಗ, ಇಡೀ ಪುಸ್ತಕವು ಬಿಚ್ಚಿಕೊಳ್ಳುತ್ತದೆ; ಆಗ ಒಂದು ಉದ್ದನೆಯ ರೈಲು ನಮ್ಮ ಕಣ್ಣೆದುರು ಪ್ರತ್ಯಕ್ಷವಾಗುತ್ತದೆ. ಇದು ಓದುಗರಿಗೆ ಚಲಿಸುತ್ತಿರುವ ರೈಲಿನಲ್ಲೇ ಕುಳಿತಿರುವ ಅನುಭವ ನೀಡುತ್ತದೆ. ಈ ಚಿತ್ರಗಳನ್ನು ಗಮನಿಸಿದಾಗ, ತನ್ನ ತಂದೆ-ತಾಯಿಯೊಂದಿಗೆ ಪಯಣಿಸುತ್ತಿರುವ ಮಗುವಿನ ಸುಂದರ ಪ್ರಯಾಣದ ಚಿತ್ರಣವು ಕಣ್ಮನ ಸೆಳೆಯುತ್ತದೆ. ಈ ಚಿತ್ರಗಳನ್ನು ನೋಡುತ್ತಿದ್ದರೆ, ಮಕ್ಕಳಿಗೆ ತಮ್ಮದೇ ಆದ ರೈಲು ಪ್ರಯಾಣದ ನೆನಪುಗಳು ಮರುಕಳಿಸುತ್ತವೆ. ದೈನಂದಿನ ಜೀವನದ ಭಾಗವಾಗಿ ಮಕ್ಕಳಿಗೆ ತಮ್ಮ ಪೋಷಕರೊಂದಿಗೆ ಹೊರಗೆ ಹೋಗುವ ಅನೇಕ ಅವಕಾಶಗಳು ಲಭ್ಯವಾಗುತ್ತವೆ. ಅವರು ರೈಲಿನಲ್ಲಿ ಪ್ರಯಾಣಿಸಿರಲಿ ಅಥವಾ ಬಸ್ಸಿನಲ್ಲಿ ಪ್ರಯಾಣಿಸಿರಲಿ, ಅವರಲ್ಲಿ ಒಂದಲ್ಲ ಒಂದು ಅನುಭವಗಳಂತೂ ಇದ್ದೇ ಇರುತ್ತವೆ. ಈ ಸಂದರ್ಭದಲ್ಲಿ ಪ್ರಯಾಗ್ ಶುಕ್ಲಾ ಅವರು ಬರೆದ 'ರೇಲ್ ಚಲೀ ಭಾಯ್ ರೇಲ್ ಚಲೀ' ಎನ್ನುವ ಕವಿತೆಯು ನೆನಪಿಗೆ ಬರುತ್ತದೆ. ಪುಸ್ತಕದ ಬಗ್ಗೆ ಮಾತನಾಡುವಾಗ ಶಿಕ್ಷಕರು ಈ ಕವಿತೆಯನ್ನು ಕೂಡ ಮಕ್ಕಳಿಗೆ ಓದಿ ಹೇಳಬಹುದು.

ಪುಸ್ತಕವನ್ನು ತೆರೆದ ತಕ್ಷಣವೇ ನಮಗೆ ರೈಲು ನಿಲ್ದಾಣದಲ್ಲಿರುವ ಒಂದು ಮಗು ಮತ್ತು ಅದರ ಅಪ್ಪ-ಅಮ್ಮ ಕಾಣಿಸುತ್ತಾರೆ. ಈ ಚಿತ್ರದ ಮೂಲಕವೇ ಮಕ್ಕಳೊಂದಿಗೆ ಸಂವಾದವನ್ನು ಆರಂಭಿಸಬಹುದು. ಮುಂದಿನ ಚಿತ್ರಗಳನ್ನು ಮಕ್ಕಳ ಮನೋಭಾವಕ್ಕೆ ಅನುಗುಣವಾಗಿ ರಚಿಸಲಾಗಿದ್ದು, ಅದರಲ್ಲಿ ಮಗು ಕಿಟಕಿಯ ಪಕ್ಕ ಕುಳಿತು ಹೊರಗಿನ ದೃಶ್ಯಗಳನ್ನು ವೀಕ್ಷಿಸುತ್ತಿರುವುದನ್ನು ಕಾಣಬಹುದು. ಪ್ರಯಾಣದ ಸಮಯದಲ್ಲಿ ಕಿಟಕಿಯ ಪಕ್ಕವೇ ಕುಳಿತುಕೊಳ್ಳಬೇಕೆಂಬ ಮಕ್ಕಳ ಹಠವು ಅವರ ಸಹಜ ಕುತೂಹಲದ ಪ್ರವೃತ್ತಿಯನ್ನು ಪ್ರತಿಬಿಂಬಿಸುತ್ತದೆ. ಆ ಮಗುವಿನ ಎದುರು ಅಜ್ಜ-ಅಜ್ಜಿಯರು ಕೂಡ ಕುಳಿತಿದ್ದಾರೆ. ಮುಂದಿನ ಚಿತ್ರಗಳಲ್ಲಿ ರೈಲಿನ ಇತರ ಪ್ರಯಾಣಿಕರ ಹಾಗೂ ರೈಲು ಸುರಂಗದ ಮೂಲಕ ಹಾದುಹೋಗುವಾಗ ಉಂಟಾಗುವ ಕತ್ತಲೆಯ ದೃಶ್ಯಗಳೂ ಇವೆ. ಈ ಎಲ್ಲಾ ಚಿತ್ರಗಳ ಕುರಿತು ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ಚರ್ಚಿಸಬಹುದು ಮತ್ತು ಅವರ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳಲು ಅವರನ್ನು ಪ್ರೇರೇಪಿಸಬಹುದು.

ಸಂವಾದಕ್ಕಾಗಿ ಇಂತಹ ಕೆಲವು ಪ್ರಶ್ನೆಗಳನ್ನು ಬಳಸಬಹುದು:

- ಈ ರೈಲು ಎಲ್ಲಿಗೆ ಹೋಗುತ್ತಿರಬಹುದು?
- ನೀನು ಯಾವತ್ತಾದರೂ ರೈಲಿನಲ್ಲಿ ಪ್ರಯಾಣಿಸಿದ್ದೀಯಾ?
- ಎಲ್ಲೆಲ್ಲಿಗೆ ಹೋಗಿದ್ದೆ? ಯಾರ ಜೊತೆಗೆ ಹೋಗಿದ್ದೆ?
- ಈ ಪುಸ್ತಕದಲ್ಲಿ ಯಾರ ಕಥೆ ಇರಬಹುದು?
- ಕಿಟಕಿಯ ಬಳಿ ಕುಳಿತಿರುವ ಮಗುವಿನ ಹೆಸರು ಏನಿದ್ದಿರಬಹುದು?
- ಈ ಮಗುವಿನ ಜಾಗದಲ್ಲಿ ನೀನು ಕುಳಿತಿದ್ದರೆ ಏನು ಮಾಡುತ್ತಿದ್ದೆ?
- ಮುಂದಿನ ಪುಟದ ಚಿತ್ರದಲ್ಲಿ ಏನಿರಬಹುದು?

ಈ ಮಾತುಕತೆಯಲ್ಲಿ ಮಕ್ಕಳು ವೈವಿಧ್ಯಮಯ ಉತ್ತರಗಳನ್ನು ನೀಡುತ್ತಾರೆ. ಆ ಉತ್ತರಗಳು ಅವರ ಭಾವನೆಗಳನ್ನು ಪ್ರತಿಬಿಂಬಿಸುವಂತಿರುತ್ತವೆ. ಈ ಪುಸ್ತಕದ ವಿಶೇಷತೆಯೇ ಇದು; ಇದರಲ್ಲಿ ಮೊದಲೇ ಸಿದ್ಧಪಡಿಸಿದ ಕಥೆ ಇರುವುದಿಲ್ಲ. ಮಕ್ಕಳು ತಮ್ಮ ಸ್ವಂತ ಅನುಭವ ಮತ್ತು ಕಲ್ಪನೆಯಿಂದ ಈ ಕಥೆಗೆ ಒಂದು ಹೊಸ ರೂಪ ನೀಡಬಹುದು.

ಅಂಗನವಾಡಿ ಮಕ್ಕಳೊಂದಿಗೆ ಸಂವಾದ ನಡೆಸಲು ಉತ್ತಮ ಪುಸ್ತಕಗಳ ಅಗತ್ಯ ಯಾವಾಗಲೂ ಇರುತ್ತದೆ. 'ರೇಲ್ ಗಾಡಿ ಚಲೇ ಛುಕ್-ಛುಕ್' ಅದಕ್ಕೆ ಪೂರಕವಾದ ಪುಸ್ತಕವಾಗಿದ್ದು, ಮಕ್ಕಳಲ್ಲಿ ಮಾತಿನ ಲಹರಿ ಮೂಡಿಸಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ. ಸಂಭಾಷಣೆಯ ಸಮಯದಲ್ಲಿ ಈ ಪುಸ್ತಕವು ಪ್ರವಾಸಕ್ಕೆ ಸಂಬಂಧಿಸಿದ ಮಕ್ಕಳ ಎಲ್ಲ ಅನುಭವಗಳನ್ನು ಹೊರತರುತ್ತದೆ. ಪುಸ್ತಕದಲ್ಲಿನ ವರ್ಣರಂಜಿತ ಚಿತ್ರಗಳು ಮಕ್ಕಳೊಂದಿಗೆ ಮಾತನಾಡುತ್ತವೆ; ಇಲ್ಲಿನ ಪ್ಲಾಟ್‌ಫಾರ್ಮ್, ರೈಲುಬೋಗಿಗಳು, ಜನರ ಹಾವಭಾವಗಳು ಮತ್ತು ವಸ್ತುಗಳ ಜೀವಂತಿಕೆಯನ್ನು ನೋಡಿಯೇ ಸವಿಯಬೇಕು. ರೈಲಿನ ಕಿಟಕಿಯಿಂದ ಕಾಣುವ ದೃಶ್ಯಗಳು ಮಕ್ಕಳಿಗೆ ತಮ್ಮ ವೈಯಕ್ತಿಕ ನೆನಪುಗಳನ್ನು ಕಥೆಗೆ ಜೋಡಿಸಲು ಉತ್ತಮ ವೇದಿಕೆಯನ್ನು ಒದಗಿಸುತ್ತವೆ.

ಈ ಪುಸ್ತಕವನ್ನು ಮಕ್ಕಳ ಮುಂದೆ ಹೇಗೆ ಪ್ರಸ್ತುತಪಡಿಸಬೇಕು ಮತ್ತು ಅವರಲ್ಲಿ ಆಸಕ್ತಿಯನ್ನು ಹೇಗೆ ಮೂಡಿಸಬೇಕು ಎಂಬುದು ಶಿಕ್ಷಕರ ಕೌಶಲದ ಮೇಲೆ ಅವಲಂಬಿತವಾಗಿರುತ್ತದೆ. ಶಿಕ್ಷಕರು ತಮ್ಮ ಚಾತುರ್ಯದಿಂದ ಮಕ್ಕಳನ್ನು ಈ ಪುಸ್ತಕದ ಕಥಾನಕದೊಂದಿಗೆ ಭಾವನಾತ್ಮಕವಾಗಿ ಬೆಸೆಯಬಹುದಾಗಿದೆ.

---

**ಕಮಲೇಶ್ ಚಂದ್ರ ಜೋಶಿ** ಅವರು ಕಳೆದ 30 ವರ್ಷಗಳಿಂದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಪ್ರಾಥಮಿಕ ಹಂತದಲ್ಲಿ ಶಿಕ್ಷಕರೊಂದಿಗೆ ಭಾಷಾ ಬೋಧನೆ, ಶಾಲಾ ಗ್ರಂಥಾಲಯ ನಿರ್ವಹಣೆ ಮತ್ತು ಶಿಕ್ಷಕರ ತರಬೇತಿ ಮುಂತಾದ ಕ್ಷೇತ್ರಗಳಲ್ಲಿ ಅವರು ಸುದೀರ್ಘ ಅನುಭವ ಹೊಂದಿದ್ದಾರೆ. ಪ್ರಸ್ತುತ ಇವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ, ಉಧಮ್ ಸಿಂಗ್ ನಗರ, ಉತ್ತರಾಖಂಡದಲ್ಲಿ ಕೆಲಸಮಾಡುತ್ತಿದ್ದಾರೆ.

ಅನುವಾದ: ಆಶಾ ಸಿಂಗ್ | ಪರಿಶೀಲನೆ: ರಾಕೇಶ್ ಪೂಂಜ

# ಚಟುವಟಿಕೆ ಸಮಯ

## ಬನ್ನಿ, ವಿನ್ಯಾಸಗಳನ್ನು ರಚಿಸೋಣ

**ಉದ್ದೇಶ:** ಈ ಚಟುವಟಿಕೆಯು ಅಂಗನವಾಡಿ ಕೇಂದ್ರಕ್ಕೆ ಬರುವ 3ರಿಂದ 6 ವರ್ಷದ ಮಕ್ಕಳ ನೆನಪಿನ ಶಕ್ತಿ ಮತ್ತು ತಾರ್ಕಿಕ ಚಿಂತನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

**ಬೇಕಾಗುವ ಸಾಮಗ್ರಿಗಳು:** ನಾಲ್ಕು ಸಣ್ಣ ಕಲ್ಲುಗಳು, ನಾಲ್ಕು ಎಲೆಗಳು, ನಾಲ್ಕು ಮಣಿಗಳು ಮತ್ತು ನಾಲ್ಕು ಕಡ್ಡಿಗಳು.

**ವಯೋ ಗುಂಪು:** 3 ರಿಂದ 6 ವರ್ಷದ ಮಕ್ಕಳು.

**ಮೊದಲ ಹಂತ**

ಎಲ್ಲಾ ಮಕ್ಕಳನ್ನು ಒಂದು ವೃತ್ತಾಕಾರದಲ್ಲಿ ಕೂಡಿಸಿ, ನೀವೂ ಅವರೊಂದಿಗೆ ಕುಳಿತುಕೊಳ್ಳಿ.

ನಂತರ ಮಕ್ಕಳಿಗೆ ಹೀಗೆ ಹೇಳಿ: 'ಮಕ್ಕಳೇ, ಇಂದು ನಾವು ಕೆಲವು ವಸ್ತುಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಜೋಡಿಸೋಣ. ಮೊದಲು ನಾನು ಅದನ್ನು ಹೇಗೆ ಮಾಡಬೇಕೆಂದು ತೋರಿಸಿಕೊಡುತ್ತೇನೆ, ಎಲ್ಲರೂ ಜಾಗರೂಕತೆಯಿಂದ ನೋಡಿ. ಆಮೇಲೆ, ನೀವೆಲ್ಲರೂ ಒಬ್ಬೊಬ್ಬರಾಗಿ ಬಂದು ಇದೇ ರೀತಿ ವಸ್ತುಗಳನ್ನು ಜೋಡಿಸುವುದನ್ನು ಮುಂದುವರಿಸಬೇಕು.'



ಚಿತ್ರ: ಶಿವೇಂದ್ರ ಪಾಂಡ್ಯ

**ಎರಡನೇ ಹಂತ**

ಮಕ್ಕಳಿಗೆ ಈ ಮಾದರಿಯನ್ನು (Pattern) ಹೀಗೆ ತೋರಿಸಿಕೊಡಿ: ಮೊದಲು ಒಂದು ಕಲ್ಲು, ನಂತರ ಒಂದು ಎಲೆ, ಆಮೇಲೆ ಒಂದು ಕಡ್ಡಿ, ಮತ್ತು ಕೊನೆಯಲ್ಲಿ ಒಂದು ಮಣಿಯನ್ನು ನೇರವಾದ ಸಾಲಿನಲ್ಲಿ ಜೋಡಿಸಿ.

ತದನಂತರ, ಅದೇ ವಸ್ತುಗಳನ್ನು ಬಳಸಿಕೊಂಡು ನೀವು ಮಾಡಿದಂತೆಯೇ ಅದೇ ಕ್ರಮದಲ್ಲಿ ಜೋಡಿಸಲು ಒಬ್ಬೊಬ್ಬರಾಗಿ ಮಕ್ಕಳಿಗೆ ತಿಳಿಸಿ. ಈ ಸಮಯದಲ್ಲಿ ಪ್ರತಿಯೊಬ್ಬ ಮಗುವೂ ಬಹಳ ಗಮನವಿಟ್ಟು ನೋಡುತ್ತಿರಲಿ ಎಂದು ನೆನಪಿಸುತ್ತಿರಿ.

**ಮೂರನೇ ಹಂತ**

ಎಲ್ಲಾ ವಸ್ತುಗಳನ್ನು ಸಂಗ್ರಹಿಸಿ ಮತ್ತೆ ವೃತ್ತದ ಮಧ್ಯಭಾಗದಲ್ಲಿ ಇರಿಸಿ. ಈಗ ಒಂದು ಹೊಸ ಮಾದರಿಯನ್ನು (Pattern) ತೋರಿಸಿಕೊಡಿ. ಉದಾಹರಣೆಗೆ: ಮೊದಲು ಒಂದು ಕಡ್ಡಿ, ನಂತರ ಒಂದು ಕಲ್ಲು, ಆಮೇಲೆ ಒಂದು ಎಲೆ, ಮತ್ತು ಕೊನೆಯಲ್ಲಿ ಒಂದು ಮಣಿ. ಇದಾದ ನಂತರ, ಪ್ರತಿಯೊಂದು ಮಗುವಿಗೂ ಅವಕಾಶ ನೀಡಿ. ಮಕ್ಕಳು ರಾಶಿಯಲ್ಲಿರುವ ವಸ್ತುಗಳಲ್ಲಿ ಸರಿಯಾದ ವಸ್ತುವನ್ನು ಆರಿಸಿ, ಅದೇ ಕ್ರಮದಲ್ಲಿ ಜೋಡಿಸುವ ಮೂಲಕ ಈ ಮಾದರಿಯನ್ನು ಮುಂದುವರಿಸಲು ತಿಳಿಸಿ.

ಈ ರೀತಿಯಾಗಿ, ಪ್ರತಿಯೊಂದು ಮಗುವೂ ಒಂದೊಂದೇ ವಸ್ತುವನ್ನು ಸೇರಿಸುತ್ತಾ ಹೋದಂತೆ ಆ ಇಡೀ ಕ್ರಮವು ಪೂರ್ಣಗೊಳ್ಳುತ್ತದೆ.

*ಸಲಹೆ: ಒಂದು ವೇಳೆ ಮಗುವಿಗೆ ಸರಿಯಾದ ಕ್ರಮದಲ್ಲಿ ಜೋಡಿಸಲು ಸಾಧ್ಯವಾಗದಿದ್ದರೆ, ಇತರ ಮಕ್ಕಳ ಸಹಾಯ ಪಡೆಯಲು ತಿಳಿಸಿ. ಇದು ಮಕ್ಕಳಲ್ಲಿ ತಂಡವಾಗಿ ಕೆಲಸ ಮಾಡುವ ಮತ್ತು ಒಬ್ಬರಿಂದೊಬ್ಬರು ಕಲಿಯುವ ಗುಣವನ್ನು ಬೆಳೆಸುತ್ತದೆ.*

## ಹೆಚ್ಚಿನ ಸಂಖ್ಯೆಯ ಮಕ್ಕಳಿದ್ದಾಗ

ಪ್ರತಿಯೊಂದು ವಿನ್ಯಾಸಕ್ಕೆ ಕೇವಲ ತಲಾ ನಾಲ್ಕು ವಸ್ತುಗಳನ್ನು ಮಾತ್ರ ಬಳಸುತ್ತಿರುವುದರಿಂದ, ಒಂದು ವೇಳೆ ಮಕ್ಕಳ ಸಂಖ್ಯೆ ಹೆಚ್ಚಿದ್ದರೆ ಕಾರ್ಯಕರ್ತೆಯು ಮೊದಲು ಮಾಡಿದ ವಿನ್ಯಾಸದ ಸಾಮಗ್ರಿಗಳನ್ನು ಮತ್ತೆ ರಾಶಿ ಹಾಕಬೇಕು. ನಂತರ ಮಕ್ಕಳಿಗೆ ಹೊಸ ವಿನ್ಯಾಸಗಳನ್ನು ಮಾಡಲು ಅವುಗಳನ್ನು ಒದಗಿಸಬೇಕು.

**ಸಲಹೆ:** ಅಂಗನವಾಡಿ ಕಾರ್ಯಕರ್ತೆಯು ಮಕ್ಕಳ ವಯಸ್ಸನ್ನು ಗಮನದಲ್ಲಿಟ್ಟುಕೊಂಡು, ವಸ್ತುಗಳ ಸಂಖ್ಯೆಯನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಮೂಲಕ ಈ ಚಟುವಟಿಕೆಯನ್ನು ಸುಲಭಗೊಳಿಸಬಹುದು ಅಥವಾ ಕಠಿಣಗೊಳಿಸಬಹುದು. ವಸ್ತುಗಳ ಲಭ್ಯತೆಗೆ ಅನುಗುಣವಾಗಿ ಅವುಗಳ ವಿಧಗಳನ್ನು ಕೂಡ ಬದಲಾಯಿಸಿಕೊಳ್ಳಬಹುದು.

(ಈ ಚಟುವಟಿಕೆಯನ್ನು ವಿಪಿನ್ ಚೌಹಾಣ್ ಅವರು ಸಿದ್ಧಪಡಿಸಿದ್ದಾರೆ. ಇವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಫೀಲ್ಡ್ ರಿಸರ್ಚ್ ತಂಡದ ಸದಸ್ಯರಾಗಿದ್ದು, ಡೆಹ್ರಾಡೂನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.)

## ಮಾರುಕಟ್ಟೆಗೆ ಭೇಟಿ

**ಉದ್ದೇಶ:** ಮಕ್ಕಳು ವಸ್ತುಗಳ ಬೆಲೆಯನ್ನು ನೋಡಿ, ಯಾವ ಬೆಲೆಯ ನೋಟನ್ನು ಬಳಸಿ ಯಾವ ವಸ್ತುವನ್ನು ಖರೀದಿಸಬಹುದು ಎಂಬುದನ್ನು ಈ ಚಟುವಟಿಕೆಯ ಮೂಲಕ ಅರ್ಥಮಾಡಿಕೊಳ್ಳುತ್ತಾರೆ. ಈ ಆಟವನ್ನು ಪದೇ ಪದೇ ಆಡುವುದರಿಂದ ಮಕ್ಕಳಲ್ಲಿ ಖರೀದಿ ಮಾಡುವ ತಿಳಿವಳಿಕೆಯೂ ಬೆಳೆಯುತ್ತದೆ.

**ವಯೋಮಾನ:** 4 ರಿಂದ 6 ವರ್ಷದ ಮಕ್ಕಳು

**ಅಗತ್ಯವಿರುವ ಸಾಮಗ್ರಿಗಳು:** ಬೇರೆ ಬೇರೆ ವಸ್ತುಗಳ ಚಿತ್ರಗಳು, ವಿವಿಧ ಮುಖಬೆಲೆಯ ನೋಟುಗಳು, ಚಾರ್ಟ್ ಪೇಪರ್.

### ಚಟುವಟಿಕೆಗೂ ಮುನ್ನ ಸಿದ್ಧತೆ

ಚಟುವಟಿಕೆಯನ್ನು ಪ್ರಾರಂಭಿಸುವ ಮೊದಲು, ಒಂದು ಚಾರ್ಟ್ ಪೇಪರ್ ಸಿದ್ಧಪಡಿಸಿಕೊಳ್ಳಿ. ಅದರ ಮೇಲೆ ಮಕ್ಕಳಿಗೆ ಪರಿಚಿತವಿರುವ ವಸ್ತುಗಳ ಚಿತ್ರಪಟಗಳನ್ನು (ಉದಾಹರಣೆಗೆ: ಸೇಬು, ಆಟದ ಕಾರು, ಚಾಕೊಲೇಟ್, ಪೆನ್ಸಿಲ್, ಮೊಬೈಲ್ ಇತ್ಯಾದಿ) ಅಂಟಿಸಿ. ಪ್ರತಿಯೊಂದು ಚಿತ್ರದ ಕೆಳಗೆ ಆ ವಸ್ತುವಿನ ಬೆಲೆಯನ್ನು ಸೂಚಿಸುವ ಆಟದ ನೋಟನ್ನು ಅಂಟಿಸಿ. ಉದಾಹರಣೆಗೆ, ಸೇಬಿನ ಚಿತ್ರದ ಕೆಳಗೆ ₹20 ರ ನೋಟನ್ನು ಅಂಟಿಸಿದರೆ, ಆ ಸೇಬಿನ ಬೆಲೆ 20 ರೂಪಾಯಿ ಎಂದು ಅರ್ಥ.

ಈಗ ಸಾಮಾನ್ಯವಾಗಿ ಬಳಕೆಯಲ್ಲಿರುವ ನೋಟುಗಳನ್ನು ಮಾತ್ರ ಈ ಚಟುವಟಿಕೆಗೆ ಬಳಸಿಕೊಳ್ಳಿ. ಉದಾಹರಣೆಗೆ: ₹10, ₹20, ₹50, ₹100 ಮತ್ತು ₹500 ಮುಖಬೆಲೆಯ ನೋಟುಗಳು. ಚಟುವಟಿಕೆಯ ಸಮಯದಲ್ಲಿ ಮಕ್ಕಳು ಬಳಸಿ ಆಟವಾಡಲು ಅನುಕೂಲವಾಗುವಂತೆ, ಇದೇ ಮುಖಬೆಲೆಯ ಹಲವಾರು ಆಟದ ನೋಟುಗಳನ್ನು ಸಿದ್ಧವಾಗಿಟ್ಟುಕೊಳ್ಳಿ.



ಚಿತ್ರ: ಶಿವೇಂದ್ರ ಪಾಂಡ್ಯ

### ಚಟುವಟಿಕೆಯ ಆರಂಭ

ಎಲ್ಲಾ ಮಕ್ಕಳು ನೀವು ನೀಡುವ ಸೂಚನೆಗಳನ್ನು ಸುಲಭವಾಗಿ ಕೇಳಿಸಿಕೊಂಡು, ಚಟುವಟಿಕೆಯನ್ನು ಸ್ಪಷ್ಟವಾಗಿ ನೋಡಿ ಅದರಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಅವರನ್ನು ನಿಮ್ಮ ಮುಂದೆ ಕುಳ್ಳಿರಿಸಿಕೊಳ್ಳಿ.

ಮಕ್ಕಳಿಗೆ ಹೀಗೆ ಹೇಳಿ: 'ಮಕ್ಕಳೇ, ಇಂದು ನಾವು ಮಾರುಕಟ್ಟೆಗೆ ಹೋಗೋಣ ಮತ್ತು ನಮಗೆ ಇಷ್ಟವಾದ ವಸ್ತುಗಳನ್ನು ಕೊಳ್ಳೋಣ.' ನೀವು ಹೇಳಿದ್ದನ್ನು ಮಕ್ಕಳು ಮರಳಿ ಹೇಳುವಂತೆ ಕೇಳಿ; ಒಂದು ವೇಳೆ ಅವರಿಗೆ ಹೇಳಲು ಸಾಧ್ಯವಾಗದಿದ್ದರೆ, ನೀವು ಮತ್ತೊಮ್ಮೆ ಹೇಳಿಕೊಡಿ.

ನಂತರ, ಮಕ್ಕಳಿಗೆ ಚಿತ್ರಗಳು ಮತ್ತು ಅವುಗಳ ಬೆಲೆ ಸರಿಯಾಗಿ ಕಾಣುವಂತೆ ಪೋಸ್ಟರ್ ಅನ್ನು ತೋರಿಸಿ. ಅವರಿಗೆ ಹೀಗೆ ವಿವರಿಸಿ: "ಇದು ಒಂದು ವಸ್ತು, ಇದರ ಕೆಳಗೆ ಇರುವುದು ಇದರ ಬೆಲೆಯನ್ನು ತೋರಿಸುವ ನೋಟು. ನೀವು ಯಾವುದಾದರೂ ವಸ್ತುವನ್ನು ಖರೀದಿಸಬೇಕೆಂದರೆ, ನಿಮ್ಮ ಮುಂದೆ ಇರುವ ನೋಟುಗಳಲ್ಲಿ ಅದೇ ಬೆಲೆಯ ನೋಟನ್ನು ಆರಿಸಿ ನನಗೆ ನೀಡಬೇಕು. ಆಗ ನಾನು ಆ ವಸ್ತುವನ್ನು ನಿಮಗೆ ನೀಡುತ್ತೇನೆ."

ಈ ಇಡೀ ಪ್ರಕ್ರಿಯೆಯನ್ನು ಒಂದು ಉದಾಹರಣೆಯೊಂದಿಗೆ ಮಕ್ಕಳಿಗೆ ಹೀಗೆ ವಿವರಿಸಿ: "ಮಕ್ಕಳೇ, ಉದಾಹರಣೆಗೆ ನಿಮಗೆ ಈ ಆಟದ ಕಾರು ಬೇಕು ಎಂದಿಟ್ಟುಕೊಳ್ಳಿ. ಅದರ ಕೆಳಗೆ ₹20 ಎಂದು ಬರೆದಿದ್ದರೆ, ನಿಮ್ಮ ಮುಂದೆ ಇರುವ ನೋಟುಗಳಲ್ಲಿ ₹20 ರ ನೋಟನ್ನು ಆರಿಸಿ ನನಗೆ ನೀಡಬೇಕು. ಆಗ ನಾನು ಆ ಆಟದ ಕಾರನ್ನು ನಿಮಗೆ ಕೊಡುತ್ತೇನೆ." ಈ ರೀತಿಯಾಗಿ ಎಲ್ಲಾ ಮಕ್ಕಳು ತಮಗೆ ಇಷ್ಟವಾದ ವಸ್ತುಗಳನ್ನು ಖರೀದಿಸಬಹುದು.

ಈಗ, ಒಂದೊಂದೇ ಮಗುವನ್ನು ಹತ್ತಿರ ಕರೆದು, ಅವರಿಗೆ ಯಾವ ವಸ್ತು ಬೇಕು ಎಂದು ಕೇಳಿ. ಮಗು ಆರಿಸಿದ ವಸ್ತುವಿನ ಕೆಳಗಿರುವ ನೋಟನ್ನು ತೋರಿಸಿ ಅದರ ಬೆಲೆಯನ್ನು ಹೇಳಿ. ನಂತರ ಆ ಮಗುವಿಗೆ ತನ್ನ ಮುಂದಿರುವ ನೋಟುಗಳಲ್ಲಿ ಅದೇ ಬೆಲೆಯ ನೋಟನ್ನು ಹುಡುಕಿ ಕೊಡಲು ತಿಳಿಸಿ. ಮಗು ಸರಿಯಾದ ನೋಟನ್ನು ನೀಡಿದಾಗ, ಅವರು ಆರಿಸಿದ ವಸ್ತುವನ್ನು ಅವರಿಗೆ ನೀಡಿ.

ಇದೇ ಪ್ರಕ್ರಿಯೆಯನ್ನು ಪ್ರತಿಯೊಂದು ಮಗುವಿನ ಜೊತೆಗೂ ಮಾಡಿ. ಒಂದು ವೇಳೆ ಯಾವುದಾದರೂ ಮಗುವಿಗೆ ಇದು ಕಷ್ಟವೆನಿಸಿದರೆ, ಅವರೊಂದಿಗೆ ಈ ಚಟುವಟಿಕೆಯನ್ನು ಮತ್ತೊಮ್ಮೆ ಮಾಡಿ. ಕಷ್ಟಪಡುವ ಮಕ್ಕಳಿಗೆ ಇದನ್ನು ಇನ್ನೊಂದು ಸುಲಭ ವಿಧಾನದಲ್ಲಿ ಮಾಡಿಸಬಹುದು: ಮೊದಲು ಮಗುವು ತನ್ನ ಮುಂದಿರುವ ನೋಟುಗಳಲ್ಲಿ ಯಾವುದಾದರೂ ಒಂದು ನೋಟನ್ನು ಎತ್ತಿಕೊಳ್ಳಲಿ. ನಂತರ ಚಾರ್ಟ್ ನೋಡಿ, ಆ ನೋಟಿನ ಬೆಲೆಗೆ ಸರಿಯಾಗಿ ಹೊಂದುವ ವಸ್ತು ಯಾವುದು ಎಂದು ಹುಡುಕಲು ಹೇಳಿ. ಮಗು ಸರಿಯಾದ ವಸ್ತುವನ್ನು ಗುರುತಿಸಿದರೆ, ಆ ವಸ್ತುವನ್ನು ಅವರಿಗೆ ನೀಡಿ.

ಎಲ್ಲಾ ಮಕ್ಕಳು ಈ ಚಟುವಟಿಕೆಯನ್ನು ಸುಲಭವಾಗಿ ಮಾಡಲು ತೊಡಗಿದಾಗ, ಅದರ ಮಟ್ಟವನ್ನು ಸ್ವಲ್ಪ ಹೆಚ್ಚಿಸಲು ವಸ್ತುಗಳ ಬೆಲೆಯನ್ನು ಬದಲಾಯಿಸಿ ಇದೇ ಚಟುವಟಿಕೆಯನ್ನು ಪುನರಾವರ್ತಿಸಬಹುದು.

**ಸಲಹೆಗಳು:**

- ಚಾರ್ಟ್‌ನಲ್ಲಿ ಯಾವೆಲ್ಲಾ ಬೆಲೆಯ ವಸ್ತುಗಳನ್ನು ತೋರಿಸಲಾಗಿದೆಯೋ, ಅಷ್ಟೇ ಮುಖಬೆಲೆಯ ನೋಟುಗಳನ್ನು ಮಾತ್ರ ಮಕ್ಕಳ ಮುಂದೆ ಇಡಿ.
- ಆರಂಭದಲ್ಲಿ ₹10, ₹20, ₹50 ಮತ್ತು ₹100 ರಂತಹ ಕಡಿಮೆ ಮುಖಬೆಲೆಯ ನೋಟುಗಳೊಂದಿಗೆ ಈ ಚಟುವಟಿಕೆಯನ್ನು ಪ್ರಾರಂಭಿಸುವುದು ಉತ್ತಮ.
- ಮಕ್ಕಳಿಗೆ ಯಾವುದೇ ಸೂಚನೆ ಅಥವಾ ಹಂತಗಳು ಅರ್ಥವಾಗದಿದ್ದರೆ, ಅವರಿಗೆ ಅದನ್ನು ಮತ್ತೊಮ್ಮೆ ಸಮಾಧಾನದಿಂದ ವಿವರಿಸಿ.

*ಈ ಚಟುವಟಿಕೆಯನ್ನು ಶೇಖರ್ ಬಿಂಧಾನಿ ಅವರು ವಿನ್ಯಾಸಗೊಳಿಸಿದ್ದಾರೆ. ಇವರು ಪ್ರಸ್ತುತ ಛತ್ತೀಸ್‌ಗಢದ ರಾಯ್‌ಗಢದಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ತಂಡದ ಸದಸ್ಯರಾಗಿದ್ದು, ಗಣಿತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.*

ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಕಿರಣ್ ಮಂಜುನಾಥ್



## ಮಾಸಿಕ ಪರೀಕ್ಷೆಯನ್ನು ಮೋಜಿನದಾಗಿಸುವ ವಿಧಾನಗಳ ಬಗ್ಗೆ ತಿಳಿವಳಿಕೆ ಮೂಡಿತು

‘ಪಾಠಶಾಲಾ ಭೀತರ್ ಔರ್ ಬಾಹರ್’ ಪತ್ರಿಕೆಯ 25ನೇ ಸಂಚಿಕೆಯಲ್ಲಿ ಪ್ರಕಟವಾದ ವೈಶಾಲಿ ಗೆದಮ್ ಅವರ ‘ಪರೀಕ್ಷೆಗಳು ಸಹ ವಿನೋದಮಯವಾಗಿರಬಹುದು’ ಎಂಬ ಲೇಖನವು, ನನ್ನ ತರಗತಿಯ ಅನುಭವಗಳಿಗೆ ಪೂರಕವಾಗಿವೆ ಎನಿಸುತ್ತದೆ. ಇದನ್ನು ಓದಿದ ನಂತರ, ಬಹು-ತರಗತಿ ಅಥವಾ ಬಹು-ಹಂತದ ಮಕ್ಕಳಿಗೆ ಏಕಕಾಲದಲ್ಲಿ ಹೇಗೆ ಕಲಿಸಬಹುದು ಎಂಬುದು ನನಗೆ ಮನವರಿಕೆಯಾಯಿತು.

ಜಾರ್ಖಂಡ್ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ ಮೂಲಕ, ಮಕ್ಕಳ ಕಲಿಕೆಯ ಮಟ್ಟವನ್ನು ಅರ್ಥಮಾಡಿಕೊಳ್ಳಲು ರಾಜ್ಯದ ಪ್ರತಿ ಶಾಲೆಯಲ್ಲಿ ಪ್ರತಿ ತಿಂಗಳು ಮಾಸಿಕ ಪರೀಕ್ಷೆಗಳನ್ನು ಆಯೋಜಿಸಲಾಗುತ್ತದೆ. ಈ ಲೇಖನದಿಂದ ನನ್ನ ಶಾಲೆಯಲ್ಲಿ ನಡೆಯುವ ಮಾಸಿಕ ಪರೀಕ್ಷೆಗಳನ್ನು ಇನ್ನಷ್ಟು ಮೋಜಿನದಾಗಿಸುವ ವಿಧಾನಗಳ ಬಗ್ಗೆ ನನಗೆ ಸ್ಪಷ್ಟ ತಿಳಿವಳಿಕೆ ಮೂಡಿತು.

**– ಕೃಷ್ಣಾ ಸಿಂಗ್, ಸಹಾಯಕ ಶಿಕ್ಷಕರು, ಜಾರ್ಖಂಡ್**

## ಪತ್ರಿಕೆಯಲ್ಲಿ ಮಕ್ಕಳ ಆಯ್ಕೆ ಮತ್ತು ಅವರೊಂದಿಗಿನ ಸಂವಾದದ ಲೇಖನಗಳನ್ನು ಸೇರಿಸಲಿ

25ನೇ ಸಂಚಿಕೆಯ ‘ಶಿಕ್ಷಕರ ದಿನಚರಿಯಿಂದ’ ಅಂಕಣದಲ್ಲಿ ಶಿಕ್ಷಕರ ಅತ್ಯುತ್ತಮ ಅನುಭವಗಳ ಮಹಾಪೂರವೇ ಹರಿದುಬಂದಿದೆ. ಇದರಲ್ಲಿ ಧರ್ಮಪಾಲ್ ಗಂಗ್ವಾರ್ ಅವರ ‘ಒಗಟುಗಳಿಂದಲೂ ಮಕ್ಕಳು ಕಲಿಯಬಲ್ಲರು’ ಲೇಖನ ಬಹಳ ಚೆನ್ನಾಗಿದೆ. ಕೆ. ಜೇಮ್ಸ್ ಕುಮಾರ್ ಅವರ ‘ನನ್ನ ತರಗತಿ ಸಂಪೂರ್ಣವಾಗಿ ಬದಲಾದ ಕಥೆ’ ಎಂಬ ಲೇಖನದಲ್ಲಿ ಇಂಗ್ಲಿಷ್ ಕಲಿಯುವ ಅತ್ಯಂತ ಆಸಕ್ತಿದಾಯಕ ಮತ್ತು ವ್ಯವಸ್ಥಿತ ವಿಧಾನ ಕಂಡುಬರುತ್ತದೆ. ಚಿತ್ರಗಳಿಂದ ಹಿಡಿದು ಹಾಡುಗಳ ಮೂಲಕ ಅವರು ಮಕ್ಕಳಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸಿದ ರೀತಿ ಶ್ಲಾಘನೀಯ.

ಎಲ್ಲಾ ಲೇಖನಗಳು ಸರಳ, ಪ್ರಾಯೋಗಿಕ ಮತ್ತು ಕ್ರಮಬದ್ಧ ಶೈಲಿಯಲ್ಲಿವೆ. ಮುಂಬರುವ ಸಂಚಿಕೆಗಳಲ್ಲಿ ಮಕ್ಕಳಿಗೆ ಇಷ್ಟವಾಗುವ ಪುಸ್ತಕಗಳು ಮತ್ತು ಮಕ್ಕಳೊಂದಿಗೆ ಸಂವಾದ ನಡೆಸಲು ಪೂರಕವಾಗಿರುವ ಪುಸ್ತಕಗಳ ಬಗ್ಗೆಯೂ ಲೇಖನಗಳನ್ನು ಸೇರಿಸಲಿ ಎಂಬುದು ನನ್ನ ಆಶಯ.

**– ದೀಪಾ ತಿವಾರಿ, ಸಹಾಯಕ ಶಿಕ್ಷಕರು, ಉತ್ತರಾಖಂಡ**

## ತಳಮಟ್ಟದ ಸವಾಲುಗಳನ್ನು ಎದುರಿಸಲು ಶಿಕ್ಷಕರ ಡೈರಿಗಳು ಸಹಕಾರಿ

25ನೇ ಸಂಚಿಕೆಯ ಶಿಕ್ಷಕರ ದಿನಚರಿಗಳು, ಶಿಕ್ಷಕರಿಗೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಂತರವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಇತರ ಅಂಕಣಗಳ ವಿಷಯಗಳು ನಮಗೆ ಸವಾಲುಗಳನ್ನು ಬದ್ಧತೆಯಿಂದ ಎದುರಿಸುವ ದೃಷ್ಟಿಕೋನವನ್ನು ನೀಡುತ್ತವೆ. ಗ್ರಂಥಾಲಯದ ಕೆಲಸದ ಸಮಯದಲ್ಲಿ ಮಕ್ಕಳೊಂದಿಗೆ ಸಂವಹನ ನಡೆಸುತ್ತಾ ಒಗಟುಗಳ ಮೇಲೆ ಕೆಲಸ ಮಾಡುವುದು ಅತ್ಯಂತ ರೋಚಕವಾಗಿದೆ. ಹಳೆಯ ಒಗಟುಗಳ ಬದಲಿಗೆ ಹೊಸ ಒಗಟುಗಳನ್ನು ರಚಿಸುವುದು ಮಕ್ಕಳನ್ನು ಸೃಜನಶೀಲತೆಯತ್ತ ಕೊಂಡೊಯ್ಯುತ್ತದೆ. ಇದರಿಂದ ಮಕ್ಕಳ ಆಲೋಚನೆ, ತರ್ಕ ಮತ್ತು ಅರ್ಥೈಸಿಕೊಳ್ಳುವ ವ್ಯಾಪ್ತಿ ವಿಸ್ತಾರವಾಗುತ್ತದೆ.

**– ಸಂಗೀತಾ ಗುಪ್ತಾ, ನಿವೃತ್ತ ಮುಖ್ಯೋಪಾಧ್ಯಾಯರು, ಉತ್ತರಾಖಂಡ**

## ಸಾಂಪ್ರದಾಯಿಕ ನಂಬಿಕೆಗಳನ್ನು ಬಿಡಿ, ಬೋಧನೆಯಲ್ಲಿ ಹೊಸ ವಿಧಾನಗಳನ್ನು ಅಳವಡಿಸಿ

ಗೌತಮ್ ಪಾಂಡೆ ಅವರ ‘ಶಿಕ್ಷಣ ಮತ್ತು ಶಿಕ್ಷಕರು | ತಳಸ್ತರದ ವಾಸ್ತವಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯ’ ಲೇಖನವನ್ನು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರು ಓದಲೇಬೇಕು. ತಳಸ್ತರದಲ್ಲಿ ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕು ಎಂಬ ಅವರ ಸಲಹೆ ನನಗೆ ಬಹಳ ಮುಖ್ಯವೆನಿಸಿತು. ಸಾಂಪ್ರದಾಯಿಕ ನಂಬಿಕೆಗಳಿಂದ ಹೊರಬಂದು ನಾವು ಹೊಸ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು ಮತ್ತು ನಮ್ಮಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂಬುದು ಅವರ ಆಶಯವಾಗಿದೆ.

**– ಸೋನಾಲಿಕಾ ಗರಾಯಿ, ಸಂಪನ್ಮೂಲ ವ್ಯಕ್ತಿ, ಅಜೀಂ ಪ್ರೇಮ್‌ಜೀ ಫೌಂಡೇಷನ್, ಜಾರ್ಖಂಡ್**

## ಸಂವಾದವೇ ನನ್ನ ಬೋಧನೆಯ ಮಾಧ್ಯಮವಾಯಿತು

24ನೇ ಸಂಚಿಕೆಯಲ್ಲಿ ಪ್ರಕಟವಾದ ಅರವಿಂದ್ ಕುಮಾರ್ ಸಿಂಗ್ ಅವರ ‘ತರಗತಿಯ ಸಂಭಾಷಣೆಗಳು ಕಲಿಕೆಗೆ ಮುಖ್ಯ’ ಲೇಖನದ ವಿಚಾರಗಳು ನನ್ನ ತರಗತಿಯ ಅನುಭವಗಳಿಗೆ ಹತ್ತಿರವಾಗಿವೆ. ಗಣಿತದ ಅಮೂರ್ತ ಕಲ್ಪನೆಗಳಿರಲಿ ಅಥವಾ ಹಿಂದಿಯ ಮೋಜಿನ ಕಥೆಗಳಿರಲಿ, ವಿಷಯವನ್ನು ಸರಳಗೊಳಿಸಲು ಸಂವಾದವು ನನಗೆ ಯಾವಾಗಲೂ ಒಂದು ಪೂರಕ ಮಾಧ್ಯಮವಾಗಿದೆ. ಕಥೆ ಹೇಳುವ ಮೂಲಕ ವಿದ್ಯಾರ್ಥಿಗಳ ಕಲ್ಪನೆ ಮತ್ತು ಸೃಜನಶೀಲ ಕೌಶಲಗಳನ್ನು ಅಳೆಯಲು ಸಂವಾದವು ನನಗೆ ಸಹಾಯ ಮಾಡಿದೆ.

**– ಅಲೀಶಾ ಇಸ್ಲಾಂ, ಸಂಪನ್ಮೂಲ ವ್ಯಕ್ತಿ, ಮಧ್ಯಪ್ರದೇಶ**

## ‘ಮೇರಾ ನಾಮ್ ಗುಲಾಬ್ ಹೈ’ ನಂತಹ ಕೃತಿಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು ಅಗತ್ಯ

24ನೇ ಸಂಚಿಕೆಯಲ್ಲಿ ‘ಮೇರಾ ನಾಮ್ ಗುಲಾಬ್ ಹೈ’ ಪುಸ್ತಕದ ವಿಮರ್ಶೆಯನ್ನು ಓದಿದಾಗ, ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿರುವ ತಾರತಮ್ಯದ ಅರಿವಾಗುತ್ತದೆ. ಲೇಖಕರು ಯಾವುದೇ ಮಾಂತ್ರಿಕ ಪರಿಹಾರವನ್ನು ನೀಡುವುದಿಲ್ಲ; ಬದಲಾಗಿ ಸಮಾಜದಲ್ಲಿ ಇಂದಿಗೂ ಸಂವಿಧಾನ ವಿರೋಧಿ ಮತ್ತು ಅಮಾನವೀಯ ಕೃತ್ಯಗಳು ನಡೆಯುತ್ತಿವೆ ಎಂಬುದನ್ನು ಪುಸ್ತಕದ ಪಾತ್ರಗಳ ಮೂಲಕ ಎತ್ತಿ ತೋರಿಸಿದ್ದಾರೆ. ಇಂತಹ ಕೃತಿಗಳು ಸಮಾಜದ ಜನರನ್ನು ಆಳವಾಗಿ ಯೋಚಿಸುವಂತೆ ಮಾಡುತ್ತವೆ ಎಂದು ನಾನು ಭಾವಿಸುತ್ತೇನೆ.

**– ಪ್ರವೀಣ್ ಕುಮಾರ್ ಮಧು, ಸಂಪನ್ಮೂಲ ವ್ಯಕ್ತಿ, ಮಧ್ಯಪ್ರದೇಶ**

## ಮಕ್ಕಳಿಗೆ ಪ್ರೀತಿಯಿಂದ ಕಲಿಸಿ; ಭಯ ಮತ್ತು ಪೆಟ್ಟಿನಿಂದಲ್ಲ

ಕಿಶನ್ ಲಾಲ್ ಸಾಲ್ವಿ ಅವರ ‘ಭಯವು ಕಲಿಕೆಗೆ ಅಡ್ಡಿಯಾಗುತ್ತದೆ’ ಲೇಖನವು, ಮಕ್ಕಳು ಭಯದಲ್ಲಿದ್ದಾಗ ಕಲಿಕಾ ಫಲಿತಗಳು ಅಥವಾ ಶಿಕ್ಷಕ-ವಿದ್ಯಾರ್ಥಿ ಸಂಬಂಧಗಳು ಉತ್ತಮವಾಗಿರುವುದಿಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ. ನಾನು ಶಾಲೆಗೆ ಸೇರಿದ ಹೊಸತರಲ್ಲಿ ಮಕ್ಕಳು ಬಹಳ ಭಯಭೀತರಾಗಿದ್ದರು. ಕ್ರಮೇಣ ಅವರೊಂದಿಗೆ ಮಾತನಾಡಿ, ಆಟ ಮತ್ತು ಚಟುವಟಿಕೆಗಳನ್ನು ಪ್ರಾರಂಭಿಸಿದಾಗ ಅವರಲ್ಲಿನ ಭಯ ದೂರವಾಯಿತು. ನಿಜ ಹೇಳಬೇಕೆಂದರೆ, ಪ್ರೀತಿಯಿಂದ ಕಲಿಸಬಹುದಾದ ವಿಷಯಗಳನ್ನು ಎಂದಿಗೂ ಭಯ ಅಥವಾ ಪೆಟ್ಟಿನಿಂದ ಕಲಿಸಲು ಸಾಧ್ಯವಿಲ್ಲ.

**– ಅಂತಿಮಾ ವಾಸಕಲೆ, ಪ್ರಾಥಮಿಕ ಶಾಲಾ ಶಿಕ್ಷಕರು, ಮಧ್ಯಪ್ರದೇಶ**

## ‘ಓದು-ಬೋಧನೆ, ಕಲಿಕೆ-ಕಲಿಸುವಿಕೆ’ ತರಬೇತಿ ಮಾದರಿ ಉತ್ತಮವಾಗಿದೆ

ಅನುರಾಗ್ ಬೆಹಾರ್ ಅವರ ‘ಶಿಕ್ಷಕರ ಬೆಳವಣಿಗೆಯನ್ನು ಬೆಂಬಲಿಸುವುದೇ ಅವರಿಗೆ ನೀಡುವ ನಿಜವಾದ ಗೌರವ’ ಲೇಖನವು, ನಮ್ಮ ಉಧಮ್ ಸಿಂಗ್ ನಗರದ ‘ಸೃಜನ್ ಸಮೂಹ’ದ ಕಾರ್ಯವಿಧಾನವನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಈ ಗುಂಪಿನ ಸದಸ್ಯರು ಓದುತ್ತಾರೆ, ತಮ್ಮ ಬೋಧನಾ ಪ್ರಕ್ರಿಯೆಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಒಬ್ಬರಿಂದೊಬ್ಬರು ಕಲಿಯುತ್ತಾರೆ. ಕೇವಲ ಶಿಕ್ಷಣ ಇಲಾಖೆಯ ತರಬೇತಿಗಳು ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಸಾಕಾಗುವುದಿಲ್ಲ ಎಂಬ ಲೇಖಕರ ಮಾತು ಸರಿಯಾಗಿದೆ. ಆದ್ದರಿಂದ ಸೇವೆಯಲ್ಲಿರುವಾಗ ‘ಕಲಿಕೆ-ಕಲಿಸುವಿಕೆ’ಯ ಈ ಸಹಭಾಗಿತ್ವದ ಮಾದರಿಯು ಹೆಚ್ಚು ಸೂಕ್ತವಾಗಿದೆ.

**– ಧರ್ಮಪಾಲ್ ಗಂಗ್ವಾರ್, ಮುಖ್ಯೋಪಾಧ್ಯಾಯರು, ಉತ್ತರಾಖಂಡ**

## ಶಿಕ್ಷಕರಿಗೆ ಈ ಲೇಖನವು ಸಂಜೀವಿನಿಯಿದ್ದಂತೆ

ಶಿಕ್ಷಕರ ಸಾಮರ್ಥ್ಯವನ್ನು ಅಭಿವೃದ್ಧಿ ನಿರಂತರವಾಗಿ ನಡೆಯಬೇಕಾದ ಪ್ರಕ್ರಿಯೆ ಎಂದು ಅನುರಾಗ್ ಬೆಹಾರ್ ಅವರು ತಮ್ಮ ಲೇಖನದಲ್ಲಿ ಹೇಳುತ್ತಾರೆ. ಕೆಂಡದ ಮೇಲೆ ಬೂದಿ ಮುಚ್ಚಿದಾಗ ಅದನ್ನು ಊದಿ ಹೇಗೆ ಮತ್ತೆ ಬೆಂಕಿಯನ್ನು ಪ್ರಜ್ವಲಿಸುವಂತೆ ಮಾಡುತ್ತೇವೆಯೋ, ಹಾಗೆಯೇ ಶಿಕ್ಷಕರ ತರಬೇತಿಗಳನ್ನು ಬಹಳ ಸಿದ್ಧತೆಯಿಂದ ನಡೆಸಬೇಕು. ಈ ಲೇಖನವು ಶಿಕ್ಷಣ ಜಗತ್ತಿಗೆ ಒಂದು ಹೊಸ ಹಾದಿಯನ್ನು ತೋರಿಸಬಲ್ಲದು.

**– ರಾಜೇಂದ್ರ ಕುಮಾರ್ ಕುಮಾವತ್, ಹಿರಿಯ ಶಿಕ್ಷಕ, ರಾಜಸ್ಥಾನ**

## ಶಿಕ್ಷಕರ ಅಭಿವೃದ್ಧಿಯಲ್ಲಿ ಸಹಕರಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ

“ಕಲಿಯಲು ಕಷ್ಟಪಡುತ್ತಿರುವ ಮಗುವೊಂದು ವಿಷಯವನ್ನು ಅರ್ಥಮಾಡಿಕೊಂಡಾಗ ಶಿಕ್ಷಕರು ಹೆಮ್ಮೆಪಡುತ್ತಾರೆ” ಎಂಬ ಲೇಖನದ ಸಾಲು ನನಗೆ ಬಹಳ ಇಷ್ಟವಾಯಿತು. ಮಗುವೊಂದು “ಈಗ ನನಗೆ ಅರ್ಥವಾಯಿತು” ಎಂದು ಹೇಳಿದಾಗ, ನಾವು ಪಟ್ಟ ಶ್ರಮವೆಲ್ಲ ಸಾರ್ಥಕವಾಯಿತು ಎನಿಸುತ್ತದೆ. ಸಂವೇದನಾಶೀಲ ಸಮಾಜವನ್ನು ನಿರ್ಮಿಸಲು ನಮ್ಮ ಶಿಕ್ಷಕರಿಗೂ ನಿರಂತರವಾಗಿ ಕಲಿಯಲು ಮತ್ತು ಅಭಿವೃದ್ಧಿ ಹೊಂದಲು ಹೆಚ್ಚಿನ ಅವಕಾಶಗಳನ್ನು ನೀಡಬೇಕು.

**– ಪ್ರಕಾಶ್ ಮಿನೇರಿಯಾ, ಸಂಪನ್ಮೂಲ ವ್ಯಕ್ತಿ, ರಾಜಸ್ಥಾನ**

## ಕಥೆಗಳು ಮಕ್ಕಳಿಗೆ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ನೆರವಾಗುತ್ತವೆ

ಎಸ್. ಕವಿತಾ ಅವರ ದಿನಚರಿಯಲ್ಲಿ ಸೂಚಿಸಲಾದ ಪ್ರಕ್ರಿಯೆಗಳಿಂದ ಮಕ್ಕಳಲ್ಲಿ ಕಲ್ಪನಾಶೀಲತೆ ಬೆಳೆಯುವುದಲ್ಲದೆ, ಇತರರ ಭಾವನೆಗಳನ್ನು ಅರಿಯುವ ಮತ್ತು ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸುವ ಗುಣ ಬೆಳೆಯುತ್ತದೆ. ಕಥೆ ಹೇಳುವುದರ ಜೊತೆಗೆ, ಮಕ್ಕಳಿಗೆ ಅವರ ವಿಚಾರಗಳನ್ನು ಬರೆದು ವ್ಯಕ್ತಪಡಿಸಲು ಹೇಳಿದರೆ ಅವರ ಸೃಜನಾತ್ಮಕ ಬರವಣಿಗೆ ಮತ್ತು ಭಾಷಾ ಬೆಳವಣಿಗೆ ಇನ್ನಷ್ಟು ಉತ್ತಮವಾಗುತ್ತದೆ ಎಂಬುದು ನನ್ನ ಸಲಹೆ.

**– ಪೂಜಾ ಜೈನ್, ಶಿಕ್ಷಕರು, ಮಧ್ಯಪ್ರದೇಶ**

## ಗಣಿತದ ಸಮಸ್ಯೆಗಳನ್ನು ಬಿಡಿಸಲು ಸಹಕಾರಿ ಲೇಖನ

ಸಂಧ್ಯಾ ಸಿಂಗ್ ಅವರ ‘ತರಗತಿಯಲ್ಲಿ ಗಣಿತೀಯ ಸಂಭಾಷಣೆಗಳು’ ದಿನಚರಿಯು ಗಣಿತವನ್ನು ಆಸಕ್ತಿದಾಯಕವಾಗಿಸಲು ಸಹಾಯ ಮಾಡುತ್ತದೆ. ಗಣಿತದ ಹೇಳಿಕೆ ಸಮಸ್ಯೆಗಳನ್ನು ಗಣಿತ ಕ್ರಿಯೆಗಳಾಗಿ (Operations) ಪರಿವರ್ತಿಸುವಲ್ಲಿ ಮಕ್ಕಳು ಎದುರಿಸುವ ಸವಾಲನ್ನು ಇಲ್ಲಿ ನಿವಾರಿಸಲಾಗಿದೆ. ಶಿಕ್ಷಕರು ಮಕ್ಕಳಿಗೆ ಮುಕ್ತವಾಗಿ ಮಾತನಾಡಲು ಅವಕಾಶ ನೀಡಿದ್ದು ಮತ್ತು ಒಂದು ಸಮಸ್ಯೆಯನ್ನು ಹಲವು ವಿಧಾನಗಳಲ್ಲಿ ಬಿಡಿಸಿದ್ದು ಶ್ಲಾಘನೀಯ.

**– ಸತ್ಯಪ್ರಕಾಶ್ ಪ್ರಧಾನ್, ಶಿಕ್ಷಕ, ಛತ್ತೀಸ್‌ಗಢ**

## ಶಾಲೆ ಮತ್ತು ಮನೆಯಲ್ಲಿ ಭಿನ್ನಾಭಿಪ್ರಾಯಗಳನ್ನು ಗೌರವಿಸುವುದನ್ನು ಮಕ್ಕಳಿಗೆ ಕಲಿಸಿ

'ಭ್ರಾತೃತ್ವದ ಬೋಧನೆ' ಲೇಖನದಲ್ಲಿ ಲೇಖಕರಾದ ಅಮನ್ ಮದಾನ್ ಅವರು ನಮ್ಮ ಸುತ್ತಮುತ್ತಲಿನ ಜನರ ಬಗ್ಗೆ ಇರುವ ಪೂರ್ವಗ್ರಹಗಳು ನಮ್ಮ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಸುಂದರವಾಗಿ ವಿವರಿಸಿದ್ದಾರೆ. ಆದ್ದರಿಂದ ಈ ಪೂರ್ವಗ್ರಹಗಳಿಂದ ಪಾರಾಗಲು, ಶಾಲೆ ಮತ್ತು ಮನೆಯಲ್ಲಿ ಮಕ್ಕಳಿಗೆ ವೈವಿಧ್ಯತೆಯನ್ನು ಮತ್ತು ಭಿನ್ನಾಭಿಪ್ರಾಯಗಳನ್ನು ಗೌರವಿಸುವುದನ್ನು ಕಲಿಸಬೇಕು.

**– ಅಂತರಾ ಗುಪ್ತಾ, ಸಂಪನ್ಮೂಲ ವ್ಯಕ್ತಿ, ಛತ್ತೀಸ್‌ಗಢ**

## ನನ್ನ ತರಗತಿಯನ್ನು 'ಮುದ್ರಣ-ಸಮೃದ್ಧ ತರಗತಿ' ಮಾಡಲು ಹೊಸ ಮಾರ್ಗಗಳನ್ನು ಹುಡುಕುತ್ತೇನೆ

ಲೇಖಕಿ ಸೀಮಾ ಅರೋರಾ ಅವರು 'ಮುದ್ರಣ-ಸಮೃದ್ಧ' ತರಗತಿಯ ಮಹತ್ವವನ್ನು ಕಂಡುಕೊಂಡಿದ್ದಾರೆ. ತರಗತಿಯಲ್ಲಿ ಚಾರ್ಟ್‌ಗಳು, ಹೊಸ ಪದಗಳು ಮತ್ತು ಕಥೆಗಳನ್ನು ಅಳವಡಿಸುವುದರಿಂದ ವಿದ್ಯಾರ್ಥಿಗಳು ಬೇಗ ಓದಲು ಮತ್ತು ಬರೆಯಲು ಕಲಿತರು. ಇದು ನನ್ನ ತರಗತಿಯ ಅನುಭವಕ್ಕೂ ಹೊಂದಿಕೆಯಾಗುತ್ತದೆ. ನಾನು ಕೂಡ ನನ್ನ ತರಗತಿಯನ್ನು ಮುದ್ರಣ-ಸಮೃದ್ಧ ಮಾಡಲು ಹೊಸ ದಾರಿಗಳನ್ನು ಹುಡುಕುತ್ತೇನೆ.

**– ಶತಾಬ್ದಿ ಸೆಕಿಯಾ, ಸಂಪನ್ಮೂಲ ವ್ಯಕ್ತಿ, ಛತ್ತೀಸ್‌ಗಢ**

## 'ಪಾಠಶಾಲಾ' ಶಿಕ್ಷಣ ಕ್ಷೇತ್ರದಲ್ಲಿ ಒಂದು ಉಪಯುಕ್ತ ಸಂಪನ್ಮೂಲವಾಗಿದೆ

ಗುರುಬಚನ್ ಸಿಂಗ್ ಅವರ 'ಪಾಠಶಾಲಾ ಭೀತರ್ ಔರ್ ಬಾಹರ್' ಪತ್ರಿಕೆಯ '25 ಸಂಚಿಕೆಗಳ ಪಯಣ' ಲೇಖನವು, ಕಳೆದ 7 ವರ್ಷಗಳ ಪ್ರಯಾಣವನ್ನು ದರ್ಶಿಸುತ್ತದೆ. ಕಲಿಕೆಯನ್ನು ಆಸಕ್ತಿದಾಯಕವಾಗಿಸಲು ಮತ್ತು ಶಿಕ್ಷಕರ ವೃತ್ತಿಪರ ಅಭಿವೃದ್ಧಿಯಲ್ಲಿ ಈ ಪತ್ರಿಕೆ ಮಹತ್ತರ ಪಾತ್ರ ವಹಿಸಿದೆ.

**– ದೇವೇಂದ್ರ ಸಿಂಗ್, ಸಹಾಯಕ ಶಿಕ್ಷಕರು, ಉತ್ತರ ಪ್ರದೇಶ**

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಅನುರೂಪಾ ರವೀಂದ್ರ

# ಲೇಖಕರ ಗಮನಕ್ಕೆ

1. ಮುದ್ರಣದಲ್ಲಿ ಲೇಖನದ ಶೀರ್ಷಿಕೆಯ ಕೆಳಗೆ ನಿಮ್ಮ ಹೆಸರು ಹೇಗೆ ಇರಬೇಕೋ ಹಾಗೆ ನಿಮ್ಮ ಹೆಸರನ್ನು ಬರೆಯಿರಿ.

2. ನೀವು ನಿಮ್ಮ ಲೇಖನವನ್ನು ವರ್ಡ್ ಡಾಕ್ಯುಮೆಂಟ್ ರೂಪದಲ್ಲಿ ಕಳಿಸಿ. ಅದರಲ್ಲಿ ಯಾವುದೇ ರೀತಿಯ ಬಾಕ್ಸ್, ಬಾರ್ಡರ್ ಮುಂತಾದವುಗಳು ಇರಬಾರದು. ಲೇಖನವನ್ನು ಪಿಡಿಎಫ್ ರೂಪದಲ್ಲಿ ಕಳಿಸಬೇಡಿ.

3. ಲೇಖನಕ್ಕೆ ಸಂಬಂಧಿಸಿದ ಚಿತ್ರಗಳು ಉತ್ತಮ ಗುಣಮಟ್ಟದ್ದಾಗಿರಬೇಕು (ಹೈ ರೆಸಲ್ಯೂಶನ್ ಫೋಟೋಗಳು). ಚಿತ್ರಗಳನ್ನು ವರ್ಡ್ ಡಾಕ್ಯುಮೆಂಟ್‌ನಲ್ಲಿ ಸೇರಿಸದೇ, ಪ್ರತ್ಯೇಕವಾಗಿ ಈಮೇಲ್‌ಗೆ ಲಗತ್ತಿಸಿ ಕಳಿಸಿ.

4. ಮೂರು ಅಥವಾ ನಾಲ್ಕಕ್ಕಿಂತ ಹೆಚ್ಚು ಚಿತ್ರಗಳನ್ನು ಕಳಿಸಬೇಡಿ. ಪ್ರತಿಯೊಂದು ಚಿತ್ರದ ಫೈಲಿಗೂ ಚಿತ್ರ 1, ಚಿತ್ರ 2 - ಹೀಗೆ ಹೆಸರು ಕೊಡಿ. ಲೇಖನದಲ್ಲಿ ಯಾವ ಚಿತ್ರವು ಎಲ್ಲಿ ಬರಬೇಕೆಂದು ಸೂಚಿಸಿ ಅಲ್ಲಿ ಆ ಚಿತ್ರದ ಶೀರ್ಷಿಕೆಯನ್ನು ಕೊಡಿ. ಚಿತ್ರದ ಬಳಕೆಯ ವಿಚಾರದಲ್ಲಿ ಸಂಪಾದಕರ ನಿರ್ಧಾರವು ಅಂತಿಮವಾಗಿರುತ್ತದೆ.

5. ಚಿತ್ರದ ಕೆಳಗೆ ಚಿತ್ರದ ಆಕರವನ್ನು ತಪ್ಪದೆ ನಮೂದಿಸಿ. ಎಲ್ಲ ಚಿತ್ರಗಳೂ ಕಾಪಿರೈಟ್ ಫ್ರೀ ಆಗಿರಬೇಕು.

6. ಫೋಟೋ ಅನ್ನು ನೀವೇ ತೆಗೆದಿದ್ದರೆ, ಅದನ್ನು ನಮ್ಮ ಪ್ರಕಟಣೆಯಲ್ಲಿ ಬಳಸಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಯ (ಶಿಕ್ಷಕರು ಅಥವಾ ಶಾಲೆ) ಅನುಮತಿ ಪಡೆದುಕೊಳ್ಳಿ.

7. ಮಕ್ಕಳ ಕ್ಲೋಸ್‌ಅಪ್ ಫೋಟೋಗಳನ್ನು ಮತ್ತು ಮಕ್ಕಳ ಮುಖಗಳು ಸ್ಪಷ್ಟವಾಗಿ ಕಾಣುವಂತಹ ಫೋಟೋಗಳನ್ನು ತೆಗೆಯುವುದನ್ನು ತಪ್ಪಿಸಿ.

8. ನಿಮ್ಮ ಲೇಖನದಲ್ಲಿ ಬೇರೆ ಪುಸ್ತಕ ಅಥವಾ ಲೇಖನದಿಂದ ಆಯ್ದ ಭಾಗವನ್ನು ಬಳಸಿದಾಗ ಅಥವಾ ವ್ಯಕ್ತಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿದಾಗ, ಅವರ ಸಂಪೂರ್ಣ ಹೆಸರುಗಳು ಮತ್ತು ಉಲ್ಲೇಖಗಳನ್ನು ಸೇರಿಸುವ ಮೂಲಕ ಇದನ್ನು ಸ್ಪಷ್ಟವಾಗಿ ನಮೂದಿಸಿ.

9. ಲೇಖನವನ್ನು ನಮಗೆ ಕಳಿಸುವ ಮೊದಲು ಎರಡು ಬಾರಿ ಓದಿ. ಹೀಗೆ ಮಾಡುವುದರಿಂದ, ಲೇಖನದಲ್ಲಿ ಕಾಗುಣಿತದ ದೋಷಗಳನ್ನು ತಿದ್ದುವುದೂ ಸೇರಿದಂತೆ ಹಲವು ಗಣನೀಯ ತಿದ್ದುಪಡಿಗಳನ್ನು ಮಾಡಬಹುದು.

10. ನಿಮ್ಮ ಲೇಖನದೊಂದಿಗೆ ನಿಮ್ಮ ಸಂಕ್ಷಿಪ್ತ ಪರಿಚಯ, ಸ್ಪಷ್ಟವಾದ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ನಿಮ್ಮ ಇಮೇಲ್ ವಿಳಾಸ, ಸಂಪೂರ್ಣ ಅಂಚೆ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸೇರಿಸಿ.

11. ನೀವು ಸಲ್ಲಿಸುತ್ತಿರುವ ಲೇಖನವು ನೀವೇ ಬರೆದಿರುವ ಲೇಖನವಾಗಿರಬೇಕು. ಸಲ್ಲಿಸುವ ಸಂದರ್ಭದಲ್ಲಿ ಅದು ಎಲ್ಲಿಯೂ ಪ್ರಕಟವಾಗಿರಬಾರದು ಮತ್ತು ಅದನ್ನು ನೀವು ಬೇರೆ ಯಾವ ಪತ್ರಿಕೆಯಲ್ಲೂ ಪ್ರಕಟಣೆಗೆ (ಪ್ರಿಂಟ್ ಅಥವಾ ಆನ್‌ಲೈನ್) ಸಲ್ಲಿಸಿರಬಾರದು ಅಥವಾ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರಬಾರದು.

12. ಲೇಖನವು ನಮ್ಮನ್ನು ತಲುಪಿದ ತಕ್ಷಣ ಅದರ ಸ್ವೀಕೃತಿಯ ಬಗ್ಗೆ ನಿಮಗೆ ತಿಳಿಸುತ್ತೇವೆ. ಲೇಖನವನ್ನು ಸ್ವೀಕರಿಸಿದ 45 ದಿನಗಳೊಳಗೆ, ಅದು ಪ್ರಕಟಣೆಗೆ ಆಯ್ಕೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸುತ್ತೇವೆ. ಆಯ್ಕೆಯಾಗಿದ್ದರೆ, ಸಂಪಾದಕೀಯ ತಂಡದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ನಾವು ನಿಮಗೆ ಕಳುಹಿಸುತ್ತೇವೆ.

13. ಪತ್ರಿಕೆಯಲ್ಲಿ 2000, 1500 ಮತ್ತು 700 ಪದಗಳ ಲೇಖನಗಳಿರುತ್ತವೆ. ಬರೆಯುವ ಮೊದಲು, ನೀವು ಎಷ್ಟು ಪದಗಳ ಲೇಖನವನ್ನು ಬರೆಯಲು ಇಚ್ಛಿಸುತ್ತೀರಿ ಎಂಬುದನ್ನು ನಮ್ಮೊಂದಿಗೆ ಚರ್ಚಿಸಿ ಮತ್ತು ಲೇಖನವು ಪದ ಮಿತಿಯ ಒಳಗೇ ಇರುವುದನ್ನು ಖಚಿತಪಡಿಸಿ.

14. ಸಂಪಾದಕೀಯ ತಂಡವು ಲೇಖನವನ್ನು ಪರಿಷ್ಕರಿಸುವ ಹಕ್ಕನ್ನು ಹೊಂದಿದೆ. ಪರಿಷ್ಕರಿಸಿದ ಲೇಖನವನ್ನು ಪ್ರಕಟಣೆಗೆ ಮೊದಲು ನಿಮಗೆ ಕಳಿಸಲಾಗುವುದು.

15. 'ಪಾಠಶಾಲೆ' ಪತ್ರಿಕೆಯು ಹಿಂದಿ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾಗುತ್ತದೆ. ನೀವು ಈ ಯಾವುದೇ ಭಾಷೆಗಳಲ್ಲಿ ನಿಮ್ಮ ಲೇಖನವನ್ನು ಕಳುಹಿಸಬಹುದು.

16. ನೀವು ಯಾವುದೇ ಭಾಷೆಯಲ್ಲಿ ಲೇಖನವನ್ನು ಸಲ್ಲಿಸಿದರೂ, ಅದನ್ನು ಅನುವಾದಿಸಿ ಮೂರೂ ಭಾಷೆಗಳಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಇವರನ್ನು ಸಂರ್ಕಿಸಬಹುದು:

ಪ್ರತಿಭಾ (ಹಿಂದಿ): katiyar@azimpremjifoundation.org

ಶೆಫಾಲೀ (ಇಂಗ್ಲಿಷ್): shefali.mehta@apu.edu.in

ರಾಘವೇಂದ್ರ ಹೇರ್ಳೆ (ಕನ್ನಡ) : Raghavendra.herle@azimpremjifoundation.org

ಮುದ್ರಣ ಮತ್ತು ಪ್ರಕಟಣೆ: ರಿಷಿಕೇಶ್ ಬಿ.ಎಸ್., ಕುಲಸಚಿವರು, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಪರವಾಗಿ,
ಮುದ್ರಣ: ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು
ಪ್ರಕಟಣೆ: ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ, ಸರ್ವೆ ನಂ. 66, ಬೂರುಗುಂಟೆ ಗ್ರಾಮ, ಬಿಕ್ಕನಹಳ್ಳಿ ಮುಖ್ಯ ರಸ್ತೆ,
ಸರ್ಜಾಪುರ, ಬೆಂಗಳೂರು, ಕರ್ನಾಟಕ 562 125.
ಪ್ರಧಾನ ಸಂಪಾದಕರು: ಪ್ರತಿಭಾ ಕಟಿಯಾರ್


Azim Premji University

# Anuvada Sampada

# ಅನುವಾದ ಸಂಪದ

## ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶೈಕ್ಷಣಿಕ ಸಂಪನ್ಮೂಲಗಳ ಸಂಗ್ರಹ

ಇಂಗ್ಲಿಷ್‌ನಿಂದ ಕನ್ನಡ ಮತ್ತು ಹಿಂದಿ ಭಾಷೆಗಳಿಗೆ ಅನುವಾದಗೊಂಡಿರುವ 2000ಕ್ಕೂ ಹೆಚ್ಚು ಉನ್ನತ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳ ಮುಕ್ತ ಮತ್ತು ವಿನೂತನವಾದ ಆನ್‌ಲೈನ್ ಸಂಪದ. ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಮಾನವಿಕ, ಶಿಕ್ಷಣ ಮತ್ತು ಭಾಷಾ ವಿಷಯಗಳ ಪರಿಕಲ್ಪನೆಗಳು ಮತ್ತು ಚಿಂತನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪಾಲಿನ ಕಣಜ.






ಕನ್ನಡ ಮತ್ತು ಹಿಂದಿಯಲ್ಲಿ ಉಚಿತವಾಗಿ ಹಾಗೂ ಮುಕ್ತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಶೈಕ್ಷಣಿಕ ಸಂಪನ್ಮೂಲಗಳ ಆನ್‌ಲೈನ್ ವೆಬ್‌ಸೈಟ್.


- ಪುಸ್ತಕಗಳು ಮತ್ತು ಪುಸ್ತಕದ ಅಧ್ಯಾಯಗಳು
- ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ನಿಯತಕಾಲಿಕೆಗಳು ಮತ್ತು ಲೇಖನಗಳು
- ಸಂಪಾದಿತ ವಾಚಿಕೆಗಳು ಮತ್ತು ವಿಚಾರಗೋಷ್ಠಿಗಳ ಬರಹಗಳು


**ಅನುವಾದ ಸಂಪದಕ್ಕೆ ಭೇಟಿ ಕೊಡಿ:**
**https://anuvadasampada.azimpremjiuniversity.edu.in/**

Azim Premji University

# ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಪತ್ರಿಕೆಗಳು















ಪಾಠಶಾಲಾ ಪತ್ರಿಕೆಗೆ ಉಚಿತವಾಗಿ ಚಂದಾದಾರರಾಗಲು ಸ್ಕ್ಯಾನ್ ಮಾಡಿ!




ನಮ್ಮ ಪ್ರಕಟಣೆಗಳ ಕುರಿತು ಹೆಚ್ಚಿನ ಮಾಹಿತಿಗೆ ನಮ್ಮನ್ನು ಸಂಪರ್ಕಿಸಿ. ನಮ್ಮ ಈಮೇಲ್ ವಿಳಾಸ - publications@apu.edu.in